

ನಿರ್ಮಲ | ನಿರ್ಭಯ | ನಿಶ್ಚಲ

ಶಿವ ಪಥ...

ಎಲ್.ಆರ್.ಶಿವರಾಮೇಗೌಡರ ಅಭಿನಂದನಾ ಗ್ರಂಥ



ಸಲಹೆ-ಸೂಚನೆ-ಮಾರ್ಗದರ್ಶನ

ನಾಡೋಜ, ಡಾ.ಹಂ.ಪ. ನಾಗರಾಜಯ್ಯ

ಖ್ಯಾತ ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರು

ಸಂಪಾದಕರು

ಕೆ.ಎಂ.ರಘು

ಡೈರೆಕ್ಟರ್, ರಾಜ್ಯ ಪ್ರಶಸ್ತಿ ಪುರಸ್ಕೃತರು

ಪರಿಕಲ್ಪನೆ

ಭಗವಾನ್ ಚಕ್ರವರ್ತಿ





ನಿರ್ಮಲ|ನಿರ್ಭಯ|ನಿಶ್ಚಲ

ಶಿವ ಪಥ

ಎಲ್.ಆರ್. ಶಿವರಾಮೇಗೌಡರ ಅಭಿನಂದನಾ ಗ್ರಂಥ

ಸಲಹೆ-ಸೂಚನೆ-ಮಾರ್ಗದರ್ಶನ

ನಾಡೋಜ, ಡಾ.ಹಂ.ಪ. ನಾಗರಾಜಯ್ಯ

ಖ್ಯಾತ ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರು

ಪ್ರಧಾನ ಬರಹಗಾರರು ಮತ್ತು ಸಂಪಾದಕರು

ಕೆ.ಎಂ. ರಘು ಡೈರೆಕ್ಟರ್

ರಾಜ್ಯ ಪ್ರಶಸ್ತಿ ಪುರಸ್ಕೃತರು

ಪರಿಕಲ್ಪನೆ

ಭಗವಾನ್ ಚಕ್ರವರ್ತಿ, ಪತ್ರಕರ್ತರು

ಪ್ರೇಕ್ಷಿತ್ ಪಬ್ಲಿಕೇಷನ್

ಶಿವ ಪಥ ನಿರ್ಮಲ | ನಿರ್ಭಯ | ನಿಶ್ಕಲ

ಎಲ್.ಆರ್. ಶಿವರಾಮೇಗೌಡರ ಆತ್ಮ ಕಥನ

ಮಾಜಿ ಸಂಸದರು, ಮಂಡ್ಯ ಲೋಕಸಭಾ ಕ್ಷೇತ್ರ

ಪ್ರಧಾನ ಬರಹಗಾರರು ಮತ್ತು ಸಂಪಾದಕರು

ಕೆ.ಎಂ. ರಘು ಡೈರೆಕ್ಟರ್, ರಾಜ್ಯ ಪ್ರಶಸ್ತಿ ಪುರಸ್ಕೃತರು

ರಾಜರಾಜೇಶ್ವರಿ ನಗರ, ಬೆಂಗಳೂರು – 560 098

kmraghudirector@gmail.com

ಮೊದಲ ಮುದ್ರಣ	:	2026
ಪುಟಗಳು	:	168
ಹಾಳೆ ಬಳಕೆ	:	130 ಜಿಎಸ್ಎಂ ಮ್ಯಾಪ್ಲಿಥೋ
ಹಕ್ಕುಗಳು	:	ಲೇಖಕರದ್ದು
ಬೆಲೆ	:	500/-
ಮುಖಪುಟ	:	ಹಾದಿಮನಿ ಟಿ.ಎಫ್
ಒಳಪುಟ	:	ಹಾದಿಮನಿ ಟಿ.ಎಫ್, ಶೇಷಾದ್ರಿ ಧನಗೂರು

ಪ್ರೇಕ್ಷಿತ್ ಪಬ್ಲಿಕೇಷನ್

ರಾಜರಾಜೇಶ್ವರಿ ನಗರ, ಬೆಂಗಳೂರು – 560 098

kmraghudirector@gmail.com mob: 80734 32575

ಮುದ್ರಕರು

ಸ್ವಾನ್ ಪ್ರಿಂಟರ್

svanprint@gmail.com



ಅರ್ಪಣೆ



ನನ್ನ ಪೂಜ್ಯ ತಂದೆ ದಿವಂಗತ ಶ್ರೀ ಪಟೇಲ್ ಎಲ್.ರಾಮೇಗೌಡರು ಮತ್ತು
ತಾಯಿ ಲಕ್ಷ್ಮಮ್ಮನವರಿಗೆ ಈ ಪುಸ್ತಕ ಅರ್ಪಿಸುವೆ.

-ಎಲ್ .ಆರ್.ಶಿವರಾಮೇಗೌಡ ಮತ್ತು ಕುಟುಂಬ



ಶಿವಪಥ

ಶುಭಾಶಂಸನ

ನಾಡೋಜ ಪ್ರೊ. ಹಂಪನಾ

ಪೀಠಿಕೆ

ಲಾಳನಕೆರೆ ರಾಮೇಗೌಡ ಶಿವರಾಮೇಗೌಡರ ಏಳು ದಶಕಗಳ ಸುದೀರ್ಘ ಪಯಣವನ್ನು ಒಮ್ಮೆ ಹಿಂತಿರುಗಿ ಸಿಂಹಾವಲೋಕನ ಮಾಡಿದರೆ ನಿಬ್ಬೆರಗು ಆವರಿಸುತ್ತದೆ. ಇಟ್ಟಿಗೆಯ ಮೇಲೆ ಇಟ್ಟಿಗೆಯನಿಟ್ಟು ಬೀಡು ಕಟ್ಟುವಂತೆ, ಮೆಲ್ಲಮೆಲ್ಲಗೆ ಆದರೆ ಧೃಢವಾಗಿ, ಮೆಟ್ಟಿಲು ಮೆಟ್ಟಿಲು ಹತ್ತಿ 'ವಿಜಯಪಥಗಾಮಿ'ಯಾಗಿ ನೇರ ಗುರಿಯತ್ತ ದಾಪುಗಾಲು ಹಾಕುತ್ತ, ಅಲ್ಲಲ್ಲಿ ಹೊಸ ಸಾಧನೆಯ ಮೈಲಿಗಲ್ಲುಗಳನ್ನು ನೆಡುತ್ತ, ನಾಗಮಂಗಲ ತಾಲ್ಲೂಕಿನ ಈ ವರಪುತ್ರನು ದೆಹಲಿಯ ಪಾರ್ಲಿಮೆಂಟಿನಲ್ಲಿ ವಿರಾಜಮಾನನಾದನು. ಹಳ್ಳಿಯಿಂದ ದಿಲ್ಲಿಯವರೆಗಿನ ಈ ನಡಿಗೆ ಹುಬ್ಬೇರಿಸುವ ಒಂದು ಚರಿತ್ರಾರ್ಹ ಸಾಧನೆ. 'ಇವನಾರವ ಇವನಾರವ' ಎಂದೆನಿಸದೆ, 'ಇವ ನಮ್ಮವ, ಇವ ನಮ್ಮವ', ಎಂದೆಣಿಸುವಂತೆ ಬೆಳೆದು ಬಾಳಿದ, ಮಂಡ್ಯ ಜಿಲ್ಲೆಯ ಮುಡಿಯ ಮಾಣಿಕ್ಯವೆಂದು ಕೀರ್ತಿ ಗಳಿಸಿದ ಶುದ್ಧ ಅಪರಂಜಿ. ಹೀಗೆ ಜನತೆಯ ಗೌರವಾದರಗಳಿಗೆ ಪಾತ್ರನಾದ ಸುಪುತ್ರ 'ಎಲ್.ಆರ್.ಎಸ್' ಅವರ ವರ್ಣರಂಜಿತ ಏಳು ದಶಕಗಳ ನಿಡುಬಾಳಿನ ಸಂಕಥನ ಚೇತೋಹಾರಿಯಾದುದು.

ಅವಲೋಕನ

ಒಕ್ಕಲುಮಕ್ಕಳು, ರೈತ ಕುಟುಂಬಗಳು ತುಂಬಿದ ಲಾಳನಕೆರೆ ಗ್ರಾಮದ ದೊಡ್ಡಮನೆ ಪಟೇಲರು ರಾಮೇಗೌಡರು. ಅವರ ಎರಡನೆಯ ಮಗ ಶಿವರಾಮೇಗೌಡನಿಗೆ ಅಕ್ಷರದಾಹ ಮತ್ತು ಜನನಾಯಕನಾಗುವ ಹುಮ್ಮಸ್ಸು. ಊರಿನ ಕೆರೆಯಲ್ಲಿ ಈಜಾಡುವಾಗಲೂ ದೊಡ್ಡ ಸರೋವರ ನದಿಗಳಲ್ಲಿ ಈಜುವ ಹೊಂಗನಸು ಕಾಡುತ್ತಿತ್ತು. ಉನ್ನತ ವ್ಯಾಸಂಗ ಮುಗಿಸುವ ಅವಧಿಯಲ್ಲಿ ಯುವನಾಯಕನಾಗಿ ಹೊರಹೊಮ್ಮಿ ಮುಂದೆ ರಾಜಕೀಯದ ವಿಶಾಲ ಅಖಾಡಕ್ಕೆ ಇಳಿಯಲು ಬೇಕಾದ ಪಟ್ಟುಗಳನ್ನು ಮೈಗೂಡಿಸಿಕೊಂಡು ಸಜ್ಜಾದರು. ಅವಕಾಶಗಳು ವಿಜಗೀಷು ಧೀಮಂತನಿಗೆ ಒಲಿಯುತ್ತವೆ. ಶಿವರಾಮೇಗೌಡರ ಹೆಸರು ಅನ್ವರ್ಥಕವಾದದ್ದು; ಶಿವನ ಶಕ್ತಿ, ರಾಮನ ನಿಷ್ಠೆ, ಗೌಡರ ಯಜಮಾನಿಕೆ– ಈ ಮೂರೂ ಗುಣಗಳು ಮಿಳಿತವಾಗಿ ಮುಪ್ಪುರಿಗೊಂಡ ವ್ಯಕ್ತಿತ್ವ. ಇನ್ನೂ ಬಿಸಿರಕ್ತದ ಯುವಕನಿಗೆ ತಾನು ವಿದ್ಯಾರ್ಥಿ ನಾಯಕನಾದರೆ ಸಾಲದು, ಜನನಾಯಕನಾಗುವ ತವಕ ಇತ್ತು, ಅದನ್ನು ಕೈಗೂಡಿಸಲು ಬೇಕಾದ ವಿವೇಕ ಮತ್ತು ತಾಕತ್ತು. ಗಾಳಿ ಬೀಸುವ ಕಡೆ ಕಾರ್ಯಪ್ರವೃತ್ತರಾಗುವುದು ರಾಜಕಾರಣದ ಮೊದಲ ಪಾಠ. ಆ ದಿನಗಳಲ್ಲಿ

ಜನಾರ್ಧನ ಪೂಜಾರಿಯವರು ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದರು. ಗೌಡರು ಅವರನ್ನು ನಾಗಮಂಗಲಕ್ಕೆ ಕರೆಸಿ "ಪೂಜಾರಿ ಸಾಲಮೇಳ" ಆಯೋಜಿಸಿ ನಿರುದ್ಯೋಗಿ ಯುವಕರಿಗೆ 30 ಕೋಟಿ ಸಾಲ ಮಂಜೂರು ಮಾಡಿಸಿದರು. ತಮ್ಮ ತಾಲ್ಲೂಕಿನಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ತೆರೆಸಿದರು. ಇದರ ಬೆನ್ನ ಹಿಂದೆಯೇ ಕೇಂದ್ರ ಸಚಿವರಾದ ಭಜನ್ ಲಾಲರನ್ನು ನಾಗಮಂಗಲಕ್ಕೆ ಬರಮಾಡಿಕೊಂಡರು. ಕೇಂದ್ರ ಸರಕಾರದಿಂದ ತಾಲ್ಲೂಕಿನ ಕೃಷಿಕರಿಗೆ ಯೋಜನೆಗಳನ್ನು ಹಮ್ಮಿಕೊಂಡರು, ಕೋಟ್ಯಾಂತರ ರೂಪಾಯಿ ಸಹಾಯಧನ ಒದಗಿಸಿದರು. ಯುವಕರು, ರೈತರು ಗೌಡರ ಜತೆಗೆ ನಿಂತರು. ಬೆಳಕು ಹರಿಯುವುದರಲ್ಲಿ ಶಿವರಾಮೇಗೌಡರು ಜನಪ್ರಿಯ ನಾಯಕರಾಗಿ ಹೊರ ಹೊಮ್ಮಿದ್ದರು! ಇತ್ತ ನಾಗಮಂಗಲ ತಾಲ್ಲೂಕಿನಲ್ಲಿ ಈ ಹೊಸ ನಕ್ಷತ್ರ ಮೂಡಿದ್ದು ಅತ್ತ ಜಿಲ್ಲಾ ಕೇಂದ್ರ ಮಂಡ್ಯದ ನಾಯಕರಲ್ಲಿ ಸಂಚಲನ ಉಂಟುಮಾಡಿತ್ತು. ಹಿತಶತ್ರುಗಳು ಹುಟ್ಟಿಕೊಂಡರು.

ಇನ್ನೂ ಮೂವತ್ತು ವರ್ಷವೂ ಮೀರಿರದ ಈ ತರುಣನು ಇಡೀ ತಾಲ್ಲೂಕಿನ ಮೆಚ್ಚುಗೆಗಳಿಸಿದಾಗ ಯುವ ನಾಯಕನ ಮುಂದಿನ ಹೆಜ್ಜೆ ವಿಧಾನಸೌಧದ ಕಡೆ ಎಂದು ಬೆಂಬಲಿಗರು ಆಶಿಸಿದರು. ಅದಕ್ಕೆ ತಕ್ಕಂತೆ 1989ರ ವಿಧಾನಸಭೆಯ ಚುನಾವಣೆಯೂ ಬಂತು. ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಲು ಶಿವರಾಮೇಗೌಡರಿಗೆ ಸಹಜವಾಗಿಯೇ ಟಿಕೆಟ್ ಸಿಗುತ್ತದೆಂದು ತಾಲ್ಲೂಕಿನ ಜನರು ನಂಬಿದರು. ಯಥಾಪ್ರಕಾರ ಒಳಸಂಚುಗಳು ನಡೆದು ನಿರೀಕ್ಷೆ ಹುಸಿಯಾಯಿತು. ಆದರೆ ಜನರು ಒಗ್ಗಟಿನಿಂದ ಒಗ್ಗೂಡಿ ಸಭೆಗಳನ್ನು ಮಾಡಿದರು, 'ಯಾವ ಪಕ್ಷವೂ ಬೇಡ, ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲಿ' ಎಂದು ಒತ್ತಾಯಿಸಿ ಗೌಡರನ್ನು ಚುನಾವಣೆಯ ಕಣಕ್ಕೆ ಇಳಿಸಿದರು. ಜನ ಬೆಂಬಲ ಇರುವಾಗ ಗೆಲುವು ಕಟ್ಟಿಟ್ಟ ಬುತ್ತಿ!

ಚುನಾವಣೆ ಬಲು ಬಿರುಸಿನಿಂದ ನಡೆಯಿತು. ಬಹು ಕಾತರದಿಂದ ಕಾಯುತ್ತಿದ್ದ ಫಲಿತಾಂಶ ಪ್ರಕಟವಾಯಿತು. ಪಕ್ಷಗಳಿಂದ ಸ್ಪರ್ಧಿಸಿದ್ದ ಹುರಿಯಾಳು ಅಭ್ಯರ್ಥಿಗಳನ್ನೆಲ್ಲ ಸೋಲಿಸಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತಿದ್ದ ಶಿವರಾಮೇಗೌಡರು ಮೂವತ್ತಾರು ಸಾವಿರಕ್ಕೂ ಹೆಚ್ಚಿನ ಮತಗಳನ್ನು ಗಳಿಸಿ ವಿಜಯಿಯಾದರು. ಇತರ ಅಭ್ಯರ್ಥಿಗಳಲ್ಲಿ ಯಾರಿಗೂ ಠೇವಣಿ ಕೂಡ ಬರಲಿಲ್ಲ. ನಾಗಮಂಗಲದ ನೂತನ ಶಾಸಕರಾಗಿ ಚಿಗುರು ಮೀಸೆಯ ಇಪ್ಪತ್ತೊಂಬತ್ತು ವರ್ಷದ ಶಿವರಾಮೇಗೌಡರು ಗೆದ್ದು ಹೊಸ ಇತಿಹಾಸಕ್ಕೆ ನಾಂದಿ ಹಾಡಿದರು. 'ಯೋಗಾಯೋಗ'ವೆಂದರೆ ಅಂದು ಮೊದಲನೆಯ ಸಲ ವಿಧಾನಸಭೆ ಶಾಸಕರಾಗಿ ವಿಧಾನ ಸೌಧದ ಸೋಪಾನ ಹತ್ತಿದ ಇನ್ನೊಬ್ಬ ಇಪ್ಪತ್ತೊಂಬತ್ತು ವರ್ಷದ ತೇಜಸ್ವಿ ಯುವನಾಯಕ ಇಂದು ಕರ್ನಾಟಕದ ಮುಖ್ಯಮಂತ್ರಿಯಾಗಿ ಶೋಭಿಸುತ್ತಿರುವ ಡಿ.ಕೆ.ಶಿವಕುಮಾರರು.

ಇಡೀ ಕರ್ನಾಟಕದ ಗಮನ ಸೆಳೆಯುವಂತಹ ಗೆಲುವು ಗಳಿಸಿದ ಈ ನಾಗಮಂಗಲದ ಯುವ ಶಾಸಕನ ಮೇಲೆ ವಿರೊಧಿಗಳು ಮುಗಿಬಿದ್ದರು. ಮಾರಿ ಕಣ್ಣು ಹೋತನ ಮೇಲೆ! ಎಂಬಂತೆ, ಗೆಲುವಿನ ಸಂಭ್ರಮ ಇನ್ನೂ ಹಸಿಹಸಿಯಾಗಿರುವಾಗಲೇ ಹಗೆಗಳ ದಂಡು ದಾಳಿಮಾಡತೊಡಗಿತು. ನಾಗಮಂಗಲ ಶಾಸನಸಭೆ ಚುನಾವಣೆಯನ್ನು 'ಅಸಿಂಧು'ವೆಂದು ಪರಿಗಣಿಸಲು ತಕರಾರು ತೆಗೆದು ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಮತ್ತು ಸೋತಿದ್ದ ಅಭ್ಯರ್ಥಿಯು ಹೈ ಕೋರ್ಟು, ಸುಪ್ರೀಂ ಕೋರ್ಟಿನವರೆಗೆ ದಾವೆ ಹೂಡಿದ್ದಲ್ಲದೆ, ಸುಳ್ಳುಪಳ್ಳು ಕೊಲೆಯ ಆರೋಪಿಸಿ ಕೇಸನ್ನೂ ಈ ದಾವೆಗೆ ಲಗತ್ತಿಸಿ ಚುನಾಯಿತ ಜನಪ್ರತಿನಿಧಿಯ ಹಕ್ಕುಬಾಧ್ಯತೆಗಳನ್ನು ಕಸಿದರು.



ಈ ಜಂಜಾಟದಲ್ಲಿ ಜರ್ಝರಿತರಾಗದೆ, ಹತಾಶೆಗೊಳ್ಳದೆ, ಸಮಾಜಮುಖಿ ಚಟುವಟಿಕೆಗಳನ್ನು ನಿಲ್ಲಿಸದೆ ಎಂದಿನಂತೆ ಗೌಡರು ಮುಂದುವರಿಸಿದರು. ಅವರ ತಾಳ್ಮೆ ಮತ್ತು ಜನನಾಯಕನಿಗೆ ತಕ್ಕ ಮನೋದಾರ್ಢ್ಯತೆಯನ್ನು ಕಂಡು ಬೆಂಬಲಿಗರು ಇನ್ನಷ್ಟು ಹುರಿಗೊಂಡರು. ಅಂದಿನ ಸರ್ಕಾರದ ವಿಶ್ವಾಸ ಗಳಿಸಿ ನಾಗಮಂಗಲ ಕ್ಷೇತ್ರದ ತುರ್ತು ಅಗತ್ಯಗಳನ್ನು ಈಡೇರಿಸಿಕೊಡುವ ಕಡೆ ಕಾರ್ಯಪ್ರವೃತ್ತರಾದರು. ಯಾವುದೇ ಒಂದು ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆ ಆಗುವ ಸರ್ಕಾರದ ಅನುದಾನವನ್ನು ಗೌಡರು ಅರಿತಿದ್ದರು. ಅದರಿಂದ ತಮ್ಮ ಪೂರ್ಣ ಸಮಯ ಮತ್ತು ಸಾಮರ್ಥ್ಯವನ್ನೂ ವಿನಿಯೋಗಿಸಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಟೊಂಕಕಟ್ಟಿ ನಿಂತರು. ಅದಕ್ಕೆ ತಕ್ಕಂತೆ ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರ ಸಹಕಾರವೂ ದೊರೆಯಿತು. ಹೇಮಾವತಿ ನಾಲಾ ಯೋಜನೆ, ಹೊಸ ರಸ್ತೆಗಳು ಮತ್ತು ಹಳೆಯ ರಸ್ತೆಗಳ ದುರಸ್ತು, ಕುಡಿಯುವ ನೀರಿನ ಸೌಕರ್ಯ, ದನಗಳ ಆಸ್ಪತ್ರೆ ಮುಂತಾದ ಮೂಲಭೂತ ಜನೋಪಕಾರಿ ಕೆಲಸಗಳನ್ನು ಕಲ್ಪಿಸಿಕೊಟ್ಟು ಜನರ ಅಚ್ಚುಮೆಚ್ಚಿನ 'ಶಿವರಾಮಣ್ಣ' ಆದರು.

ಅದಕ್ಕೆ ತಕ್ಕ ಹಾಗೆ 1994 ವಿಧಾನಸಭಾ ಚುನಾವಣೆಯೂ ಸಮೀಪಿಸಿತು. ಬೆಂಬಲಿಗರು ಕಾಂಗ್ರೆಸ್ ಟಿಕೆಟ್ ಪಡೆದು ಪಕ್ಷದ ಅಭ್ಯರ್ಥಿಯಾಗಿಸಲು ಬಗೆಬಗೆಯಾಗಿ ಪ್ರಯತ್ನ ಮಾಡಿದರೂ ಯಥಾಪ್ರಕಾರ ಕಡೆಯ ಗಳಿಗೆಯಲ್ಲಿ ಟಿಕೆಟ್ ತಪ್ಪಿತು. ಅದರಿಂದ ನಿರಾಶರಾಗಲಿಲ್ಲ; ಬದಲಿಗೆ ವನರಾಜ ಸಿಂಹಕ್ಕೆ ಯಾವ ಕಾಡಾದರೂ ಒಂದೇನೆ. ಬೆಂಬಲಿಗರೆಲ್ಲ ಸೇರಿ ಒಮ್ಮತದ ನಿರ್ಧಾರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೌಡರನ್ನು ಚುನಾವಣಾ ಕಣಕ್ಕೆ ಇಳಿಸಿದರು. ಈ ಸಲವೂ ಜಯಲಕ್ಷ್ಮಿ ಯಾವ ಪಕ್ಷಕ್ಕೂ ಪ್ರಸನ್ನಳಾಗದೆ ಸ್ವತಂತ್ರ ಅಭ್ಯರ್ಥಿಯಾಗಿದ್ದ ಶಿವರಾಮೇಗೌಡರ ಕೊರಳಿಗೆ ಜಯಮಾಲೆ ಹಾಕಿ ಹರಸಿದಳು. ಇಪ್ಪತ್ತಾರು ಸಾವಿರ ಬಹುಮತ ಗಳಿಸಿ ಕಳೆದ ಸಲ ಅಪಪ್ರಚಾರ ನಿರತರಾಗಿ ತೊಂದರೆ ಕೊಟ್ಟವರಿಗೆ ಚಕ್ರಬಡ್ಡಿ ಸಹಿತ ಮುಖಭಂಗ ಮಾಡಿದಂತೆ ಆಯಿತು ಎಂದು ಮತದಾರರು ಪುಳಕಿತರಾದರು. ಇದಕ್ಕೆ ಇಂಬುಕೊಟ್ಟಂತೆ ಜನತಾ ದಳದ ನಾಯಕರಾದ ಸಿದ್ದರಾಮಯ್ಯ, ಸಿ.ಭೈರೇಗೌಡ ಮತ್ತು ಕೆ.ಎನ್.ನಾಗೇಗೌಡರ ಒತ್ತಾಸೆ ಮೇರೆಗೆ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಕರ್ನಾಟಕ ಗೃಹ ಮಂಡಳಿ ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಂಥ ಪ್ರತಿಷ್ಠಿತ ಸಂಸ್ಥೆಗಳ ಅಧ್ಯಕ್ಷರನ್ನಾಗಿ ಯುವ ನಾಯಕ ಶಿವರಾಮೇಗೌಡರನ್ನು ಪ್ರತಿಷ್ಠಾಪಿಸಿದರು. ಆ ನಂತರದ ರಾಜಕೀಯದ ಏಳು ಬೀಳುಗಳನ್ನು ಕಂಡ ಎಲ್.ಆರ್.ಎಸ್. 2018ರ ಮಂಡ್ಯ ಲೋಕಸಭಾ ಉಪ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಗೆದ್ದು ಲೋಕಸಭೆ ಪ್ರವೇಶಿಸಿದರು. ಹುರುಪು, ಹುಮ್ಮಸ್ಸಿನಿಂದ ಕಾರಂಜಿಯಂತೆ ಪುಟಿಯುತ್ತಿರುವ ನಮ್ಮ ಹೆಮ್ಮೆಯ ಎಲ್.ಆರ್.ಶಿವರಾಮೇಗೌಡರು ದೀರ್ಘಕಾಲ ಆರೋಗ್ಯದಿಂದ ಬಾಳಿ ಬೆಳಗಲಿ ಎಂದು ಈ ಅಭಿನಂದನಾ ಸಮಿತಿಯ ಪರವಾಗಿ ಹೃದಯಪೂರ್ವಕವಾಗಿ ಹಾರೈಸುತ್ತೇನೆ.



-ನಾಡೋಜ ಪ್ರೊ. ಹಂಪನಾ

10.05.2 026

ಪುಸ್ತಕ ಪ್ರವೇಶಕ್ಕೂ ಮುನ್ನ...

ನಮ್ಮ ಮಂಡ್ಯ ಜಿಲ್ಲೆಯ ರಾಜಕಾರಣದ ಪುಟವನ್ನೊಮ್ಮೆ ಅವಲೋಕಿಸಿದರೆ, ಕುಟುಂಬ ರಾಜಕಾರಣಕ್ಕಿಂತ ವ್ಯಕ್ತಿಗತ ರಾಜಕಾರಣಕ್ಕೆ ಇಲ್ಲಿ ಮಣೆ. ಶ್ರೀಮಾನ್ ಹೆಚ್.ಕೆ.ವೀರಣ್ಣಗೌಡ, ಸಾಹುಕಾರ ಚೆನ್ನಯ್ಯರವರಿಂದ ಮೊದಲ್ಗೊಂಡು ಇಲ್ಲಿ ಪ್ರತಿಷ್ಠೆಯ ರಾಜಕಾರಣವೇ ಮೇಳೈಸಿದೆ. ಮಂಡ್ಯ ಗುಡುಗಿದರೆ ವಿಧಾನಸೌಧ ನಡುಗುತ್ತಿತ್ತು ಎಂಬ ನಾಣ್ಣುಡಿ ಒಂದು ಕಾಲದಲ್ಲಿ ಚಾಲ್ತಿಯಲ್ಲಿತ್ತು. ಅದು ನಿಜ ಕೂಡ.ಮಂಡ್ಯ ಜಿಲ್ಲೆಯ ರಾಜಕಾರಣಕ್ಕಿಂತ ಕೊಂಚ ಭಿನ್ನ ಮನಸ್ಥಿತಿಯ ನಾಗಮಂಗಲ ತಾಲ್ಲೂಕು ಜಿಲ್ಲಾ ನಾಯಕರಿಗೆ ಅಸಡ್ಡೆಯ, ತಾತ್ಸಾರದ ಕ್ಷೇತ್ರವಾಗಿತ್ತು. ಮಂಡ್ಯ ಜಿಲ್ಲೆಯ ಭೂಪಟದಲ್ಲಿ ನಾಗಮಂಗಲ ತಾಲ್ಲೂಕು ಅತೀ ಹೆಚ್ಚು ಭೂಪ್ರದೇಶವನ್ನು ಒಳಗೊಂಡಿದ್ದರೂ ಬೇಸಾಯಕ್ಕೆ ಮಳೆಯೇ ಆಶ್ರಯ. ದೂರದ ಕಾವೇರಿ ನಮಗೆ ಗಗನ ಕುಸುಮ. ಹಾಸನದ ಹೇಮಾವತಿ ನಮಗೆ ಆಪತ್ಬಾಂಧವ.

ನಮ್ಮ ನಾಗಮಂಗಲದ ರಾಜಕಾರಣದ ಇತಿಹಾಸ ಪ್ರಾರಂಭವಾಗುವುದೇ ಉತ್ತರದ ಬರೋಡ ಮಹಾರಾಜರ ಬಳಿ ಆರ್ಥಿಕ ಸಲಹೆಗಾರರಾಗಿದ್ದ ಮೈಲಾರಪಟ್ಟಣದ ಎಂ.ಕೆ.ಶಂಕರಲಿಂಗೇಗೌಡರಿಂದ, ಅರಸೊತ್ತಿಗೆ ಕಾಲ ಸರಿದು ಪ್ರಜಾಪ್ರಭುತ್ವದ ದಿಡ್ಡಿ ಬಾಗಿಲು ಪ್ರವೇಶಿಸಿದ ಕಾಲದಲ್ಲಿ ಮೊಟ್ಟಮೊದಲ ಶಾಸಕರಾಗಿ ಆಯ್ಕೆಗೊಂಡರು ಎಂಬಲ್ಲಿಂದ ಪ್ರಾರಂಭ. ಅಲ್ಲಿಂದ ಈವರೆಗೆ ಏಳು ದಶಕಗಳ ರಾಜಕಾರಣದ ರಹದಾರಿಯಲ್ಲಿ ಲಾಳನಕೆರೆಯ ಶಿವರಾಮೇಗೌಡರ ತೊಂಬತ್ತರ ದಶಕದ ರಾಜಕಾರಣವೇ ವೆರಿ ಇಂಟರೆಸ್ಟಿಂಗ್. ಅಲ್ಲಿಯವರೆಗೆ ಆಗಿ ಹೋದ ರಾಜಕಾರಣಿಗಳ ಕಾಲಘಟ್ಟವನ್ನು, ಅವರ ಸಾಧನೆಯನ್ನು ಈಗಲೂ ಸ್ಮರಿಸುವ ನಮ್ಮ ಜನ, ಎಂಬತ್ತರ ದಶಕದಲ್ಲಿ ಕ್ಷೇತ್ರದಾದ್ಯಂತ ಸಂಚರಿಸಿ ಮನೆ ಮಾತಾಗಿದ್ದ ಚಿಗರಿಗೌಡರ ಸರಳ ನಡೆ ಮತ್ತು ಹೆಚ್.ಟಿ.ಕೃಷ್ಣಪ್ಪನವರ ಮೃದುತ್ವವನ್ನು ನಮ್ಮ ಜನ ಅನುಸರಿಸಲಾಗದೆ ಅಪಥ್ಯವೆಂಬತೆ ಕಂಡಿದ್ದು ಮತ್ತು ಮಾಯಾ ಜಿಂಕೆಯಂತೆ ಸಂಚರಿಸಿ ಕಣ್ಮರೆಯಾದ ಚಿಗರಿಗೌಡರ ಮತ್ತು ಆಮೆ ವೇಗದ ಕೃಷ್ಣಪ್ಪನವರ ನಡವಳಿಕೆಗೆ ಬೇಸತ್ತ ಪರಿಣಾಮ ಉದಯಿಸಿದ ನವನಾಯಕನೇ ಎಲ್.ಆರ್.ಶಿವರಾಮೇಗೌಡ. ಏನು ಬೇಕಾದರೂ ಮಾಡುವ ಹುಮ್ಮಸ್ಸು, ಪ್ರಾಯ, ಕ್ಷೇತ್ರದ ಯುವಕರ ಕಣ್ಮಣಿಯಾಗಿ ಗೋಚರಿಸಿದ ಶಿವರಾಮೇಗೌಡರತ್ತ ಕೃಷ್ಣಪ್ಪ ಮತ್ತು ಚಿಗರೀಗೌಡರ ಬೆಂಬಲಿಗರು ಸರಿದ ಪರಿಣಾಮ ತೊಂಬತ್ತರ ದಶಕದಲ್ಲಿ ಯುವ ಶಾಸಕನಾಗಿ ಹೊರಹೊಮ್ಮಿ ವಿಧಾನಸಭೆ ಪ್ರವೇಶಿಸಿದ ಶಿವರಾಮೇಗೌಡ ನಾಗಮಂಗಲಿಗರ ಪಾಲಿನ ಕಿಂದರಿಜೋಗಿಯಾದರು.ನಾಗಮಂಗಲ ಕ್ಷೇತ್ರದ ಶಾಸಕರಾದ ತರುವಾಯ ವಿರೋಧಿಗಳ ಷಡ್ಯಂತ್ರದ ಹಿನ್ನೆಲೆಯಲ್ಲಿ ಮೇಲಿಂದ ಮೇಲೆ ನ್ಯಾಯಾಲಯದಲ್ಲಿ ಚುನಾವಣೆಯ ತಕರಾರು ಸಲ್ಲಿಸಿ, ಈ ಆಯ್ಕೆ ಅಸಿಂಧುಗೊಳಿಸಬೇಕೆಂದು ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಟಿ.ಎಂ.ಚಂದ್ರಶೇಖರ ಎಂಬುವವರು ಸ್ವತಃ ವಕೀಲರಾಗಿದ್ದ (court Bird) ಪರಿಣಾಮ ಹೈಕೋರ್ಟ್, ಸುಪ್ರೀಂ ಕೋರ್ಟುಗಳಲ್ಲಿ ದಾವೆ ಹೂಡಿ ನಂತರ ಅನಗತ್ಯ ಕೇಸು ದಾಖಲಿಸಿದರು. ಕಾನೂನಿನ ಕಬಂಧ ಬಾಹುಗಳಿಗೆ ಸಿಕ್ಕಿ ಕೋರ್ಟಿನಲ್ಲಿ ಕಾಲ ಕಳೆಯುವಂತಾಯಿತು.ಒಬ್ಬ ಜನಪ್ರತಿನಿಧಿಯ ಹಕ್ಕು ಭಾದ್ಯತೆಯನ್ನು ಕಸಿದುಕೊಂಡ ಕೇಸಿನ ರಗಳೆ ಒಂದೆಡೆಯಾದರೆ, ನಾಗಮಂಗಲ ಕ್ಷೇತ್ರಕ್ಕೆ ದಕ್ಕಬೇಕಾದ ಅನುದಾನಗಳೆಲ್ಲವನ್ನೂ ಕಾಂಗ್ರೆಸ್ ಸಹ ಸದಸ್ಯರಾಗಿ ರಾಜಕೀಯ ಜಾಣ್ಮೆ ಪ್ರದರ್ಶಿಸಿದ ಗೌಡರು, ಅಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರ ವಿಶ್ವಾಸಗಳಿಸಿ ಕ್ಷೇತ್ರದ ಮೂಲಭೂತ ಸೌಕರ್ಯಗಳ ಕಡೆ ಗಮನ ಹರಿಸಿದ ಪರಿಣಾಮ



ಗ್ರಾಮೀಣರ ಬದುಕು ಹಸನಾಯಿತು. ಇಂದಿಗೂ ಗ್ರಾಮಗಳ ಹಲವು ಪ್ರಥಮಗಳಿಗೆ ನಾಂದಿ ಹಾಡಿದ ಕೀರ್ತಿ ಶಾಸಕ ಶಿವರಾಮೇಗೌಡರಿಗೆ ಸಲ್ಲುತ್ತದೆ. ಇಂದಿಗೂ ಅವು 'ಗ್ರಾಮೀಣ ಭಾಗದ ಸಾಕ್ಷಿಗುಡ್ಡೆ'ಗಳಾಗಿ ಕ್ಷೇತ್ರದ ಜನಮಾನಸದಲ್ಲಿ ನೆಲೆನಿಂತಿವೆ.

ಲಾಳನಕೆರೆ ಎಲ್.ಆರ್.ಶಿವರಾಮೇಗೌಡ ಎಂದರೆ ಒಂದು ಕಾಲದಲ್ಲಿ ರಾಜಕೀಯ ಅಖಾಡದಲ್ಲಿ ಏನೋ ಒಂದು ರೀತಿಯ ಸಂಚಲನ ಮೂಡುತ್ತಿತ್ತು.ಪತ್ರಿಕೆಗಳಿಗೆ ಶಿವರಾಮೇಗೌಡ ಅಂದರೆ ಸೆನ್ಸೆಷನ್. ಕಾರಣ ನಾಗಮಂಗಲ ಕ್ಷೇತ್ರದಲ್ಲಿ ನಡೆದ ಪತ್ರಕರ್ತ ಹಾಗೂ ವಕೀಲ ಕಂಚನಹಳ್ಳಿ ಗಂಗಾಧರ ಮೂರ್ತಿ ಕಗ್ಗೊಲೆ ಪ್ರಕರಣ. ಹಾಡುಹಗಲೇ ನ್ಯಾಯವಾದಿಯೊಬ್ಬನ ಕೊಲೆ ಮತ್ತು ಕೊಲೆ ಮಾಡಿದ್ದು ಶಾಸಕರ ಸಂಬಂಧಿಗಳು ಎಂಬ ಸುದ್ದಿ ಪತ್ರಿಕೆಗಳಿಗೆ, ವಕೀಲರಿಗೆ ಮತ್ತು ವಿರೋಧ ಪಕ್ಷಕ್ಕೆ ಗುರಾಣಿಯಾಗಿ ಮಾರ್ಪಟ್ಟಿತ್ತು. ಜನತಾದಳದ ನಾಯಕರಾದ ರಾಮಕೃಷ್ಣ ಹೆಗಡೆ, ಜೆ.ಹೆಚ್.ಪಟೇಲರು, ಪತ್ರಕರ್ತ ಪಿ.ಲಂಕೇಶರು ಈ ಕೊಲೆಯನ್ನು ತೀವ್ರವಾಗಿ ಖಂಡಿಸಿ ನಾಗಮಂಗಲದಲ್ಲಿ ಭಾರೀ ಪ್ರತಿಭಟನೆ ನಡೆಸಿ ಇದು ರಾಜಕೀಯದ ಕೊಲೆ, ಸರ್ಕಾರ ಕೂಡಲೇ ತಪ್ಪಿತಸ್ಥರನ್ನು ಬಂಧಿಸಬೇಕೆಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಯಿತು. ಮಾನ್ಯ ಹೆಚ್.ಡಿ.ದೇವೇಗೌಡರಂತೂ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಪಟ್ಟಣದಿಂದ ಕಂಚನಹಳ್ಳಿಯವರೆಗೆ ಕೊಲೆಯಾದ ಗಂಗಾಧರ ಮೂರ್ತಿ ಫೋಟೋ ತಲೆಯ ಮೇಲಿಟ್ಟುಕೊಂಡು, ಬಾಯಿಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸಿದ್ದು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾಗಿ ರಾರಾಜಿಸಿತು. ಆನಂತರದಲ್ಲಿ ಈ ಕೇಸು ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆಯಾಗಿ ಸಮಾಪ್ತಿಯಾಯಿತು. ಶಾಸಕ ಶಿವರಾಮೇಗೌಡ ನಿರ್ದೋಷಿಯಾಗಿ ಹೊರ ಬಂದರು 1994ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಟಿಕೆಟ್ ವಂಚಿತರಾದ ಗೌಡರು ಜನತಾ ಜನಾರ್ಧನರ ಬಳಿಗೆ ತೆರಳಿ, ಜನರ ವಿಶ್ವಾಸ ಗಳಿಸಿ ಪಕ್ಷೇತರರಾಗಿ ಚುನಾವಣೆಗೆ ಸ್ಪರ್ಧಿಸಿ ಸುಮಾರು 26 ಸಾವಿರ ಮತಗಳ ಅಂತರದಿಂದ ವಿಧಾನಸಭೆಗೆ ಪುನರಾಯ್ಕೆಗೊಂಡು 'ಮತದಾನವೆಂಬ ಜನತಾ ನ್ಯಾಯಾಲಯ'ದಲ್ಲಿ ಜನರ ಆಶೀರ್ವಾದ ಪಡೆದು ದಿಗ್ವಿಜಯ ಸಾಧಿಸಿ ಕಳಂಕ ರಹಿತರಾದರು. ಆಮೂಲಕ ವಿರೋಧಿಗಳಿಗೆ ಹಾಗೂ ಪತ್ರಕರ್ತರಿಗೆ ಸಂದೇಶ ರವಾನಿಸಿದರು.

2004ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶಿವರಾಮೇಗೌಡ ಕ್ಷೇತದೆಲ್ಲೆಡೆ ಪ್ರಚಾರ ಕೈಗೊಂಡಿದ್ದರು. ಭಾರೀ ಬಹಿರಂಗ ಸಭೆ ಆಯೋಜಿಸಿ ವಿರೋಧಿಗಳಿಗೆ ಟಕ್ಕರ್ ಕೊಡಲು ಮುಂದಾಗಿ ಪ್ರತಿ ಹೋಬಳಿಗೊಂದು ಕಾರ್ಯಕರ್ತರ ಸಭೆ ಮತ್ತು ಬಾಡೂಟ ಹಾಕಿಸುವ ಪ್ಲಾನ್ ಹಾಕಿ ಬೆಳ್ಳೂರು ಹೋಬಳಿಯ ಮೊದಲ ಸಭೆಯನ್ನು ಹದ್ದಿನ ಕಲ್ಲು ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಸಿದರು. ಸಭೆ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಆದರೆ ಒಮ್ಮೆಲೆ ಸಭೆ ಮುಗಿಸಿದ ಜನ ಊಟಕ್ಕೆ ಮುಗಿಬಿದ್ದು ಅಸ್ತವ್ಯಸ್ತಗೊಂಡಿತು. ಇದರಿಂದ ಕೊಂಚ ಪಾಠ ಕಲಿತ ಮುಖಂಡರು ಮುಂದಿನ ಸಭೆ ಯಾವುದೇ ಗೊಂದಲವಿಲ್ಲದೇ ಅಚ್ಚುಕಟ್ಟು ಸಮಾರಂಭ ನಡೆಸಬೇಕೆಂದು ತೀರ್ಮಾನಿಸಿ ದೇವಲಾಪುರ ಹೋಬಳಿಯ ಸಭೆ ಆಯೋಜನೆಗೆ ಮುಂದಾದರು. ಸೋಮವಾರ ದೇವಲಾಪುರ ಸಂತೆ ಅಂದೇ ಕಾರ್ಯಕ್ರಮ ನಿಗದಿಪಡಿಸಿಕೊಂಡು ಕಾರ್ಯಕ್ರಮ ನಡೆಸಿದರು. ಭಾರೀ ಬಹಿರಂಗ ಸಭೆಗೆ ಗಣ್ಯರನ್ನು ಸ್ವಾಗತಿಸಲು ಶಿವರಾಮೇಗೌಡ ಮತ್ತು ಮುಖಂಡರು ತೆರಳಿದ್ದ ವೇಳೆ ಆಯೋಜಕರು ಆರ್ಕೆಸ್ಟ್ರಾ ಆಯೋಜಿಸಿದ್ದರು.ಹಾಡುಗಾರ್ತಿ ಮತ್ತು ನರ್ತಕಿಯಾಗಿದ್ದ ಯುವತಿ ನರ್ತನ ಮಾಡುತ್ತಿದ್ದಂತೆ ಜಿಲ್ಲಾ ವಿದ್ಯುನ್ಮಾನ ಮಾಧ್ಯಮದ ಪತ್ರಕರ್ತರು ಅಲರ್ಟ್ ಆಗಿ ಚಿತ್ರೀಕರಿಸಿಕೊಂಡರು. ಅದು ಮರುದಿನ ಟಿವಿಗಳಲ್ಲಿ ಬಿತ್ತರಗೊಂಡು ಶತಮಾನ ಕಂಡ ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ತಂದಿಕ್ಕಿತು. ಪ್ರಪಂಚ ಸುತ್ತುತ್ತಿದ್ದ ಪತ್ರಕರ್ತನೊಬ್ಬ ನಾಗಮಂಗಲದಲ್ಲಿ

'ನಂಗಾನಾಚ್' ಎಂದು ಪತ್ರಿಕೆಯಲ್ಲಿ ಮುಖಪುಟದ ಸುದ್ದಿಯಾಗಿಸಿದ ಪರಿಣಾಮ ಎಲ್ಲೆಡೆ ವ್ಯಾಪಕ ಟೀಕೆಗಳು ವ್ಯಕ್ತಗೊಂಡು ಶಿವರಾಮೇಗೌಡರ ಸೋಲಿಗೊಂದು ಕಾರಣವಾಗಿದ್ದು ಮಾತ್ರ ಶೋಚನೀಯ. ಯಾರೋ ಮುಖಂಡರ ಆಟಾಟೋಪಕ್ಕೆ ಗೆಲುವಿನ ತುತ್ತತುದಿಯಲ್ಲಿದ್ದ ಕಾಂಗ್ರೆಸ್ ಅಭ್ಯರ್ಥಿ ಶಿವರಾಮೇಗೌಡ ಅಚಾನಕ್ ಸೋಲೊಪ್ಪಿಕೊಳ್ಳಬೇಕಾಯಿತು.

ಅಂಬರೀಷಣ್ಣನಿಂದ ಹಿಡಿದು ಅಂಬಾನಿವರೆಗೆ, ಶ್ರೀಸಾಮಾನ್ಯನಿಂದ ಸ್ವಾಮೀಜಿಗಳವರೆವಿಗೂ ಪ್ರೀತಿ ಮತ್ತು ತಕರಾರು ಎರಡನ್ನೂ ಸಮ ಪ್ರಮಾಣದಲ್ಲಿ ತೂಗಿಸಿಕೊಂಡು ಹೋಗುವ ಚಾಣಾಕ್ಷ ರಾಜಕಾರಣಿ ಶಿವರಾಮೇಗೌಡ ಎಂದರೆ ತಪ್ಪಾಗಲಾರದು. ಸದಾ ಸುದ್ದಿಯಲ್ಲಿರಬೇಕೆಂದು ಚಡಪಡಿಸುವ, ಸುಖಾಸುಮ್ಮನೆ ಯಾರದೋ ವಿಚಾರದಲ್ಲಿ ಮುಖ ಕೆಡಿಸಿಕೊಳ್ಳುವ ಗೌಡ, ಇದರಿಂದಾಗಿ ಕೋರ್ಟು ಕಟಕಟೆಗಳನ್ನು ಹತ್ತಬೇಕಾಗಿ ಬಂದ ಅನಿವಾರ್ಯತೆ ಹಾಗೂ ಮತ್ತದೇ ಕಾನೂನು ಕುಣಿಕೆಯಿಂದ ಪಾರಾಗಿ ಬರುವ ಕಲೆ ಕೂಡ ನಾವೂ ನೀವು ಮತ್ತು ಮುಂದಿನವರು ಕಲಿಯಬೇಕಾದ ಪಾಠಗಳು. ಶಿವರಾಮೇಗೌಡರು ಮತ್ತು ಕುಟುಂಬ ಸದಸ್ಯರು ಸೇರಿ ಈವರೆಗೆ 12 ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿ 2 ವಿಧಾನಸಭೆ, ಒಂದು ಅಲ್ಪ ಅವಧಿಯ ಲೋಕಸಭೆಗಷ್ಟೇ ತೃಪ್ತಿಪಟ್ಟುಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದ್ದು ಮಾತ್ರ ಕಾರ್ಯಕರ್ತರಲ್ಲಿ ನೋವು ತಂದಿದೆ. ಸದಾಕಾಲ ಚಟುವಟಿಕೆಯಲ್ಲಿರುವ ಮನುಷ್ಯ ಏನಾದರೂ ಮಾತಾಡುವ, ಏನೋ ಮಾಡಲು ಹೋಗಿ ಇನ್ನೇನನ್ನೋ ಮಾಡಿ ಲೋಕನಿಂದಿತನಾಗುವ, ಮತ್ತೆ ಅದೇ ಜನರೊಂದಿಗೆ ಸ್ನೇಹಹಸ್ತ ಚಾಚುವ ಕಲೆ ಶಿವರಾಮೇಗೌಡರಿಗೆ ಮಾತ್ರ ಸಾಧ್ಯ. ಇದೀಗ ನಾಗಮಂಗಲದ ವರ್ಣರಂಜಿತ ರಾಜಕಾರಣಿಯ ಸಾರ್ವಜನಿಕ ಜೀವನಕ್ಕೂ 50ರ ಪ್ರಾಯ. ರಾಜಕೀಯ ರಂಗ ಪ್ರವೇಶಿಸಲು ಇಚ್ಛಿಸುವ ಯುವಕರಿಗೆ ರಾಜಕೀಯದ ಒಳಗುಟ್ಟುಗಳನ್ನು ಬಿಚ್ಚಿಡುವ ಹಾಗೂ ಏಳು–ಬೀಳುಗಳನ್ನು ದಾಖಲಿಸುವ ಒಂದು ಪ್ರಯತ್ನವೇ ಈ ಅಭಿನಂದನಾ ಗ್ರಂಥ. ರೈತ ಕುಟುಂಬದ ಯಾವ ರಾಜಕೀಯದ ಹಿನ್ನೆಲೆಯೂ ಇರದ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಜನರೇ ಆರಿಸಿ ಯುವಕನೊಬ್ಬನಿಗೆ ಶಾಸಕತ್ವದ ಅಧಿಕಾರವನ್ನು ದಯಪಾಲಿಸಿ ಬಹು ನಿರೀಕ್ಷೆಯಲ್ಲಿಟ್ಟು ಗೆಲ್ಲಿಸಿದ ಜನ ಶಿವರಾಮೇಗೌಡರಿಂದ ನಿರೀಕ್ಷಿಸಿದ್ದು ಅಗಾಧ. ಆದರೆ ಶಿವರಾಮೇಗೌಡ ತನ್ನದಲ್ಲದ ತಪ್ಪಿಗೆ ಹಿರಿಯ ನಾಯಕರ ಕೆಂಗಣ್ಣಿಗೆ ಗುರಿಯಾಗಿ ರಾಜಕೀಯ ಜೀವನದಲ್ಲಿ ಬಹಳ ಪೆಟ್ಟುಗಳನ್ನು ತಿಂದು ನಜ್ಜುಗುಜ್ಜಾಗಿ ಹೋಗಿ ಕಣ್ಮರೆಯಾಗಬೇಕಿತ್ತು. ಆದರೆ ಮತ್ತದೇ ಸ್ವಸಾಮರ್ಥ್ಯದಿಂದ ಫಿನಿಕ್ಸ್‌ನಂತೆ ಮತ್ತೆ ಮೇಲೆದ್ದು ಬಂದು ರಾಜಕೀಯದ ಮಧ್ಯೆ ಬಿಡುವು ಪಡೆದು ಬೆಂಗಳೂರಿನಲ್ಲಿ ಅನೇಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಮೇಲೆದ್ದು ಬಂದ ಸಾಧಕನ ಯಶೋಗಾಥೆಯ ಚಿತ್ರಣವಿದು. ಹಂಪನಾ ಹೇಳಿದಂತೆ ಎಲ್.ಆರ್.ಎಸ್. ಶಿವಪಥ ಅಭಿನಂದನಾ ಗ್ರಂಥ ಇದೊಂದು ಅಪೂರ್ವ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ.



ಭಗವಾನ್ ಚಕ್ರವರ್ತಿ
ಪತ್ರಕರ್ತ



“ನಾ ಕಂಡಂತೆ ಎಲ್ ಆರ್ ಎಸ್ “

ಸನ್ಮಾನ್ಯ ಶಿವರಾಮೇಗೌಡರ ಹುಟ್ಟುಹಬ್ಬದ ಪ್ರಯುಕ್ತ ಅಭಿನಂದನಾ ಗ್ರಂಥವನ್ನು ರಚಿಸಲು ಸನ್ಮಾನ್ಯರು ನನಗೆ ಅವಕಾಶ ನೀಡಿದಾಗಿನಿಂದ ಅವರ ಒಡನಾಟ ಶುರುವಾಯಿತು. ದಿನನಿತ್ಯ ಅವರ ಮನೆಗೆ ಹೋಗಿ ಅವರೊಡನೆ ಹತ್ತು ಹಲವು ವಿಷಯಗಳ ಕುರಿತು ಚರ್ಚಿಸಿ ಅವರ ಸುಧೀರ್ಘ ಬದುಕಿನ ಅಮೂಲ್ಯ ವಿಷಯಗಳನ್ನು ಸಂಗ್ರಹಿಸುವಾಗ ನಾನು ಕೆಲವು ಘಟನೆಗಳನ್ನು ನೋಡಿ ಚಕಿತನಾದೆ. ಅದೇನೆಂದರೆ, ಪುಣ್ಯಕ್ಷೇತ್ರಗಳಲ್ಲಿ ಪ್ರತಿನಿತ್ಯ ಚಾಚೂ ತಪ್ಪದೆ ನಡೆಯುವ ದಾಸೋಹದಂತೆ ಸನ್ಮಾನ್ಯರ ಮನೆಗೆ ದಿನನಿತ್ಯ ಬರುವ ನೂರಾರು ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ಅವರ ಮನೆಯಲ್ಲಿ ದೊರೆಯುವ ಆತಿಥ್ಯ ಜೊತೆಗೆ ಅವರ ಕಷ್ಟ ಸುಖಗಳಿಗೆ ಸ್ಪಂದಿಸುವ ಅವರ ಹೃದಯವಂತಿಕೆ ನೋಡಿ ನಿಜಕ್ಕೂ ಬೆರಗಾದೆ. ಕಬ್ಬಿನ ಜಲ್ಲೆಯ ರಸವನ್ನು ಹೀರಿಕೊಂಡು ಸಿಪ್ಪೆಯನ್ನು ಬಿಸಾಡುವಂತೆ ಎಲ್ ಆರ್ ಎಸ್ ಅವರನ್ನು ಉಳಿಸಿಕೊಂಡವರಿಗಿಂತ ಉಪಯೋಗಿಸಿಕೊಂಡವರೇ ಹೆಚ್ಚು. 25 ವರ್ಷಗಳಿಂದ ಅಧಿಕಾರವೇ ಇಲ್ಲದಿದ್ದರೂ ಸಹ ನನ್ನನ್ನು 1989 ಮತ್ತು 1994ರಲ್ಲಿ ಎರಡು ಬಾರಿ ನನ್ನ ನಾಗಮಂಗಲ ತಾಲೂಕಿನ ಮತದಾರ ದೇವರುಗಳು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನನ್ನನ್ನು ಅಭೂತಪೂರ್ವವಾಗಿ ಗೆಲ್ಲಿಸಿದರು ಎಂಬ ಕೃತಜ್ಞತಾ ಮನೋಭಾವದಿಂದ ಇಂದಿಗೂ ಜನರ ಕಷ್ಟ ಸುಖಕ್ಕೆ ಬೆನ್ನೆಲುಬಾಗಿ ನಿಂತು ನೊಂದವರ ಕಣ್ಣೀರು ಒರೆಸುವ ಕೆಲಸ ಮಾಡುತ್ತಿರುವುದು ಅವರಿಗಿರುವ ಬದ್ಧತೆ ಮತ್ತು ಸಾಮಾಜಿಕ ಕಳಕಳಿ ಎಂತಹುದು ಎಂಬುವುದು ಅರ್ಥವಾಗುತ್ತದೆ. ಕಷ್ಟ ಎಂದವರ ಕಣ್ಣೀರು ಒರೆಸುವ ಪುಣ್ಯಾತ್ಮ ಎಂದರೆ ಅತಿಶಯೋಕ್ತಿ ಆಗಲಾರದು.

ಇವತ್ತಿನ ದಿನಮಾನಗಳಲ್ಲಿ ಅಧಿಕಾರದಲ್ಲಿ ಇರುವ ಶಾಸಕರು, ಮಂತ್ರಿಗಳು ಭೂಮಿಯ ಕಡೆ ಕಣ್ಣಾಯಿಸಿ ನೋಡುವುದಕ್ಕಿಂತ ಆಕಾಶದ ಕಡೆಗೆ ಮುಖ ಮಾಡುವುದೇ ಹೆಚ್ಚು, ಅಂತಹ ಅಲ್ಪರಿಗೆ ಶಿವರಾಮೇಗೌಡರ ಈ ಅಭಿನಂದನಾ ಗ್ರಂಥ ಕಪಾಳಮೋಕ್ಷ ಮಾಡುವ ಪಠ್ಯ ಎಂದರೆ ತಪ್ಪಾಗಲಾರದು.ಹೃದಯದಿಂದ ಮಾತನಾಡುವ ಎಲ್ ಆರ್ ಎಸ್ ರವರಿಗೆ ಹಿತಶತ್ರುಗಳು ಹೆಚ್ಚು, ಸ್ವಾಭಾವಿಕವಾಗಿ ಅವರು ಮಾತನಾಡುವ ದಾಟಿಯನ್ನೇ ಅಪಪ್ರಚಾರ ಮಾಡಿ ಲಾಭ ಪಡೆಯುವುದರಲ್ಲಿ ವಿರೋಧಿಗಳು ಮೇಲುಗೈ ಸಾಧಿಸಿರುವುದು ಉಂಟು. ಸಂಬಂಧವೇ ಇಲ್ಲದ ಕೊಲೆ ಕೇಸನ್ನ ಎಲ್ ಆರ್ ಎಸ್ ತಲೆಗೆ ಕಟ್ಟಲು ರಾಜಕಾರಣದ ದೊಡ್ಡ ದೊಡ್ಡ ತಲೆಗಳು 90ರ ದಶಕದಲ್ಲಿ ಬೀದಿಗಿಳಿದು ಹೋರಾಟ ಮಾಡಿದಂತು ವಿಪರ್ಯಾಸವೇ ಸರಿ. ಶಾಸಕರಾಗಿದ್ದ ಎಲ್ ಆರ್ ಎಸ್ ರವರ

ವಿರುದ್ಧ ವಿರೋಧಿಗಳು ಷಡ್ಯಂತ್ರ ಮಾಡಿ ಕ್ಷೇತ್ರದ ಮತದಾರರಿಗೆ ಹಣ ಹಂಚಿ ಗೆದ್ದಿದ್ದಾರೆ ಎಂಬ ಸುಳ್ಳು ಕೇಸನ್ನು ದಾಖಲಿಸಿ ಶಾಸಕ ಸ್ಥಾನವನ್ನು ಅನರ್ಹ ಪಡಿಸಲು ಸುಪ್ರೀಂ ಕೋರ್ಟ್‌ವರೆಗೆ ಹೋದರೂ ಅದಕ್ಕೆಲ್ಲ ಜಗ್ಗದ ಬಗ್ಗದ ಶಿವರಾಮೇಗೌಡರು ನ್ಯಾಯಾಲಯದಲ್ಲಿ ಗೆದ್ದು ಬೀಗಿದ್ದು ಇತಿಹಾಸ. ಹಳ್ಳಿಯ ಪಟೇಲರ ಮಗ ರಾಜ್ಯ ರಾಜಕಾರಣದಲ್ಲಿ ಉತ್ತುಂಗದ ಶಿಖರ ಏರುವುದನ್ನು ಸಹಿಸದ ದೊಡ್ಡ ದೊಡ್ಡ ಗೌಡರು ಹಂತ ಹಂತವಾಗಿ ಅಡ್ಡಗಾಲಾಗಿ ನಿಂತ ಪರಿಣಾಮ ಶಿವರಾಮೇಗೌಡರು ರಾಜಕೀಯ ಚದುರಂಗದ ಹೋರಾಟದಲ್ಲೇ ಹೆಚ್ಚು ಸಮಯ ಕಳೆಯುವಂತಾದ ಪರಿಣಾಮ ಅಲಂಕರಿಸಬೇಕಾದ ಅನೇಕ ಹುದ್ದೆಗಳು ಕೈತಪ್ಪಿ ಹೋದವು.

ಹಲವಾರು ಪೆಟ್ಟುಗಳನ್ನು ತಿಂದರು ಎದೆಗುಂದದ ಎಲ್ ಆರ್ ಎಸ್ ರವರು ರಾಜಕೀಯ ಕ್ಷೇತ್ರದಲ್ಲಲ್ಲದೆ ಶಿಕ್ಷಣ ಕ್ಷೇತ್ರದಲ್ಲೂ ತಮ್ಮದೇ ಬ್ರಾಂಡ್ ಸೃಷ್ಟಿಸಿ ತಮ್ಮ ವಿರೋಧಿಗಳಿಗೆ ಸಿಂಹ ಸ್ವಪ್ನವಾಗಿದಂತೂ ರೋಚಕ. ಎಲ್‌ಆರ್‌ಎಸ್ ರವರ ಹಾದಿ ಇಂದಿನ ರಾಜಕೀಯ ಕ್ಷೇತ್ರಕ್ಕೆ ಬರುವ ಯುವ ಪೀಳಿಗೆಗೆ ವಿಸ್ತೃತವಾದ ಮಜಲುಗಳ ಹೂರಣ ಎಂದರೆ ತಪ್ಪಾಗಲಾರದು.

ಹುಟ್ಟುಹಬ್ಬದ ಪ್ರಯುಕ್ತ ಸಾವಿರಾರು ಜನರ ಹಾರೈಕೆ, ಆಶೀರ್ವಾದ ಪಡೆಯುತ್ತಿರುವ ಈ ಸುಸಂದರ್ಭದಲ್ಲಿ "ಅಭಿನಂದನಾ ಗ್ರಂಥಕ್ಕೆ" ನಾನು ಲೇಖಕನಾಗಿ ಕೆಲಸ ಮಾಡಿದ್ದು ಅವಿಸ್ಮರಣೀಯವೆಂದು ಭಾವಿಸುತ್ತೇನೆ. ಈ 'ಅಭಿನಂದನಾ ಗ್ರಂಥ' ಸಿದ್ಧವಾಗುವವರೆಗೂ ಪ್ರತಿ ಹಂತದಲ್ಲೂ ಸಲಹೆ ಸೂಚನೆಗಳನ್ನು ನೀಡಿದ ಗುರುಗಳಾದ ಹಂಪನಾ ಸರ್ ಅವರಿಗೆ ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಹಾಗೆಯೇ ಪುಸ್ತಕದ ಅಭ್ಯುದಯಕ್ಕೆ ನನ್ನೊಂದಿಗೆ ನಿಂತ ಭಗವಾನ್ ಚಕ್ರವರ್ತಿಯವರಿಗೆ ಧನ್ಯವಾದ ತಿಳಿಸುತ್ತೇನೆ. ಈ ಪುಸ್ತಕವು ಅಚ್ಚುಕಟ್ಟಾಗಿ ಬರಲು ಮುಖಪುಟದ ವಿನ್ಯಾಸ ಮತ್ತು ಚಿತ್ರ ವಿನ್ಯಾಸವನ್ನು ಸುಂದರವಾಗಿ ರೂಪಿಸಿದ ಹಾದಿಮನಿ ಟಿ.ಎಫ್‌ರವರಿಗೆ ಹಾಗೂ ಒಳಪುಟದ ವಿನ್ಯಾಸ ಮತ್ತು ಅಕ್ಷರಗಳ ಜೋಡಣೆಯನ್ನು ಮಾಡಿಕೊಟ್ಟಂತಹ ಶೇಷಾದ್ರಿ ಧನಗೂರುರವರಿಗೂ, ಅಲ್ಲದೇ ಈ ಪುಸ್ತಕಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸನ್ಮಿತ್ರರಿಗೂ ಹಾಗೂ ಸಹೋದ್ಯೋಗಿಗಳಿಗೂ ನಮ್ಮ ಅಭಿನಂದನಾ ಗ್ರಂಥದ ಸಮಿತಿಯ ವತಿಯಿಂದ ಹಾಗೂ ವೈಯಕ್ತಿಕವಾಗಿ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.



–ಕೆ.ಎಂ. ರಘು, ಡೈರೆಕ್ಟರ್
ಪ್ರಧಾನ ಬರಹಗಾರರು ಮತ್ತು ಸಂಪಾದಕರು
ರಾಜ್ಯ ಪ್ರಶಸ್ತಿ ಪುರಸ್ಕೃತರು



ಮುಖ್ಯ-ಮುಖ

ಸಹೃದಯ ಓದುಗರಿಗೆ,

ನಮ್ಮ ಸಮಾಜದಲ್ಲಿ ಎಂತೆಂಥಹಾ ಮಹನೀಯರು ಇಲ್ಲಿ ಅವತರಿಸಿದ್ದಾರೆ, ಮಹಾನ್ ವ್ಯಕ್ತಿಗಳು ಎಲೆಮರೆಕಾಯಿಯಂತೆ ಜೀವಿಸಿ ತಮ್ಮ ಜೀವನ ಸಾರ್ಥಕ್ಯಗೊಳಿಸಿಕೊಂಡಿದ್ದಾರೆ. ಅಂತಹವರ ಅನುಭವ ನಮಗೆ ಪ್ರೇರಣೆ. ನನ್ನ ಬದುಕಿನ ಚಿತ್ರಗಳನ್ನು ದಾಖಲಿಸಿ ಪುಸ್ತಕ ಪ್ರಕಟಿಸಬೇಕೆಂದು ಬಂದ ಗೆಳೆಯರಿಗೆ ನಾನು ಇದನ್ನೇ ಹೇಳಿದ್ದೆ. ಅದಕ್ಕವರು ಸ್ವಗ್ರಾಮ ಲಾಳನಕೆರೆಯಿಂದ ಮೊದಲ್ಗೊಂಡು ರಾಜಕೀಯದ ಏರಿಳಿತದಿಂದ ನರಳಿ ಹಾಸಿಗೆ ಹಿಡಿಯದೇ ಅದನ್ನೇ ಪ್ರತಿಷ್ಠೆಯಾಗಿ ತೆಗೆದುಕೊಂಡು ರಾಜಕೀಯಕ್ಕೆ ಕೊಂಚ ಬಿಡುವು ನೀಡಿ ಶಿಕ್ಷಣ ಕ್ಷೇತ್ರದ ಕಡೆ ಗಮನಹರಿಸಿದ ಯಶೋಗಾಥೆಯೇ ಒಂದು ಅಚ್ಚರಿ. ಹಳ್ಳಿಯಿಂದ ದಿಲ್ಲಿಯವರೆಗೆ ನಡೆಸಿದ ರಾಜಕಾರಣದ ಯಶಸ್ಸಿನ ಪಥ ಮತ್ತು ಗ್ರಾಮೀಣ ಪ್ರದೇಶದಿಂದ ಬಂದ ಯುವಕರಿಗೆ ನಿಮ್ಮ ಜೀವನ ಇದು ದಾರಿದೀಪವಾಗಲಿ ಎಂಬುದು ನಮ್ಮ ಉದ್ದೇಶ ಎಂದರು.

ಸರಿ, ಆಯ್ತು.. ಮಾಡಿ ಎಂದೆ. ಪುಸ್ತಕದಲ್ಲಿ ಯಾರ ತೇಜೋವಧೆಯಾಗಲಿ, ಮನಸ್ಸಿಗೆ ನೋವಾಗಲಿ ಸಲ್ಲದು ಎಂಬ ಎಚ್ಚರಿಕೆ ನೀಡಿ ನನ್ನ ಬದುಕ ನೈಜ ಚಿತ್ರಣವನ್ನಷ್ಟೇ ದಾಖಲಿಸಿ ಗಣ್ಯರ ಅಭಿಪ್ರಾಯ ಸಂಗ್ರಹಿಸಿ ಪ್ರಕಟಿಸಿ ಎಂದು ಒಪ್ಪಿಗೆ ಸೂಚಿಸಿದೆ. ನನ್ನ ಬಾಲ್ಯ ಹುಡುಗಾಟದಲ್ಲೇ ಕಳೆದೆ, ಅನಂತರ ಕಾಲೇಜು ವಿದ್ಯಾಭಾಸವೂ ಅಷ್ಟೇ, ಓದಿದ್ದಕ್ಕಿಂತ ಆಡಿದ್ದೇ ಹೆಚ್ಚು. ಹಿಂದಿನ ಬೆಂಚಿನ ಖಾಯಂ ಸದಸ್ಯ. ಶಾಲೆಗೆ ಚಕ್ಕರ್, ಊಟಕ್ಕೆ ಹಾಜರ್, ಲೆಕ್ಕ ದಿ ಬರಿ ಸೊನ್ನೆ ಎಂಬ ಹಾಡಿನ ರೀತಿ ಇತ್ತು. ಕಾಲೇಜು ದಿನಗಳ ನಂತರ ನಮ್ಮಪ್ಪನ ಉದ್ಯಮ ನಡೆಸುವ ಇರಾದೆ ಇತ್ತು. ಆದರೆ ನಮ್ಮಪ್ಪನ ಇಚ್ಛೆಯಂತೆ ರಾಜಕಾರಣದ ಕಡೆ ಗಮನಹರಿಸಿದೆ. 80–90ರ ದಶಕದ ಆರಂಭದಲ್ಲಿ ಆಗಷ್ಟೇ ಜನಪ್ರೀತಿ, ವಿಶ್ವಾಸ ಗಳಿಸಿ ಪಕ್ಷೇತರನಾಗಿ ರಾಷ್ಟ್ರೀಯ ಪಕ್ಷಗಳಿಗೆ ಸೆಡ್ಡು ಹೊಡೆದು ನಿಂತ ಪರಿಣಾಮ ಒಬ್ಬರು ರಾಜಮುಖಂಡರು, ಮತ್ತೊಬ್ಬರು ಜಿಲ್ಲಾ ಮುಖಂಡರ ಕೆಂಗಣ್ಣಿಗೆ ಗುರಿಯಾದೆ. ತಮ್ಮ ಪ್ರಾದೇಶಿಕ ಪಕ್ಷವನ್ನು ಪ್ರವರ್ಧಮಾನಕ್ಕೆ ತರಲು ಗಂಗಾಧರಮೂರ್ತಿ ಪ್ರಕರಣವನ್ನು ಬಳಸಿಕೊಂಡ ಹಿರಿಯರು ಆಗಷ್ಟೇ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ನನ್ನಂತಹ ಯುವ ವ್ಯಕ್ತಿತ್ವಗಳ ಮೇಲೆ ವಿನಾಕಾರಣ ಗದಾಪ್ರಹಾರ ಮಾಡಿದರು. ಹಾಗೆ ಜಿಲ್ಲಾ ಮುಖಂಡರೊಬ್ಬರು ನನ್ನ ಅಭೂತಪೂರ್ವ ಗೆಲುವನ್ನು ಸಹಿಸಲಾಗದೆ ಹಣ ಹಂಚಿ ಗೆದ್ದ ಎಂದು ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿ ಇನ್ನಿಲ್ಲದ ತೊಂದರೆ ಕೊಟ್ಟು ಜನಸೇವೆ ಮಾಡಬೇಕಿದ್ದ ನಾನು, ಕೋರ್ಟಿನಲ್ಲೇ ಕಾಲ ಕಳೆಯಬೇಕಾದದ್ದು ನನ್ನ ಕರ್ಮ.

ನಾನು ನಂಬಿದ ನಾಯಕರು, ನಾನು ನಂಬಿದ ಪಕ್ಷ ಎಲ್ಲವೂ ನನಗೆ ನೋವುಂಟು ಮಾಡಿ ರಾಜಕೀಯ ಜೀವನದ ಚಿತ್ರಣವೇ ಮಸುಕಾದರೂ ನಾನು ನಂಬಿದ ನನ್ನ ಬೆಂಬಲಿಗರು ಮತ್ತು ಮತದಾರ ಪ್ರಭುಗಳ ಅನಿಯಮಿತ ಪ್ರೀತಿ ಮತ್ತು ವಿಶ್ವಾಸಕ್ಕೆ ನಾನು ಸದಾಕಾಲ ಚಿರಋಣಿ. ರಾಜಕಾರಣದ ಹಾದಿ ಬಿಟ್ಟು ಒಂದು ಹೊರಳುನೋಟ ಬೀರಿದ ನಾನು ಬೆಂಗಳೂರಿನಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕಟ್ಟಬೇಕೆಂದು ನನ್ನೆಲ್ಲಾ ಶ್ರಮ ಸದ್ವಿನಿಯೋಗಗೊಳಿಸಿದ ಪರಿಣಾಮ ಎಂಟು ಪ್ರತಿಷ್ಠಿತ ಶಾಲೆಗಳು ಮತ್ತು ಏಳು ಸಾವಿರ ವಿದ್ಯಾರ್ಥಿಗಳ ವಿದ್ಯಾರ್ಜನೆ ಕೇಂದ್ರವಾಗಿ ಇಂದು ಯಶಸ್ವಿಯಾಗಿ ನಡೆಯುತ್ತಿದೆ. ಬೆಂಗಳೂರಿನ ನನ್ನ ಸ್ನೇಹಿತರು, ಉದ್ಯಮಿಗಳ ಒಡನಾಟ ಮತ್ತು ವಿಶ್ವಾಸ ತುಂಬುವ ಶಿಕ್ಷಣ ತಜ್ಞ ಶ್ರೀ ಎಬನೇಜರ್, ಡೆಕ್ಕನ್ ಏರ್‌ವೇಸ್ ಮಾಲೀಕರು ಕ್ಯಾಪ್ಟನ್ ಗೋಪಿನಾಥ್, ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಅಶ್ವಿನಿ ನಾಚಪ್ಪ, ಕ್ರಿಕೆಟರ್ ವೆಂಕಟೇಶ್ ಪ್ರಸಾದ್ ಹಾಗೂ ಸುನೀಲ್ ಜೋಷಿರಂತಹವರ ಸಾಂಗತ್ಯ ದೊರೆತಿದ್ದು ನನ್ನ ಸುಕೃತ. ಬೇರು ಮತ್ತು ಆಕಾಶ, ಮಮತೆ ಮತ್ತು ದಿಗಂತದ ಹೊಂಗನಸಿನೊಂದಿಗೆ... ಎಂದಿನಂತೆ ಪ್ರೀತಿಯಿರಲಿ...

ನಿಮ್ಮ

ಎಲ್.ಆರ್. ಶಿವರಾಮೇಗೌಡ

ಯುವಕರಿಗೆ ನನ್ನ ಸಂದೇಶ

ನಾನು ಮಂಡ್ಯ ಜಿಲ್ಲೆ ಮತ್ತು ನಾಗಮಂಗಲ ತಾಲೂಕಿನಲ್ಲಿ ಚಿಕ್ಕ ವಯಸ್ಸಿನಲ್ಲಿ ಶಾಸಕನಾಗಿದ್ದು ಜಿಲ್ಲೆಯಲ್ಲಿ ಹಿರಿಯ ನಾಯಕರಿಗೆ ನನ್ನ ಬಗ್ಗೆ ರಾಜಕೀಯ ಅಸೂಯೆ ಹುಟ್ಟಿದ್ದರಿಂದ, ಜಿಲ್ಲೆಯ ಮತ್ತು ತಾಲೂಕಿನ ವಿರೋಧ ಪಕ್ಷದ ನಾಯಕರೆಲ್ಲ ಸೇರಿಕೊಂಡು ನನ್ನ ವಿರುದ್ಧ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟಿನಲ್ಲಿ ಹಾಕಿಸಿದರು. ತದನಂತರ ನನಗೆ ಸಂಬಂಧ ಇಲ್ಲದೆ ಇದ್ದರೂ ಸಹ ಕೊಲೆಯ ಕೇಸಿನಲ್ಲಿ ಷಡ್ಯಂತ್ರ ಮಾಡಿ ನನ್ನನ್ನು ಆರೋಪಿಯನ್ನಾಗಿ ಮಾಡಿದರು. ದೈವ ಕೃಪೆ ಮತ್ತು ನ್ಯಾಯದಾನದಿಂದ ನಾನು ಎರಡು ಕೇಸಿನಲ್ಲಿ ಘನ ನ್ಯಾಯಾಲಯದ ತೀರ್ಪಿನಿಂದ ದೋಷ ಮುಕ್ತನಾಗಿ ಹೊರಬಂದೆ. ಇತ್ತ 1994ರ ವಿಧಾನ ಸಭಾ ಚುನಾವಣೆಯಲ್ಲಿ ಜನತಾ ನ್ಯಾಯಾಲಯದಿಂದ ಮತ್ತೊಮ್ಮೆ ಶಾಸಕನಾಗಿ ಹೊರಬಂದೆ. ನನ್ನ ರಾಜಕೀಯ ಮತ್ತು ಸಾರ್ವಜನಿಕ ಬದುಕಿನಲ್ಲಿ ಇದೊಂದು ಮರೆಯಲಾಗದ ಮತ್ತು ಎಚ್ಚರಿಕೆಯ ಗಂಟೆ ಎಂದು ತಿಳಿದುಕೊಂಡೆ.

ರಾಜಕೀಯ ಕ್ಷೇತ್ರದ ಬಗ್ಗೆ ಬಹಳ ನಿರೀಕ್ಷೆಯನ್ನಿಟ್ಟುಕೊಂಡು ಬರುವ ಯುವಕ ಮಿತ್ರರಿಗೆ ನನ್ನ ಸಲಹೆಯೇನೆಂದರೆ, ನಿಮ್ಮ ಬೆನ್ನುತಟ್ಟಿ ಪ್ರೋತ್ಸಾಹಿಸುವ ಹಿರಿಯರೇ ನಿಮ್ಮ ಬೆಳವಣಿಗೆಯನ್ನು ಸಹಿಸದೆ ನಿಮಗೆ ಖೆಡ್ಡಾ ತೋಡಿರುತ್ತಾರೆ. ಮಾತಿನಲ್ಲೇ ಮರಳಿನ ಗೋಪುರ ನಿರ್ಮಿಸಿ ನಿಮ್ಮ ಕನಸಿನ ಆಶಾಗೋಪುರವನ್ನೇ ಮಣ್ಣುಪಾಲು ಮಾಡುವವರ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು. ಇಂತಹವರ ನೆರಳಿನಲ್ಲಿ ನಾನು ಬೆಳೆದು ನಾಯಕನಾಗುತ್ತೇನೆನ್ನುವ ಮಹದಾಸೆಯನ್ನು ಎಂದಿಗೂ ಇಟ್ಟುಕೊಳ್ಳಬೇಡಿ. ನಿಮ್ಮ ಸ್ವಸಾಮರ್ಥ್ಯ, ನಿಮ್ಮ ಬುದ್ಧಿವಂತಿಕೆ ಮತ್ತು ನಿಮ್ಮ ಸ್ಪಷ್ಟ ನಡೆಯ ಕಡೆ ಗಮನವಿರಲಿ. ಇದು ನಿಮಗೆ ನನ್ನ ನೀತಿ ಪಾಠ ಜೊತೆಗೆ ನನ್ನ ಅನುಭವದ ಸಾರ ಕೂಡ.



ಶಿವ ಪಥದ ಹಾದಿಯಲ್ಲಿ...

1. ದಿವ್ಯ ಸಂದೇಶ 16-21

2. ಗಣ್ಯರ ಸಂದೇಶ 22-35

3. ನನ್ನ ನೆನಪಿನ ಬಾಲ್ಯ 37

4. ಕದಬಳ್ಳಿಯ ಹೈಸ್ಕೂಲ್ 39

5. ಮಠದೊಂದಿಗೆ ನನ್ನ ಬಾಂಧವ್ಯ 40

6. ಕೊನೆಗೂ ಎಸ್‌ಎಸ್‌ಎಲ್‌ಸಿ ಪಾಸಾಗಿದ್ದು 42

7. ಕಾಲೇಜು ರಂಗ 43

8. ಕಾಲೇಜಿನಲ್ಲೊಂದು ರಾದ್ಧಾಂತ 45

9. ನನ್ನ ಪೂಜ್ಯ ತಂದೆಯವರ ಕುರಿತು 46

10. ಯೂತ್ ಕಾಂಗ್ರೆಸ್ ಸೇರ್ಪಡೆ 47

11. ಜಿಲ್ಲಾ ಪರಿಷತ್ ಚುನಾವಣೆ ಮತ್ತು ಗೆಲುವಿನ ನಗೆ 49

12. ಜಿ. ಮಾದೇಗೌಡರೊಂದಿಗೆ ಕಳೆದ ದಿನಗಳು 51

13. ರಾಜಕೀಯ ಮುತ್ಸದ್ದಿ, ಮಿತಭಾಷಿ ಎಸ್.ಎಂ. ಕೃಷ್ಣ ಅವರೊಂದಿಗಿನ ಒಡನಾಟ 54

14. ಮದುವೆ ಮನೆಯಲ್ಲಿ ಜಟಾಪಟಿ 56

15. ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆ ಪ್ರಕರಣ ನಾನು ನಿರ್ದೋಷಿ 58

16. ಗ್ರಾಮ ದೇವತೆಯ ನೆನೆದು 62

17. ವಿರೋಧಿಗಳ ತಕರಾರು ನ್ಯಾಯಾಲಯದಲ್ಲಿ ಪಾರು 63

18. ಇಂದಿಗೂ ಅಚಲವಾಗಿರುವ ಸಾಕ್ಷಿಗುಡ್ಡೆಗಳು 65

19. ಕೃಷ್ಣ ಸಾರಥ್ಯಕ್ಕೆ ಅಂಬಿ ಸಾಥ್ 70

20. ದೇವೇಗೌಡರ ಅಭಯ ಮತ್ತು ಪಟೇಲರ ವರ 72

21. ಗೃಹಮಂಡಳಿ ಫೈಲ್- ಶೀತಲ ಸಮರ 74

22. 'ಅಹಿಂದ ಕಟ್ಟಲು ಸಿದ್ದು ಪಣ, ನಾನವರೊಂದಿಗೆ ನಿಂತ ಕ್ಷಣ! 76

23. ನನ್ನ ಪುತ್ರ ಜೇತನ್‌ಗೆ ಎಂಎಲ್‌ಎ ಟಿಕೆಟ್ 78

24. ಬಿಜೆಪಿಗೆ ಸೇರಿದ ಸಂದರ್ಭ 80

25. ನನ್ನ, ಅಂಬಿ ವಿರಸಕ್ಕೆ ಬೆಸುಗೆಯಾದ ಬಾಲಗಂಗಾಧರನಾಥರು 82

26. ನನಗೆ ಕಾಂಗ್ರೆಸ್ ಟಿಕೆಟ್ ಮಿಸ್, ರಮ್ಯಾಗೆ ಒಲಿದ ಅದೃಷ್ಟ 84

27. ನನ್ನನ್ನು ಜೆ.ಡಿ.ಎಸ್‌ಗೆ ಎಚ್‌ಡಿಡಿ ಬರಮಾಡಿಕೊಂಡರು,
ಸಕಾರಣವಿಲ್ಲದೆ ಎಚ್‌ಡಿಕೆ ಉಚ್ಚಾಟಿಸಿದರು 86

28. ನಾಗಮಂಗಲ ವಿಧಾನಸಭೆ: ಒಲ್ಲದ ಮನಸ್ಸಿನಿಂದ ಬಿಜೆಪಿ ಅಭ್ಯರ್ಥಿಯಾದ ಸುಧಾ 91

29. ರಾಜಕಾರಣದ ಮಧ್ಯೆ ಬಿಡುವು, ರಾಯಲ್ ಕಾನ್ ಕಾರ್ಡ್
ಶಿಕ್ಷಣ ಸಂಸ್ಥೆ ಕಟ್ಟಿದ ಯಶೋಗಾಥೆ 94

30. ತಿಮ್ಮಲಾಪುರ ಗೇಟ್ ಡಿಸ್ಟಿಲರಿ ನಿರ್ಮಾಣದ ಕಥೆ 97

31. ಕೂಡಿ ಬಂದ ಕಂಕಣ 99

32. ನನ್ನದೇ ಒಂದು ಸೂರು ಕಟ್ಟಿಕೊಳ್ಳಲು ನಾನು ಪಟ್ಟ ಪಾಡು... 101

33. ಎಲ್ಲರೂ ನಮ್ಮವರೇ ನಾವೆಲ್ಲರೂ ಒಂದೇ... ಸುಧಾ ಶಿವರಾಮೇಗೌಡ 103

34. ಎಲ್ಲರಂತಲ್ಲ ನನ್ನಪ್ಪ -ಎಲ್.ಎಸ್. ಜೇತನ್‌ಗೌಡ 106

35. ಅವರು ನನ್ನ ಮಾವ ಅಲ್ಲ; ಅಪ್ಪಾಜಿ - ಡಾ. ಶ್ರುತಿ ಜೇತನ್‌ಗೌಡ 110

36. ನನ್ನ ತಂದೆಯೇ ನನಗೆ ಶಕ್ತಿ -ಭವ್ಯ ಗೌಡ 112

37. ಮಾವನವರ ಕ್ರಿಯಾಶೀಲತೆ ನಮಗೆ ಸ್ಫೂರ್ತಿ 114

37. ನನ್ನ ಪಾಲಿನ ದೇವರು: ಕೆ.ಎಸ್. ಮಂಜೇಗೌಡ ವಕೀಲರು 115

38. ಚಿತ್ರ ಸಮೂಹ 116

ದಿವ್ಯ ಸಂದೇಶ



ನಾನು ಶ್ರೀ ಮಠದ ಪೀಠಾಧ್ಯಕ್ಷನಾದ ಸಂದರ್ಭ, ಪರಂಪರಾಗತ ನಾಥ ಪಂಥದ 'ಗುರು ಪರಂಪರೆ' ಇಲ್ಲಿದ್ದರೂ, ಭೌತಿಕವಾಗಿ ಮಠದ ಆದಾಯ ಕ್ಷೀಣವಾಗಿತ್ತು ಮತ್ತು ಭಕ್ತಾದಿಗಳ ಪಾಲ್ಗೊಳ್ಳುವಿಕೆಯೂ ಅಷ್ಟಿರಲಿಲ್ಲ. ಇಂತಹ ಶೈಶಾವಸ್ಥೆಯ ಸಂದರ್ಭದಲ್ಲಿ ನಮ್ಮನ್ನು ಪೊರೆದವರು ನಾಗಮಂಗಲ ತಾಲೂಕಿನ ಭಕ್ತರ ಕುಟುಂಬಗಳು. ಅದು ಇನ್ನೂ ನಮ್ಮ ಸ್ಮರಣೆಯಲ್ಲಿದೆ. ಆನಂತರ ಇಲ್ಲಿಂದ ನಗರಗಳಿಗೆ ಚದುರಿ ಹೋಗಿದ್ದ ಭಕ್ತರು ತಮ್ಮ ಯಥಾಶಕ್ತಿ ಕಾಣಿಕೆ, ದವಸ, ಧಾನ್ಯ, ಕಾಯಿ, ತರಕಾರಿ ಹೀಗೆ ಮಠಕ್ಕೆ ನೀಡಿ ಶ್ರೀ ಭೈರವನ ಕೃಪೆಗೆ ಪಾತ್ರರಾದರು. ತನ್ಮೂಲಕ ಒಕ್ಕಲಿಗ ಸಮುದಾಯದ ಶ್ರೀ ಮಠವನ್ನು ಪೊರೆದರು. ಅಂತಹಾ ಕುಟುಂಬಗಳಲ್ಲಿ ಇಲ್ಲಿನ ಲಾಳನಕೆರೆಯ ಪಟೇಲ್ ರಾಮೇಗೌಡರ ಕುಟುಂಬವೂ ಒಂದು. ಪಟೇಲ್ ರಾಮೇಗೌಡ ಊರಿನ ಯಜಮಾನನಾಗಿ, ವ್ಯಾಜ್ಯ ಬಗೆಹರಿಸುತ್ತ ಜನಾನುರಾಗಿಯಾಗಿ ತಾಲೂಕು ಬೋರ್ಡ್ ಮೆಂಬರ್ ಆಗಿ ಮಠದ ಕೈಂಕರ್ಯಕ್ಕೆ ಬಿ.ಡಿ.ಒ ರಂತಹಾ ಅಧಿಕಾರಿಗಳನ್ನು ಸರ್ಕಾರಿ ರಜಾದಿನಗಳಲ್ಲಿ ಮಠದ ಸೇವೆಗೆ ನಿಯೋಜಿಸಿದ್ದರು. ಮಠದ ವಿಚಾರದಲ್ಲಿ ಯಾವತ್ತೂ ಮುಂದೆ. ರಾಮೇಗೌಡರು ಬಹಳ ಮುತುವರ್ಜಿ ವಹಿಸಿ ತಮ್ಮ ಮಗನ ಕಾಲೇಜು ಶಿಕ್ಷಣದ ಜವಾಬ್ದಾರಿಯನ್ನು ನೀವೇ ನೋಡಿಕೊಳ್ಳಿ ಆತನ ಮುಂದಿನ ಭವಿಷ್ಯ ರೂಪಿಸುವ ಗುರುಗಳು ನೀವು ಎಂದಿದ್ದರು. ವಿದ್ಯಾಬ್ಯಾಸದ ಕಡೆ ಹೆಚ್ಚು ಗಮನ ಕೊಡದೆ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿದ್ದೆ ಹೆಚ್ಚು. ಸದಾ ಸುತ್ತ ಯುವಕರ ದಂಡು ಕಟ್ಟಿಕೊಂಡು ಶಿಕ್ಷಕ ಹಾಗೂ ಸಹಪಾಠಿಗಳಲ್ಲಿ ಗೊಂದಲ, ಕಿರಿಕಿರಿ ಸೃಷ್ಟಿಸಿ ತಮಾಷೆ ಮಾಡುವ ಪ್ರಸಂಗವೇ ಹೆಚ್ಚು. ಆತ ಓದಿನ ಕಡೆ ಗಮನ ಕೊಟ್ಟಿದ್ದರೆ ಸಮಾಜಕ್ಕೆ ಆಸ್ತಿಯಾಗುತ್ತಿದ್ದ ಎಂದು ಯೋಚಿಸುತ್ತಿದ್ದೆ. ಆದರೀಗ ಮಠ ಬಿಟ್ಟ ಮೇಲೆ ಇಂದು ಶಾಸಕನಾಗಿ ಜನರಿಂದ ಮೆಚ್ಚುಗೆಯ ಮತ ಪಡೆದು ಗೆದ್ದಿರುವುದು ಅತೀವ ಸಂತಸ ತಂದಿದೆ. ಶ್ರೀ ಮಠದ ಪರವಾಗಿ ಆತನಿಗೆ ಹಾರೈಸುತ್ತೇನೆ. ಮತ್ತು ಶ್ರೀ ಕಾಲ ಭೈರವ ಸ್ವಾಮಿಯ ಕೃಪೆ ಆತನ ಮೇಲಿದೆ. ಯುವ ರಾಜಕಾರಣಿಯಾದ ಈತ ಮುಂದೆ ರಾಜಕಾರಣದಲ್ಲಿ ಹೀಗೆ ಜನಸೇವೆ ಹಾಗೂ ಗುರುಗಳ ಸೇವೆಯಲ್ಲಿ ಮುಂದುವರೆಯಲೆಂದು ಶ್ರೀ ಮಠದ ಪರವಾಗಿ ಮನಃ ಪೂರ್ವಕವಾಗಿ ಆಶೀರ್ವದಿಸುತ್ತೇವೆ.

ಇಂತು ಭಗವತ್ ಸೇವೆಯಲ್ಲಿ,

ಶ್ರೀ ಭೈರವೈಕ್ಯ ಪರಮಪೂಜ್ಯ ಜಗದ್ಗುರು
ಶ್ರೀಶ್ರೀಶ್ರೀ ಬಾಲಗಂಗಾಧರನಾಥ
ಮಹಾ ಸ್ವಾಮೀಜಿಯವರು
ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠ,
ನಾಗಮಂಗಲ ತಾಲೂಕು.

(ಅವರು ಜೀವಿಸಿದ್ದ ಸಂದರ್ಭದಲ್ಲಿ ಶಾಸಕ ಎಲ್.ಆರ್.ಶಿವರಾಮೇಗೌಡರ ಕುರಿತು ಮಠದ ಸಮಾರಂಭದಲ್ಲಿ ಆಶೀರ್ವಚನದ ನುಡಿಮುತ್ತುಗಳು)

ದಿವ್ಯ ಸಂದೇಶ



ಶ್ರೀ ಆದಿಚುಂಚನಗಿರಿ ಕ್ಷೇತ್ರದ ಗುರು ದೇವತೆಗಳಲ್ಲಿ ಇವರಿಗೆ ಅಪಾರ ಶ್ರದ್ಧಾ ಭಕ್ತಿ. ಶ್ರೀಯುತರಿಗೂ ಶ್ರೀ ಮಠಕ್ಕೂ ಅವಿನಾಭಾವ ಸಂಬಂಧ.ನಮ್ಮ ಶ್ರೀ ಮಠದ ಭಕ್ತರಾಗಿ ವಿದ್ಯಾರ್ಥಿ ದೆಸೆಯಿಂದಲೂ ನಮ್ಮ ಪ್ರಾತಃ ಸ್ಮರಣೀಯ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾ ಸ್ವಾಮೀಜಿಯವರ ಅಚ್ಚುಮೆಚ್ಚಿನ ಶಿಷ್ಯರು. ಇಂದಿಗೂ ಶ್ರೀ ಮಠದ ಸೇವಾ ಕೈಂಕರ್ಯದಲ್ಲಿ ಸದಾಕಾಲ ಭಾಗವಹಿಸುವ ಮೂಲಕ ಶ್ರೀಮಠದ ಅಭಿವೃದ್ಧಿಗೆ ತಮ್ಮ ಸಲಹೆ ಸಹಕಾರವನ್ನು ನೀಡುತ್ತಿರುವುದು ಸ್ತುತ್ಯಾರ್ಹ.ಸ್ನೇಹ ಜೀವಿಯಾಗಿರುವ ಇವರು ರಾಜಕೀಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೊಂದಿರುವಷ್ಟೇ ನಿಷ್ಠೆಯನ್ನು ಧರ್ಮ, ಸಂಸ್ಕೃತಿ, ಗುರು ನಿಷ್ಠೆಯನ್ನು ಹೊಂದಿರುತ್ತಾರೆ.

ಹುಟ್ಟುಹಬ್ಬದ ಈ ಶುಭ ಸಂದರ್ಭದಲ್ಲಿ ಅಭಿನಂದನಾ ಗ್ರಂಥ ಹೊರತರುತ್ತಿರುವುದು ಸಮಯೋಚಿತವಾಗಿದೆ. ಈ ಗ್ರಂಥವು ಮಾನ್ಯ ಶಿವರಾಮೇಗೌಡರ ವ್ಯಕ್ತಿತ್ವ ಮತ್ತು ವಿಸ್ತೃತ ಸೇವಾ ಸಾಧನೆ ಮತ್ತು ಆದರ್ಶ ಬದುಕಿನ ಸಾರ ಸರ್ವಸ್ವವನ್ನು ಪ್ರತಿಬಿಂಬಿಸುವ ಅತ್ಯುತ್ತಮ ಲೇಖನಗಳಿಂದ ಕೂಡಿ ಪ್ರಕಾಶಿತಗೊಳ್ಳಲಿ.ಅಭಿನಂದನಾ ಸಮಾರಂಭವು ಯಶಸ್ವಿಯಾಗಿ ನೆರವೇರಲಿ ಎಂದು ಆಶಿಸುತ್ತಾ, ಶ್ರೀ ಕಾಲಭೈರವ ಸ್ವಾಮಿ ಆಯುರಾರೋಗ್ಯ ಭಾಗ್ಯವನ್ನು, ಸಕಲ ಸನ್ಮಂಗಳವನ್ನು ಕರುಣಿಸಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ಇಂತಿ

ಭಗವತ್ ಸೇವೆಯಲ್ಲಿ,

ಪರಮಪೂಜ್ಯ ಜಗದ್ಗುರು

ಶ್ರೀಶ್ರೀಶ್ರೀ ಡಾ.ನಿರ್ಮಲಾನಂದನಾಥ

ಮಹಾ ಸ್ವಾಮೀಜಿಯವರು

ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠ,

ನಾಗಮಂಗಲ ತಾಲೂಕು.

ದಿವ್ಯ ಸಂದೇಶ



ಶ್ರೀ ಶಿವರಾಮೇಗೌಡರು ಶಾಲಾ ದಿನಗಳಿಂದ ನಾಯಕತ್ವ ರೂಪಿಸಿಕೊಂಡು ಹೋರಾಟದ ಗುಣಗಳಿಂದ ಜನಪ್ರಿಯರಾದರು. ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ಸಿನ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಅಪಾರ ಅನುಭವಗಳಿಸಿದವರು.ಆರಂಭದಲ್ಲೇ ನಾಗಮಂಗಲ ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘದ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರದಲ್ಲಿ ಛಾಪು ಮೂಡಿಸಿದವರು. ಬಳಿಕ ಮಂಡ್ಯ ಜಿಲ್ಲೆಯ ಜಿಲ್ಲಾ ಪರಿಷತ್‌ಗೆ ಆಯ್ಕೆಗೊಳ್ಳುವ ಮೂಲಕ ಕ್ಷೇತ್ರದ ಜನಮನ ಸೆಳೆದರು.1989 ಹಾಗೂ 1994 ಎರಡು ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಗೊಂಡು ದಶಕಗಳ ಕಾಲ ಶಾಸನ ಸಭೆಯಲ್ಲಿ ನಾಗಮಂಗಲದ ಬಡ ಜನರ ಸಮಸ್ಯೆಗಳಿಗೆ ಸದನದಲ್ಲಿ ಹೋರಾಡಿ ನ್ಯಾಯ ದೊರಕಿಸಿಕೊಟ್ಟವರು.

ಶ್ರೀ ಜೆ. ಹೆಚ್.ಪಟೇಲ್‌ರ ಸರ್ಕಾರವಿದ್ದಾಗ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿ ನಗರ ವ್ಯಾಪ್ತಿಯ ಸೂರಿಲ್ಲದವರಿಗೆ ಬೆಳಕಾದರು. ಮುಂದೆ ಮಂಡ್ಯ ಜಿಲ್ಲೆಯ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅತ್ಯಧಿಕ ಮತಗಳಿಂದ ಆಯ್ಕೆಯಾಗಿ ಲೋಕಸಭೆ ಪ್ರವೇಶಿಸಿದರು ಯಾವುದೇ ಪಕ್ಷದಲ್ಲಿ ಇವರು ಸಕ್ರಿಯವಾಗಿದ್ದರೂ ಜನಹಿತಕೋಸ್ಕರ ಯಾರೇ ಮುಖ್ಯ ಮಂತ್ರಿ, ಸಚಿವರೇ ಇರಲಿ ಅವರ ಕ್ಷೇತ್ರಕ್ಕೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳುವ ಛಾತಿ ಅವರದ್ದು. ಅವರು ಬಿಡಿಎ ಅಧ್ಯಕ್ಷರಾಗಿದ್ದ ಕಾಲದಲ್ಲಿ ನಮಗೆ ದೂರವಾಣಿ ಕರೆ ಮಾಡಿ, ಏನಾದರೂ ಕೆಲಸ ಕಾರ್ಯವಿದ್ದರೆ ನಿಮ್ಮವರನ್ನು ಕಳಿಸಿ ಕೆಲಸ ಮಾಡಿಸಿಕೊಳ್ಳಬೇಕು ಎಂದು ವಿನಂತಿಸುತ್ತಿದ್ದರು.

ರಾಜಕಾರಣದಿಂದ ಸ್ವಲ್ಪ ಬಿಡುವು ಪಡೆದು ಬೆಂಗಳೂರಿನಲ್ಲಿ ಪ್ರತಿಷ್ಠಿತ ಶಾಲೆಗಳನ್ನು ತೆರೆದು ಸಮರ್ಥವಾಗಿ ನಡೆಸುತ್ತಿದ್ದಾರೆ. ರಾಜಕೀಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸದಾ ಸಕ್ರಿಯರಾಗಿರುವ ಶ್ರೀ ಶಿವರಾಮೇಗೌಡರು ಖಂಡಿತವಾಡಿ ಲೋಕವಿರೋಧಿ ಎಂಬ ಗಾದೆಗೆ ಉದಾಹರಣೆಯಂತಿರುವವರು.ಮುಂದಿನ ಜನಾಂಗಕ್ಕೆ ರಾಜಕೀಯ ಸಂಗತಿಗಳ ಬಗ್ಗೆ ಒಳನೋಟಗಳನ್ನು ನೀಡಬಲ್ಲ ಸಾಮರ್ಥ್ಯ ಉಳ್ಳವರು.ಇಂಥಾ ವರ್ಣರಂಜಿತ ವ್ಯಕ್ತಿತ್ವದ ಶಿವರಾಮೇಗೌಡರ ಹುಟ್ಟುಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವ ಅಭಿನಂದನಾ ಗ್ರಂಥ ಅವರ ರಾಜಕೀಯ ಅನುಭವ ಮತ್ತು ವ್ಯಕ್ತಿತ್ವಗಳ ವಿಸ್ತೃತ ವ್ಯಾಖ್ಯಾನ ಉಳ್ಳ ಲೇಖನಗಳಿಂದ ಒಡಗೂಡಿ ಪ್ರಕಟವಾಗಲೆಂದು ಹಾರೈಸುತ್ತೇನೆ.

ಇಂತಿ

ಭಗವತ್ ಸೇವೆಯಲ್ಲಿ,

ಜಗದ್ಗುರು

ಶ್ರೀಶ್ರೀಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು

ಶ್ರೀ ಕ್ಷೇತ್ರ ಸುತ್ತೂರು ಮಠ

ದಿವ್ಯ ಸಂದೇಶ



ಸನ್ಮಾನ್ಯ ಎಲ್.ಆರ್.ಶಿವರಾಮೇಗೌಡರು ನಮ್ಮ ಸಮುದಾಯದ ಹಿರಿಯ ಮುಖಂಡರು.ಮಾಜಿ ವಿಧಾನಸಭಾ ಹಾಗೂ ಲೋಕಸಭಾ ಸದಸ್ಯರಾಗಿ ಅತ್ಯಂತ ಸೃಜನಶೀಲ ಸೇವೆಯನ್ನು ನಾಗಮಂಗಲ ಹಾಗೂ ಮಂಡ್ಯ ಜಿಲ್ಲೆಗೆ ನೀಡಿರುತ್ತಾರೆ. ಅಲ್ಲದೇ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬಹಳ ದೊಡ್ಡ ದೃಷ್ಟಿಕೋನವನ್ನು ಇಟ್ಟುಕೊಂಡು ಹಲವಾರು ಗುರುತರ ಕಾರ್ಯಕ್ರಮಗಳನ್ನು ರೂಪಿಸಿರುತ್ತಾರೆ.

ಶಿವರಾಮೇಗೌಡರು ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅತ್ಯಂತ ಚಟುವಟಿಕೆಯ ಮುಖಂಡರಾಗಿ ಬಹಳಷ್ಟು ಜ್ವಲಂತ ಸಮಸ್ಯೆಗಳ ವಿರುದ್ಧ ಹೋರಾಟಗಾರರಾಗಿ ಗುರುತಿಸಿಕೊಂಡು ಜನಾನುರಾಗಿ ನಾಯಕರಾಗಿರುತ್ತಾರೆ. ಯಾವುದೇ ದೊಡ್ಡ ರಾಜಕೀಯದ ಕುಟುಂಬದ ಹಿನ್ನೆಲೆಯಿಂದ ಬಂದಿಲ್ಲದವರಾದರೂ ತಮ್ಮ ಸ್ವಶ್ರಮದಿಂದ, ಬದ್ಧತೆಯಿಂದ ಸೇವೆಯನ್ನು ಸಲ್ಲಿಸಿ ಮನೆಮಾತಾಗಿದ್ದಾರೆ. ಸನ್ಮಾನ್ಯ ಡಿ.ಕೆ. ಶಿವಕುಮಾರ್ ಅವರು ಇ.ಡಿ. ತನಿಖೆಗೆ ಒಳಪಟ್ಟಾಗ ಸುದ್ದಿ ತಿಳಿದ ತಕ್ಷಣ ಅವರ ಸಂಬಂಧಿಯಾದ ಶಿವರಾಮೇಗೌಡರಿಗೆ ದೂರವಾಣಿ ಕರೆ ಮಾಡಿ ವಿಚಾರಿಸಿದೆ. ಆಗ ಅಳುತ್ತಲೇ ಎಲ್ಲ ಬೆಳವಣಿಗೆಗಳನ್ನು ವಿವರಿಸಿದರು. ಆಗ ನಾನು ಡಿ.ಕೆ. ಶಿವಕುಮಾರ್ ಅವರಿಗೆ ಕಳಂಕದಿಂದ ಹೊರಬರುವ ಎಲ್ಲ ಶಕ್ತಿಯನ್ನು ಭಗವಂತನು ದಯಪಾಲಿಸಲಿ. ನೀವು ಧೃತಿಗೆಡಬೇಡಿ. ಎಲ್ಲವೂ ಒಳ್ಳೆಯದಾಗುತ್ತದೆ ಎಂದು ತಿಳಿಸಿದೆ. ನಾನು ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಸಣ್ಣ ಸ್ವಾಮಿಯಾಗಿ ಶಿಷ್ಯವೃತ್ತಿಯಲ್ಲಿ ತೊಡಗಿದ್ದಾಗಿನಿಂದ ಶಿವರಾಮೇಗೌಡರನ್ನು ಬಲ್ಲೆ. ಅಂದಿನ ದಿನಮಾನದಲ್ಲೇ ಕಾಲೇಜು ವಿದ್ಯಾರ್ಥಿಯಾಗಿ ಯುವಕರ ದಂಡು ಕಟ್ಟಿಕೊಂಡು ಯುವನಾಯಕನಾಗುವ ಎಲ್ಲ ಲಕ್ಷಣಗಳನ್ನು ಅಂದೇ ಪ್ರದರ್ಶಿಸಿದ್ದರು. ಆನಂತರ ಶಾಸಕರಾಗಿ ಸೇವೆ ಸಲ್ಲಿಸಿದ್ದು ನಮ್ಮ ಗಮನದಲ್ಲಿದೆ. ಅವರ ಹುಟ್ಟುಹಬ್ಬದ ಈ ಸುಸಂದರ್ಭದಲ್ಲಿ ಅವರ ಅಭಿಮಾನಿಗಳೆಲ್ಲರೂ ಸೇರಿ ಅಭಿನಂದನಾ ಗ್ರಂಥವನ್ನು ತರುತ್ತಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಎಲ್.ಆರ್.ಶಿವರಾಮೇಗೌಡರ ಕ್ರಿಯಾಶೀಲ ವ್ಯಕ್ತಿತ್ವ ಮತ್ತು ಮುತ್ಸದ್ಧಿತನ ಹಾಗೂ ಸಂಘಟನಾ ಚಾತುರ್ಯತೆ ನಾಡಿನ ಯುವಕರಿಗೆ ಮಾದರಿಯಾಗಲೆಂದು ಈ ಶುಭ ಸಂದರ್ಭದಲ್ಲಿ ತುಂಬು ಹೃದಯದಿಂದ ಹಾರೈಸುತ್ತೇನೆ. ಅವರಿಗೆ ಭಗವಂತ ಇನ್ನೂ ನೂರು ವರುಷಗಳ ಆಯಸ್ಸು ಹಾಗೂ ಆಯುರಾರೋಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇಂತು, ಭಗವತ್ ಸೇವೆಯಲ್ಲಿ,

ಪರಮಪೂಜ್ಯ ಜಗದ್ಗುರು

ಶ್ರೀ ಶ್ರೀ ಶ್ರೀ ಡಾ.ನಂಜಾವಧೂತ

ಮಹಾ ಸ್ವಾಮೀಜಿಯವರು

ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾ ಸಂಸ್ಥಾನ.

ಶ್ರೀ ಕ್ಷೇತ್ರ, ಪಟ್ಟನಾಯಕನಹಳ್ಳಿ, ಶಿರಾ ತಾಲೂಕು.

ದಿವ್ಯ ಸಂದೇಶ



ಭಾರತೀಯ ಪ್ರಜಾಪ್ರಭುತ್ವವು ಆಳಾದವನು ಅರಸನಾಗಬಲ್ಲ ಎಂಬ ಗಾದೆ ಮಾತಿನಂತೆ ಎಲ್ಲರಿಗೂ ಮುಕ್ತ ಅವಕಾಶವನ್ನು ನೀಡುತ್ತಾ ಧೈರ್ಯವಂತರು ಹಾಗೂ ಬುದ್ದಿಶಾಲಿಗಳು ಮತ್ತು ಜನ ಸ್ನೇಹಿಗಳಿಗೆ ಅಮೂಲ್ಯ ಅವಕಾಶವನ್ನು ಸೃಷ್ಟಿ ಮಾಡಿಕೊಡುತ್ತದೆ. ಹಳ್ಳಿಯ ರೈತನ ಮಗನೊಬ್ಬ ರಾಜಕಾರಣ ಪ್ರಕ್ರಿಯೆಯ ಮೂಲಕ ಜನ ಸಾಮಾನ್ಯರ ನಾಯಕನಾಗಿ ಬಿಂಬಿತಗೊಂಡು ಸಾಂವಿಧಾನಿಕ ಸ್ಥಾನಮಾ ನಗಳನ್ನು ಸೃಜಿಸಿ ಕೊಳ್ಳಲು ಸಾಧ್ಯವಾದದ್ದು ಮತ್ತು ಸಾಧ್ಯವಾಗುವುದು ಈ ನೆಲದಲ್ಲಿ ಮಾತ್ರ. ಜನಸಾಮಾನ್ಯರ ನಾಯಕನಾಗಿ ಸದಾ ಜನರ ಕಷ್ಟ ಸುಖಗಳಿಗೆ ದನಿ ಎತ್ತಿ ಹೃದಯವಿತ್ತು ಸ್ಪಂದಿಸುವ ಗುಣವುಳ್ಳವರೆಂದರೆ ಶ್ರೀಯುತ ಎಲ್.ಆರ್.ಶಿವರಾಮೇಗೌಡರು. ಅವರ ಜೀವನವೇ ಒಂದು ಕುತೂಹಲ. ವಿದ್ಯಾರ್ಥಿ ದೆಸೆಯಿಂದಲೇ ಪ್ರಶ್ನಿಸುವ ಗಟ್ಟಿಧ್ವನಿಯಾಗಿ ಪ್ರಕಟಗೊಳ್ಳುವಿಕೆಯ ಮೂಲಕ ಜನಮನ ಗೆದ್ದವರಿವರು. ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವರಿಗೆ ತಣ್ಣಗಿನ ಆಸರೆಯ ನೆರಳನಿತ್ತು, ಹೇಗೆ ಗೆಲುವಾಗುವುದೋ ಹಸುರೆಲೆಯ ಹೊಂಗೆಮರ ಆ ರೀತಿಯಲ್ಲಿ ಬಾಳಿನುದ್ದಕ್ಕೂ ತನ್ನ ಒಡನಾಡಿಗಳ ಮತ್ತು ನೆರವು ಕೋರಿ ಬಂದವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಾ ತಳ ಮಟ್ಟದಿಂದ ಬೆಳೆದು ಶಾಸಕರಾಗಿ, ಸಂಸದರಾದವರು ಶ್ರೀಯುತ ಎಲ್.ಆರ್.ಶಿವರಾಮೇಗೌಡರು. ಜನಮಾನಸದಲ್ಲಿ ಸದಾ ಛಲಗಾರರಾಗಿ, ಬೆನ್ನಿಗೆ ಬಿದ್ದವರಿಗೆ ಎದೆಗಾರನಾಗಿ, ಹೃದಯ ತೆರೆದವರಿಗೆ ಹೃದಯವಂತನಾಗಿ ಮತ್ತು ನಂಬಿದವರಿಗೆ ಅಂಬಿಗನಾಗಿ ಕಂಡವರು ಗೌಡರು. ಕಾಯಕ ತತ್ವದ ಜೀವಸೆಲೆ ನಾಗಮಂಗಲ ಅಲ್ಲಿನ ಮಣ್ಣಿನ ಗುಣವುಳ್ಳ ಇವರು, ಒರಟುತನದ ನೇರ ಮಾತಿನ ವರಸೆ ತೋರಿದರೂ ಹೃದಯ ವೈಶಾಲ್ಯತೆ ಉಳ್ಳವರು. ಅರ್ಧ ಶತಮಾನದ ಸಾರ್ವಜನಿಕ ಜೀವನದಲ್ಲಿ ಗೆಲುವಿಗಿಂತ ಹೆಚ್ಚು ಸೋಲುಂಡರೂ ಎದೆಗುಂದದ ಅಪ್ಪಟ ಗ್ರಾಮೀಣ ನಾಯಕರೆನಿಸಿಕೊಂಡವರು. ರಾಜಕೀಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದು ಬದುಕಿಗೊಂದು ಮೆರಗು ನೀಡಿದ್ದಾರೆ.ರಾಜಕಾರಣದಲ್ಲಿ ಆಸಕ್ತಿ ಉಳ್ಳವರಿಗೊಂದು ಭರವಸೆಯ ಹಾದಿ ತೋರುತ್ತದೆ. 70ವರ್ಷಗಳ ಸುಧೀರ್ಘ ಜೀವನ ಪಯಣದಲ್ಲಿ ನೋವು ನಲಿವುಗಳನ್ನು ಸಮಾನವಾಗಿ ಪ್ರೀತಿಸಿ ಭಯವಿಲ್ಲದ ಭೈರವ ನೆನೆಸಿರುವ ತನ್ನನ್ನು ಪ್ರೀತಿಸುವವರಿಗೆ ಪ್ರೀತಿಯ ಕಾರುಣ್ಯ ತೋರುತ್ತಾ, ಗುರು ಹಿರಿಯರಿಗೆ ತಲೆಬಾಗುವ ಶಿವರಾಮೇಗೌಡರಿಗೆ ಅಭಿನಂದನಾ ಗ್ರಂಥದ ಮೂಲಕ ಗೌರವ ಸಮರ್ಪಣೆ ಸಲ್ಲಿಸುವ ಕಾರ್ಯ ಅಭಿನಂದನೀಯ.ಅವರ ಜೀವನದ ಪಯಣದ ಮಾರ್ಗ ಸುಖ ಮಯವಾಗಿರಲಿ, ಸಾಧಿಸುವ ಹಂಬಲಕ್ಕೆ ಅವಕಾಶಗಳು ಸಿಗಲೆಂದು ಶುಭಹಾರೈಸುತ್ತೇವೆ.

ಇಂತು, ಭಗವತ್ಸೇವೆಯಲ್ಲಿ...

ಪರಮಪೂಜ್ಯ ಜಗದ್ಗುರು
ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ
ಪೀಠಾಧ್ಯಕ್ಷರು, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ
ಮಠ, ಕೆಂಗೇರಿ, ಬೆಂಗಳೂರು.

ದಿವ್ಯ ಸಂದೇಶ



ಶ್ರೀ ಎಲ್.ಆರ್. ಶಿವರಾಮೇಗೌಡರ ಸೇವೆ–ಸಾಧನೆಯನ್ನು ಮನ್ನಿಸಿ ಅವರ ಅಭಿಮಾನಿಗಳೆಲ್ಲ ಸೇರಿ ಅಭಿನಂದನಾ ಸಮಾರಂಭ ಆಯೋಜಿಸಿರುವ ವಿಚಾರ ತಿಳಿದು ಸಂತೋಷವಾಯಿತು. ಅವರ ಸರಳ ಜೀವನ, ಉನ್ನತ ಚಿಂತನೆ, ಸಾಮಾಜಿಕ ಕಳಕಳಿ ಹಾಗೂ ನಾಯಕತ್ವ ಗುಣ ಆದರ್ಶ ಹಾಗೂ ಅನುಕರಣೀಯವಾಗಿದೆ. ಅಭಿನಂದನೆಗಳು. ಎಲ್.ಆರ್. ಶಿವರಾಮೇಗೌಡರ ಬದುಕಿನ ಏರಿಳಿತಗಳು, ಅವರು ಪಟ್ಟಪಾಡು, ಸೋಲು ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸಿ ಧೃತಿಗೆಡದೆ ಮುನ್ನುಗ್ಗುವ ಅವರ ಶೈಲಿ ಮೆಚ್ಚುವಂತಹುದು. ನಾಗಮಂಗಲ ಕ್ಷೇತ್ರದ ಜನಪರ ಕಾಳಜಿಯುಳ್ಳ, ಜನರೊಂದಿಗೆ ಸದಾಕಾಲ ಬೆರೆಯುವ, ಸಮಸ್ಯೆಗೆ ತತ್‌ಕ್ಷಣ ಸ್ಪಂದಿಸುವ ಅವರ ಕಳಕಳಿ ಪ್ರತಿಯೊಬ್ಬ ರಾಜಕಾರಣಿಗೂ ಇರಬೇಕಾದದ್ದು ಸಾಮಾನ್ಯ. ಕಳೆದ ವರ್ಷ ಶ್ರೀ ಕ್ಷೇತ್ರದ ವಿರುದ್ಧ ಸರ್ಕಾರ ಎಸ್.ಐ.ಟಿ. ತನಿಖೆ ಪ್ರಾರಂಭಗೊಂಡ ತರುವಾಯ ಶ್ರೀ ಕ್ಷೇತ್ರದ ಪರವಾಗಿ ನಾಗಮಂಗಲದ ನಾಯಕ ಎಲ್.ಆರ್. ಶಿವರಾಮೇಗೌಡ ಮತ್ತು ಕುಣಿಗಲ್ ಕ್ಷೇತ್ರದ ಯುವ ಶಾಸಕ ಡಾ.ರಂಗನಾಥ್ ನೇತೃತ್ವದಲ್ಲಿ ಬೃಹತ್ ಮೂರು ಸಾವಿರ ಜನರು ಬೈಕು ಹಾಗೂ ಕಾರು ರ‍್ಯಾಲಿ ನಡೆಸಿ ಬೆಂಬಲಿಸಿದ್ದು ಕೂಡ ನಮ್ಮ ಮನದಲ್ಲಿದೆ.

ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತಾ ಮುಂದೆ ಅವರು ಇನ್ನೂ ಹೆಚ್ಚಿನ ಸಾಧನೆ ಮಾಡುವಂತೆ ಶ್ರೀ ಮಂಜುನಾಥಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ. ಅಭಿನಂದನಾ ಸಮಾರಂಭ ಹಾಗೂ ಅಭಿನಂದನಾ ಗ್ರಂಥ ಪ್ರಕಾಶನಾಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಎಲ್ಲರಿಗೂ ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಇಂತಿ

ಭಗವತ್ ಸೇವೆಯಲ್ಲಿ...

ಪರಮಪೂಜ್ಯ

ಶ್ರೀ ಡಾ. ವೀರೇಂದ್ರ ಹೆಗ್ಗಡೆಯವರು

ಧರ್ಮಾಧಿಕಾರಿಗಳು ಹಾಗೂ ರಾಜ್ಯಸಭಾ ಸದಸ್ಯರು

ಶ್ರೀ ಕ್ಷೇತ್ರ ಧರ್ಮಸ್ಥಳ, ದಕ್ಷಿಣ ಕನ್ನಡ, ಕರ್ನಾಟಕ

ಸಂದೇಶ



(ಸನ್ಮಾನ್ಯರು ಜೀವಿತಾವಧಿಯಲ್ಲಿ ಟಿವಿ ವಾಹಿನಿಯೊಂದರಲ್ಲಿ ನೀಡಿದ ಸಂದರ್ಶನದ ಮಾತುಗಳು)

ನಾಗಮಂಗಲ ತಾಲೂಕು ಮಂಡ್ಯ ಜಿಲ್ಲೆಯಲ್ಲಿ ಭೌಗೋಳಿಕವಾಗಿ ವಿಸ್ತೀರ್ಣ ಹೊಂದಿರುವ ಹೆಚ್ಚು ಭೂ ಪ್ರದೇಶ. ಇಲ್ಲಿ ಜನ ಕಷ್ಟ ಸಹಿಷ್ಣುಗಳು. ಸ್ವಾಭಿಮಾನಿಗಳು. ಇಲ್ಲಿಯ ರಾಜಕಾರಣಿಗಳೂ ಅಷ್ಟೇ ಜನರ ಭಾವನೆಗೆ ಕನ್ನಡಿಯಿಟ್ಟಂತೆ ಬದುಕಿದ್ದರು. ಎಂ.ಕೆ.ಶಂಕರಲಿಂಗೇಗೌಡರಿಂದ ಮೊದಲ್ಗೊಂಡು ಟಿ.ಮರಿಯಪ್ಪ ನನಗೆ ಆತ್ಮೀಯರು. ಸಹಕಾರಿ ಧುರೀಣ ಟಿ. ಎನ್.ಮಾದಪ್ಪಗೌಡರು, ಕೆ.ಸಿಂಗಾರಿಗೌಡ, ಹೆಚ್. ಟಿ.ಕೃಷ್ಣಪ್ಪ, ಸ್ವಾತಂತ್ರದ ಕಹಳೆ ಊದಿದ ಗ್ರಾಮ ಪಾಲಗ್ರಹಾರದ ಪಿ.ಎನ್.ಜವರಪ್ಪಗೌಡರು,ನಾಗಮಂಗಲದ ಎಂ.ಆರ್.ಎನ್.ಶಾಸ್ತ್ರಿ, ದಸ್ತಗೀರ ಸಾಹೇಬರು ಹೀಗೆ ಎಲ್ಲರ ನೆನಪು ನಾಗಮಂಗಲದ ಜೊತೆಗೆ ನನ್ನ ಮನ: ಪಟಲದಲ್ಲಿದೆ.ನನ್ನ ಮದ್ದೂರು ಕ್ಷೇತ್ರ ಹಿಂದೊಮ್ಮೆ ನಾಗಮಂಗಲದ ದೇವಲಾಪುರ ಹೋಬಳಿಯ ಕೆಲ ಗ್ರಾಮಗಳು ನನ್ನ 1969 ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ಈ ಜನ ನನಗೆ ತೋರಿದ ಪ್ರೀತಿ, ಅಭಿಮಾನ ಅದು ಮತವಾಗಿ ಪರಿವರ್ತಿತವಾಗಿ ನಾನು ಗೆದ್ದು ಬಂದಿದ್ದೆ.ಆ ಗೆಲುವು ನನ್ನ ರಾಜಕೀಯ ಜೀವನದ ಉನ್ನತಿಗೆ ಅಡಿಗಲ್ಲಾಯಿತು ಎನ್ನಬಹುದು.ಅಂದಿನಿಂದ ಈವರೆವಿಗೂ ಅದೇ ವಿಶ್ವಾಸ ತೋರುವ ಈ ಜನರ ಮತ್ತು ಕ್ಷೇತ್ರದ ಔದಾರ್ಯ ದೊಡ್ಡದು ಎಂದು ನನ್ನ ಭಾವನೆ. ಶ್ರೀ ಲಾಳನಕೆರೆ ರಾಮೇಗೌಡರ ಬಗ್ಗೆ ನನ್ನ ಓರಗೆಯ ಮಿತ್ರ ರಿಂದ ತಿಳಿದುಕೊಂಡಿದ್ದೆ.ಅವರ ಮಗ ಎಲ್. ಆರ್. ಶಿವರಾಮೇಗೌಡರು ನಾಗಮಂಗಲದ ಸದ್ಯದ ಮಟ್ಟಿಗಿನ ಯುವ ಶಾಸಕರಾಗಿ ಆಯ್ಕೆಗೊಂಡು ನನ್ನೊಂದಿಗೆ ಪಕ್ಷೇತರರಾಗಿ 10ನೇ ವಿಧಾನಸಭೆಗೆ ಆಯ್ಕೆಗೊಂಡ ಯುವ ರಾಜಕಾರಣಿ.ಶ್ರೀ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಸಂಪೂರ್ಣ ಬಹುಮತದಿಂದ ವಿಜೃಂಬಿಸಿತು. ನಾನು ಶಾಸನ ಸಭಾಧ್ಯಕ್ಷನಾಗಿ ಮೂರು ವರ್ಷ ಕಾರ್ಯನಿರ್ವಹಿಸಿದೆ.ಆಗ ಯುವ ಶಾಸಕರ ದಂಡೇ ಅಲ್ಲಿತ್ತು.ಅವರಿಗೆ ಶಾಸನ ಸಭೆಯ ನಡವಳಿಗಳನ್ನು ತಿಳಿಸಿಕೊಡುವುದು ಮತ್ತು ಅವರು ಸದನದಲ್ಲಿ ತಮ್ಮ ಅನನುಭವಿ ಪ್ರಶ್ನೆಗಳ ಹಾಗೂ ಅಭಿಪ್ರಾಯಗಳ ಮೂಲಕ ಸದನದ ಗಾಂಭೀರ್ಯವನ್ನು ಮೊಟಕುಗೊಳ್ಳಲು ಯತ್ನಿಸಿದಾಗ ಸದನವನ್ನು ಸರಿದಾರಿಯಲ್ಲಿ ನಡೆಸುವ ಹೊಣೆ ನನ್ನದಾಗಿರುತ್ತದೆ ಮತ್ತು ಏಕಾಏಕಿ ಹಿರಿಯ ಸದಸ್ಯರ ಜೊತೆ ವಾಗ್ವಾದಕ್ಕಿಳಿವ ಯುವ ಶಾಸಕರಿಗೆ ಮಾತಿನ ಪೆಟ್ಟು ಕೊಟ್ಟು ಸದನದ ಶಾಂತಿ ಕಾಪಾಡಬೇಕಾಗುತ್ತದೆ. ಈ ಪೈಕಿ ಒಬ್ಬ ಯುವ ಶಾಸಕ ನನ್ನ ಜಿಲ್ಲೆಯ ಯುವ ಮಿತ್ರ ಶ್ರೀ ಎಲ್.ಆರ್.ಶಿವರಾಮೇಗೌಡ ಕೂಡ ಒಬ್ಬರು ಎಂದು ಸ್ಮರಿಸುತ್ತೇನೆ.

ಸದನದಲ್ಲಿ ಶಿವರಾಮೇಗೌಡ ಸಭಾ ಗಾಂಭೀರ್ಯದಿಂದ ವರ್ತಿಸದೇ ಹಳಿತಪ್ಪಿದಾಗ, ನಾನು ಹೆಡ್ ಮೇಸ್ಟ್ರ ರೀತಿ ಗದರಿಸಿ ಅವರನ್ನು ಕುಳ್ಳಿರಿಸುತ್ತಿದ್ದೆ. ಅವರೂ ಕೂಡ ನನ್ನ ಆಣತಿಯನ್ನು ಮೀರಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ.

ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಂದೇಶ



ನಾಗಮಂಗಲ ಕ್ಷೇತ್ರದ ಹಿರಿಯ ರಾಜಕಾರಣಿ ಹಾಗೂ ಮಿತ್ರರೂ ಹಾಗೂ ಬಂಧುಗಳೂ ಆದ ಎಲ್.ಆರ್.ಶಿವರಾಮೇಗೌಡರ ಹುಟ್ಟುಹಬ್ಬ. ಈ ಸವಿ ನೆನಪಿಗೆ ಅವರ ಮಿತ್ರರು ಅಭಿನಂದನಾ ಗ್ರಂಥ ತರುತ್ತಿರುವುದು ಸಂತಸ ತಂದಿದೆ. ವಿದ್ಯಾರ್ಥಿ ದೆಸೆಯಿಂದಲೇ ಈ ಸಮಾಜದ ಪರವಾಗಿ ಕಾಳಜಿ ಇಟ್ಟುಕೊಂಡು ಸಾರ್ವಜನಿಕ ಜೀವನಕ್ಕೆ ಬಂದ ಅಪ್ಪಟ ಗ್ರಾಮೀಣ ಸೊಗಡಿನ ರಾಜಕಾರಣಿ. ಇವರು ಜನಸಾಮಾನ್ಯರಲ್ಲಿ ಒಬ್ಬರಾಗಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಇವರ ಗುಣ ಎಂತಹವರನ್ನೂ ಬೆರಗುಗೊಳಿಸುತ್ತದೆ. ನನ್ನಂತೆಯೇ ತಾಲೂಕು ಸೊಸೈಟಿ ಮುಖಾಂತರ ರಾಜಕಾರಣ ಆರಂಭಿಸಿದ ಎಲ್.ಆರ್.ಎಸ್. ಅನಂತರ ಜಿಲ್ಲಾ ಪರಿಷತ್ ಸದಸ್ಯರಾಗಿ, ಜನರ ಮನಸ್ಸು ಗೆದ್ದು ಎರಡು ಭಾರಿ ವಿಧಾನ ಸಭೆಗೆ ಹಾಗೂ ಲೋಕಸಭಾ ಸದಸ್ಯರಾಗಿ ನೂರಾರು ಜನಪರ ಕೆಲಸಗಳಿಗೆ ಮುನ್ನುಡಿ ಬರೆದವರು. ನಾನೂ ಹಾಗೂ ಶಿವರಾಮೇಗೌಡ ಒಟ್ಟಿಗೆ 1989 ರಲ್ಲಿ ವಿಧಾನಸಭೆ ಪ್ರವೇಶಿಸಿದ್ದು ಮರೆಯಲಾರದ ದಿನ.ಇವರೂ ಸಹ ನನ್ನಂತೆ ಕೇಂದ್ರ ಮಂತ್ರಿ ಜನಾರ್ಧನ ಪೂಜಾರಿ ಅವರನ್ನು ಕ್ಷೇತಕ್ಕೆ ಕರೆಸಿ ಪೂಜಾರಿ ಸಾಲ ಮೇಳ ನಡೆಸಿ ಆರ್ಥಿಕವಾಗಿ ದುರ್ಬಲರಾದ ನಿರುದ್ಯೋಗಿಗಳಿಗೆ ಹಾಗೂ ಕಡು ಬಡವರಿಗೆ ಸಹಾಯವನ್ನು ಮಾಡುವ ಮೂಲಕ ಮನೆಮಾತಾದರು. ನಾಗಮಂಗಲದಂತಹ ಹಿಂದುಳಿದ ಪ್ರದೇಶದಲ್ಲಿ ಅಂದಿನ ಕಾಲಕ್ಕೆ 8 ರಾಷ್ಟ್ರೀಕೃತ ಬ್ಯಾಂಕುಗಳನ್ನು ಏಕ ಕಾಲಕ್ಕೆ ಉದ್ಘಾಟನೆ ಮಾಡಿಸಿದ ಖ್ಯಾತಿ ಇವರದ್ದು. ಗ್ರಾಮೀಣ ಪ್ರದೇಶದ ರೈತರ ಮಕ್ಕಳು ವಿದೇಶಗಳಲ್ಲಿ ವ್ಯಾಸಂಗ ಮಾಡುವ ಓದಿನ ಕನಸಿಗೆ ಬೆನ್ನೆಲುಬಾಗಿ ನಿಂತು ಮದ್ದೂರಿನಲ್ಲಿ ಪಾಸ್ ಪೋರ್ಟ್ ಸೇವಾ ಕೇಂದ್ರ ತೆರೆಯಲು ಕಾರಣರಾದರು. ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಬಡ ಹಾಗೂ ಮಧ್ಯಮ ವರ್ಗದ ಜನರ ಸ್ವಂತ ಸೂರು ಪಡೆಯುವ ಕನಸಿಗೆ ಇಂಬು ಕೊಟ್ಟವರು. ಬಿಡಿಎ ಅಧ್ಯಕ್ಷರಾಗಿ ರಾಜ್ಯದ ರಾಜಧಾನಿ ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ದುಡಿದ ನಾಯಕರಿವರು.ಇವರ ಅನುಭವ ಯುವ ರಾಜಕಾರಣಿಗಳಿಗೆ ಮಾದರಿ.

ಹುಟ್ಟುಹಬ್ಬದ ಈ ಶುಭ ಸಂದರ್ಭದಲ್ಲಿ ಹೊರತರುತ್ತಿರುವ ಅಭಿನಂದನಾ ಗ್ರಂಥ ಭವಿಷ್ಯದ ಯುವಕರ ರಾಜಕೀಯ ಬೆಳವಣಿಗೆಗೆ ಮಾದರಿ ಗ್ರಂಥವಾಗಲಿ ಎಂದು ಆಶಿಸುತ್ತ ಇನ್ನೂ ಹೆಚ್ಚಿನ ಜನ ಸೇವೆಗೆ ಅವಕಾಶ ಒದಗಿಬರಲಿ ಎಂದು ಆಶಿಸುತ್ತಾ ಆ ಭಗವಂತ ಇನ್ನೂ ಆಯುರಾರೋಗ್ಯ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀ.ಡಿ.ಕೆ.ಶಿವಕುಮಾರ್

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಂದೇಶ



ಹಿರಿಯ ರಾಜಕಾರಣಿ ಎಲ್.ಆರ್.ಶಿವರಾಮೇಗೌಡರ ಕುರಿತು ಅಭಿನಂದನಾ ಗ್ರಂಥ ತರುತ್ತಿರುವುದು ಅತ್ಯಂತ ಸಂತೋಷದ ವಿಚಾರ. ಜನಪರ ಹೋರಾಟದಿಂದಲೇ ಜನರ ವಿಶ್ವಾಸಕ್ಕೆ ಪಾತ್ರವಾಗಿ, ಅವರ ಸಂಕಷ್ಟಗಳಿಗೆ ಧ್ವನಿಯಾಗಿರುವ ಶಿವರಾಮೇಗೌಡರ ಬದುಕಿಗೆ ಅವರ ಧೈರ್ಯ, ನಿಷ್ಠೆ ಹಾಗೂ ಜನಸೇವೆಯೇ ಪ್ರೇರಣಾ ಶಕ್ತಿ. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ರೂಢಿಸಿಕೊಂಡ ಶಿವರಾಮೇಗೌಡರು, ನಾಗಮಂಗಲ ಕ್ಷೇತ್ರದಿಂದ ರಾಜಕೀಯ ಪ್ರವೇಶಿಸಿ, ನಂತರ ಹಲವು ಸವಾಲುಗಳನ್ನು ಮೆಟ್ಟಿ ನಿಂತು ಯಶಸ್ವಿ ಜನಪ್ರತಿನಿಧಿಯಾಗಿ ಬೆಳೆದರು.

ವಿಧಾನಸಭೆ ಸದಸ್ಯರಾಗಿ ಹಾಗೂ ಲೋಕಸಭಾ ಸದಸ್ಯರಾಗಿ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕಾರಣರಾದರು. ಗ್ರಾಮೀಣ ಬದುಕಿನ ನೋವು ನಲಿವುಗಳನ್ನು ಅರಿತಿರುವ ಶಿವರಾಮೇಗೌಡರು ಜನಪ್ರತಿನಿಧಿಯಾಗಿ ಹಳ್ಳಿ ಜನರ ವಿಶೇಷವಾಗಿ ಶೋಷಿತ ವರ್ಗಗಳ ನೆಮ್ಮದಿಯ ಬದುಕಿಗೆ ನೆರವಾದವರು. ಶಿಕ್ಷಣದ ಮೂಲಕ ಸಬಲೀಕರಣವನ್ನು ಸಾಧ್ಯವಾಗಿಸುವ ಆಶಯದಿಂದ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಸಾವಿರಾರು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿರುವುದು ಅನುಕರಣೀಯ ಜನರ ಹಾಗೂ ಕಾರ್ಯಕರ್ತರೊಂದಿಗೆ ನೇರವಾಗಿ ಬೆರೆತು, ಅವರ ಸಮಸ್ಯೆಗಳಿಗೆ ಸ್ಪಂದಿಸುವ ಸರಳ ಸ್ವಭಾವದ ಶಿವರಾಮೇಗೌಡರೊಂದಿಗೆ ನನಗೆ ಹಲವು ವರ್ಷಗಳ ಆತ್ಮೀಯ ಒಡನಾಟವಿದೆ. ಸಮಾಜದ ದುರ್ಬಲ ವರ್ಗಗಳ ಏಳಿಗೆ, ಸಮಾಜದ ಅಸಮಾನತೆಗಳನ್ನು ನಿವಾರಿಸುವ ದಿಸೆಯಲ್ಲಿ ನಮ್ಮ ಚಿಂತನೆಗಳು ಪರಸ್ಪರ ಸಮೀಕರಿಸುವುದೇ ಅಲ್ಲದೆ, ಭವಿಷ್ಯದಲ್ಲಿಯೂ ಅವರ ಅಮೂಲ್ಯ ಸಲಹೆಗಳು ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಲಿವೆ ಎಂಬ ವಿಶ್ವಾಸವಿದೆ. ನಾನು ಅಹಿಂದ ಸಂಘಟನೆಯಲ್ಲಿ ತೊಡಗಿದಾಗ ನಾಗಮಂಗಲದ ನಾಯಕರಾದ ಎಲ್.ಆರ್. ಶಿವರಾಮೇಗೌಡರು ಕಾಂಗ್ರೆಸ್ ಪಕ್ಷದಲ್ಲಿದ್ದರೂ ಸಹ ನನಗೆ ಸಂಪೂರ್ಣ ಬೆಂಬಲ ನೀಡಿ ಸಹಕರಿಸಿದ್ದನ್ನು ನಾನು ಮರೆಯಲಾರೆ.

ಸದಾಕಾಲ ಚಟುವಟಿಕೆಯಿಂದಿರುವ ಎಲ್, ಆರ್.ಶಿವರಾಮೇಗೌಡರ ಹುಟ್ಟುಹಬ್ಬದ ಸಂಭ್ರಮದ ಸಂದರ್ಭದಲ್ಲಿ ಹೊರತರುತ್ತಿರುವ ಈ ಅಭಿನಂದನಾ ಗ್ರಂಥವು,ಅವರ ಜೀವನ ಸಾಧನೆಗಳನ್ನು ಬಿಂಬಿಸುವ ಮಹತ್ವದ ಕೃತಿಯಾಗಲಿ ಹಾಗೂ ಸಾರ್ವಜನಿಕ ಬದುಕಿನ ಅವರ ಸುಧೀರ್ಘ ಅನುಭವ ಮುಂದಿನ ಯುವ ಪೀಳಿಗೆಗೆ ಸ್ಫೂರ್ತಿಯಾಗಲಿ ಎಂದು ಹಾರೈಸುತ್ತೇನೆ.

ಶ್ರೀ.ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಂದೇಶ



ರಾಜ್ಯದ ಹಿರಿಯ ರಾಜಕಾರಣಿ ಶ್ರೀ ಎಲ್ ಆರ್ ಶಿವರಾಮೇಗೌಡರು ನನಗೆ ಅನೇಕ ದಶಕಗಳಿಂದ ಪರಿಚಿತರು.ನಾಗಮಂಗಲ ಕ್ಷೇತ್ರವನ್ನು ದಶಕಗಳ ಕಾಲ ಪಕ್ಷೇತರ ಶಾಸಕರಾಗಿ ಯಾವ ರಾಜಕೀಯ ಕುಟುಂಬದ ಭದ್ರ ಬುನಾದಿ ಇಲ್ಲದೇ ತಮ್ಮ ವರ್ಚಸ್ಸು ಮತ್ತು ಖದರಿನಿಂದ ಮುನ್ನುಗ್ಗಿ ಕ್ಷೇತ್ರಕ್ಕೆ ಲಭಿಸಬೇಕಾದ ಅನುದಾನಗಳ ಹೊಳೆ ಹರಿಸಿದ ವೀರಾಗ್ರಣಿ.ಅವರ ಜೀವನ ಪಯಣದ ಕುರಿತು ಅವರ ಗೆಳೆಯರು ಒಗ್ಗೂಡಿ ಅಭಿನಂದನಾ ಗ್ರಂಥ ಹೊರತರುತ್ತಿರುವುದು ಸಂತೋಷದ ವಿಷಯ. ಶಿವರಾಮೇಗೌಡರು ಸದಾ ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿದ್ದು, ಜನಪರ ಹೋರಾಟದಿಂದಲೇ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ರೂಢಿಸಿಕೊಂಡ ಶಿವರಾಮೇಗೌಡರು ನಾಗಮಂಗಲ ಕ್ಷೇತ್ರದಿಂದ ರಾಜಕೀಯ ಪ್ರವೇಶಿಸಿ ಶಾಸಕರಾಗಿ, ಸಂಸದರಾಗಿ ಅನೇಕ ಜನಪರ ಕೆಲಸಗಳನ್ನು ಮಾಡುವ ಮೂಲಕ ಜನರ ಮನಸ್ಸಲ್ಲಿ ಸದಾ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅಲ್ಲದೆ ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸಿದ್ದಾರೆ. ಸದಾ ಹಸನ್ಮುಖಿಯಾಗಿರುವ ಶಿವರಾಮೇಗೌಡರು ಯಾವುದೇ ರಾಜಕೀಯ ಪಕ್ಷದಲ್ಲಿದ್ದರೂ ಎಲ್ಲರೊಂದಿಗೂ ಸದಾ ಸ್ನೇಹ, ಪ್ರೀತಿ ವಿಶ್ವಾಸದಿಂದ ಇದ್ದು ನನ್ನಪೂಜ್ಯ ಪಿತಾಜಿ ಶ್ರೀ ಎಸ್ . ಆರ್ ಬೊಮ್ಮಾಯಿಯವರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಿದ್ದರು ಹಾಗೂ ನನಗೂ ರಾಜಕೀಯ ಮೀರಿ ಒಳ್ಳೆಯ ಸ್ನೇಹಿತರೂ ಆಗಿದ್ದಾರೆ.ಕಳೆದ ವಿಧಾನಸಭಾ ಚುನಾವಣೆ ಸಂಧರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿಯು ಪಕ್ಷದ ಕಮಲ ಅರಳಿಸಲು ಪಕ್ಷದ ಒತ್ತಾಯದ ಮೇರೆಗೆ ನಾಗಮಂಗಲ ಕ್ಷೇತ್ರದ ಬಿಜೆಪಿ ಮಹಿಳಾ ಅಭ್ಯರ್ಥಿಯ ತಲಾಶೆಯಲ್ಲಿದಾಗ,ನಮಗೆ ದೊರೆತ ಶ್ರೀಮತಿ ಸುಧಾ ಶಿವರಾಮೇಗೌಡರನ್ನು ಕಣಕ್ಕಿಳಿಸಲು ನಾವು ಪಟ್ಟಪಾಡು ಅಷ್ಟಿಷ್ಟಲ್ಲ. ಯಾವ,ಯಾರ ಒತ್ತಾಯಕ್ಕೂ ಮಣಿಯದ ಅನ್ನಪೂರ್ಣೇಶ್ವರಿ ಎಂದೇ ನಾಗಮಂಗಲ ಕ್ಷೇತ್ರದ ಜನರ ವಿಶ್ವಾಸಗಳಿಸಿರುವ ಸಹೋದರಿಯನ್ನು ಒಪ್ಪಿಸಿ ಚುನಾವಣೆಗೆ ಕಡೆಗಳಿಗೆಯಲ್ಲಿ ಸಜ್ಜುಗೊಳಿಸಿದ ಶಿವರಾಮೇಗೌಡರ ಬಗೆಗಿನ ಪ್ರೀತಿ ಮತ್ತು ಪತಿಯ ಮಾತಿಗೆ ಓಗೊಟ್ಟು ಸ್ಪರ್ಧಿಸಿದ ಸುಧಮ್ಮ ಗ್ರೇಟ್. ಯಶಸ್ವಿ ಪುರುಷೋತ್ತಮನ ಪ್ರತಿ ಹೆಜ್ಜೆಯ ಯಶಸ್ಸಿನ ಹಿಂದಿನ ವೀರಾಗ್ರಣಿಯಾಗಿ ಬೆನ್ನಿಗೆ ನಿಂತವರು ಸುಧಮ್ಮ. ಜನಾನುರಾಗಿ ಶ್ರೀ .ಎಲ್.ಆರ್. ಶಿವರಾಮೇಗೌಡರ ಈ ಹುಟ್ಟು ಹಬ್ಬದ ಸಂಭ್ರಮದ ಹಿನ್ನೆಲೆಯಲ್ಲಿ ಹೊರ ತರುತ್ತಿರುವ ಅಭಿನಂದನಾ ಗ್ರಂಥವು ಯುವ ಪೀಳಿಗೆಗೆ ಪ್ರೇರಣೆ ನೀಡುವ ಸಂಗ್ರಹ ಯೋಗ್ಯ ಕೃತಿಯಾಗಲಿ ಎಂದು ಹಾರೈಸುತ್ತೇನೆ.

ಬಸವರಾಜ ಬೊಮ್ಮಾಯಿ

ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಸಂದೇಶ



ಶ್ರೀ ಎಲ್.ಆರ್.ಶಿವರಾಮೇಗೌಡರ ಅಭಿನಂದನಾ ಗ್ರಂಥದ ನೇತೃತ್ವ ಹೊತ್ತಿರುವ ನಾಡೋಜ ಡಾ. ಹಂಪನಾರವರ ಸಮಿತಿ ನನ್ನ ಹೆಸರನ್ನು ಪರಿಗಣಿಸಿರುವುದಕ್ಕೆ ಪ್ರಪ್ರಥಮವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಹೋಬಳಿ ಲಾಳನಕೆರೆ ಗ್ರಾಮದ ಶ್ರೀ ಪಟೇಲ್ ರಾಮೇಗೌಡರ ಕಿರಿಯ ಮಗನಾದ ಶ್ರೀ ಎಲ್.ಆರ್.ಶಿವರಾಮೇಗೌಡರು ಕೂಡ ಹಲವಾರು ಹುದ್ದೆಗಳ ಅಲಂಕರಿಸಿ ಸಮಾಜಕ್ಕೆ,ರಾಜ್ಯಕ್ಕೆ ಹಾಗೂ ದೇಶಕ್ಕೆ ತಮ್ಮ ಕೊಡುಗೆಯನ್ನು ನೀಡಿ, ಇಂದಿನ ಹಾಗೂ ಮುಂದಿನ ಪೀಳಿಗೆಯು ನೆನಪಿನಲ್ಲಿ ಅಚ್ಚಳಿಯದಂತೆ ಉಳಿಯುತ್ತಾರೆ.ಎಲ್.ಆರ್.ಶಿವರಾಮೇಗೌಡರ ಪರಿಚಯ ನನಗೆ ಅವರ ಮಾವನವರಾದ ಶ್ರೀ ರಾಮಕೃಷ್ಣಯ್ಯ, ಮಾಜಿ ವಿಧಾನಸಭಾ ಸದಸ್ಯರು, ತುರುವೇಕೆರೆ ಕ್ಷೇತ್ರ ಇವರ ಮುಖಾಂತರ ಲಭಿಸಿತು. ಜಿಲ್ಲಾ ಪರಿಷತ್ ಸದಸ್ಯರಾಗಿ, ಕ್ಷೇತ್ರದ ಜನಾನುರಾಗಿ ಶಾಸಕರಾಗಿ ಹೊರಹೊಮ್ಮಿದ ಶಿವರಾಮೇಗೌಡರಿಗೆ ವಿರೋಧಿಗಳು ಒಡ್ಡಿದ ಕಾನೂನು ಸಮರಗಳನ್ನು ವಿಚಲಿತರಾಗದೇ ಬೇಧಿಸಿ ಬಂದ ಚಾಣಾಕ್ಷ ರಾಜಕಾರಣಿ ಈತ ಎನ್ನಬಹುದು. ಏಕೆಂದರೆ ಒಂದಿಲ್ಲೊಂದು ಅಡೆತಡೆಗಳಿಗೆ ಅಂಜದೇ, ಅಳುಕದೇ ವಿರೋಧಿಗಳಿಂದಲೇ ಬಹುಪರಾಕ್ ಹೇಳಿಸಿಕೊಂಡ ಸವ್ಯಸಾಚಿ. ಹಳ್ಳಿ ರಾಜಕೀಯದಿಂದ, ದಿಲ್ಲಿ ರಾಜಕಾರಣದ ದಿಗಂತದವರಗೆ ತಲುಪಿದ ಗಮ್ಯ ಹಾದಿಯ ಚಿತ್ರಣವೇ ನಮ್ಮ ಕಣ್ಣ ಮುಂದೆ ಹಾದುಹೋಗುತ್ತದೆ. ಜಿಲ್ಲಾ ಪರಿಷತ್ ಸದಸ್ಯರಾಗಿ, ವಿಧಾನ ಸಭೆ ಹಾಗೂ ಲೋಕಸಭೆಗಳಲ್ಲಿ ಸದಸ್ಯರಾಗಿ ಪ್ರತಿನಿಧಿಸಿ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸಿದ ಗೌಡರು, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸಿಲಿಕಾನ್ ಸಿಟಿಯ ಮತ್ತು ಕರ್ನಾಟಕ ರಾಜ್ಯದ ವಸತಿ ರಹಿತರಿಗೆ ಗೃಹ ಮಂಡಳಿಯಿಂದ ಮನೆ ನಿರ್ಮಿಸಿಕೊಟ್ಟಿರುವುದು ಅವರ ಕಾರ್ಯಕ್ಷಮತೆಯನ್ನು ತೋರ್ಪಡಿಸುತ್ತದೆ. ಅವರ ಶೈಕ್ಷಣಿಕ ಕ್ಷೇತ್ರದ ಸಾಧನೆಯನ್ನು ಗಮನಿಸಬೇಕಿದೆ. ಬೆಂಗಳೂರಿನಲ್ಲಿ ಶ್ರೇಷ್ಠ ಶಿಕ್ಷಣವನ್ನು ಕೊಡುವ ಸದುದ್ದೇಶದಿಂದ ಎಂಟು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಗುಣಮಟ್ಟದ ಶಿಕ್ಷಣದ ಶಾಲೆಗಳನ್ನು ತೆರೆದು ಸಾವಿರಾರು ವಿದ್ಯಾರ್ಥಿಗಳನ್ನು ವರ್ಷಂಪ್ರತಿ ಸತ್ಪಜೆಗಳನ್ನು ತಯಾರು ಮಾಡುತ್ತಿರುವ ಜ್ಞಾನ ದೇಗುಲದ ನಿರ್ಮಾತೃವಾಗಿ ಗೌಡರು ಈಗ ಕಂಗೊಳಿಸಿದ್ದಾರೆ. ಇದರೊಂದಿಗೆ ಶ್ರೀಯುತರ ಧರ್ಮಪತ್ನಿ ಸುಧಾ ರವರ ಅತಿಥಿ ಸತ್ಕಾರವನ್ನು ಮೆಚ್ಚಲೇಬೇಕು. ಈ ಮೂಲಕ ನನ್ನ ಮನದಾಳದ ನೆನಪನ್ನು ಬಿಚ್ಚಿಡಲು ಅವಕಾಶ ನೀಡಿದ 'ಶಿವಪಥ' ಅಭಿನಂದನಾ ಗ್ರಂಥ ಸಮಿತಿಯ ಪ್ರತಿಯೊಬ್ಬರಿಗೂ ನಾನು ಆಭಾರಿಯಾಗಿದ್ದು, ಈ ಕಾರ್ಯಕ್ರಮವು ಸುಸೂತ್ರವಾಗಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ನ್ಯಾಯಮೂರ್ತಿ ಚಂದ್ರಶೇಖರಯ್ಯ,
ನಿವೃತ್ತ ಘನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು
ಹಾಗೂ ಉಪ ಲೋಕಾಯುಕ್ತರು, ಬೆಂಗಳೂರು

ಸಂದೇಶ



ಕನ್ನಡ ನಾಡು ಕಂಡ ಸರಳ ಹಾಗೂ ಸಜ್ಜನಿಕೆಯುಳ್ಳ ಕೆಲವೇ ಕೆಲವು ರಾಜಕಾರಣಿಗಳಲ್ಲಿ ಶ್ರೀ ಎಲ್ ಆರ್ ಶಿವರಾಮೇಗೌಡರು ಒಬ್ಬರು ಎಂಬುವುದನ್ನು ಎಲ್ಲರೂ ಒಪ್ಪಲೇಬೇಕಾದುದು ಎಂದು ಅಭಿಮಾನದಿಂದ ಹೇಳಬಯಸುತ್ತೇನೆ. ತಮ್ಮ 29ನೇ ವಯಸ್ಸಿನಲ್ಲಿಯೇ ಶಾಸಕರಾಗಿ ಆಯ್ಕೆಯಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತ್ತಿರುವ ಧೀಮಂತ ನಾಯಕರಾಗಿದ್ದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಬದ್ಧರಾಗಿರುವ ಕಾಯಕಯೋಗಿ ಎಂದರೆ ಅತಿಶಯೋಕ್ತಿಯಾಗಲಾರದು. 1985ರಲ್ಲಿ ತಾಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಗೊಂಡು ಸಹಕಾರಿ ಕ್ಷೇತ್ರದಲ್ಲೂ ಅಪಾರ ಅನುಭವ ಹೊಂದಿದವರು. ಗ್ರಾಮೀಣ ಸ್ವರಾಜ್ಯ ಕಲ್ಪನೆಯ ಅಧಿಕಾರ ವಿಕೇಂದ್ರೀಕರಣದ ಕಾರ್ಯಕ್ರಮಗಳಾದ ಬೋರ್‌ವೆಲ್, ರಸ್ತೆ, ಆಸ್ಪತ್ರೆಗಳಂಥ ಸ್ಥಳೀಯ ಆಡಳಿತದ ಹತ್ತಾರು ಜನಪರ ಕಾರ್ಯಕ್ರಮಗಳನ್ನು ಬಳಸಿಕೊಂಡು ಇಡೀ ಕ್ಷೇತ್ರದಲ್ಲಿ ಮಿಂಚಿನ ಸಂಚಾರ ಮಾಡಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಜನಮೆಚ್ಚುಗೆ ಪಡೆದು ಪಕ್ವತೀತ ನಾಯಕನಾಗಿ ಬೆಳೆದು ನಿರಂತರ ಹತ್ತು ವರ್ಷಗಳ ಕಾಲ ಶಾಸಕರಾದರು.

ಕೇವಲ ರಾಜಕೀಯಕ್ಕೆ ಸೀಮಿತವಾಗದೆ ಶಿಕ್ಷಣ ಕ್ಷೇತ್ರದಲ್ಲಿಯೂ ಹಲವಾರು ಬದಲಾವಣೆಗಳನ್ನು ಮಾಡಿ ಸಿಬಿಎಸ್‌ಸಿ, ಐಸಿಎಸ್‌ಸಿ., ಐ.ಬಿ ಮತ್ತು ಐಜಿಪಿಎಸ್ ಈ ಎಲ್ಲಾ ಪಠ್ಯಕ್ರಮಗಳ ಶಾಲೆಗಳ ಮುಂದಾಳತ್ವವನ್ನು ವಹಿಸಿದರು. ಈ ಸಂದರ್ಭದಲ್ಲಿ ಎಲ್.ಆರ್.ಶಿವರಾಮೇಗೌಡ ಅಭಿನಂದನಾ ಸಮಿತಿ ಅವರಿಂದ ಹೊರ ತರಲಾಗುತ್ತಿರುವ ಈ ಅಭಿನಂದನಾ ಗ್ರಂಥವು ಅವರ ಸಮಗ್ರ ವ್ಯಕ್ತಿತ್ವವನ್ನು ಅನಾವರಣಗೊಳಿಸಿ ತನ್ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಆಕಾರ ಗ್ರಂಥವಾಗಿ ಹೊರಹೊಮ್ಮಲಿ. ಇದರಿಂದ ನಾಡಿನ ಯುವ ಪೀಳಿಗೆಗೆ, ಅದರಲ್ಲೂ ವಿಶೇಷವಾಗಿ ಯುವ ರಾಜಕಾರಣಿಗಳಿಗೆ ಪ್ರೇರಣೆ ದೊರೆಯಲಿ ಎಂದು ಹಾರೈಸುತ್ತಾ, ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಶ್ರೀ ಎಲ್ ಆರ್ ಶಿವರಾಮೇಗೌಡ ಅವರಿಗೆ ಭಗವಂತ ನೂರಾರು ವರ್ಷ ಬಾಳುವ ದೀರ್ಘಾಯುಷ್ಯ ನೀಡಲಿ ಹಾಗೂ ಅವರಿಂದ ಇನ್ನಷ್ಟು ಸಮಾಜಮುಖಿ ಕಾರ್ಯಗಳು ನಡೆಯಲಿ ಎಂದು ಹಾರೈಸುತ್ತೇನೆ.

ಸನ್ಮಾನ್ಯ ಬಸವರಾಜ ಎಸ್. ಹೊರಟ್ಟಿರವರು

ಮಾನ್ಯ ಸಭಾಪತಿಗಳು

ಕರ್ನಾಟಕ ವಿಧಾನ ಪರಿಷತ್ ಸಭಾಧ್ಯಕ್ಷರು

ಸಂದೇಶ



ರಮೇಶ್ ಕುಮಾರ್‌ರವರ ಬಗ್ಗೆ ಎಲ್.ಆರ್. ಶಿವರಾಮೇಗೌಡರ ಮನದಾಳದ ಮಾತು

ರಾಜಕೀಯವಾಗಿ ನನ್ನ ಜೀವನದಲ್ಲಿ ನಾನು ಮರೆಯದೇ ಇರಲು ಆಗದೇ ಇರತಕ್ಕಂತಹ ಸಹಾಯ ಮಾಡಿದ್ದಾರೆ. ಇವರಿಗೆ ನಾನು ಚಿರಋಣಿ

ಅಪ್ಪಟ ಹಳ್ಳಿ ಪ್ರತಿಭೆಯಾಗಿದ್ದ ಶಿವರಾಮೇಗೌಡ ತೊಂಬತ್ತರ ದಶಕದಲ್ಲಿ ರಾಜ್ಯ ರಾಜಕಾರಣದಲ್ಲಿ ಮಿಂಚಿನಂತೆ ಸಂಚಲನ ಸೃಷ್ಟಿಸಿದ ಯುವ ರಾಜಕಾರಣಿ ಎಂದರೆ ಅತಿಶಯೋಕ್ತಿ ಆಗಲಾರದು. ಮಂಡ್ಯ ರಾಜಕಾರಣದ ಘಟಾನುಘಟಿ ನಾಯಕರುಗಳ ಎದುರು ತನ್ನ ಪರಿಶ್ರಮದ ಫಲದಿಂದ ಎರಡು ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಜಯ ಗಳಿಸುವುದು ಎಂದರೆ ಹುಡುಗಾಟಕೆಯ ಮಾತಲ್ಲ, ಅದೊಂದು ಇತಿಹಾಸ ಪುಟದ ದಾಖಲೆಯೇ ಸರಿ.

ಇಂತಹ ಶಿವರಾಮೇಗೌಡರನ್ನು ಹಣಿಯಲು ರಾಜಕೀಯ ನೇತಾರರು ಹೂಡಿದ ದಾಳ, ಮಾಡಿದ ಹುನ್ನಾರ ಒಂದೆರಡಲ್ಲ. ಆದರೂ ಅದೆಲ್ಲವನ್ನೂ ಅರಗಿಸಿಕೊಂಡು ಇವತ್ತಿಗೂ ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ವರ್ಚಸ್ಸು ಉಳಿಸಿಕೊಂಡಿರುವ ಶಿವರಾಮೇಗೌಡರಿಗೆ, ಅವರೇ ಸಾಟಿ.

ನನಗೆ ಎದುರಾದಾಗ ಪ್ರೀತಿಯಿಂದ ಸಾಹೇಬರೇ ಎಂದು ಸಂಬೋಧಿಸಿ ಮಾತನಾಡುವ ಗೌಡರ ಕುರಿತು ಅಭಿನಂದನಾ ಗ್ರಂಥವನ್ನು ಅವರ ಹಿತೈಷಿಗಳು ಹೊರ ತರುತ್ತಿರುವುದು ತುಂಬಾ ಸಂತೋಷದ ವಿಚಾರ. ಈ ಅಭಿನಂದನಾ ಗ್ರಂಥ ಅವರ ಅಭಿಮಾನಿಗಳಿಗೆ ಹಾಗೂ ಇಂದಿನ ರಾಜಕೀಯ ಕ್ಷೇತ್ರಕ್ಕೆ ಧುಮುಕುವ ಯುವ ಪೀಳಿಗೆಗೆ ಮಾರ್ಗದರ್ಶನವಾಗಲಿ ಎಂದು ಆಶಿಸುತ್ತೇನೆ. ಗೌಡರಿಗೆ ಭಗವಂತ ಇನ್ನೂ ಹೆಚ್ಚಿನ ಆರೋಗ್ಯ ಆಯಸ್ಸು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಕೆ.ಆರ್. ರಮೇಶ್ ಕುಮಾರ್
ಮಾಜಿ ವಿಧಾನಸಭಾಧ್ಯಕ್ಷರು,
ಕರ್ನಾಟಕ ಸರ್ಕಾರ

ಸಂದೇಶ



ಶ್ರೀ.ಎಲ್.ಆರ್.ಶಿವರಾಮೇಗೌಡ – ನಾ ಕಂಡಂತೆ

ಮೊಟ್ಟ ಮೊದಲನೆಯದಾಗಿ, ಶ್ರೀ ಎಲ್.ಆರ್.ಶಿವರಾಮೇಗೌಡರು (ಎಲ್ ಆರ್ ಎಸ್) ಬರುತ್ತಿದ್ದಾರ ಅಂದರೆ,ಅವರ ಜೊತೆ ಹಿಂಬಾಲಿಸುವ ಜನ ಸಮೂಹ ಇದ್ದೇ ಇರುತ್ತದೆ ಇದು ಅವರು ಜನರಿಂದ ಗಳಿಸಿರುವ ಪ್ರೀತಿ ಹಾಗೂ ವಿಶ್ವಾಸದ ಸಂಕೇತ. ನನಗೆ ಮೊದಲು, ಶ್ರೀ ಎಲ್ ಆರ್ ಎಸ್ ಅವರು ಪರಿಚಯವಾಗಿದ್ದು, ನಾನು ಮೊದಲ ಬಾರಿ ಕರ್ನಾಟಕ ವಿಧಾನಸಭೆಯನ್ನು 1994ರಲ್ಲಿ ಪ್ರವೇಶಿಸಿದಾಗ ನಾಗಮಂಗಲದ ಶಾಸಕರಾಗಿ, ಕುಡಿಯುವ ನೀರು, ಹೇಮಾವತಿ ನಾಲಾ ಯೋಜನೆ, ಪಶು ವೈದ್ಯಕೀಯ ಆಸ್ಪತ್ರೆ ಹಾಗೂ ಇನ್ನೂ ಹಲವಾರು ಜನಪರ ಕಾರ್ಯಕ್ರಮಗಳನ್ನು ರೂಪಿಸಿದ ಕೀರ್ತಿ ಶ್ರೀ ಎಲ್ ಆರ್ ಎಸ್ ಅವರಿಗೆ ಸಲ್ಲುತ್ತದೆ. ಸಮಾಜದ ಅಭಿವೃದ್ಧಿಗಾಗಿ ದುಡಿದು ಹೆಸರುವಾಸಿಯಾಗಿರುವುದು ಶ್ಲಾಘನೀಯ. ಮಂಡ್ಯ ಲೋಕಸಭಾ ಸಂಸದರಾಗಿ, ಅಲ್ಪಾವಧಿಯಲ್ಲೇ ಜನಾನುರಾಗಿ ಕೆಲಸಗಳ ಮೂಲಕ ಜನಮನ್ನಣೆ ಗಳಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಆಸಕ್ತಿ ಹೊಂದಿರುವ ಶ್ರೀ ಎಲ್ ಆರ್.ಎಸ್ ರವರು, 2004 ರಲ್ಲಿ 8 ಶಾಲೆಗಳನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿರುವುದು ನನಗೆ ತಿಳಿದ ವಿಷಯವಾಗಿದೆ. ನಾನು 2008 ರಿಂದ 2013ರವರೆಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವನಾಗಿದ್ದಾಗ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳೇನಾದರೂ ಇದ್ದಲ್ಲಿ, ನನ್ನ ಬಳಿ ನೇರವಾಗಿ ಬಂದು ಅವುಗಳನ್ನು ಪರಿಹರಿಸುತ್ತಿದ್ದ ಚಾಕಚಕ್ಯತೆ ಮೆಚ್ಚ ಬೇಕಾದ ವಿಷಯ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶ್ರೀ ಎಲ್ ಆರ್ ಎಸ್ ಅವರದ್ದೇ ಮುಂದಾಳತ್ವ. ಈಗಲೂ ಸಹ, ಸಿಬಿಎಸ್‌ಸಿ, ಐಸಿಎಸ್‌ಇ, ಐಬಿ ಹಾಗೂ ಐ.ಜಿ.ಸಿ.ಎಸ್ ಇ, ಈ ಎಲ್ಲಾ ಪಠ್ಯಕ್ರಮಗಳ ಶಾಲೆಗಳ ಮುಖಂಡತ್ವ ವಹಿಸಿ, ಗುಣಮಟ್ಟದ ಶಿಕ್ಷಣ ನೀಡುವ ಅಭಿಲಾಷೆಗೆ ಸಾಕ್ಷಿ. ಶ್ರೀ ಎಲ್.ಆರ್.ಎಸ್ ರವರ 4 ದಶಕಗಳ ರಾಜಕೀಯ ಮತ್ತು ಸಾರ್ವಜನಿಕ ಬದುಕಿನ ಕುರಿತು ಅವರ ಅಸಂಖ್ಯಾತ ಅಭಿಮಾನಿಗಳು, ಹಿತೈಷಿಗಳು ಹಾಗೂ ಮಿತ್ರರು ಒಡಗೂಡಿ, ಅಭಿನಂದನಾ ಸಮಿತಿಯ ವತಿಯಿಂದ, ಅಭಿನಂದನಾ ಗ್ರಂಥವನ್ನು ಹೊರ ತರುತ್ತಿರುವುದು ಅರ್ಥಗರ್ಭಿತವಾಗಿದೆ. ಸದರಿ ಅಭಿನಂದನಾ ಗ್ರಂಥವು ಒಳ್ಳೆಯ ಲೇಖನಗಳಿಂದ ಚಂದಾಗಿ ಮೂಡಿಬರಲಿ ಹಾಗೂ ಭಗವಂತನ ಕೃಪಾಶೀರ್ವಾದ ಶ್ರೀ ಎಲ್.ಆರ್.ಎಸ್ ಅವರ ಮೇಲೆ ಅನಂತವಾಗಿರಲೆಂದು ಹಾರೈಸುತ್ತೇನೆ.

ಸ್ಥಳ: ಶಿರಸಿ, 24.04.2025

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಮಾಜಿ ವಿಧಾನಸಭಾಧ್ಯಕ್ಷರು, ಕರ್ನಾಟಕ ಸರ್ಕಾರ
ಹಾಗೂ ಮಾನ್ಯ ಲೋಕಸಭಾ ಸದಸ್ಯರು, ಉತ್ತರ ಕನ್ನಡ

ಸಂದೇಶ



ಹಿರಿಯ ರಾಜಕಾರಣಿಯಾದ ಶ್ರೀ ಎಲ್.ಆರ್.ಶಿವರಾಮೇಗೌಡರು, ಇವರ ಜನ್ಮದಿನದ ಈ ಸಂಭ್ರಮದ ಸಂದರ್ಭದಲ್ಲಿ ಅಭಿನಂದನಾ ಗ್ರಂಥವನ್ನು ಹೊರತರುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದ್ದು, ಇವರಿಗೆ ತುಂಬು ಹೃದಯದಿಂದ ಶುಭ ಕೋರುತ್ತೇನೆ. ವಿದ್ಯಾರ್ಥಿ ದೆಸೆಯಲ್ಲಿಯೇ ಈ ಸಮಾಜದ ಪರವಾಗಿ ಕಾಳಜಿಯನ್ನಿಟ್ಟುಕೊಂಡು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅಪ್ಪಟ ಗ್ರಾಮೀಣ ಸೊಗಡಿನ ರಾಜಕಾರಣಿ ಇವರು. ಜನಪರ ಹೋರಾಟದಿಂದಲೇ ಜನರ ವಿಶ್ವಾಸಕ್ಕೆ ಪಾತ್ರವಾಗಿ, ಅವರ ಸಂಕಷ್ಟಗಳಿಗೆ ಪ್ರೇರಣಾ ಶಕ್ತಿಯಾಗಿ, ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ರೂಢಿಸಿಕೊಂಡ ಶಿವರಾಮೇಗೌಡರು, ನಾಗಮಂಗಲ ಕ್ಷೇತ್ರದಿಂದ ರಾಜಕೀಯ ಪ್ರವೇಶಿಸಿ, ನಂತರ ಹಲವು ಸವಾಲುಗಳನ್ನು ಮೆಟ್ಟಿ ನಿಂತು ಯಶಸ್ವಿ ಜನಪ್ರತಿನಿಧಿಯಾಗಿ ಬೆಳೆದರು. ಸುಮಾರು ನಾಲ್ಕು ದಶಕಗಳ ಕಾಲ ರಾಜಕೀಯ ಸೇವೆ ಸಲ್ಲಿಸಿರುವ ಇವರು, ಏಕಕಾಲಕ್ಕೆ 8 ಶಾಲೆಗಳನ್ನು ಪ್ರಾರಂಭಿಸಿ ಅಂತಾರಾಷ್ಟ್ರೀಯ ಗುಣಮಟ್ಟದ ಶಿಕ್ಷಣವನ್ನು ದೊರೆಯುವಂತೆ ಮಾಡಿದವರು. ಇವರು ನಾಗಮಂಗಲದಂತಹ ಹಿಂದುಳಿದ ಪ್ರದೇಶದಲ್ಲಿ ಅಂದಿನ ಕೇಂದ್ರ ಹಣಕಾಸು ಸಚಿವ ಶ್ರೀ ಜನಾರ್ಧನ ಪೂಜಾರಿಯವರನ್ನು ನಾಗಮಂಗಲ ಕ್ಷೇತ್ರಕ್ಕೆ ಕರೆಸಿ, 8 ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಏಕಕಾಲಕ್ಕೆ ಉದ್ಘಾಟನೆ ಮಾಡಿಸಿರುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ಸಾಲ ಮೇಳ ನಡೆಸಿ ಕ್ಷೇತ್ರದ ಬಡ ಬಗ್ಗರಿಗೆ ಹಾಗೂ ನಿರುದ್ಯೋಗಿ ಯುವಕರಿಗೆ ಬ್ಯಾಂಕ್‌ಗಳಿಂದ ಸಾಲ ಕೊಡಿಸಿ ನೆರವಾದರು. ನನ್ನ ತಂದೆಯವರಾದ ಯು ಟಿ ಫರೀದ್ ಮತ್ತು ಶಿವರಾಮೇಗೌಡರು ಉತ್ತಮ ಬಾಂಧವ್ಯ ಹೊಂದಿದ್ದರು ಮತ್ತು ಏಕಕಾಲಕ್ಕೆ ವಿಧಾನಸಭೆ ಪ್ರವೇಶಿಸಿದರು.

ಶ್ರೀ.ಎಲ್.ಆರ್.ಶಿವರಾಮೇಗೌಡರ ಜೀವನ ಸಾಧನೆಗಳನ್ನು ಬಿಂಬಿಸುವ ಈ ಕೃತಿ ಯುವಕರ ರಾಜಕೀಯ ಬೆಳವಣಿಗೆಗೆ ಮಾದರಿ ಗ್ರಂಥವಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

ಶ್ರೀ ಯು.ಟಿ. ಖಾದರ್
ಮಾಜಿ ವಿಧಾನಸಭಾಧ್ಯಕ್ಷರು,
ಕರ್ನಾಟಕ ವಿಧಾನಸಭೆ ಹಾಗೂ ನೂತನ ಆರೋಗ್ಯ
ಹಾಗೂ ಕುಟುಂಬ ಕಲ್ಯಾಣ ಸಚಿವರು,
ಕರ್ನಾಟಕ ಸರ್ಕಾರ

ಸಂದೇಶ



"ಜೀವನದಲ್ಲಿ ಕನಸು ಮತ್ತು ಗುರಿ ಬಹಳ ಮುಖ್ಯ ಕನಸುಕಾಣಲು ಪ್ರಯತ್ನವಿಲ್ಲದ ನಿದ್ದೆ ಬೇಕು ಗುರಿಸಾಧಿಸಲು ನಿದ್ದೆ ಇಲ್ಲದ ಪ್ರಯತ್ನ ಬೇಕು" ಲೋಕೋಕ್ತಿ ಇದು ಸನ್ಮಾನ್ಯ ಎಲ್.ಆರ್.ಶಿವರಾಮೇಗೌಡರ ವಿಚಾರದಲ್ಲಿ ಅತ್ಯಂತ ಸಹಜವಾಗಿ ಅನ್ವಯಿಸುತ್ತದೆ. ಅಧಿಕಾರ ರಾಜಕಾರಣದ ಎಲ್ಲಾ ಒಳಸುಳಿಗಳಲ್ಲಿ ಸಿಲುಕಿ, ಅವುಗಳ ಪ್ರಭಾವಕ್ಕೂ ಒಳಗಾಗಿ, ಎದೆಗುಂದದೆ ಮತ್ತೆ ಮೇಲೆದ್ದು ಬಂದ ರಾಜಕಾರಣಿ ಸನ್ಮಾನ್ಯ ಎಲ್.ಆರ್.ಶಿವರಾಮೇಗೌಡರು ಎಂದರೂ ತಪ್ಪಾಗಲಾರದು, ರಾಜ್ಯ ರಾಜಕಾರಣದಲ್ಲಿ ತನ್ನದೇ ಆದ ರಾಜಕೀಯ ಶೈಲಿಯನ್ನು ಮೈಗೂಡಿಸಿಕೊಂಡಿರುವ 'ಮಂಡ್ಯ ರಾಜಕಾರಣ' ದಿವಂಗತ ಹೆಚ್ ಕೆ.ವೀರಣ್ಣಗೌಡ, ಎಸ್.ಎಂ. ಕೃಷ್ಣ, ಕೆ.ವಿ.ಶಂಕರೇಗೌಡ, ಜಿ.ಮಾದೇಗೌಡರಾದಿಯಾಗಿ ಎಂಥವರನ್ನೂ ಪರೀಕ್ಷೆಗೆ ಒಳಪಡಿಸದೆ ಬಿಟ್ಟದ್ದಿಲ್ಲ! ಒಂದು ರೀತಿಯಲ್ಲಿ ಹೇಳುವುದಾದರೆ, ಮಂಡ್ಯ ರಾಜಕಾರಣವನ್ನು ಅರಗಿಸಿಕೊಂಡವರು ಇನ್ನಾವುದೇ ರಾಜಕಾರಣದ ಪಟ್ಟುಗಳನ್ನು ತಾಳಿಕೊಳ್ಳಬಲ್ಲರೇನೋ? "ನಿರೀಕ್ಷಿಸಿದ್ದು ಸಿಕ್ಕಿದಾಗ ಸಿಗುವ ಆನಂದಕ್ಕಿಂತ ಅನಿರೀಕ್ಷಿತವಾದದ್ದು ಲಭಿಸಿದಾಗ ಸಿಗುವ ಬೆರಗು ದೊಡ್ಡದು" ಎಂಬಂಥ ರಾಜಕೀಯ ಜೀವನಾನುಭವ ಎಲ್. ಆರ್.ಶಿವರಾಮೇಗೌಡರದ್ದು, ನಾಗಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಒಂದು ಹೊಸ ಛಾಪನ್ನು ಮೂಡಿಸುವಲ್ಲಿಶಿವರಾಮೇಗೌಡರ ಪಾತ್ರ, ಪರಿಶ್ರಮ ಮತ್ತು ಪಾಡು ಸುಲಭವಾಗಿ ಮರೆಯುವಂಥದ್ದಲ್ಲ. ವಿದ್ಯಾರ್ಥಿ ದೆಸೆಯಿಂದಲೇ ಸಾರ್ವಜನಿಕ ನಾಯಕತ್ವವನ್ನು ಪ್ರದರ್ಶಿಸಿದ ಎಲ್. ಆರ್.ಶಿವರಾಮೇಗೌಡರು ಆ ದಿನಮಾನದ ರಾಜಕೀಯ ಮುತ್ಸದ್ದಿಗಳ ಗಮನಕ್ಕೆ ಬಾರಲು ಹೆಚ್ಚು ಸಮಯ ತಗಲಲಿಲ್ಲ. ಸಹಕಾರಿ ರಂಗವನ್ನೂ ಒಳಗೊಂಡಂತೆ ಚುನಾವಣಾ ಸ್ಪರ್ಧೆಯ ಪ್ರತಿಯೊಂದು ಸಂದರ್ಭವನ್ನೂ ಅಪ್ಪಿಕೊಂಡು, ಮತದಾರರಿಂದ ಒಪ್ಪಿಸಿಕೊಂಡು ವಿಜಯಮಾಲೆಯನ್ನು ಒಲಿಸಿಕೊಂಡಿರುವುದು ಸನ್ಮಾನ್ಯ ಶಿವರಾಮೇಗೌಡರ ಇಚ್ಛಾಶಕ್ತಿಯ ಪ್ರಮಾಣವೇಹೌದು, ರಾಜಕೀಯವೆಂಬುದೇ ಅನಿರೀಕ್ಷಿತ ಘಟನಾವಳಿಗಳನ್ನು ಮೈವೆತ್ತ ಒಂದು ವಿಚಿತ್ರ ಅನಿರೀಕ್ಷಿತ ಹಾಗೂ ಕೃತಜ್ಞತಾರಾಹಿತ್ಯ ಕ್ಷೇತ್ರ ಅಧಿಕಾರ ಸಿಕ್ಕಿದಾಗ ಮೈಮರೆಯುವಂತಿಲ್ಲ; ಅಧಿಕಾರವಿಲ್ಲದಿದ್ದಾಗ ಮೂಲೆ ಸೇರುವಂತಿಲ್ಲ.

ಪರಿಸ್ಥಿತಿ ಏನೇ ಇದ್ದರೂ, ಹೇಗೇ ಇದ್ದರೂ ತಮ್ಮ ಅಸ್ತಿತ್ವವನ್ನು ಸದಾ ಪ್ರಕಟಪಡಿಸುತ್ತಾ, ಜನಮಾನಸದಲ್ಲಿ ಜೀವಂತವಿರಲೇಬೇಕಾದ ಅನಿವಾರ್ಯತೆ ರಾಜಕಾರಣಿಗಳದ್ದು ಸಿದ್ಧಾಂತಗಳಾಗಲೀ, ಕ್ಷೇತ್ರದಲ್ಲಿ ಕೈಗೊಂಡ ಪರಿಸ್ಥಿತಿ ಏನೇ ಇದ್ದರೂ, ಹೇಗೇ ಇದ್ದರೂ ತಮ್ಮ ಅಸ್ತಿತ್ವವನ್ನು ಸದಾ ಪ್ರಕಟಪಡಿಸುತ್ತಾ, ಜನಮಾನಸದಲ್ಲಿ

ಜೀವಂತವಿರಲೇಬೇಕಾದ ಅನಿವಾರ್ಯತೆ ರಾಜಕಾರಣಿಗಳದ್ದು ಸಿದ್ಧಾಂತಗಳಾಗಲೀ, ಕ್ಷೇತ್ರದಲ್ಲಿ ಕೈಗೊಂಡ ಉತ್ತಮ ಅಭಿವೃದ್ಧಿಕಾರ್ಯಗಳಾಗಲೀ ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಯ 'ವಿಜಯಮಾಲೆ'ಯಾಗಿ ಕೈಹಿಡಿಯುವ ಸನ್ನಿವೇಶಗಳು ಪ್ರಸ್ತುತ ಕಾಲಘಟ್ಟದ ಅಧಿಕಾರ ರಾಜಕಾರಣದಲ್ಲಿ ಅಪರೂಪವೇ. ಎಲ್. ಆರ್.ಶಿವರಾಮೇಗೌಡರ ಜೀವನ–ಸಾಧನೆಯನ್ನು ಒರೆಗೆ ಹಚ್ಚಿದರೆ ಹೆಮ್ಮೆಪಡಬಹುದಾದ ಸಂದರ್ಭವೇ ಹೆಚ್ಚು ಅಂತನ್ನಿಸದಿರದು. ಹೃದಯವೆಂಬುದು ಅತ್ಯಂತ ಫಲವತ್ತಾದ ಒಂದು ಜಾಗ ಅಲ್ಲಿ ಪ್ರೀತಿ ಅಥವಾ ದ್ವೇಷ ಏನು ಬೇಕಾದರೂ ಬೆಳೆಯುವಂತಹ ಸಂದರ್ಭಗಳೇ ಹೆಚ್ಚು. ಇಂತಹ ಸಂಕೀರ್ಣ, ಸಂದಿಗ್ಧ ಸನ್ನಿವೇಶದಲ್ಲಿ "ದಾರಿಯನ್ನು ನಡೆದುರು ಕಾಯುತ್ತಾ ಕೂರುವುದರಿಂದಲ್ಲ" ಮಾಡುವುದಕ್ಕಾಗುತ್ತದೆಯೇ ವಾಸ್ತವಸತ್ಯವನ್ನು ರಾಜಕಾರಣಿಯಾದವನು ಅರಿತಿರಲೇಬೇಕು. ಇಲ್ಲಿ ಅತಿದಿಟ್ಟ ವಿಚಾರಗಳಿಗಿಂತ ಅತಿಚಿಕ್ಕ ಕಾರ್ಯಗಳನ್ನು ಯಾವಾಗಲೂ ಉತ್ತಮವಾದುದು ಎಂಬ ಎಚ್ಚರಿಕೆ ಸದಾ ಅಗತ್ಯ. ಪ್ರತಿ ಸೂರ್ಯೋದಯವು ಜೊತೆಗೆ ಹೊಸ ಅವಕಾಶಗಳನ್ನು ತರುತ್ತದೆ ಎಂಬ ಆಶಾಭಾವನೆಯನ್ನು ರೂಢಿಸಿಕೊಳ್ಳುವುದು ಸ್ವಲ್ಪಮಟ್ಟಿನ ಚೈತನ್ಯವನ್ನು ಕಾಪಿಟ್ಟುಕೊಳ್ಳಲು ಸಹಕಾರಿಯಾದೀತು. ನಮ್ಮ ಯೋಚನೆಗಳು ನಮ್ಮ ಬದುಕನ್ನೇ ನಿರೂಪಿಸುತ್ತವೆ ಎಂಬುದು ಆಧುನಿಕ ರಾಜಕಾರಣಕ್ಕಂತೂ ಒಪ್ಪುವಂತಹ ಸತ್ಯ "ಸೋಲು ಬದುಕಿನ ಕೊನೆ ಅಲ್ಲ; ಅದು ಯಶಸ್ಸಿನ ಆರಂಭ" ಎಂಬುದು ಸನ್ಮಾನ್ಯ ಶಿವರಾಮೇಗೌಡರ ವಿಚಾರದಲ್ಲಿ ಪದೇ ಪದೇ ನಿರೂಪಿತವಾಗಿದೆ. ಸಾರ್ವಜನಿಕ ಜೀವನದಲ್ಲಿ ಅದರಲ್ಲೂ ಅಧಿಕಾರ ರಾಜಕಾರಣದಲ್ಲಿ ನಾವು ಎಷ್ಟು ವರ್ಷ ಒಟ್ಟಿಗಿದ್ದೇವೆಂಬುದನ್ನು ಆಧರಿಸಿ ಸಂಬಂಧವನ್ನು ಅಳೆಯಬಾರದು; ಆ ಸಂಬಂಧಕ್ಕೆಷ್ಟು ಮಹತ್ವಕೊಟ್ಟಿದ್ದೇವೆ ಎಂಬುದನ್ನು ಗಮನಿಸಬೇಕು.ಪ್ರತಿ ಸಂಬಂಧಕ್ಕೂ ಮಹತ್ವವಿರುತ್ತದೆ. ಎಲ್ಲ ಸಮರ್ಪಕ, ಪರಿಪೂರ್ಣವಾಗಿದ್ದರೆ ಆನಂದ ಅಲ್ಲ; ಎಲ್ಲ ಅಸಮರ್ಪಕತೆ, ಅಪರಿಪೂರ್ಣತೆಯನ್ನು ಸಹಿಸಿಕೊಂಡು ಸಮಾಧಾನಿಯಾಗಿರುವುದು ನಿಜವಾದ ಆನಂದ ಎಂಬುದನ್ನು ಇಂದಿನ ದಿನಮಾನದ ಯುವರಾಜಕರಣಿಗಳು ಅರಿತಿರಲೇಬೇಕು. ಇಲ್ಲವಾದಲ್ಲಿ ಸುದೀರ್ಘ ರಾಜಕಾರಣ ಅಸಾಧ್ಯವೇ ಇಲ್ಲಿ ಒಳ್ಳೆಯ ಸಂಬಂಧ ಉತ್ತಮ ತಿಳುವಳಿಕೆಯನ್ನು ಆಧರಿಸಿರುವುದಿಲ್ಲ; ಆದರೆ ತಪ್ಪು ತಿಳುವಳಿಕೆಯನ್ನು ಹೇಗೆ ನಿಭಾಯಿಸುತ್ತೀರೆಂಬುದನ್ನು ಆಧರಿಸಿರುತ್ತದೆ. ಅನೇಕ ಉತ್ತಮಸಂಗತಿಗಳಿಂದ ಸ್ನೇಹಿತರು ಹತ್ತಿರವಾಗುತ್ತಾರೆ. ದೂರಾಗಲು ಒಂದೇ ಸಂಗತಿ ಸಾಕು ಯಾವತ್ತೂ ಸ್ನೇಹವನ್ನು ಜೋಪಾನವಾಗಿ ಕಾಪಾಡುವ ಬಾಧ್ಯತೆಯನ್ನು ಮನಗಾಣುವುದು ಮುಖ್ಯ ಒಂದು ಸಿದ್ಧಾಂತಕ್ಕೆ ಬದ್ಧವಾಗಿರುವ, ಸದುದ್ದೇಶ ಹೊಂದಿದ, ನಾಲೈದು ಪ್ರಾಮಾಣಿಕ ವ್ಯಕ್ತಿಗಳು ಈ ಜಗತ್ತನ್ನೇ ಬದಲಿಸುವ ಬಗ್ಗೆ ಅನುಮಾನಪಡಬೇಡಿ. ಜಗತ್ತೇನಾದರೂ ಬದಲಾಗಿದ್ದರೆ ಅಂಥವರಿಂದ, ಅಂಥ ಪ್ರಯತ್ನದಿಂದ.

ಯಶಸ್ವೀ ಜೀವನಯಾನವನ್ನು ಹಾಗೂ ಸಾರ್ವಜನಿಕ ರಾಜಕಾರಣದಲ್ಲಿ ಸಾರ್ಥಕ 40 ವರ್ಷಗಳನ್ನು ಪೂರೈಸುತ್ತಿರುವ ಈ ಶುಭಸಂದರ್ಭದಲ್ಲಿ ನಾಡಿನ ಗಣ್ಯರನೇಕರು ಸೇರಿ ಸನ್ಮಾನ್ಯ ಶಿವರಾಮೇಗೌಡರ ಕುರಿತಾಗಿ ಅಭಿಮಾನಪೂರ್ವಕವಾಗಿ ಅಭಿನಂದನಾ ಗ್ರಂಥವೊಂದನ್ನು ಹೊರತರುತ್ತಿರುವುದು ಶ್ಲಾಘನೀಯ ವಿಚಾರವೇಆಗಿದೆ. ಸನ್ಮಾನ್ಯರ ಶೇಷಾಯುಷ್ಯಪೂರ್ತಿ ಅತ್ಯಂತ ನೆಮ್ಮದಿಯ ಕ್ಷಣಗಳು ಪ್ರಾಪ್ತವಾಗಲೆಂಬ ಸದಾಶಯಪೂರ್ವಕ ಹಾರೈಕೆಗಳೊಂದಿಗೆ.

ಶ್ರೀ ಡಾ. ಬಿ.ಎಲ್. ಶಂಕರ್
ಮಾಜಿ ಸಭಾಧ್ಯಕ್ಷರು ಕರ್ನಾಟಕ ವಿಧಾನ ಪರಿಷತ್

ಸಂದೇಶ



ರಾಮಲಿಂಗ ರೆಡ್ಡಿರವರ ಬಗ್ಗೆ ಎಲ್.ಆರ್. ಶಿವರಾಮೇಗೌಡರ ಮನದಾಳದ ಮಾತು

ರಾಜಕೀಯವಾಗಿ ನನ್ನ ಜೀವನದಲ್ಲಿ ನಾನು ಮರೆಯದೇ ಇರಲು ಆಗದೇ ಇರತಕ್ಕಂತಹ ಸಹಾಯ ಮಾಡಿದ್ದಾರೆ. ಇವರಿಗೆ ನಾನು ಚಿರಋಣಿ

ಎಲ್ ಆರ್ ಶಿವರಾಮೇಗೌಡರ ಅಭಿನಂದನಾ ಸಮಿತಿ ವತಿಯಿಂದ ಅಭಿನಂದನಾ ಗ್ರಂಥ ಹೊರ ತರುತ್ತಿರುವುದು ಸಂತಸದ ಸಂಗತಿ, ಶಾಸಕ ಮತ್ತು ಸಂಸದರಾಗಿದ್ದ ನಾಗಮಂಗಲದ ಎಲ್ ಆರ್ ಶಿವರಾಮೇಗೌಡರು ತಮ್ಮ ನಾಲ್ಕು ದಶಕಗಳ ಸುಧೀರ್ಘ ರಾಜಕಾರಣದಲ್ಲಿ ಜನಪರ ಕಾಳಜಿ ಉಳ್ಳ ನಾಯಕರು ಎಂದೇ ಜನಜನಿತ. ರಾಜಕಾರಣ ಇವರಿಗೆ ಅಧಿಕಾರದ ಹಂಬಲಕ್ಕಾಗಿ ಅಲ್ಲ. ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಸಮಾಜಮುಖಿ ಸೇವೆಯ ಹಾದಿಯಾಗಿತ್ತು. ನಾಗಮಂಗಲ ಕ್ಷೇತ್ರದ ಅಭಿವೃದ್ಧಿಗೆ ಇವರು ನೀಡಿರುವ ಕೊಡುಗೆ ಅಪಾರ, ಜನಸಾಮಾನ್ಯರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡು, ತಳಮಟ್ಟದಿಂದ ಪಕ್ಷ ಮತ್ತು ಸಂಘಟನೆಯನ್ನು ಬಲಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕ್ಷೇತ್ರದ ಮೂಲಭೂತ ಸೌಕರ್ಯ, ನೀರಾವರಿ ಹಾಗೂ ಶೈಕ್ಷಣಿಕ ಸುಧಾರಣೆಗಳಿಗಾಗಿ ಇವರು ನಿರಂತರವಾಗಿ ಶ್ರಮಿಸಿದ್ದಾರೆ. ಶ್ರೀ ಎಲ್ ಆರ್ ಶಿವರಾಮೇಗೌಡರ ರಾಜಕೀಯ ಹಾದಿ ಸುಗಮವಾಗೇನು ಇರಲಿಲ್ಲ.

ರಾಜಕಾರಣದಲ್ಲಿ ಎದುರಾದ ಎಲ್ಲಾ ಪಿತೂರಿಗಳ ವಿರುದ್ಧವೂ ಛಲ ಬಿಡದ ತ್ರಿವಿಕ್ರಮನಂತೆ ಅವರು ಬೆಳದು ನಿಂತ ಪರಿಯೇ ಅನನ್ಯ. ರಾಜಕೀಯ ಏರುಳಿತಗಳ ನಡುವೆಯೂ ಧೃತಿಗೆಡದೆ ಜನರ ವಿಶ್ವಾಸ ಗಳಿಸಿ ಶಾಸಕರಾಗಿ ಮತ್ತು ಸಂಸದರಾಗಿದ್ದು ಅವರ ಜನಾನುರಾಗಿ ವ್ಯಕ್ತಿತ್ವಕ್ಕೆ ಸಾಕ್ಷಿ. ಒಬ್ಬ ಯಶಸ್ವಿ ಪುರುಷನ ಹಿಂದೆ ಯಶಸ್ವೀ ಮಹಿಳೆ ಇರುತ್ತಾಳೆ ಎನ್ನುವ ಮಾತಿನಂತೆ ಶಿವರಾಮೇಗೌಡರ ಈ ಸುಧೀರ್ಘ ಯಶಸ್ಸಿನ ಪಯಣದ ಹಿಂದೆ ಅವರ ಧರ್ಮಪತ್ನಿ ಶ್ರೀಮತಿ ಸುಧಾ ಅವರ ಪಾತ್ರ ಅತ್ಯಂತ ಮಹತ್ವದ್ದು. ಮಾತೃ ಹೃದಯದ ಇವರು ಅನ್ನಪೂರ್ಣೆಶ್ವರಿ ಎಂದೇ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶಿವಮೇಗೌಡರ ಜನಪ್ರಿಯತೆ ಹಾಗೂ ಯಶಸ್ಸಿಗೆ ಶ್ರೀಮತಿ ಸುಧಾ ಅವರು ಪ್ರೇರಣಾ ಶಕ್ತಿಯಾಗಿದ್ದಾರೆ. ನಾಗಮಂಗಲ ಶಾಸಕರಾಗಿದ್ದ ಕಾಲದಿಂದಲೂ ಶಿವರಾಮೇಗೌಡರದ್ದು ಅತ್ಯಂತ ಆಕರ್ಷಕ ವ್ಯಕ್ತಿತ್ವ, ಸದಾ ಉತ್ತಮ ಉಡುಪುಗಳನ್ನು ಧರಿಸುವ ಇವರು ಮಂಡ್ಯದವರೇ ಆಗಿದ್ದ ಮಾಜಿ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರನ್ನು ಹೊರತುಪಡಿಸಿದರೆ ಉಡುಪಿನ ವಿಷಯದಲ್ಲಿ ಅತ್ಯುತ್ತಮ ಅಭಿರುಚಿ ಹೊಂದಿರುವ ಅಪರೂಪದ ರಾಜಕಾರಣಿ. ಅವರ ನಡೆ–ನುಡಿ ಮತ್ತು ವ್ಯಕ್ತಿತ್ವವು ಸಾರ್ವಜನಿಕ ಜೀವನದಲ್ಲಿ ಆಕರ್ಷಕವಾಗಿದೆ. ಶಿವರಾಮೇಗೌಡರ ಸಾಧನೆ ಮತ್ತು ಹಲವು ಯೋಜನೆ,ಯೋಚನೆಗಳನ್ನೊಳಗೊಂಡ ಜೀವನದ ಸಾಧನೆಗಳು, ರಾಜಕೀಯ ಏಳು ಬೀಳುಗಳು ಮತ್ತು ಜನಪರ ಕೆಲಸಗಳನ್ನು ದಾಖಲಿಸುತ್ತಿರುವ ಈ ಅಭಿನಂದನಾ ಗ್ರಂಥವು ಮುಂದಿನ ತಲೆಮಾರಿಗೆ ಸ್ಫೂರ್ತಿಯ ಸೆಲೆಯಾಗಲಿ ಎಂದು ಹಾರೈಸುತ್ತೇನೆ.

ಶ್ರೀ.ರಾಮಲಿಂಗ ರೆಡ್ಡಿ
ಜಲ ಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರ

ಸಂದೇಶ



ಎಚ್.ಎಂ. ರೇವಣ್ಣರವರ ಬಗ್ಗೆ ಎಲ್.ಆರ್. ಶಿವರಾಮೇಗೌಡರ ಮನದಾಳದ ಮಾತು

ರಾಜಕೀಯವಾಗಿ ನನ್ನ ಜೀವನದಲ್ಲಿ ನಾನು ಮರೆಯದೇ ಇರಲು ಆಗದೇ ಇರತಕ್ಕಂತಹ ಸಹಾಯ ಮಾಡಿದ್ದಾರೆ. ಇವರಿಗೆ ನಾನು ಚಿರಋಣಿ

ನಾಗಮಂಗಲದ ಶಿವರಾಮೇಗೌಡರ ಬಗ್ಗೆ ನಾನು ಕಂಡಂತಹ ವಿಶೇಷ ಗುಣವೇನೆಂದರೆ ಅಧಿಕಾರದಲ್ಲಿ ಇದ್ದ ಸಂದರ್ಭದಲ್ಲಿ ಹೇಗೆ ಬಡ ಜನರಿಗೆ, ನೊಂದವರಿಗೆ ಸಹಾಯವನ್ನ ಮಾಡುತ್ತಿದ್ದರೋ, ಅದೇ ಕಾಯಕವನ್ನ ಅಧಿಕಾರವಿಲ್ಲದಿದ್ದರೂ ಬಡ ಜನರಿಗೆ ಸಹಾಯ ಹಸ್ತವನ್ನು ಚಾಚುವಂತಹ ಉಪಯುಕ್ತ ಕಾರ್ಯ ಮಾಡುತ್ತಿರುವುದು ಮೆಚ್ಚುವಂತಹ ಗುಣ. ಅವರಿದ್ದೆಡೆ ಜನರ ದಂಡು ನೆರೆದಿರುತ್ತದೆ. 80ರ ದಶಕದಲ್ಲಿ ಯುವ ನಾಯಕನಾಗಿ ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ಸ್ಥಾನಗಳನ್ನ ಅಲಂಕರಿಸಿ ರಾಜಕೀಯದಲ್ಲಿ ತಮ್ಮದೇ ಆದಂತಹ ವರ್ಚಸ್ಸನ್ನ ಬೆಳೆಸಿಕೊಂಡಂತಹ ವ್ಯಕ್ತಿ. ಒಬ್ಬ ಯಶಸ್ವೀ ಯುವ ರಾಜಕಾರಣಿಯಾಗಿ ತಮ್ಮ ಮಂಡ್ಯ ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯಮಟ್ಟದ ನಾಯಕರುಗಳ ಜೊತೆಗೂ ಒಡನಾಟವನ್ನು ಇಟ್ಟುಕೊಂಡಿದ್ದಂತಹ ಶಿವರಾಮೇಗೌಡರು 1989 ರಲ್ಲಿ ನಾಗಮಂಗಲ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅತೀ ಹೆಚ್ಚು ಮತಗಳನ್ನು ಪಡೆದು ವಿಧಾನಸೌಧಕ್ಕೆ ಶಾಸಕರಾಗಿ ಪ್ರವೇಶವನ್ನ ಮಾಡಿ ತಾವು ಶಾಸಕರಾಗಿದ್ದಂತಹ ಸಂದರ್ಭದಲ್ಲಿ ಹತ್ತು ಹಲವಾರು ಯೋಜನೆಗಳನ್ನ ತಮ್ಮ ಕ್ಷೇತ್ರಕ್ಕೆ ಅಭಿವೃದ್ಧಿಯ ಕೊಡುಗೆಯಾಗಿ ನೀಡಿರುವುದು ಈಗಲೂ ಸಹ ಕಾಣಬಹುದಾಗಿದೆ. ಬಗರ್ ಹುಕುಂ ಸಾಗುವಳಿ ಯೋಜನೆ ಅಡಿಯಲ್ಲಿ ಸುಮಾರು 25 ಸಾವಿರ ಎಕರೆ ಜಮೀನನ್ನ ಬಡ ಜನರಿಗೆ ಮಧ್ಯವರ್ತಿ ಮತ್ತು ಅಧಿಕಾರಿಗಳ ಉಪಟಳದಿಂದ ಪಾರು ಮಾಡಿ ಖಿದ್ದು ಶಿವರಾಮೇಗೌಡರೇ ನೀಡಿದ್ದು ವಿಶೇಷ. ರಾಜಕೀಯದ ಕೆಲವು ಒಳಸುಳಿಗಳು ಶಿವರಾಮೇಗೌಡರಿಗೆ ಬೇಗ ಅರ್ಥವಾಗದ ಪರಿಣಾಮ ಜೆಡಿಎಸ್, ಬಿಜೆಪಿ ಪಕ್ಷಗಳಿಗೂ ಸಹ ಹೋಗಿ ಅಲ್ಲಿಯೂ ತಮ್ಮ ಪ್ರಾಮಾಣಿಕತೆಯ ಸಂಘಟನೆಯನ್ನು ಮಾಡುವುದರ ಮೂಲಕ ನಿಷ್ಠೆಯನ್ನ ತೋರಿದ ನಿಜ ನಾಯಕ. ಅವರು ಬಿಡಿಎ ಚೇರ್ಮನ್ನಾಗಿ, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಇದ್ದಂತಹ ಸಂದರ್ಭದಲ್ಲಿ ಮಹಾನಗರಕ್ಕೆ ಮತ್ತು ರಾಜ್ಯಕ್ಕೆ ಉತ್ತಮವಾದಂತಹ ಕೆಲಸವನ್ನು ಮಾಡಿದ್ದಾರೆ. ಮಂಡ್ಯ ಎಂಪಿ ಆದ ಸಂದರ್ಭದಲ್ಲಿ ಇದ್ದ ಕೊಂಚ ಅವಧಿಯಲ್ಲಿ ಮಂಡ್ಯ ಕ್ಷೇತ್ರಕ್ಕೆ ಉತ್ತಮವಾದ ಕೆಲಸವನ್ನ ಮಾಡಿದ್ದಾರೆ. ಜಿಲ್ಲೆಗೆ ಪಾಸ್‌ಪೋರ್ಟ್ ಕೇಂದ್ರವನ್ನು ತೆರೆದು ಗ್ರಾಮೀಣ ಮಕ್ಕಳ ವಿದೇಶ ವ್ಯಾಸಂಗಕ್ಕೆ ನೆರವಾದರು. ರಾಜಕೀಯದಲ್ಲಿ ಅದೃಷ್ಟವೂ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಕೆಲವು ಸಂದರ್ಭಗಳು ಶಿವರಾಮೇಗೌಡರಿಗೆ ಕೈ ಕೊಟ್ಟ ಪರಿಣಾಮ ಇನ್ನೂ ಉತ್ತಮವಾದಂತಹ ಸ್ಥಾನಮಾನಗಳನ್ನು ಅಲಂಕರಿಸಿ ರಾಜ್ಯಕ್ಕೆ, ಮಂಡ್ಯ ಜಿಲ್ಲೆಗೆ, ನಾಗಮಂಗಲ ಕ್ಷೇತ್ರಕ್ಕೆ ಕೆಲಸ ಮಾಡುವಂತಹ ಅವಕಾಶ ಅಪಾರ ಅನುಭವದ ರಾಜಕಾರಣಿಗೆ ಕೈತಪ್ಪಿದ್ದು ವಿಷಾದನೀಯ. ಮತ್ತೊಮ್ಮೆ ನಾನು ಶುಭವನ್ನು ಕೋರಿ ಅವರು ಶತಾಯುಷಿಗಳಾಗಿ, ಆರೋಗ್ಯವಾಗಿ ಹೀಗೆ ಜನಸೇವೆ ಮಾಡಲಿ ಎಂದು ಹಾರೈಸುತ್ತೇನೆ.

ಶ್ರೀ ಎಚ್.ಎಂ. ರೇವಣ್ಣ
ಮಾಜಿ ಸಚಿವರು, ಕರ್ನಾಟಕ ಸರ್ಕಾರ

ನಿರ್ಮಲ | ನಿರ್ಭಯ | ನಿಶ್ಚಲ

ಶಿವ ಪಥ...

ಎಲ್. ಆರ್.ಶಿವರಾಮೇಗೌಡರ ಅಭಿನಂದನಾ ಗ್ರಂಥ

ಸಲಹೆ-ಸೂಚನೆ-ಮಾರ್ಗದರ್ಶನ

ನಾಡೋಜ, ಡಾ.ಹಂ.ಪ. ನಾಗರಾಜಯ್ಯ

ಪ್ರಧಾನ ಬರಹಗಾರರು ಮತ್ತು ಸಂಪಾದಕರು

ಕೆ.ಎಂ.ರಘು ಡೈರೆಕ್ಟರ್

ರಾಜ್ಯ ಪ್ರಶಸ್ತಿ ಪುರಸ್ಕೃತರು

ಪರಿಕಲ್ಪನೆ

ಭಗವಾನ್ ಚಕ್ರವರ್ತಿ

ಸಲಹಾ ಸಮಿತಿ

ಜಸ್ಟೀಸ್ ಚಂದ್ರಶೇಖರಯ್ಯ
ನಿವೃತ್ತ ನ್ಯಾಯಾಧಿಶರು, ಕರ್ನಾಟಕ ಹೈಕೋರ್ಟ್

ಡಾ॥ ನಲ್ಲೂರು ಪ್ರಸಾದ್
ಮಾಜಿ ಅಧ್ಯಕ್ಷರು, ಕಸಾಪ, ಬೆಂಗಳೂರು.

ಉದಯ್ ಗರುಡಾಚಾರ್
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಶಂಕರಲಿಂಗೇಗೌಡ, ನಿವೃತ್ತ ಐಎಎಸ್

ವೈ.ಕೆ. ಪುಟ್ಟಸೋಮೇಗೌಡ, ನಿವೃತ್ತ ಐಎಎಸ್

ಟಿ. ತಿಮ್ಮೇಗೌಡ ನಿವೃತ್ತ ಐಎಎಸ್

ನಾಗತಿಹಳ್ಳಿ ಚಂದ್ರಶೇಖರ್
ಖ್ಯಾತ ಸಾಹಿತಿಗಳು ಹಾಗೂ ಚಲನಚಿತ್ರ ನಿರ್ದೇಶಕರು

ಟಿ.ಕೆ. ರಾಮೇಗೌಡ
ಹಿರಿಯ ನ್ಯಾಯವಾದಿಗಳು,ನಾಗಮಂಗಲ

ಟಿ.ಎಸ್. ನಾಗಾಭರಣ
ಖ್ಯಾತ ಚಲನಚಿತ್ರ ನಿರ್ದೇಶಕರು,

ವೈ.ಕೆ.ಮುದ್ದುಕೃಷ್ಣ ನಿವೃತ್ತ ಕೆಎಎಸ್

ಶ್ರೀನಿವಾಸ್ ಜಿ. ಕಪ್ಪಣ್ಣ
ಮಾಜಿ ಅಧ್ಯಕ್ಷರು, ನಾಟಕ ಅಕಾಡೆಮಿ

ರೂಪ ಅಯ್ಯರ್
ಖ್ಯಾತ ಚಲನಚಿತ್ರ ನಿರ್ದೇಶಕಿ

ಮಂಜುಳ ಮಾನಸ
ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಜಿ. ಚಂದ್ರೇಗೌಡ
ಖ್ಯಾತ ಅಂಕಣಕಾರರು, ಲಂಕೇಶ್ ಪತ್ರಿಕೆ.

ಕೆ.ಎಸ್. ಮಂಜೇಗೌಡ
ಉಪಾಧ್ಯಕ್ಷರು ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ

ಹಾದಿಮನಿ. ಟಿ.ಎಫ್.ಕಲಾವಿದರು



ಮನದಾಳದ ಮಾತುಗಳು



ನನ್ನ ನೆನಪಿನ ಬಾಲ್ಯ



ನಾನು ಎಲ್.ಆರ್. ಶಿವರಾಮೇಗೌಡ. ನನ್ನ ಹುಟ್ಟೂರು ಲಾಳನಕೆರೆ ಗ್ರಾಮ. 1.6.1956ರಲ್ಲಿ ರಲ್ಲಿ ನನ್ನ ಜನನ. ನನ್ನ ತಂದೆ ಪಟೇಲ್ ಎಲ್. ರಾಮೇಗೌಡರು, ತಾಯಿ ಲಕ್ಷ್ಮಮ್ಮ, ನನ್ನ ಒಡಹುಟ್ಟಿದವರು ಮೂರು ಜನ. ನನ್ನ ಅಕ್ಕ ನಾಗಮ್ಮ, ನನ್ನ ಅಣ್ಣ ಬಸವಲಿಂಗೇಗೌಡ, ನನ್ನ ಮಗದೊಬ್ಬಳು ಅಕ್ಕ ಭಾಗ್ಯಮ್ಮ, ನಾನೇ ಕಡೆಯವನು.

ನನ್ನ ಬಾಲ್ಯದ ವಿದ್ಯಾಭ್ಯಾಸ ಲಾಳನಕೆರೆಯಲ್ಲಿ ಆಯಿತು. ನನ್ನ ತಂದೆಯವರು ಊರಿಗೆ ಪಟೇಲರಾಗಿದ್ದರು, ವೃತ್ತಿಯಲ್ಲಿ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು, ನಮ್ಮ ಕುಟುಂಬ ಆರ್ಥಿಕವಾಗಿಯೂ ಸದೃಢವಾಗಿತ್ತು.

ನಾನು ಓದಿನ ಕಡೆ ಹೆಚ್ಚು ಗಮನ ಕೊಡದೆ ಹುಡುಗಾಟಕೆಯಲ್ಲಿ ಬಾಲ್ಯ ಕಳೆದೆ, ಬೈಸಿಕಲ್ ಓಡಿಸುವುದು ನನ್ನ ನೆಚ್ಚಿನ ಹವ್ಯಾಸವಾಗಿತ್ತು, ನಮ್ಮಪ್ಪನ ಕಾಣಲು ಬಂದ ಜನ, ಹೊರಗೆ ಸೈಕಲ್ ನಿಲ್ಲಿಸಿದರೆ ಎತ್ತಿಕೊಂಡು ಹೋಗುತ್ತಿದ್ದೆ. ನಮ್ಮ ಅಪ್ಪನ ಬಳಿ ದೂರು ಹೇಳಿದ ಗ್ರಾಮಸ್ಥರು, ನಿಮ್ಮ ಹುಡುಗ ಬಲು ಚಾಲಾಕಿ, ನಮ್ಮನ್ನು ಆತ್ಮೀಯತೆಯಿಂದ ಮಾತನಾಡಿಸಿ, ಹೇಳದೇ ಕೇಳದೇ ನಿಲ್ಲಿಸಿದ ಸೈಕಲ್ಲನ್ನು ತೆಗೆದುಕೊಂಡು ಹೋಗುತ್ತಾನೆ ಎಂದು ಹೇಳಿದಾಗ ನನ್ನಪ್ಪ ಕೋಪಗೊಂಡದ್ದು ಇದೆ.

ಅಂದಿನ ಮರಕೋತಿ ಆಟ, ಈಜು ಮೋಜು, ಗೋಲಿ ಗೆಜ್ಜುಗ, ಬುಗುರಿ ಆಟ, ಸೂರ್ಚೆಂಡು ಇವು ಅಂದಿನ ಬಾಲ್ಯದ ಆಟಗಳು. ತೋಟದಲ್ಲಿ ಮಾವಿನ ಕಾಯಿ, ಸೀಬೆಕಾಯಿ ಕದ್ದು ತಿನ್ನುತ್ತಾ, ಅದರ ಜೊತೆ ಮರಕೋತಿ ಆಟ ಆಡುತ್ತಿದ್ದೆವು. ಇದು ನಮಗೆ ಒಳ್ಳೆಯ ಮಜಾ ಕೊಡುತ್ತಿದ್ದವು, ನನ್ನ ಬಾಲ್ಯದ ಸವಿನೆನಪುಗಳು ಈಗಲೂ ಆಗಾಗ ನೆನಪಿಗೆ ಬರುತ್ತದೆ. ನನ್ನ ಊರಿಗೆ ಹೋದಾಗ ಬಾಲ್ಯ ಗೆಳೆಯರು ಪಿಟ್ಟೆ ಕೊಪ್ಪಲು ಅಯ್ಯಣ್ಣ ಹಾಗೂ ನನ್ನ ಗುರುಗಳು ಎನ್.ಟಿ.ಶ್ರೀನಿವಾಸ್ ಸಿಕ್ಕಾಗ ಹಳೆಯದೆಲ್ಲ ಮೆಲುಕು ಹಾಕುವ ಆ ರಸಕ್ಷಣ ಮತ್ತೆ ಬಾರದು.

ಬಾಲ್ಯದಲ್ಲಿ ನಾನು ಓದಿನ ಕಡೆಗೆ ಹೆಚ್ಚು ಗಮನ ಹರಿಸದೆ ಹುಡುಗಾಟಕೆಯಲ್ಲೇ ಕಾಲ ಕಳೆಯುತ್ತಿದ್ದುದ್ದೇ ಹೆಚ್ಚು. 7ನೇ ತರಗತಿ ಪಾಸಾದೆ. ಮೈಸೂರಿನ ರಾಮಕೃಷ್ಣ ಆಶ್ರಮ ಅತ್ಯಂತ ಪ್ರತಿಷ್ಠಿತ ವಿದ್ಯಾಸಂಸ್ಥೆ. ಸ್ವಾತಂತ್ರ್ಯಪೂರ್ವದಲ್ಲೇ ಶ್ರೀ ವೀರಸೈನ್ಯಾಸಿ ವಿವೇಕಾನಂದರ ದೂರದೃಷ್ಟಿಯಿಂದ ಪ್ರಾರಂಭಗೊಂಡ ಈ ಸಂಸ್ಥೆ ದೇಶ–ವಿದೇಶಗಳಲ್ಲೂ ತನ್ನ ಛಾಪು ಮೂಡಿಸಿದೆ. ಶ್ರೀಮನ್ ಮಹಾರಾಜ ಶ್ರೀಕಂಠದತ್ತ ಒಡೆಯರ್ ಹಾಗೂ ನಮ್ಮ ಮದ್ದೂರಿನ ಎಸ್.ಎಂ. ಕೃಷ್ಣ ಆದಿಯಾಗಿ ಎಲ್ಲರೂ ಇಲ್ಲಿ ವಿದ್ಯಾರ್ಜನೆ ಮಾಡಿದ್ದಾರೆ. ಆ ಮೂಲಕ ಸಮಾಜದಲ್ಲಿ ಸತ್ಪ್ರಜೆಯಾಗಿ, ಉನ್ನತ ಸ್ಥಾನಗಳಲ್ಲಿ ವಿಜೃಂಭಿಸಿದ್ದಾರೆ. ಅವರಂತೆಯೇ ನನ್ನ ಮಗನೂ ಈ ಸಂಸ್ಥೆಯಲ್ಲಿ ಓದಿ ಬೆಳೆಯಲಿ ಎಂಬ ಮಹದಾಸೆ ನಮ್ಮಪ್ಪನದಾಗಿತ್ತು. ಹೀಗಾಗಿ ಬಹಳ ಪ್ರಯತ್ನದ ಮೇರೆಗೆ ಎಂಟನೇ ತರಗತಿಗೆ ನಮ್ಮ





ತಂದೆಯವರು ಅವರ ಸ್ನೇಹಿತರ ಮೂಲಕ ಅವತ್ತಿನ ಮುಖ್ಯಮಂತ್ರಿಗಳಾದಂತಹ ವೀರೇಂದ್ರ ಪಾಟೀಲರನ್ನು ಭೇಟಿ ಮಾಡಿ, ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಶಿಫಾರಸ್ಸು ಮಾಡಿಸಿ, ಅಲ್ಲಿ ನನ್ನನ್ನು ಸೇರಿಸಿದರಂತೆ. ನನಗೆ ಆ ವಿಚಾರ ತಿಳುವಳಿಕೆ ಬಂದ ನಂತರ ಗೊತ್ತಾಯಿತು. ನಾನು ಚೆನ್ನಾಗಿ ಓದಲಿ ಎಂಬ ಉದ್ದೇಶದಿಂದ ನಮ್ಮ ತಂದೆಯವರು ಮುಖ್ಯಮಂತ್ರಿಗಳಿಂದ ಶಿಫಾರಸ್ಸು ಮಾಡಿಸಿ ಸೀಟ್ ಸಿಗುವಂತೆ ಮಾಡಿದ್ದರು. ನನಗೆ ಅಚ್ಚುಮೆಚ್ಚಿನ ಸ್ವಾಮೀಜಿಗಳು ಶ್ರದ್ಧಾನಂದ ಸ್ವಾಮೀಜಿಗಳು, ಅವರಿಗೂ ನಾನು ನೆಚ್ಚಿನ ಶಿಷ್ಯನಾಗಿದ್ದೆ. ಅವರು ಈಗ ಇಲ್ಲ, ಕಾಲವಾಗಿದ್ದಾರೆ. ನಾನು ಅಲ್ಲೇ ಓದಿದ್ದರೆ ಯಾವುದಾದರೂ ಸರ್ಕಾರಿ ಹುದ್ದೆಗೆ ಹೋಗುತ್ತಿದ್ದನೇನೋ? ಆದರೆ ನಾನು ಅಲ್ಲಿ ಇದ್ದದ್ದು ಮೂರರಿಂದ ನಾಲ್ಕು ತಿಂಗಳು ಮಾತ್ರ. ಆಶ್ರಮದಲ್ಲಿ ಕುಮುದನ್ ಎಂಬ ನನ್ನ ಸ್ನೇಹಿತ ಇದ್ದ. ಅವನು ಮತ್ತು ನಾನು ಇಲ್ಲಿ ಇರಬಾರದು ಎಂದು ತೀರ್ಮಾನ ಮಾಡಿಕೊಂಡೆವು. ಕಾರಣ ಏನೆಂದರೆ, ಅಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ತಣ್ಣೀರಿನ ಸ್ನಾನ ಮಾಡಿ ನಿದ್ದೆಗಣ್ಣಿನಲ್ಲಿ ಓದಬೇಕಾಗಿತ್ತು, ಅದನ್ನ ನಾವು ಮೈಗೂಡಿಸಿಕೊಳ್ಳಲು ಆಗಲಿಲ್ಲ. ಆದ್ದರಿಂದ, ಆಶ್ರಮದಿಂದ ಊರಿಗೆ ಹೋಗಲು ತೀರ್ಮಾನ ಮಾಡಿ, ಗೇಟ್‌ನ ಇಬ್ಬರು ಸೆಕ್ಯೂರಿಟಿಗಳು ಮಲಗಿದ್ದ ಸಂದರ್ಭದಲ್ಲಿ ಅವರಿಗೆ ಗೊತ್ತಾಗದಂತೆ ಒಂದು ರಾತ್ರಿ ಅಲ್ಲಿಂದ ಹೊರಬಂದೆವು.

ಮನೆಯಲ್ಲಿ ಯಾಕಾಗಿ ಬಂದೆ ಎಂದು ಕೇಳಿದರು. ನಾನು ನಿಜ ಹೇಳಿದರೆ ಹೊಡೆಯುತ್ತಾರೆ ಎಂದು ಹುಷಾರಿಲ್ಲ ಅದಕ್ಕೆ ಬಂದೆ ಎಂದು ಸುಳ್ಳು ಹೇಳಿ ಒಂದು ವಾರ ಮನೆಯಲ್ಲಿ ಮಲಗಿದೆ. ಒಂದು ವಾರದ ನಂತರ ನಮ್ಮ ತಾಯಿಗೆ ವಿಷಯ ತಿಳಿಸಿ ನಮ್ಮ ತಾಯಿಯವರ ಕಡೆಯಿಂದ ನಮ್ಮ ಅಪ್ಪನಿಗೆ ಹೇಳಿಸಿದೆ. ಆಗ ನಮ್ಮ ತಂದೆಯವರು ನಿನ್ನ ಹಣೆಬರಹ ಇಷ್ಟೇ, ನಾನೇನು ಮಾಡೋಕಾಗಲ್ಲ ಎಂದು ನನಗೆ ಬೈದು ನಂತರ ನಮ್ಮೂರಿನ ಪಕ್ಕದಲ್ಲಿದ್ದ ಕದಬಳ್ಳಿಗೆ ಪುನಃ ಎಂಟನೇ ತರಗತಿಗೆ ಸೇರಿಸಿದರು.

ಕದಬಳ್ಳಿಯ ಹೈಸ್ಕೂಲ್



ಬೆಂಗಳೂರು ಮತ್ತು ಮಂಗಳೂರಿನ ಹೆದ್ದಾರಿಯ ನಡುವೆ ಬರುವ ಗ್ರಾಮ ಕದಬಳ್ಳಿ. ಸುತ್ತಮುತ್ತಲ ಹತ್ತೂರ ವಿದ್ಯಾರ್ಥಿಗಳಿಗೆ ಇದೇ ಜ್ಞಾನಕೇಂದ್ರ. ಇಲ್ಲಿಯ ಶಿಕ್ಷಕರು ಉತ್ತಮ ಪಾಠ ಪ್ರವಚನ ಮಾಡಿ ಜನಮೆಚ್ಚುಗೆ ಗಳಿಸಿದ್ದರು. ನಾನು ಓದಿದ್ದು ಕದಬಳ್ಳಿ ಹೈಸ್ಕೂಲಿನಲ್ಲಿ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತೆ. ಏಕೆಂದರೆ ಒಳ್ಳೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಮೂಹ ಅಲ್ಲಿತ್ತು. ಕದಬಳ್ಳಿಯಲ್ಲಿ ಅನಂತ ಮೇಷ್ಟು ಎಂಬ ಒಳ್ಳೆಯ ಟೀಚರ್ ಇದ್ದರು. ಅವರ ಸುಪರ್ದಿಗೆ ನನ್ನ ಒಪ್ಪಿಸಿದ ನನ್ನಪ್ಪ ಲಾಳನ ಕೆರೆಯಿಂದ ಅವಾಗವಾಗ ಸ್ವಲ್ಪ ದಿನಸಿಯನ್ನು ಕಳಿಸಿ ಕೊಡುತ್ತಿದ್ದರು. ಪಾಪ ಮೇಷ್ಟು ಬೇರೆ ಏನನ್ನು ನಿರೀಕ್ಷೆ ಮಾಡುತ್ತಿರಲಿಲ್ಲ. ದಿನಂಪ್ರತಿ ನನಗೆ ವಿಶೇಷ ಗಮನ ನೀಡಿ ವಿದ್ಯೆ ತಲೆಗತ್ತುವಂತೆ ಹೇಳಿಕೊಡುತ್ತಿದ್ದರು ನಾನು ಮಾಮೂಲಿನಂತೆ ಎಂದಿನ ಹುಡುಗಾಟಕೆಯಲ್ಲಿ ಕಾಲ ಕಳೆದೆ. ಆದರೆ ಎಂಟನೇ ತರಗತಿಯನ್ನು ಹೇಗೋ ಪಾಸು ಮಾಡಿಕೊಂಡೆ, ಆಗ ನಮಗೆ 35 ಮಾರ್ಕು ಬಂದರೆ ಸಾಕಿತ್ತು, ಮುಂದಿನ ತರಗತಿಗೆ ಪ್ರವೇಶ ಪಡೆಯಬಹುದಾಗಿತ್ತು, ಯುದ್ಧ ಗೆದ್ದವನಂತೆ ಖುಷಿಯಲ್ಲಿ ಊರು ತುಂಬಾ ಓಡಾಡಿದೆ ಆಗ ನನ್ನ ಶಾಲಾ ಸಹಪಾಠಿಗಳಾಗಿ ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ, ಲಂಕೇಶ್ ಪತ್ರಿಕೆಯ ಅಂಕಣಕಾರ ಬಿದರಕೆರೆಯ ಚಂದ್ರೇಗೌಡ, ಐಯ್ಯಣ್ಣ, ಧರಣೀಗೌಡ ಹಾಗೂ ಬೆಟ್ಟದ ಮಲ್ಲೇನಹಳ್ಳಿಯ ಆದಿಚುಂಚನಗಿರಿಯ ಕ್ಷೇತ್ರದ ಕಿರಿಯ ಸ್ವಾಮಿಗಳಾದ ಭೈರವೈಕ್ಯರಾದ ಶಿವಕುಮಾರ ಸ್ವಾಮಿಗಳು, ನನ್ನ ಸಹಪಾಠಿಗಳು ಎಂಬ ಹೆಮ್ಮೆ ನನ್ನದು. ಆಗ ನಾವೆಲ್ಲರೂ ಶಾಲೆಗೆ ನಡೆದುಕೊಂಡೆ ಬರಬೇಕಿತ್ತು.ಆಗ ನನ್ನ ಬಳಿ ಸೈಕಲ್ಲು ಇರಲಿಲ್ಲ,. ನನ್ನ ತಂದೆ ಬಟ್ಟೆ ಅಂಗಡಿಯನ್ನು ಇಟ್ಟುಕೊಂಡಿದ್ದರು.ಅಲ್ಲಿ ಎರಡೆರಡು ಶರ್ಟ್ ಪೀಸ್ಗಳನ್ನು ಅವರಿಗೆ ಗೊತ್ತಾಗದಂತೆ ತಂದು ಸೈಕಲ್ ಇರುವವರ ಬಳಿಕೊಟ್ಟು, ಅವರಿಂದ ಬೈಸಿಕಲ್ ಪಡೆದು ಅಲ್ಲಿ ಇಲ್ಲಿ ಸುತ್ತಾಡುತ್ತಿದ್ದೆ. ಆಗಲು ಓದಿನ ಕಡೆ ಅಷ್ಟು ಗಮನ ಹರಿಸಲೇ ಇಲ್ಲ, ಪ್ರೌಢಶಾಲೆಯ ಕೊನೆಯ ಘಟ್ಟವಾದ ಎಸ್ಎಸ್ಎಲ್ಸಿಗೆ ಬಂದೆ.ಅದು ಪಬ್ಲಿಕ್ ಎಕ್ಸಾಮ್ ಆಗಿದ್ದರಿಂದ ಶಿಸ್ತಾಗಿ ಓದಿ ಪರೀಕ್ಷೆ ಬರೆದು ಪಾಸ್ ಆಗಬೇಕಿತ್ತು, ಗಣಿತ ಮತ್ತು ಇಂಗ್ಲಿಷ್ ಸಬ್ಜೆಕ್ಟ್ ಗಳು ಗ್ರಾಮೀಣ ವಿದ್ಯಾರ್ಥಿಗಳಾದ ನಮಗೆ ಕಾಟ ಕೊಡುತ್ತಿದ್ದವು. ಎಸ್ಎಸ್ಎಲ್ಸಿ ರಿಸಲ್ಟ್ ದಿನ ಬಂದೇ ಬಿಟ್ಟಿತು ಆ ದಿನ ನಾನು ಹಾಗೂ ನನ್ನ ಅಕ್ಕ ನಮ್ಮ ನೆಂಟರ ಮನೆಗೆ ಹೋಗಿದ್ದೋ, ಕೆ ಆರ್ ನಗರದ ಪಕ್ಕದ ನಾಟನಹಳ್ಳಿ ಎಂಬ ಗ್ರಾಮ. ಅಲ್ಲಿ ಡಾಕ್ಟರ್ ಪಾರ್ಥಸಾರಥಿ ಎಂಬ ನಮ್ಮೂರ ಡಾಕ್ಟರ್ ಇದ್ದರು. ರಿಸಲ್ಟ್ ನಲ್ಲಿ ನಾನು ಫೇಲಾಗಿದ್ದೆ. ಅದನ್ನು ಹೇಳಿಕೊಳ್ಳಲಾಗದೇ ಪಾಸಾಗಿದ್ದೇನೆ ಎಂದು ಎಲ್ಲರಿಗೂ ಹೇಳಿ ಅವರನ್ನು ನಂಬಿಸಿ ಸ್ವೀಟ್ ತಿನ್ನಿಸಿಬಿಟ್ಟೆ. ಆಮೇಲೆ ನನಗೆ ಯೋಚನೆ ಶುರುವಾಯಿತು, ಮನಸ್ಸಿಗೆ ತುಂಬಾ ಬೇಸರವೂ ಆಯಿತು. ಅವರಿಗೆ ಸುಳ್ಳು ಹೇಳಿಬಿಟ್ಟೆನಲ್ಲ ಎಂದು ಕೊರಗಿಕೊಂಡು ನಮ್ಮೂರ ದಾರಿ ಹಿಡಿದೆ. ಸುಳ್ಳು ಹೇಳುವುದು ಸುಲಭ ಆದರೆ ಅದನ್ನು ಅರಗಿಸಿಕೊಳ್ಳುವುದು ಕಷ್ಟ ಎಂಬ ಅರಿವಿನೊಂದಿಗೆ ಬಸ್ ಹತ್ತಿದೆ. ಮನಸ್ಸಿನಲ್ಲಿ ಏನೋ ಕಸಿವಿಸಿಯಾಗಿ ಊರನ್ನು ತಲುಪುವವರೆಗೆ ನನ್ನಲ್ಲಿ ಕೊರಗು ಉಂಟಾಯಿತು. ಈ ರೀತಿ ಮತ್ಯಾವತ್ತೂ ಸುಳ್ಳು ಹೇಳಬಾರದೆನ್ನುವ ನೀತಿ ಪಾಠವನ್ನು ಅಂದೇ ಮೈಗೂಡಿಸಿಕೊಂಡೆ.



ಮಠದೊಂದಿಗೆ ನನ್ನ ಬಾಂಧವ್ಯ



ಎಸ್‌ಎಸ್‌ಎಲ್‌ಸಿ ಫೇಲ್ ಆಗಿದ್ದ ಕಾರಣ, ಪಾಸ್ ಮಾಡಲು ಎಲ್ಲಿ ಸೇರಿದರೆ ಒಳ್ಳೆಯದು ಎಂದು ಹುಡುಕುತ್ತಿದ್ದೆ. ಯಾಕೆಂದರೆ ಆವಾಗ ಟ್ಯೂಟೋರಿಯಲ್ (ಖಾಸಗಿ ಮನೆಪಾಠದ ವ್ಯವಸ್ಥೆ) ಅಂತ ಇತ್ತು. ಒಳ್ಳೆ ಟ್ಯೂಷನ್ ಮಾಡುವವರ ಬಳಿ ಸೇರಿದರೆ ಪಾಸ್ ಮಾಡಿಸುತ್ತಿದ್ದರು. ಕೊನೆಗೆ ನಮ್ಮ ತಾಯಿ ಊರು ಬೆಳ್ಳೂರು ಹೋಬಳಿ ಕಂಚನಹಳ್ಳಿ ಗ್ರಾಮ. ಅಲ್ಲೇ ಪಕ್ಕದಲ್ಲಿ ಚುಂಚನಗಿರಿ. ಅಲ್ಲಿ ಸೇರಿಕೊಂಡು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿಕೋ ಎಂದು ನಮ್ಮ ತಂದೆ ಹೇಳಿದರು. ಕಂಚನಹಳ್ಳಿಯಲ್ಲಿ ನಮ್ಮ ಸೋದರ ಮಾವ ಶಿವಣ್ಣ ಇದ್ದರು. ಅವರಿಗೆ ನಮ್ಮ ಎರಡನೇ ಅಕ್ಕನನ್ನು ಕೊಟ್ಟು ಮದುವೆ ಮಾಡಿದ್ದೆವು. ಅವರ ಮನೆಯಲ್ಲಿ ಉಳಿದುಕೊಂಡು ಚುಂಚನಗಿರಿಯಲ್ಲಿ ಹೈಸ್ಕೂಲ್ ಮಾಸ್ಟರ್ ಆಗಿದ್ದ ಜಿವಿಆರ್ ಅವರ ಬಳಿ ಶಾಲಾ ಅವಧಿ ಮುಗಿದ ನಂತರ ಬಿಡುವಿನ ಸಮಯದಲ್ಲಿ ನನಗೆ ಪಾಠ ಹೇಳಿ ಕೊಡುವುದು ಎಂದು ಮಾತುಕತೆಯಾಗಿ ನನ್ನನ್ನು ಅವರ ಬಳಿ ಸೇರಿಸಿದರು. ಆಗ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ವಿದ್ಯಾರ್ಥಿಗಳ ಜೊತೆಯಲ್ಲೆಲ್ಲಾ ವಾಲಿಬಾಲ್ ಆಡಲು ಬರುತ್ತಿದ್ದರು. ಸ್ವಾಮೀಜಿಗಳ ಜೊತೆಗೆ ಸೇರಿಕೊಂಡು ಆಡಬೇಕೆಂದು ತೀವ್ರ ಪೈಪೋಟಿ ನಡೆಯುತಿತ್ತು, ಅಲ್ಲಿಯೂ ನಾನು ಸ್ವಾಮೀಜಿ ಇರುತ್ತಿದ್ದ ಟೀಮ್ ಜೊತೆಗೆ ಸೇರಿಕೊಂಡು ಆಡುತ್ತಿದ್ದೆ. ಆವಾಗ ಇನ್ನೂ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಪೀಠಾಧ್ಯಕ್ಷರಾಗಿರಲಿಲ್ಲ. ಆಗ ಪೀಠಾಧ್ಯಕ್ಷರಾಗಿದ್ದವರು ಶ್ರೀ ರಮಾನಂದ ನಾಥ ಶ್ರೀಗಳು. ಅವರು ಆರೋಗ್ಯದ ಸಮಸ್ಯೆಯಿಂದ ಚಿಕಿತ್ಸೆ ಪಡೆಯುತ್ತಿರುವಾಗ ಚಿಕಿತ್ಸೆ ಫಲಿಸದೆ ಭೈರವೈಕ್ಯರಾಗುತ್ತಾರೆ. ಸಂಸ್ಥೆಯ ದೊಡ್ಡ ಹೊನ್ನಯ್ಯ ಎನ್ನುವವರು ಮೈಸೂರಿನಿಂದ ರಮಾನಂದ ನಾಥ ಸ್ವಾಮೀಜಿಯವರು ಬರೆದಿದ್ದ ವಿಲ್



ಪತ್ರವನ್ನು ತಂದು ಓದಿದಾಗ ಅದರಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಪೀಠಾಧ್ಯಕ್ಷರಾಗಬೇಕೆಂದು ಅದರಲ್ಲಿ ಉಲ್ಲೇಖಿಸಿರುತ್ತಾರೆ. ಚಂದ್ರಶೇಖರ ಸ್ವಾಮೀಜಿಯವರು ಬೆಂಗಳೂರಿನ ರಾಜರಾಜೇಶ್ವರಿ ನಗರದ ಕೈಲಾಸಾಶ್ರಮಕ್ಕೆ ಬಂದು ತಂಗುತ್ತಾರೆ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು 1974ರಲ್ಲಿ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಪೀಠಾಧ್ಯಕ್ಷರಾಗುತ್ತಾರೆ.

ಎಸ್‌ಎಸ್‌ಎಲ್‌ಸಿ ರಿಸಲ್ಟ್ ಅನೌನ್ಸ್ ಆಗುವ ದಿನ, ನಮ್ಮ ಮಾವ ಸ್ಕೂಟರ್ ಮೇಲೆ ಕೂರಿಸಿಕೊಂಡು ರಿಸಲ್ಟ್ ನೋಡೋಕೆ ಕರೆದುಕೊಂಡು ಹೋಗುತ್ತಿದ್ದರು. ಆವಾಗ ರಸ್ತೆಯಲ್ಲಿ ನಮ್ಮ ಎದುರಿಗೆ ನಾಲ್ಕೈದು ಹೆಣ್ಣು ಮಕ್ಕಳು ತುಂಬಿದ ಬಿಂದಿಗೆ ಹೊತ್ತುಕೊಂಡು ಬರುತ್ತಿದ್ದರು. ಅದನ್ನು ನೋಡಿದ ನಮ್ಮ ಮಾವ, 'ಹೊಡಿತು ಬಿಡು ನಿನಗೆ ಲಾಟರಿ, ಪಾಸ್ ಆಗಿರ್ತೀಯ' ಎಂದರು. ಅಲ್ಲಿ ಹೋಗಿ ನೋಡಿದರೆ ಮತ್ತೆ ನಾನು ಫೇಲಾಗಿದ್ದೆ. ಆಗ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ನನ್ನನ್ನು ಕರೆಸಿಕೊಂಡು ನೀನು ಪಾಸಾಗಬೇಕಿತ್ತು, ಸರಿಯಾಗಿ ಓದದೆ ಮತ್ತೆ ಫೇಲ್ ಆಗಿದಿಯಲ್ಲ ಎಂದು ಬೇಜಾರು ಮಾಡಿಕೊಂಡು ಬೈದರು. ಸ್ವಾಮೀಜಿಯವರಿಗೆ ನಮ್ಮ ತಂದೆ ಬಗ್ಗೆ ಗೌರವವಿತ್ತು. ಶ್ರೀ ಮಠದ ಭಕ್ತರಾದ ರಾಮೇಗೌಡರ ಮಗನಾಗಿ ನೀನು ಚೆನ್ನಾಗಿ ಓದುತ್ತಿಲ್ಲವಲ್ಲ ಎಂಬ ಬೇಸರದಿಂದ ಕೆಲ ಹೊತ್ತು ಮಾತನಾಡಿದರು. ಅಲ್ಲಿಂದ ಹೊರಟು ಆಮೇಲೆ ಎಲ್ಲಿ ಪಾಸ್ ಮಾಡುತ್ತಾರೆ ಎಂದು ಹುಡುಕುತ್ತಾ ಇದ್ದೆ. ಕೊನೆಗೆ ಹಾಸನಕ್ಕೆ ಹೋಗಿ ಸೇರಿಕೊಳ್ಳುವುದು ಎಂದು ತೀರ್ಮಾನ ಮಾಡಿಕೊಂಡು ನಮ್ಮ ತಂದೆ ಬಳಿ ಹೋಗಿ ಹೇಳಿದೆ. ಅವರು ನಿನ್ನಿಷ್ಟ ಆಯ್ತು ಹೋಗು ಎಂದರು.



ಕೊನೆಗೂ SSLC ಪಾಸಾಗಿದ್ದು



ಚನ್ನರಾಯಪಟ್ಟಣ ತಾಲ್ಲೂಕಿನ ಹೊನ್ನೇನಹಳ್ಳಿ ಗ್ರಾಮದ ಲಿಂಗೇಗೌಡ, ನುಗ್ಗೇಹಳ್ಳಿ ಪಕ್ಕದ ನರಹಳ್ಳಿಯ ಗೋವಿಂದೇಗೌಡ ಎಂಬ ಊರಿನವರಿಬ್ಬರು ಕೂಡಿಕೊಂಡು ಹಾಸನದ ಸಾಲೆಗಾಮೆ ಗೇಟ್ ಬಳಿ 3 ಜನ ಸೇರಿ ಒಂದು ರೂಮ್ ಮಾಡಿಕೊಂಡೆವು. ಗೆಳೆಯರು ತುಂಬಾ ಚೆನ್ನಾಗಿ ಅಡುಗೆ ಮಾಡುತ್ತಿದ್ದರು. ಹಾಸನ ಮತ್ತು ಮೈಸೂರು ರಸ್ತೆಯ ಮಧ್ಯದಲ್ಲಿ ಸಿಗುವ ಮೊಸಳೆ ಅಂತ ಊರಿದೆ. ಆ ಊರಿನ ನಮ್ಮ ಬಂಧುಗಳಾದ ಕಾಳೇಗೌಡ ಎಂಬುವವರ ತಮ್ಮ ನಾಗರಾಜು ಎಂಬುವವರು ಹಾಸನದಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು, ಅವರ ಮನೆಯಲ್ಲಿ ನನಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ಅಲ್ಲಿ ಊಟ ಮಾಡಿಕೊಂಡು ಬಂದು ಈ ಹುಡುಗರು ಇದ್ದ ರೂಮಿನಲ್ಲಿ ಉಳಿದುಕೊಳ್ಳುತ್ತಿದ್ದೆ. ಆ ಸಂದರ್ಭದಲ್ಲಿ ಹಾಸನದ ಪೊಲೀಸ್ ಸ್ಟೇಷನ್ನಲ್ಲಿ ಒಂದು ಲಾಕಪ್ ಡೆತ್ತಾಗುತ್ತದೆ. ಆಗ ಸ್ಟೂಡೆಂಟ್ಸ್ ಯೂನಿಯನ್ನವರೆಲ್ಲಾ ಸೇರಿಕೊಂಡು ಒಂದು ದೊಡ್ಡ ಸ್ಟೈಕ್ ಮಾಡಿದರು. ಜೊತೆಗೆ ಡಿಸಿ ಮತ್ತು ಎಸ್. ಪಿ ಆಫೀಸ್‌ಗೆ ಮುತ್ತಿಗೆ ಹಾಕಿದರು. ಆ ಗುಂಪಿನಲ್ಲಿ ನಾನೂ ಸಹ ಹೋಗಿ ಸ್ಟೈಕ್‌ನಲ್ಲಿ ಭಾಗವಹಿಸಿದೆ ಆಗ ನನ್ನನ್ನೂ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಹುಡುಗರನ್ನು ಪೊಲೀಸ್‌ನವರು ಅರೆಸ್ಟ್ ಮಾಡಿ ಎಸ್ಪಿ ಆಫೀಸ್‌ನಲ್ಲಿ ಕೂರಿಸಿದ್ದರು. ಆಮೇಲೆ ಬಿಟ್ಟು ಕಳಿಸಿದರು. ಹಾಸನದಲ್ಲಿ ರಾಮಕೃಷ್ಣಪ್ಪ ಎಂಬ ಮಾಸ್ಟರ್ ಇದ್ದರು ಅವರ ಹತ್ತಿರ ಮನೆಪಾಠಕ್ಕೆ ಸೇರಿದರೆ ಪಾಸ್ ಮಾಡಿಸುತ್ತಾರೆ ಎಂದು ಎಲ್ಲರೂ ಹೇಳುತ್ತಿದ್ದರು, ಅವರು ಸ್ವಲ್ಪ ಸ್ಟ್ರಿಕ್ಟಾಗಿ ಪಾಠ ಮಾಡುತ್ತಿದ್ದರು, ಕೊನೆಗೆ ಅವರ ಬಳಿ ಸೇರಿಕೊಂಡು ಮೂರನೇ ಬಾರಿಗೆ ಎಸ್‌ಎಸ್‌ಎಲ್‌ಸಿಯನ್ನು ಪಾಸ್ ಮಾಡಿಕೊಂಡದ್ದಾಯ್ತು.

ಕಾಲೇಜು ರಂಗ



ಎಸ್‌ಎಸ್‌ಎಲ್ಸಿ ಪಾಸ್ ಮಾಡಿಕೊಂಡ ನಂತರ ಮತ್ತೆ ಪಿಯುಸಿಗೆ ಮೈಸೂರು ಮಹಾಜನ ಕಾಲೇಜನ್ನು ಸೇರಿದೆ. ಸುಮಾರು ಆರು ತಿಂಗಳುಗಳು ಕಾಲ ಮಹಾಜನ ಕಾಲೇಜಿನಲ್ಲಿ ಓದಿದೆ. ಆನಂತರ ಅಲ್ಲಿ ಯಾಕೋ ನನಗೆ ಸರಿ ಹೋಗಲಿಲ್ಲ ಆದ್ದರಿಂದ ಮತ್ತೆ ವಾಪಸ್ ನಾಗಮಂಗಲಕ್ಕೆ ಬಂದೆ. ನಾಗಮಂಗಲದಲ್ಲಿ ಸರ್ಕಾರಿ ಜೂನಿಯರ್ ಕಾಲೇಜ್ ಕಲಾ ವಿಭಾಗಕ್ಕೆ ಸೇರಿದೆ. ಅಲ್ಲಿ ಬಿ.ಎಸ್ ಸೋಮಸುಂದರ್ ಎಂಬ ಅರ್ಥಶಾಸ್ತ್ರ ಉಪನ್ಯಾಸಕರು, ಹೆಚ್‌ಎಸ್ ರಾಜಗೋಪಾಲ್ ಎಂಬ ಇನ್ನೊಬ್ಬರು ಇದ್ದರು. ಪುಟ್ಟಲಿಂಗಯ್ಯರೆಂಬ ಪ್ರಿನ್ಸಿಪಾಲರಿದ್ದರು. ಪ್ರತಿದಿನ ಅವರು ಮೈಸೂರಿಂದ ಬರುತ್ತಿದ್ದರು. ನೋಡಿ ನನ್ನ ಗ್ರಹಚಾರಕ್ಕೆ ನಾನು ಎಸ್‌ಎಸ್‌ಎಲ್‌ಸಿಗೆ ಹೋದಾಗಲೇ ಪಬ್ಲಿಕ್ ಎಕ್ಸಾಮ್ ಬಂತು. ಫಸ್ಟ್ ಇಯರ್ ಪಿಯುಸಿಯನ್ನು ಆರು ತಿಂಗಳು ಮುಗಿಸಿದ್ದ ಆ ಸಮಯದಲ್ಲಿ ಸೆಕೆಂಡ್ ಪಿಯುಸಿಗೆ ಪಬ್ಲಿಕ್ ಎಕ್ಸಾಮ್ ಬಂದು ಬಿಡ್ತು. ಸೆಕೆಂಡ್ ಪಿಯುಸಿಯಲ್ಲಿ ಕಾಲೇಜ್ ಯೂನಿಯನ್ ಅಧ್ಯಕ್ಷ ಸಹ ಆದೆ. ಪಬ್ಲಿಕ್ ಎಕ್ಸಾಮ್ ಇದ್ದಿದ್ದರಿಂದ ಸೆಕೆಂಡ್ ಪಿಯುಸಿನಲ್ಲಿ ಪುನಃ ಫೇಲಾದೆ. ಸೆಕೆಂಡ್ ಪಿಯುಸಿಯಲ್ಲಿ ನಾನು ಒಂದು ಕೆಲಸ ಮಾಡುತ್ತಿದ್ದೆ, ಅದೇನೆಂದರೆ, ಲೆಕ್ಚರ್‌ಗಳಿಗೆ ನೇರಾನೇರ ಕೊಶ್ಚನ್ ಕೇಳುತ್ತಿದ್ದೆ. ಅವರು ನಾನು ಏನಾದರೂ ಕೇಳುತ್ತೇನೆ ಎಂಬ ಭಯದಿಂದ ಚೆನ್ನಾಗಿ ಓದಿಕೊಂಡು ಬರುತ್ತಿದ್ದರು. ಅವರು ನನ್ನನ್ನು ಏನೂ ಕೇಳಬಾರದು ಎಂಬ ಉದ್ದೇಶದಿಂದ ನಾನೇ ಪ್ರಶ್ನೆ ಕೇಳಿ ಹೆದರಿಸುತ್ತಿದ್ದೆ.

ನಂತರ ಪಿಯುಸಿ ಪಾಸ್ ಮಾಡಿಕೊಳ್ಳಲು ಮೈಸೂರು ಮಹಾಜನ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಪುಟ್ಟಮಾದಪ್ಪ ಅಂತ ಇದ್ದರು. ಇಂಗ್ಲಿಷ್ ಸಬ್ಜೆಕ್ಟ್ ಪಾಠ ಮಾಡಿ



ಬಹಳ ಹೆಸರು ಸಂಪಾದಿಸಿದ್ದರು. ಅವರ ಹತ್ತಿರ ಸೇರಿದರೆ ಪಾಸ್ ಮಾಡಿಸುತ್ತಾರೆ ಎಂದು ಸುಮಾರು ಗ್ರಾಮೀಣ ಹುಡುಗರು ಹೇಳುತ್ತಿದ್ದರು. ಕೊನೆಗೆ ಅವರ ಹತ್ತಿರ ಸೇರಿದೆ. ಏಕೆಂದರೆ ಗ್ರಾಮೀಣ ಮಕ್ಕಳ ಪಾಲಿಗೆ ಕಬ್ಬಿಣದ ಕಡಲೆಯಾದ ಆಂಗ್ಲ ಭಾಷೆಯನ್ನು ಹೇಗೆ ಸರಳೀಕೃತಗೊಳಿಸಿ ಪಾಸು ಮಾಡಿಸಬೇಕೆಂದು ಪುಟ್ಟಮಾದಪ್ಪ ಅರಿತಿದ್ದರು. ಕೊನೆಗೆ ಅವರ ಆಶೀರ್ವಾದದಿಂದ ಪಿಯುಸಿಯನ್ನು ಪಾಸ್ ಮಾಡಿಕೊಂಡೆ.

ನಾಗಮಂಗಲದಲ್ಲಿ ಕಾಲೇಜು ಓದುವಾಗ ನನ್ನ ಬಳಿ ಬುಲೆಟ್ ಎಯ್ಡಿ ಬೈಕು ಇತ್ತು. ಕಾಲೇಜಿನ ಹುಡುಗಿಯರೆಲ್ಲಾ ನನ್ನ ಕಂಡರೆ ಹೆದರಿಕೊಂಡು ಓಡುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ನಾನು ಬೈಕ್‌ಗೆ ಸೈಲೆನ್ಸರ್ ಪೈಪ್ ಅಲ್ಟೇಷನ್ ಮಾಡಿಸಿದ್ದೆ. ಬೈಕು ರೋಡಿಗಿಳಿದರೆ ಟಪ ಟಪ ಎಂಬ ಸೌಂಡು ಯುವಕರನ್ನು ನನ್ನತ್ತ ಸೆಳೆಯುತ್ತಿತ್ತು. ಹೆಂಗೆಳೆಯರು ಬೇಗ ಜಾಗ ಖಾಲಿ ಮಾಡುತ್ತಿದ್ದರು. ಬೈಕ್ ಹ್ಯಾಂಡಲನ್ನು ಮಾಮೂಲಿಗಿಂತ ಎರಡು ಅಡಿ ಎತ್ತರಕ್ಕೆ ಏರಿಸಿದ್ದೆ. ನನ್ನ ಅವಾಂತರ ನನ್ನಪ್ಪನ ಕಿವಿಗೆ ಬಿದ್ದಿತ್ತು. ಬೆಂಗಳೂರಿನ ಮಿನರ್ವಾ ಸರ್ಕಲ್ ಬಳಿಯ ಬೈಕ್ ಷೋರೂಮ್‌ನಲ್ಲಿ ಆಗತಾನೆ ಮಾರುಕಟ್ಟೆಯಲ್ಲಿ ಹವಾ ಎಬ್ಬಿಸಿದ್ದ ಹೊಸ ಚೇತಕ್ ಸ್ಕೂಟರ್ ಕೊಡಿಸಿದರು. ನನ್ನಪ್ಪ ಸ್ವಲ್ಪ ಗದರಿದರೂ, ನನ್ನ ಬಗ್ಗೆ ವಿಶೇಷ ಕಾಳಜಿ ಮತ್ತು ಮಮತೆಯನ್ನು ಈ ರೀತಿ ವ್ಯಕ್ತಪಡಿಸುತ್ತಿದ್ದರು. ಆದರೂ ನನ್ನಪ್ಪ ನನ್ನ ಈಗಿನ ಬೆಳವಣಿಗೆಯನ್ನು ಕಾಣಲು ಈಗ ಇರಬೇಕಿತ್ತು. ಎಷ್ಟು ಸಂತೋಷ ಪಡುತ್ತಿದ್ದರೋ ಏನೋ.. ಹೆತ್ತವರ ಮುಂದೆ ಮಕ್ಕಳು ಬೆಳೆಯಬೇಕು ಎನ್ನುವುದು ಇದಕ್ಕೇ ಅಲ್ಲವೇ..?

ಆ ಬೈಕನ್ನು ಹತ್ತಿ ನನ್ನೂರಿನಿಂದ ಬೆಂಗಳೂರಿಗೆ ಗೆಳೆಯನೊಟ್ಟಿಗೆ ಬೆಳಿಗ್ಗೆ ಕೋಳಿ ಕೂಗುವ ಮುನ್ನ ಹೊರಟು ಚಳಿಯನ್ನು ಲೆಕ್ಕಿಸದೇ ಜಾಲಿ ರೈಡು ಮಾಡಿಕೊಂಡು ಬೆಂಗಳೂರಿನ ಆಯಕಟ್ಟಿನ ಜಾಗದಲ್ಲೆಲ್ಲಾ ಸುತ್ತಾಡಿ ಸಂಜೆಗೆ ಊರ ತಲುಪುತ್ತಿದ್ದೆವು. ಬರೋಬ್ಬರಿ ಒಟ್ಟು ಅಪ್ & ಡೌನ್ ಮುನ್ನೂರು ಕಿಲೋಮೀಟರ್ ಹೋಗಿ ಬರುತ್ತಿದ್ದ ಜರ್ನಿ. ಈವಾಗ ನೆನೆಸಿಕೊಂಡರೆ ಅಚ್ಚರಿ ವ್ಯಕ್ತವಾಗುತ್ತದೆ. ಇದನ್ನು ನೀವೂ ನಂಬಲಾರಿರಿ. ಬೆಂಗಳೂರು ಮಂಗಳೂರು ರಾಷ್ಟ್ರೀಯ ಹೆದ್ದಾರಿಯಾಗಿದ್ದರೂ, ಸಿಂಗಲ್ ರೋಡಿನಲ್ಲಿ ಹೋಗಿ ಬರುವ ಸಾಹಸದ ದಿನಗಳನ್ನು ನೆನೆದರೆ ಇವತ್ತಿಗೂ ಅಚ್ಚರಿ ಮೂಡುತ್ತದೆ.

ಕಾಲೇಜಿನಲ್ಲೊಂದು ರಾದ್ಧಾಂತ



ಶ್ರೀ ಆದಿಚುಂಚನಗಿರಿ ಕಾಲೇಜಿನಲ್ಲಿ ನಾನು ಬಿ.ಎ ಓದುವಾಗ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಗೂ ನನಗೂ ಸ್ವಲ್ಪ ಮನಸ್ಥಾಪವಾಗಿತ್ತು. ಕಾರಣ ಏನೆಂದರೆ, ಶ್ರೀಮಠದಲ್ಲಿದ್ದುಕೊಂಡು ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಮಠದ ನಿಯಮದಂತೆ ಹಣೆಗೆ ವಿಭೂತಿ ಇಟ್ಟುಕೊಂಡು ಶಿಸ್ತುಬದ್ಧವಾಗಿ ಕಾಲೇಜಿಗೆ ಬರುತ್ತಿದ್ದರು. ಹೊರಗಿನಿಂದ ಬಂದು ವಿದ್ಯಾರ್ಜನೆ ಮಾಡುತ್ತಿದ್ದ ನಮಗೂ ಕೂಡ ನೋಟಿಸ್ ನೀಡಲಾಗಿತ್ತು. ಕಾರಣವೇನೆಂದರೆ ಕಾಲೇಜಿಗೆ ಬರುವ ಎಲ್ಲರೂ ತಲೆ ಕ್ರಾಪ್ ಮಾಡಿಸಬೇಕು. ವಿಭೂತಿಯನ್ನು ಹಣೆಗೆ ಹಚ್ಚಲೇಬೇಕು ಎಂದು ಹೇಳಿದ್ದರು. ಇದನ್ನ ದಿನಂಪ್ರತಿ ಟೀಚರ್ಸ್‌ಗಳು ಸ್ಟೂಡೆಂಟ್ಸ್‌ಗಳಿಗೆ ಕೇಳೋಕೆ ಶುರು ಮಾಡಿದರು. ನಾವು ಕಾಲೇಜಿನ ಹಂತದಲ್ಲಿ ಇದೆಲ್ಲ ಹೇಗೆ ಪಾಲಿಸೋಕೆ ಆಗುತ್ತದೆ ಎಂದು ತಕರಾರು ತೆಗೆದೆ. ನನ್ನ ಗೆಳೆಯರಿಗೂ ಇಷ್ಟ ಇರಲಿಲ್ಲ, ಆಗ ಟೀಚರ್ಸ್‌ಗೂ ಸೂಡೆಂಟ್ಸ್‌ಗಳಿಗೂ ದೊಡ್ಡ ಮಟ್ಟದ ಗಲಾಟೆ ಆಯ್ತು. ಆಗ ಬಿ.ಎ ಸೆಕೆಂಡ್ ಇಯರ್ ಕೊನೆಯ ಹಂತದ ಸಂದರ್ಭದಲ್ಲಿ ಇದ್ದೆ. ಒಂದು ದಿನ ಟೀಚರ್ಸ್‌ಗಳನ್ನೆಲ್ಲ ರೂಮ್‌ನಲ್ಲಿ ಕೂಡಿಹಾಕಿ ಬೀಗ ಹಾಕಿದ್ದೆವು, ಲೆಕ್ಚರ್ಸ್‌ಗಳು ಸುಮಾರು ನಾಲ್ಕು ಗಂಟೆಗಳು ಕ್ಲಾಸ್ ರೂಮ್ ಒಳಗಡೆನೇ ಬಂಧಿಯಾಗಿದ್ದರು. ಆಮೇಲೆ ಬೆಳ್ಳೂರು ಪೊಲೀಸ್‌ನವರು ಬಂದು ಸೂಡೆಂಟ್ಸ್‌ಗಳಿಗೆಲ್ಲ ಲಾಠಿಚಾರ್ಜ್ ಮಾಡಿ ಓಡಿಸಿ ಬೀಗ ತೆಗೆದರು. ಸುಮಾರು ಜನ ಮುಖಂಡರು, ಸ್ವಾಮೀಜಿಯವರೆಲ್ಲ ಸೇರಿ ಈ ಶಿವರಾಮೇಗೌಡ ಮಠಕ್ಕೆ ಕೆಟ್ಟ ಹೆಸರು ತರುತ್ತಿದ್ದಾನೆ, ಇವನಿಂದಲೇ ಇಷ್ಟೆಲ್ಲಾ ರಾದ್ಧಾಂತ ಎಂದು ಹೇಳಿ, ನನ್ನ ವಿರುದ್ಧ ತಿರುಗಿ ಬಿದ್ದರು. ನಂತರ ಕಾಲೇಜಿನಿಂದ ನನ್ನನ್ನು ಅಮಾನತ್ತು ಮಾಡಿದರು. ಆಗ ನಾನು ಮಠದ ವಿರುದ್ಧ ಹೋಗಿ ಒಂದು ಕೇಸ್ ಹಾಕಿಸಿ ನೋಟೀಸ್ ಜಾರಿ ಮಾಡಿಸಿದೆ. ಇಡೀ ಒಕ್ಕಲಿಗ ಸಮಾಜದ ಲೀಡರ್‌ಗಳೆಲ್ಲ ಬಂದು ನ್ಯಾಯ ಮಾಡಿದರು. ನಮ್ಮ ತಂದೆ ನಮ್ಮ ಮಾವಂದಿರೆಲ್ಲ ಸಹ ಬಂದರು, ನಂತರ ಕೆಲವು ಹಿರಿಯರು ಏನೋ ಹುಡುಗರು ತಪ್ಪು ಮಾಡುತ್ತಾರೆ ಅದಕ್ಕೆ ಅಮಾನತು ಮಾಡುವುದು ಬೇಡ ಎಂದು ಸ್ವಾಮೀಜಿಯವರಿಗೆ ವಿನಂತಿಸಿದರು. ಆಗ ನಾನು ಸ್ವಾಮೀಜಿಯವರಿಗೆ ಶರಣಾಗಿ, ಕ್ಷಮೆ ಕೇಳಿ, ಕೇಸ್ ವಾಪಸ್ ತಗೊಂಡೆ. ಮತ್ತೆ ಫೈನಲ್ ಇಯರ್‌ಗೆ ಯಾಕೋ ಅಲ್ಲೇ ಮುಂದುವರಿಯಲು ನನಗೆ ಇಷ್ಟವಾಗಲಿಲ್ಲ. ಆದ್ದರಿಂದ ನಾನೇ ಟಿಸಿ ಪಡೆದು ಹಾಸನಕ್ಕೆ ಹೋದೆ. ನನ್ನ ಜೊತೆ ವ್ಯಾಸಂಗ ಮಾಡುತ್ತಿದ್ದ ಹತ್ತು ಜನ ಗೆಳೆಯರು ನನ್ನ ನಡೆಯನ್ನೇ ಬೆಂಬಲಿಸಿದರು. ಅವರೊಂದಿಗೆ ಹಾಸನದ ಸರ್ಕಾರಿ ಕಾಲೇಜಿನಲ್ಲಿ ಅಂತಿಮ ಬಿಎ ವಿದ್ಯಾರ್ಥಿಯಾಗಿ ಪ್ರವೇಶಾತಿ ಪಡೆದೆ. ಅಲ್ಲಿ ಕಾಲೇಜಿನಲ್ಲಿ ವ್ಯಾಸಂಗಕ್ಕಿಂತ ಹೆಚ್ಚಾಗಿ ಗೆಳೆಯರ ಜೊತೆ ಸುತ್ತಾಟ ಮತ್ತು ಕಾಲೇಜು ಯೂನಿಯನ್ ಚುನಾವಣೆಯಲ್ಲಿ ಸಕ್ರಿಯನಾದೆ. ನನ್ನ ಮುಖಂಡತ್ವದಲ್ಲೇ ಪಾಂಡುರಂಗ ವಿಠಲ ಎಂಬುವನನ್ನು ಕಾಲೇಜು ಅಧ್ಯಕ್ಷನನ್ನಾಗಿ ಆರಿಸಿದೆವು.



ನನ್ನ ಪೂಜ್ಯ ತಂದೆಯವರ ಹುಟ್ಟು



ನಮ್ಮ ತಂದೆಯವರು ಕಂಟ್ರಾಕ್ಟರ್ ಕೆಲಸದ ಜೊತೆಗೆ ಸಾಮಿಲ್, ಬಟ್ಟೆ ಅಂಗಡಿ, ಜಾಗರಿ ಷುಗರ್ ತಯಾರಿಸುವ ಕಾರ್ಖಾನೆ, ಗೊಬ್ಬರದ ಅಂಗಡಿ ನಡೆಸುತ್ತಿದ್ದರು. ಸದಾ ಚಟುವಟಿಕೆಯಿಂದ ಕೂಡಿದ್ದರು. ನನಗೆ ಪಿಯುಸಿಯಿಂದ ಸ್ವಲ್ಪ ಬಿಸಿನೆಸ್ ಕಡೆಗೂ ಆಸಕ್ತಿ ಇತ್ತು. ಅವಾಗಲೇ ನಮ್ಮ ಖರ್ಚಿಗೆ, ಐದು ಸಾವಿರ, ಹತ್ತು ಸಾವಿರಕ್ಕೆ ತೊಂದರೆ ಇರಲಿಲ್ಲ. ಹೆಚ್ಚಿಗೆ ಬೇಕು ಎನಿಸಿದಾಗ ನಮ್ಮ ತಂದೆಯವರ ಜೇಬಿನಿಂದ ದುಡ್ಡನ್ನು ಕದಿಯುವ ಚಾಳಿಯೂ ಸಹ ನನಗೆ ಇತ್ತು. ಆ ವಯಸ್ಸಿನಲ್ಲಿ ಇಂತಹ ತಪ್ಪುಗಳೆಲ್ಲ ಮಾಮೂಲು. ವಯೋಸಹಜ ಗುಣ ಕೂಡ. ಆ ನಂತರ ಈ ರೀತಿ ಮಾಡಬಾರದು ಎಂದು ಅನಿಸಿದ್ದೂ ಉಂಟು. ಆಮೇಲೆ ನಾನೇ ಸ್ವಲ್ಪ ರೆಸ್ಪಾನ್ಸಿಬಿಲಿಟಿ ತಗೊಂಡು ಹೀಗೆಲ್ಲ ಮಾಡಬಾರದು ಎಂದು ತೀರ್ಮಾನ ಮಾಡಿ ಆ ರೀತಿಯ ಕೆಲಸ ಮಾಡುವುದನ್ನು ಬಿಟ್ಟುಬಿಟ್ಟೆ ಚುಂಚನಗಿರಿಯ ಶ್ರೀಮಠದ ಕಾಲೇಜಿಗೆ ಸೇರಿಕೊಂಡೆ. ಆ ಸಂದರ್ಭದಲ್ಲಿ ನಮ್ಮ ತಂದೆಯವರ ಬಳಿ ಫಿಯೆಟ್ ಕಾರ್ ಮತ್ತು ಅಂಬಾಸಿಡರ್ ಎರಡು ಕಾರ್ ಇದ್ದು, ನಾನು ಒಂದೊಂದು ದಿನ ಒಂದೊಂದು ಕಾರನ್ನು ತೆಗೆದುಕೊಂಡು ಕಾಲೇಜಿಗೆ ಹೋಗುತ್ತಿದ್ದೆ. ಆ ಸಂದರ್ಭದಲ್ಲಿ ನನಗೆ ತಾಲೂಕು ಪಂಚಾಯಿತಿ ಚುನಾವಣೆಗೆ ನಿಲ್ಲಬೇಕು ಎಂಬ ಭಾರಿ ಆಸೆ ಇತ್ತು. ಹೆಚ್.ಟಿ. ಕೃಷ್ಣಪ್ಪನವರು ನನಗೆ ಗ್ರೀನ್ ಸಿಗ್ನಲ್ ಕೊಡಲಿಲ್ಲ, ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಹೆಚ್.ಟಿ. ಕೃಷ್ಣಪ್ಪನವರು ಮತ್ತೆ ರಾಜಕೀಯಕ್ಕೆ ಬಂದು ತಾಲೂಕು ಬೋರ್ಡ್‌ಗೆ ನಿಂತರು, ಆಗ ನಮ್ಮ ತಂದೆಯವರು ಸಹ ಚುನಾವಣೆಯಲ್ಲಿ ನಿಂತು ಹೆಚ್.ಟಿ. ಕೃಷ್ಣಪ್ಪ ಹಾಗೂ ನಮ್ಮ ತಂದೆ ಈ ಚುನಾವಣೆಯಲ್ಲಿ ಇಬ್ಬರೂ ಗೆದ್ದರು. ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ನಮ್ಮ ತಂದೆಯವರು 17 ವರ್ಷ ಇದ್ದರು. ಅವರಿಗೆ ಎಲ್ಲಾ ಕಿರಿಯ, ಹಿರಿಯ ರಾಜಕೀಯ ನಾಯಕರ ಜೊತೆಗೆ ಒಳ್ಳೆಯ ಒಡನಾಟವಿತ್ತು. ಉದಾಹರಣೆಗೆ ಚಿಗರಿಗೌಡರೊಟ್ಟಿಗೆ, ಕೃಷ್ಣಪ್ಪನವರೊಟ್ಟಿಗೆ, ಕರಡಹಳ್ಳಿ ಕೆ. ಸಿಂಗರಿಗೌಡರೊಟ್ಟಿಗೆ ಹಾಗೂ ಎಸ್.ಎಂ. ಕೃಷ್ಣರವರೊಟ್ಟಿಗೆ ಹೀಗೆ ಮಂಡ್ಯ ಜಿಲ್ಲೆಯ ಅನೇಕ ನಾಯಕರೊಂದಿಗೆ ಒಳ್ಳೆಯ ಒಡನಾಟವಿತ್ತು. ಮಂಡ್ಯ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಚುನಾವಣೆಯಲ್ಲಿ ಎಸ್.ಎಂ. ಕೃಷ್ಣರವರು ನಮ್ಮ ತಂದೆಗೆ ಫೋನ್ ಮಾಡಿ ಪಾಂಡವಪುರದ ಹಲಗೇಗೌಡರನ್ನು ಅಧ್ಯಕ್ಷರನ್ನಾಗಿ ಮಾಡಲು ಶಿಫಾರಸ್ಸು ಮಾಡಿದ್ದರು. ಆ ಸಂದರ್ಭ ನನಗೂ ಸಹ ಗೊತ್ತು. ತಂದೆಯವರಿಗೆ ರಾಜಕೀಯದಲ್ಲಿ ಒಳ್ಳೆಯ ಹೆಸರಿತ್ತು. ನಾನು ಕಾಲೇಜ್ ದಿನಗಳಲ್ಲಿ ಇರುವಾಗ ಸ್ವತಂತ್ರ ಪಾರ್ಟಿಯಲ್ಲಿದ್ದೆ, ಆ ಸಂದರ್ಭದಲ್ಲಿ ತುಂಬಾ ಆಕ್ಟಿವ್ ಆಗಿ ಓಡಾಡುತ್ತಿದ್ದೆ. ಸಿ.ಎಂ ಇಬ್ರಾಹಿಂ ಸಾಹೇಬರು ಎಷ್ಟೋ ಸಲ ನಮ್ಮ ಮನೆಗೆ ಬಂದು ಆತಿಥ್ಯವನ್ನು ಸ್ವೀಕಾರ ಮಾಡಿ ಹೋಗಿದ್ದಾರೆ. ಅವರೊಟ್ಟಿಗೂ ನನಗೆ ಒಳ್ಳೆಯ ಒಡನಾಟವಿತ್ತು. ಈಗಲೂ ಇದೆ.

ಯ್ಯೂತ್ ಕಾಂಗ್ರೆಸ್ ಸ್ಪೆಷಲಿಸ್ಟ್

ಶ್ರೀಮತಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿಯ ನಂತರ ಮುಖ್ಯಮಂತ್ರಿ ಡಿ.ದೇವರಾಜ ಅರಸು ರವರು ಚಿಕ್ಕಮಗಳೂರು ಲೋಕಸಭಾ ಚುನಾವಣೆಗೆ ನಿಲ್ಲಲು ಆಹ್ವಾನಿಸುತ್ತಾರೆ. ಅವರ ಸಲಹೆ ಮೇರೆಗೆ ಚುನಾವಣೆಗೆ ನಿಂತ ಇಂದಿರಾಗಾಂಧಿ ಜನತಾ ಪಕ್ಷದ ವೀರೇಂದ್ರಪಟೀಲರ ವಿರುದ್ಧ ಚುನಾವಣೆಯಲ್ಲಿ ಜಯಗಳಿಸುತ್ತಾರೆ. ಆ ಚುನಾವಣೆಯ ಪ್ರಚಾರ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ನಮ್ಮ ತಾಲೂಕಿನ ಕಾಂಗ್ರೆಸ್ ಘಟಕದಿಂದ ಜೊತೆ ಹೆಚ್.ಟಿ. ಕೃಷ್ಣೇಗೌಡ ಹಾಗೂ ಮುಖಂಡರುಗಳ ಜೊತೆ ಚಿಕ್ಕಮಗಳೂರಿಗೆ ಪ್ರಯಾಣ ಬೆಳೆಸಿದೆ. ನಾಗಮಂಗಲ ತಾಲೂಕು ಹೇಮಾವತಿ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದ ಗೋಪಾಲಗೌಡರವರ ಕಾರ್ ತೆಗೆದುಕೊಂಡು ಕೆಲವರು ಸ್ನೇಹಿತರನ್ನು ಜೊತೆಗೆ ಕರೆದುಕೊಂಡು ಬಾಬಾಬುಡನ್ ಗಿರಿ ಬೆಟ್ಟಕ್ಕೆ ಹೋಗಿ ಅಲ್ಲಿ ಸುತ್ತಾಡಿಕೊಂಡು ನಂತರ ಚುನಾವಣಾ ಪ್ರಚಾರಸಭೆಯಲ್ಲಿ ಪಾಲ್ಗೊಂಡೆವು. ಎಲ್ಲ ಮುಗಿದ





ನಂತರ ನಮ್ಮ ಜಿಲ್ಲೆಯ ಸ್ಪೀಕರ್ ಆಗಿದ್ದ ಕೆ.ಆರ್.ಪೇಟೆ ಕೃಷ್ಣ ಅವರ ಮಾವನ ಮನೆ ಭದ್ರಾವತಿಗೆ ಹೋಗಿ ತಂಗಿದೆವು. ಕೃಷ್ಣ ಅವರು ಸಂಜೆ ಬಂದರು ನಾವು ಮಲಗಿರುವುದನ್ನು ಕಂಡು ಇವರೆಲ್ಲ ಯಾರು ಎಂದರು ಕೇಳಿದರು, ಆಗ ಇವರೆಲ್ಲ ನಾಗಮಂಗಲದವರು ಎಂದು ಆ ಮನೆಯವರು ಹೇಳಿದರು, ಯಾಕೆ ಕೂಡಿದ್ದೀಯ ಇವರನ್ನು ಎಂದು ಹಾಸ್ಯ ಮಾಡಿದರು, ಏಕೆಂದರೆ, ಅವರ ಎಂಎಲ್ಎ ಎಲೆಕ್ಷನ್‌ನಲ್ಲಿ ನಾವು ಅವರ ವಿರೋಧದ ಪಾರ್ಟಿಯಲ್ಲಿದ್ದೆವು. ಆಮೇಲೆ



ಬೆಳಗ್ಗೆ ಮನೆಯಲ್ಲೇ ಕಾಫಿ ತಿಂಡಿ ಕೊಡಿಸಿದರು, ಕಾಫಿ, ತಿಂಡಿ ಎಲ್ಲಾ ಮುಗಿಸಿಕೊಂಡು ಕೃಷ್ಣರವರಿಗೆ ಬರುತ್ತೇವೆ ಸರ್ ಎಂದು ಹೇಳಿ ಅಲ್ಲಿಂದ ಹೊರಟೆವು. ಆ ಸಂದರ್ಭದಲ್ಲಿ ನನಗೆ ಬೆಂಗಳೂರಿನ ಉತ್ತರಹಳ್ಳಿ ಕ್ಷೇತ್ರದ ಕಾಂಗ್ರೆಸ್ ನಾಯಕ ಎಸ್. ರಮೇಶ್ ಸಿಕ್ಕಿದರು ಅವರ ಜೊತೆ ಹೋಗಿ 1978ರಲ್ಲಿ ಯೂತ್ ಕಾಂಗ್ರೆಸ್‌ಗೆ ಜಾಯಿನ್ ಆದೆ. ಯೂಥ್ ಕಾಂಗ್ರೆಸ್‌ಗೆ ಸೇರಿದಾಗ ನಾನು ತುಂಬಾ ಜೋರಾಗಿ ಓಡಾಡುತ್ತಿದ್ದೆ. ಆ ಸಂದರ್ಭದಲ್ಲಿ ಯೂತ್ ಕಾಂಗ್ರೆಸ್ ತುಂಬಾ ಸ್ಟ್ರಾಂಗಾದ ವಿದ್ಯಾರ್ಥಿ ಸಂಘಟನೆಯಾಗಿತ್ತು.. ನನ್ನನ್ನ ಕರೆದುಕೊಂಡು ಹೋಗಿ ಎಸ್. ರಮೇಶ್ ಅವರು ರಾಜ್ಯ ಸಮಿತಿಯ ಖಜಾಂಚಿಯನ್ನಾಗಿ ಮಾಡಿದರು.. ಆಗ ನಾನು ಇನ್ನೂ ಆಕ್ಟಿವ್ ಆಗಿ ಓಡಾಡೋಕೆ ಶುರು ಮಾಡಿದೆ. ಆ ಸಂದರ್ಭದಲ್ಲಿ ಡಿ.ಕೆ ಶಿವಕುಮಾರ್, ಶ್ರೀನಿವಾಸ ಪ್ರಸಾದ್ ಅವರು ಸಹ ಪರಿಚಯವಾದರು. ಚಿತ್ರದುರ್ಗದ ಮಾಜಿ ಲೋಕಸಭಾ ಸದಸ್ಯರಾದ ಕೆ. ಮಲ್ಲಣ್ಣರವರ ಅಳಿಯ ಮರಿ ಬಿ.ಎಲ್. ಗೌಡ ಎಂದು ಇದ್ದರು. ನಾನು ಬೆಂಗಳೂರಿಗೆ ಹೋದಾಗ ಅದೇ ಕೊಠಡಿಯಲ್ಲಿ ಉಳಿಯುತ್ತಿದ್ದೆ. ಬೆಂಗಳೂರಿನ ಜನರಲ್ ಹಾಸ್ಟೆಲ್‌ಗೆ ಆ ಸಂದರ್ಭದಲ್ಲಿ ಬೈಕ್‌ನಲ್ಲಿ ಕೊತ್ವಾಲ್ ರಾಮಚಂದ್ರ ಬಂದು ಹೋಗುತಿದ್ದರು, ಅವರು ಸಹ ನನಗೆ ಪರಿಚಯವಾದರು. ಸಿಕ್ಕಾಗ ಏನ್ ಶಿವರಾಮ್ ಗೌಡ್ರೇ ಅನ್ನೋರು. ಹೀಗೆ ಸ್ವಲ್ಪ ದಿನ ಜನರಲ್ ಹಾಸ್ಟೆಲ್‌ನಲ್ಲಿ ಸಹ ಇದ್ದೆ ಆಮೇಲೆ ಪದವಿಯ ಕೊನೆಯ ವರ್ಷದ ವ್ಯಾಸಂಗಕ್ಕಾಗಿ ಪುನಃ ಹಾಸನಕ್ಕೆ ಹೋದೆ. ಆಗಲೂ ಸಹ ಸರಿಯಾಗಿ ಕಾಲೇಜಿಗೆ ಹೋಗುತ್ತಿರಲಿಲ್ಲ, ಅಟೆಂಡೆನ್ಸ್ ಹಾಕೋಕೆ ಒಂದು ಗುಂಪನ್ನೇ ರೆಡಿಮಾಡಿ ಇಟ್ಟಿದ್ದೆ. ಚನ್ನರಾಯಪಟ್ಟಣದಿಂದ ಬರುತ್ತಿದ್ದ ಎಲ್ಲಾ ಹುಡುಗರು ನಾನು ಹೇಳಿದ ಹಾಗೆ ಕೇಳುತ್ತಿದ್ದರು. ಕಾಲೇಜಿಗೆ ನಾನು ಒಂದೊಂದು ದಿನ ಮೋಟಾರ್ ಬೈಕ್‌ನಲ್ಲಿ, ಒಂದೊಂದು ದಿನ ಕಾರಿನಲ್ಲಿ ಹೋಗುತ್ತಿದ್ದೆ. ನಿನ್ನ ಪರೀಕ್ಷೆಯನ್ನು ಗುಪ್ತವಾಗಿ ನಾನು ಬರೆದುಕೊಡುತ್ತೇನೆ. ಈ ಕಾಲೇಜಿನಲ್ಲಿ ಆ ವ್ಯವಸ್ಥೆಯೂ ಇದೆ ಎಂದು ದುಂಬಾಲು ಬೀಳುವ ಯುವಕರಿಗೇನೂ ಕಡಿಮೆ ಇರಲಿಲ್ಲ. ನಾನು ಅವರಿಗೆ ನಾನೇನು ಗೌರ್ಮೆಂಟ್ ಕೆಲಸಕ್ಕೆ ಸೇರಲ್ಲ. ನಾನು ಪಾಸಾಗಿ ಸರ್ಟಿಫಿಕೇಟ್ ತಗೊಂಡು ಏನು ಮಾಡಲಿ ಬೇಡ ಕಣ್ರೋ ಎಂದು ಹೇಳಿ ಪರೀಕ್ಷೆಗೆ ಕೂರಲಿಲ್ಲ. ಒಟ್ಟಿನಲ್ಲಿ ಆ ಟರ್ಮ್ ಮುಗಿಸಿದೆ. ಅಷ್ಟರಲ್ಲಾಗಲೇ ಟಿಎಪಿಸಿಎಂಎಸ್ ಡೈರೆಕ್ಟರ್ ಆಗಿದ್ದೆ. ಯೂತ್ ಕಾಂಗ್ರೆಸ್‌ನಲ್ಲಿ ಟ್ರೆಸರರ್ ಕೂಡ ಆದೆ. ಯೂತ್ ಕಾಂಗ್ರೆಸ್‌ನಲ್ಲಿ ಇದ್ದಿದ್ದರಿಂದ ವಾರದಲ್ಲಿ ನಾಲ್ಕೈದು ದಿನ ಬೆಂಗಳೂರಲ್ಲೂ ಇರುತ್ತಿದ್ದೆ. ನಾನು ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಘಟನೆಯಲ್ಲಿ ತೊಡಗಿದೆ. ಇಲ್ಲಿಂದ ನನ್ನ ರಾಜಕೀಯ ಪರ್ವ ಪ್ರಾರಂಭ ಎನ್ನಬಹುದು.–



ಕೆ.ಆರ್.ಪೇಟೆ ಕೃಷ್ಣ



ವೀರೇಂದ್ರ ಪಾಟೀಲರು



ಎಸ್. ರಮೇಶ್

ಜಿಲ್ಲಾ ಪರಿಷತ್ ಚುನಾವಣೆ ಮತ್ತು ಗೆಲುವಿನ ನಗೆ





ಟಿ.ಬಿ. ಜಯಚಂದ್ರ ಎಂಎಲ್ಎ, ಎಲ್ಆರ್ಎಸ್ ಎಂಎಲ್ಎ, ಪ್ರಧಾನಮಂತ್ರಿಗಳಾದ ರಾಜೀವ್ಗಾಂಧಿಯವರು

80ರ ದಶಕದ ಮಧ್ಯ ಭಾಗದಲ್ಲಿ ದೇಶದಾದ್ಯಂತ ಬೀಸಿದ ಕಾಂಗ್ರೆಸ್ ವಿರೋಧಿ ಅಲೆ ಜೆ.ಪಿ.ಚಳುವಳಿಯಾಗಿ ರೂಪುಗೊಂಡಿದ್ದರ ಪರಿಣಾಮ ಕರ್ನಾಟಕದಲ್ಲಿ ಉದಯಿಸಿದ ಹೊಸ ಪಕ್ಷವೇ ಜನತಾದಳ. ಶ್ರೀ ರಾಮಕೃಷ್ಣ ಹೆಗಡೆ, ಹೆಚ್.ಡಿ.ದೇವೇಗೌಡ, ಜೆ. ಹೆಚ್. ಪಟೇಲ್ ಹಾಗೂ ಎಸ್.ಆರ್. ಬೊಮ್ಮಾಯಿ ನೇತೃತ್ವದ ಈ ಪಕ್ಷ, ಗಾಂಧಿ ಕನಸಿನ ಗ್ರಾಮ ಸ್ವರಾಜ್ಯ ಕಲ್ಪನೆಯಿಂದ ರೂಪುಗೊಂಡು, ಗ್ರಾಮೀಣ ಪಂಚಾಯತ್ ರಾಜ್‌ನ ಅಧಿಕಾರ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಪಕ್ಷದ ಈ ಜನಪರ ಕಾರ್ಯಕ್ರಮಗಳ ಹಿಂದೆ ಎಂ. ಪಿ. ಪ್ರಕಾಶ್, ನೀರ್‌ಸಾಬ್ ಎಂದೇ ಜನರಿಂದ ಗುರುತಿಸಿಕೊಂಡ ಅಬ್ದುಲ್ ನಜೀರ್ ಸಾಬ್‌ರವರ ಬೋರ್‌ವೆಲ್, ಕುಡಿಯುವ ನೀರಿನ ಟ್ಯಾಂಕುಗಳು, ಶೌಚಾಲಯ, ಗ್ರಾಮೀಣರ ಬದುಕನ್ನು ಹಸನಾಗಿಸಿದವು.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಬಲ ತುಂಬಲು ಗ್ರಾಮಸ್ಥರ ಕೈಗೆ ಅಧಿಕಾರ ನೀಡುವ ಹಿನ್ನೆಲೆಯಲ್ಲಿ ರೂಪುಗೊಂಡ ಅಧಿಕಾರ ವಿಕೇಂದ್ರೀಕರಣದ ಹೊಸ ಶಕೆ ಪ್ರಾರಂಭವಾಯಿತು.ಆಗ ಹುಟ್ಟಿಬಂದ ಜಿಲ್ಲಾ ಪರಿಷತ್ ಕಲ್ಪನೆ ಒಂದು ಜಿಲ್ಲೆಯ ಎಲ್ಲಾ ಹೋಬಳಿಗಳಿಂದ ಆಯ್ಕೆಗೊಂಡ ಸುಮಾರು ನಲವತ್ತು ಮಂದಿ ಸದಸ್ಯರು ಜಿಲ್ಲಾ ಸರ್ಕಾರದ ಮಾದರಿಯಲ್ಲಿ ಇಡೀ ಜಿಲ್ಲೆಯ ಗ್ರಾಮೀಣ ಭಾಗದಲ್ಲಿರುವ ಮೂಲ ಭೂತ ಸಮಸ್ಯೆಗಳಿಗೆ ಸರ್ಕಾರವನ್ನು ಕಾಯದೆ ಸ್ಥಳೀಯ ಸಮಸ್ಯೆಗಳಿಗೆ ಸ್ಥಳದಲ್ಲಿ ಪರಿಹಾರ ಸೂಚಿಸುವ ಗ್ರಾಮೀಣರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ



ರೂಪುಗೊಂಡ ಜಿಲ್ಲಾ ಪರಿಷತ್ ಚುನಾವಣೆಗೆ ನನ್ನ ಆತ್ಮೀಯರು, ಗ್ರಾಮಸ್ಥರು ಹಾಗೂ ಬಿಂಡಿಗನವಿಲೆ. ಹೋಬಳಿಯ ಮುಖಂಡರು ಒತ್ತಾಯ ಪೂರ್ವಕವಾಗಿ ಹುರಿದುಂಬಿಸಿದರು. ಜೊತೆಗೆ ನನ್ನ ರಾಜಕೀಯದ ಮಾರ್ಗದರ್ಶಿಯಾದ ಕೆ. ಎನ್.ನಾಗೇಗೌಡರು ನೀನು ಗೆಲ್ಲಬೇಕು. ಇದು ವಿಧಾನಸಭೆ ಪ್ರವೇಶಿಸಲು ಯುವ ನಾಯಕರಿಗೆ ಮೊದಲ ಮೆಟ್ಟಿಲು ಎಂದು ಬೆಂಬಲಿಸಿದರು. ನಮ್ಮ ತಂದೆಯ ಆತ್ಮೀಯರಾಗಿದ್ದ ಶಾಸಕ ಮಾಜಿ ಶಾಸಕರಾಗಿದ್ದಂತಹ ಕರಡಹಳ್ಳಿ ಸಿಂಗರಿಗೌಡರು ಅವರ ಶಿಷ್ಯ ಹೆಚ್. ಟಿ.ಕೃಷ್ಣಪ್ಪನವರ ಮುಂದೆ ಸೋತಿದ್ದರು. ಅವರು ಜಿಲ್ಲಾ ಪರಿಷತ್ ಚುನಾವಣೆಗೆ ನಿಲ್ಲಲು ತಯಾರಿಯಲ್ಲಿದ್ದಾರೆ ಎಂಬ ವಿಚಾರ ನನಗೆ ತಿಳಿಯಿತು. ಅಂತಹವರ ನೆರಳಲ್ಲಿ ರಾಜಕಾರಣ ಮಾಡುತ್ತಿರುವ ನಾವು ಏಕೆ ಸ್ಪರ್ಧೆ ಮಾಡಬಾರದು. ನಮ್ಮ ಕುಟುಂಬದ ಮೇಲೆ ಅತ್ಯಂತ ಆತ್ಮೀಯತೆಯನ್ನು ತೋರುವ ಜನರ ಪ್ರೀತಿ ಮತಗಟ್ಟೆಯಲ್ಲಿ ಪರಿಣಾಮ ಬೀರಿತೇ ಅಥವಾ ಇಲ್ಲವೇ ಎಂಬುದನ್ನು ಈ ಚುನಾವಣೆಯಲ್ಲಿ ನಿಂತು ಪರೀಕ್ಷಿಸಬೇಕೆಂಬ ಆಸೆ ಮತ್ತು ಆಲೋಚನೆ ನನ್ನಲ್ಲಿ ಮೂಡಿ ಸ್ಪರ್ಧೆಗೆ ತೀರ್ಮಾನಿಸಿದೆ.

ಇಡೀ ಜಿಲ್ಲೆಯಲ್ಲಿಯೇ ಜಿಲ್ಲಾ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ನನ್ನ ಕ್ಷೇತ್ರದ ಮತಗಳು ನನ್ನನ್ನು ಟಾಪ್ ಒನ್ ಸ್ಥಾನದಲ್ಲಿ ಕುಳ್ಳಿರಿಸಿತು. ಗೆಲುವಿನ ನಗೆ ಬೀರಿದ ಖುಷಿಯಲ್ಲಿದ್ದ ನನಗೆ ಮತ್ತೊಂದು ಹುದ್ದೆ ನನ್ನ ಮುಡಿಗೇರಿತು. ಖಜಾಂಚಿ ಹುದ್ದೆಯಿಂದ ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷನಾಗಿ ಆಯ್ಕೆಕೊಂಡಿದ್ದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಡಿ.ಕೆ. ಶಿವಕುಮಾರ್, ಮೈಸೂರಿನಿಂದ ಹೆಚ್. ವಿಶ್ವನಾಥ್, ತುಮಕೂರಿನಿಂದ ಟಿ. ಬಿ.ಜಯಚಂದ್ರ ಹಾಗೂ ಮಂಡ್ಯ ಜಿಲ್ಲೆಯಿಂದ ನಾನು ಹೀಗೆ ಎಲ್ಲರ ಗೆಲುವಿಗೆ ಕಳಶವಿಟ್ಟಂತೆ ಅದ್ಧೂರಿ ಕಾಂಗ್ರೆಸ್ ಸಮಾವೇಶ ಆಯೋಜಿಸಿ ಅಂದಿನ ಯುವ ಪ್ರಧಾನಿ ರಾಜೀವ್ ಗಾಂಧಿಯವರನ್ನು ಕರೆಸುವ ತಯಾರಿ ಮಾಡಿಕೊಂಡು ಅವರು ಬರುವ ದಿನ ವಿಮಾನ ನಿಲ್ದಾಣದಿಂದ ಬೃಹತ್ ಬೈಕ್ ರ್‍ಯಾಲಿ ನಡೆಸಿ ಅವರನ್ನು ವೇದಿಕೆಗೆ ಬರಮಾಡಿಕೊಳ್ಳುವ ಆಶಯ ವ್ಯಕ್ತಪಡಿಸಿದವು. ಯೂತ್ ಕಾಂಗ್ರೆಸ್ ಬಲವರ್ಧನೆ ಕುರಿತು ಅಪಾರ ಕಾಳಜಿ ವಹಿಸಿದ ಪ್ರಧಾನಿಗಳು ಬಂದರು, ಕಾರ್ಯಕ್ರಮ ಯಶಸ್ವಿಯಾಯಿತು. ಅಧ್ಯಕ್ಷರು ಹಾಗೂ ಪದಾಧಿಕಾರಿಗಳೆಲ್ಲರನ್ನೂ ರಾಜೀವ್ ಗಾಂಧಿಯವರು ಹೆಸರಿನಿಂದಲೇ ಗುರ್ತಿಸಿ ಮಾತನಾಡಿದ್ದು ಹಾಗೂ ನನ್ನನ್ನ ಗೌಡ ಎಂದು ಆತ್ಮೀಯವಾಗಿ ಬೆನ್ನು ತಟ್ಟಿ ಮಾತನಾಡಿಸುತ್ತಿದುದು ನಮಗೆ ಅಭಿಮಾನ ಮೂಡುತ್ತಿತ್ತು.

ಜಿಲ್ಲಾ ಪಂಚಾಯಿತಿ ಮೆಂಬರ್ ಸಮಯದಲ್ಲೇ ನಾನು ಹೆಚ್ಚು ಕೆಲಸ ಮಾಡಿದೆ. ಪಟ್ಟಣದಿಂದ ಹಳ್ಳಿಗಳನ್ನು ಸಂಪರ್ಕಿಸುವ ಬಹಳಷ್ಟು ಸೇತುವೆಗಳನ್ನು ಮಾಡುವ ಅವಕಾಶ ಸಹ ಆ ಸಂದರ್ಭದಲ್ಲಿ ಸಿಕ್ಕಿತು. ಬೋರ್‌ವೆಲ್, ರಸ್ತೆ, ಆಸ್ಪತ್ರೆಗಳಂತ ಸ್ಥಳೀಯ ಆಡಳಿತದ ಹತ್ತಾರು ಜನಪರ ಕಾರ್ಯಕ್ರಮಗಳನ್ನು ಬಳಸಿಕೊಂಡು ಇಡೀ ಕ್ಷೇತ್ರದಾದ್ಯಂತ ಸಂಚರಿಸಿದೆ. ಆ ಸಂದರ್ಭದಲ್ಲಿ ನನಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದೆ. ಈ ನನ್ನ ಕೆಲಸ ಜನರಲ್ಲಿ ನನ್ನ ಮೇಲೆ ಮತ್ತಷ್ಟು ಪ್ರೀತಿ ಮತ್ತು ಗೌರವವನ್ನು ಹೆಚ್ಚಿಸಿತು. ಜೊತೆಗೆ ಅತ್ಯಂತ ಕ್ರಿಯಾಶೀಲ ಯುವಕ ಶಿವರಾಮೇಗೌಡನೇ ನಮ್ಮ ಮುಂದಿನ ಶಾಸಕ ಎಂಬ ಭಾವನೆ ಜನರ ಮನಸ್ಸಿನಲ್ಲಿ ಮೂಡಲು ಜಿಲ್ಲಾ ಪರಿಷತ್ತಿನ ಕ್ಷಿಪ್ರಗತಿಯ ಅಭಿವೃದ್ಧಿ ಕಾರ್ಯಗಳೇ ಕಾರಣವಾಯಿತು.

ಜಿ. ಮಾದೇಗೌಡರ ಜೊತೆ ಕಳೆದ ದಿನಗಳು

1980ರಲ್ಲಿ ಗುಂಡೂರಾಯರು ಮುಖ್ಯಮಂತ್ರಿಯಾಗುವ ಸಂದರ್ಭದಲ್ಲಿ ಮಂಡ್ಯದ ಜಿ.ಮಾದೇಗೌಡರಿಗೂ ನಮ್ಮ ನಾಗಮಂಗಲದ ಹೆಚ್. ಟಿ.ಕೃಷ್ಣಪ್ಪನವರಿಗೂ ಗುಂಡೂರಾಯರ ಸಂಪುಟದಲ್ಲಿ ಮಂತ್ರಿಯಾಗಲೇಬೇಕೆಂಬ ಜಟಾಪಟಿ ಜೋರಾಗಿ ನಡೆದು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗುತ್ತದಂತೆ. ಇದು ನಾನು ಪ್ರತ್ಯಕ್ಷ ಕಂಡಿಲ್ಲವಾದರೂ ರಾಜಕೀಯ ವಲಯದಲ್ಲಿ ಆ ಕಾಲಕ್ಕೆ ಬಿಗ್ ಟಾಕ್ ಆಗಿತ್ತು. ದಿವಂಗತರ ಬಗ್ಗೆ ಹೇಳುವುದು ಸೂಕ್ತವೂ ಅಲ್ಲ ಎಂಬ ವಿವೇಕ ನನಗೂ ಇದೆ. ಅಲ್ಲಿಯವರೆಗೂ ಶ್ರೀ ಜಿ. ಮಾದೇಗೌಡರಿಗೂ ನನಗೂ ಪರಿಚಯ ಇರಲಿಲ್ಲ. ನಂತರ ಮಾದೇಗೌಡರು ಅರಣ್ಯ ಇಲಾಖೆ ಮತ್ತು ಗಣಿ ಭೂವಿಜ್ಞಾನ ಸಚಿವರಾದರು.

ಆ ಗಲಾಟೆ ಆದಮೇಲೆ ಮಾದೇಗೌಡರು ಹೆಚ್. ಟಿ .ಕೃಷ್ಣಪ್ಪನವರಿಗೆ ನಾಗಮಂಗಲದಲ್ಲಿ ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ಟಿಕೆಟ್ ತಪ್ಪಿಸಬೇಕು ಎಂದು ತೀರ್ಮಾನ ಮಾಡಿ, ನಮ್ಮ ತಾಲೂಕಿನ ಮಾಜಿ ಶಾಸಕರಾಗಿದ್ದಂತಹ ಸಿಂಗಾರಿಗೌಡರಿಗೆ ಕೃಷ್ಣಪ್ಪನ ವಿರುದ್ಧ ಒಂದು ಹುಡುಗನನ್ನು ಬೆಳೆಸೋಣ ಯಾರಾದರೂ ಯುವ ನಾಯಕನಿದ್ದಾನಾ ಎಂದು ವಿಚಾರಿಸಿದ್ದಾರೆ. ಆಗ ಸಿಂಗಾರಿಗೌಡರು ನಮ್ಮ ಲಾಳನಕೆರೆ ಪಟೇಲರ ಮಗ ಶಿವರಾಮು ಬಹಳ ಆಕ್ಟೀವ್ ಇದ್ದಾನೆ ಎಂದು ನನ್ನ ಬಗ್ಗೆ ತಿಳಿಸಿದ್ದಾರೆ. ಸ್ವಲ್ಪ ದಿನಗಳ ನಂತರ ಮಾದೇಗೌಡರು ತಮ್ಮ ಆಪ್ತರು ಹಾಗೂ ಮಂಡ್ಯ ಲೀಡರ್ ಆಗಿದ್ದಂತಹ ಬಿ.ಟಿ. ತಿಮ್ಮಯ್ಯನವರ ಬಳಿ ನನ್ನನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಬಿಟಿ ತಿಮ್ಮಯ್ಯನವರು ಒಂದು ದಿನ ಬೆಳಗಿನ ಜಾವ 3ಗಂಟೆ ಸಮಯದಲ್ಲಿ ನಮ್ಮ ಲಾಳನಕೆರೆ ಮನೆಗೆ ಬಂದು ನಮ್ಮ ತಂದೆಯವರೊಡನೆ ಮಾತನಾಡಿ, ಮಾದೇಗೌಡರು ಹೇಳಿದ ವಿಷಯವನ್ನು ತಿಳಿಸಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೊರಟರು. ನಾವು ಬೆಂಗಳೂರಿಗೆ ಸುಮಾರು ಬೆಳಗ್ಗೆ ಆರು ಗಂಟೆಗೆ ಬಂದು ತಲುಪಿದೆವು.



ಕರ್ನಾಟಕ ಅರಣ್ಯಮಂತ್ರಿ ಆಗಿದ್ದ ಮಾದೇಗೌಡರು ಸೆವೆನ್ ಮಿನಿಸ್ಟರ್ ಕ್ವಾಟ್ರಸ್ನಲ್ಲಿ ವಾಕ್ ಮಾಡುತ್ತಿದ್ದರು. ಅವರನ್ನು ಕಂಡೊಡನೆ ನಮಸ್ಕರಿಸಿದೆ. ತಿಮ್ಮಯ್ಯ ನನ್ನ ಪರಿಚಯ ಮಾಡಿದರು. ಆಗ ಅವರು ನನ್ನ ಹೆಗಲ ಮೇಲೆ ಕೈ ಹಾಕಿಕೊಂಡು ನೋಡಪ್ಪ, ಶಿವರಾಮು ನಿನ್ನನ್ನು ನಾಗಮಂಗಲದ ಮುಂದಿನ ಎಂ.ಎಲ್.ಎ.ಮಾಡಬೇಕು ಎಂದು ತೀರ್ಮಾನಿಸಿದ್ದೇನೆ, ಮಳವಳ್ಳಿಯಲ್ಲಿ ಒಬ್ಬ ಮರಿಸ್ವಾಮಿ ಎನ್ನುವವನನ್ನು ಎಂ.ಎಲ್.ಎ ಮಾಡಿದೆ, ಆ ಅಯೋಗ್ಯ ನನ್ನನ್ನೇ ಬಂಧಿಸಬೇಕು ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟ, ನೀನೂ ಹಾಗೆನಾದ್ರು ಮಾಡ್ಬಿಟ್ಟೀಯ ಕಣಪ್ಪ... ಎಂದರು. ಆಗ ನಾನು ಇಲ್ಲ ಸರ್, ಎಲ್ಲಾದರೂ ಉಂಟೆ.. ನಿಮ್ಮ ಜೊತೆ ಬೆಂಬಲಿಗನಾಗಿ ಇರ್ತೀನಿ , ನಿಮ್ಮ ಮಾತು ಮೀರಲ್ಲ ಎಂದೆ, ಆಮೇಲೆ ಮಾದೇಗೌಡರು ನನ್ನನ್ನು ದೆಹಲಿಗೆ ಕರೆದುಕೊಂಡು ಹೋದರು. 1983ರ ಸಮಯ ಗುಂಡುರಾಯರ ಅವಧಿ ಮುಗಿಯುವ ಸಂದರ್ಭ. ಆಗೆಲ್ಲ ಎಂ.ಎಲ್.ಎ ಟಿಕೆಟ್ ಕೇಳಲು ಕ್ಷೇತ್ರದ ಮುಖಂಡರನ್ನು ಕರೆದುಕೊಂಡು ಬಂದು ಈಗಿನಂತೆ ಶಕ್ತಿ ಪ್ರದರ್ಶನ ಮಾಡೋ ಹಾಗಿರಲಿಲ್ಲ. ಘಾಸ್ತೆ ಎಂಬ ಸಿಎಂ ಸೆಕ್ರೆಟರಿ ಇದ್ದರು, ಮತ್ತೆ ಕಾರ್ತಿಕೇಯನ್ ಎಂಬ ಪೊಲೀಸ್ ಕಮಿಷನರಿದ್ದರು, ಏ ಘಾಸ್ತೇ, ಟೇಕ್ ದ ಒಪಿನಿಯನ್ ಎಲ್.ಆರ್. ಶಿವರಾಮೇಗೌಡ ನಾಗಮಂಗಲ ಕಾನ್ಸ್ಟಿಟ್ಯುಎನ್ಸಿ ಎಂದರೆ ಸಾಕಾಗಿತ್ತು, ಘಾಸ್ತೆ ಡಿಸಿಗೆ ಫೋನ್ ಮಾಡುತ್ತಿದ್ದರು, ಡಿ.ಸಿ.ಅವರು ಸ್ಥಳೀಯ ತಹಸೀಲ್ದಾರ್‌ಗೆ ಫೋನ್ ಮಾಡಿ ಮಾಹಿತಿ ತಿಳಿದುಕೊಳ್ಳುತ್ತಿದ್ದರು. ಆಗ ಆ ವ್ಯಕ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಸಿಕ್ಕಿ ಬಿಡೋದು. ಜೊತೆಗೆ ಈ ಸಲ ಯಾರಿಗೆ ಟಿಕೆಟ್ ಸಿಗುತ್ತದೆ ಎಂದು ಇಡೀ ಜಿಲ್ಲೆಯ ಎಲ್ಲ ತಾಲೂಕಿಗೆ, ಮುಖಂಡರಿಗೆ, ಪತ್ರಕರ್ತರಿಗೆ ತಿಳಿಯುತ್ತಿತ್ತು. ಆಗೆಲ್ಲಾ ಎಂಎಲ್ಎ ಟಿಕೆಟ್ ಅನೌನ್ಸ್ ಆಗುತ್ತಿದ್ದುದೇ ಈ ರೀತಿ.

ಆಮೇಲೆ ಮಾದೇಗೌಡರು ಡೆಲ್ಲಿಯಲ್ಲಿ ವೀರಪ್ಪ ಮೊಯ್ಲಿ, ಹೆಚ್.ಸಿ. ಶ್ರೀಕಂಠಯ್ಯ, ಧರ್ಮಸಿಂಗ್ ರವರ ಬಳಿ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದರು. ಕೇರಳ ಭವನದಲ್ಲಿದ್ದ ಜಾರ್ಜ್‌ರವರ ಬಳಿಯೂ ಕರೆದುಕೊಂಡು ಹೋಗಿ ನನ್ನನ್ನು ಪರಿಚಯ ಮಾಡಿಸಿದರು.ಆ ಸಮಯದಲ್ಲಿ ಚಾರ್ಜ್ ಅವರು ಆಲ್ ಇಂಡಿಯಾ ಜನರಲ್ ಸೆಕ್ರೆಟರಿ ಆಗಿದ್ದರು. ಕೊನೆಗೆ ಗುಂಡುರಾಯರ ಹತ್ತಿರ ಕರೆದುಕೊಂಡು ಹೋಗಿ ನನ್ನ ಪರಿಚಯಿಸಿದರು. 120 ಜನರ ಫಸ್ಟ್ ಲಿಸ್ಟ್ ನಲ್ಲಿ ನನ್ನ ಹೆಸರು ಸಹ ಅನೌನ್ಸ್ ಆಯಿತು. ಬೆಂಗಳೂರಿಗೆ ವಾಪಸ್ ಆದೆವು. ಮಾರನೇ ದಿನ ನನ್ನ ಹೆಸರೂ ಸೇರಿ ಹನ್ನೊಂದು ಜನರನ್ನು ಹೈಕಮಾಂಡ್ ಕೈ ಬಿಟ್ಟಿತ್ತು. ಎಂಎಲ್ಎಗೆ ಟಿಕೆಟ್ ಘೋಷಣೆಯಾಗಿ ಮತ್ತೆ ಕೈ ತಪ್ಪಿತು. ಆಮೇಲೆ ಹೈಕಮಾಂಡ್ ಹೆಚ್.ಟಿ. ಕೃಷ್ಣಪ್ಪನವರನ್ನೇ ಅಭ್ಯರ್ಥಿಯನ್ನಾಗಿ ಮಾಡಿದರು, ಆ ಸಮಯದಲ್ಲಿ ಚಿಗರೀಗೌಡರು ಪಕ್ಷೇತರರಾಗಿ ಸ್ಪರ್ಧಿಸಿದರು. ಆ ಚುನಾವಣೆಯಲ್ಲಿ ಚಿಗರಿಗೌಡರ ಬೆಂಬಲಕ್ಕೆ ನಿಂತೆ.

ಎಲೆಕ್ಷನ್‌ನಲ್ಲಿ ಚಿಗರೀಗೌಡರು 21,ಸಾವಿರಕ್ಕೂ ಹೆಚ್ಚು ಮತಗಳಿಂದ ಗೆದ್ದರು.ಗೆದ್ದಮೇಲೆ ನನ್ನ ಬಹಳ ಪ್ರೀತಿಯಿಂದ ಕಾಣತೊಡಗಿದರು. ಎಸ್. ಎಂ. ಕೃಷ್ಣ ಅವರ ಹತ್ತಿರ ನಮ್ಮ ತಾಲೂಕಲ್ಲಿ ಶಿವರಾಮಗೌಡ ಎಂಬ ಹುಡುಗ ಇದ್ದಾನೆ ಅವನು ನನಗೆ ತುಂಬಾ ಸಪೋರ್ಟ್ ಮಾಡಿದ ಎಂದು ಹೇಳುವುದರ ಜೊತೆಗೆ ಹಲವು ಬಾರಿ ನನ್ನ ಬಗ್ಗೆ ಗೌರವ ಪೂರ್ವಕವಾಗಿ ಮಾತನಾಡಿರುವುದೂ ನನ್ನ ಗಮನಕ್ಕೆ ಬಂತು. ಆ ಸಂದರ್ಭದಲ್ಲಿ ನನಗೆ ಟಿಕೆಟ್ ಸಿಗದೇ ಹೋದರೂ ಸಹಿತ ನಾನು ಮಾದೇಗೌಡರ ಬಳಿ ಹೋಗಿ ಇಷ್ಟೆಲ್ಲ ನನಗೆ ಸಪೋರ್ಟ್ ಮಾಡಿದ್ದಾರಲ್ಲ ಎಂದು ಅವರ

ಪರವಾಗಿ ಚುನಾವಣೆಯಲ್ಲಿ ಶ್ರಮಿಸಿದೆ. ನಾನು ಅವರಿಗೆ ವಿನಮ್ರನಾಗಿದ್ದೆ. ಮಾದೇಗೌಡರನ್ನು ಪ್ರತೀದಿನ ಭೇಟಿಯಾಗತೊಡಗಿದೆ. ಶಾಸಕರ ಭವನದ ಕೊಠಡಿಗೂ ಬಿಡದೇ ಹೋಗುತ್ತಿದ್ದೆ. ಅವರು ಸಹ ಸಲುಗೆಯಿಂದ ಪಕ್ಕಕ್ಕೆ ಕರೆದು ಬಾರೋ ಶಿವರಾಮು ಎಂದು ಜೊತೆಯಲ್ಲಿ ಕೂರಿಸಿಕೊಳ್ಳುತ್ತಿದ್ದರು. ಕಷ್ಟ ಸುಖ ವಿಚಾರಿಸುತ್ತಿದ್ದರು. ಆಮೇಲೆ ನನ್ನ ಮತ್ತು ಅವರ ಬಾಂಧವ್ಯ ಹೆಚ್ಚಾಯಿತು ಒಂದೊಂದು ಸಲ ನಮ್ಮ ಮನೆಯಲ್ಲಿ ನಾಟಿ ಕೋಳಿ ಮುದ್ದೆ ಮಾಡಿಸಿ ಊಟಕ್ಕೂ ಕರೆಯುತ್ತಿದ್ದೆ, ಕರೆದಾಗ ಬಂದು ಊಟ ಮಾಡಿ ಹೋಗುತ್ತಿದ್ದರು. ವಾರಕ್ಕೆ ಒಂದು ಸಲ, ಎರಡು ಸಲ ಹೋಟೆಲ್‌ಗೂ ಸಹ ಹೋಗುತ್ತಿದ್ದೊ. ಹೀಗೆ ಚೆನ್ನಾಗಿ ಅವರ ಜೊತೆ ಒಡನಾಟ ಇಟ್ಟುಕೊಂಡಿದ್ದೆ. ಆಮೇಲೆ ಸ್ವಲ್ಪ ತಿಂಗಳು ಕಳೆಯುತ್ತಾ ಬಂತು, ಅದೇನಾಯಿತೋ ಏನೋ, ಒಂದು ದಿನ... ಹೀಗೆ ಯಾಕ್ ಬರ್ತಿಯಾ ನಾಗಮಂಗಲಕ್ಕೆ ಹೋಗಿ ಓಡಾಡಯ್ಯ, ಜನ ಸಂಘಟನೆ ಮಾಡು ಕಾರ್ಯಕರ್ತರನ್ನು ಬೆಳೆಸು ಅಂದರು, ನಾನು, ಓಡಾಡುತ್ತಿದ್ದೇನೆ ಸರ್ ಎಂದು ಹೇಳಿದೆ. ನನ್ನಲ್ಲಿ ಹೇಳಿಕೊಂಡೆ.. ನಾನು ನಾಗಮಂಗಲಕ್ಕೆ ಹೋಗಿ ಓಡಾಡೋಕೆ, ನಾನೇನು ಎಂಎಲ್‌ಎ ಆಗಿದ್ದೀನಾ? ಇಲ್ಲ, ಕಾಂಗ್ರೆಸ್ ಪಕ್ಷದಲ್ಲಿ ನನಗೆ ಯಾವ ಹುದ್ದೆಯೂ ಸಿಕ್ಕಿಲ್ಲ... ಮುಂದೆ ಟಿಕೆಟ್ ಸಿಗಬಹುದಾ,ಗೊತ್ತಿಲ್ಲ... ಅದರಿಂದ ಇವ್ರ ಜೊತೆಗೆ ಓಡಾಡಿಕೊಂಡು ಇದ್ದೆ. ಬರ್ತಾ ಬರ್ತಾ ರಾಯರ ಕುದುರೆ ಕತ್ತೆಯಾಯ್ತು ಅನ್ನೋ ರೀತಿಯಲ್ಲಿ ಮಾತನಾಡೋಕೆ ಶುರು ಮಾಡಿದರು, ಯಾಕಯ್ಯ ಹೀಗೆ ಬೆಳ್ ಬೆಳಿಗ್ಗೆನೇ ಬರ್ತಿಯಾ ಹೋಗಯ್ಯ ಅನ್ನೋಕೆ ಶುರು ಮಾಡಿದರು. ನನಗೆ ಯೋಚನೆ ಶುರುವಾಯಿತು. ಯಾಕ್ , ಹಿಂಗಾಡ್ತವರೇ, ನಾನೇನು ತಪ್ಪು ಮಾಡಿದೆ! ಯಾಕೆ ನನ್ನ ಅವಾಯ್ಡ್ ಮಾಡುತ್ತಿದ್ದಾರೆ. ಇವರೇ ಬಿ.ಟಿ ತಿಮ್ಮಯ್ಯ ಅವರನ್ನು ಕಳಿಸಿ ನನ್ನನ್ನು ಕರೆಸಿಕೊಂಡರು. ಟಿಕೆಟ್ ನಿನಗೆ ಕೊಡುತ್ತೇನೆ ಎಂದು ಹೇಳಿ ಡೆಲ್ಲಿಯಲ್ಲಿ ನಾಯಕರ ಬಳಿ ಸುತ್ತಾಡಿಸಿದರು. ಈಗ ಏನಾಯಿತು ಎಂದು ನಾನು ಯೋಚನೆ ಮಾಡಿದೆ, ಏನು ಅರ್ಥ ಆಗಲಿಲ್ಲ. ಇದ್ದಕ್ಕಿದ್ದಂತೆ ಒಂದು ದಿನ ಗೊತ್ತಾಯ್ತು ಮಾದೇಗೌಡರು ಮತ್ತು ಹೆಚ್.ಟಿ. ಕೃಷ್ಣಪ್ಪನವರು ಖಾಸಾ ದೋಸ್ತ್‌ಗಳು. ಸಂಜೆಯ ಸಮಯದಲ್ಲಿ ಸೇರಿದ ಪಾರ್ಟಿಯಲ್ಲಿ ಒಂದಾಗವರೇ ಎಂದು, ಆಮೇಲೆ ಒಂದು ದಿನ ಏ... ಮೂದೇವಿ ದಿನಾ ಹೀಗೆ ಇಲ್ಲಿಗೆ ಬರಬೇಡ ಎಂದರು. ಅವತ್ತೇ ಕೊನೆ...ದೊಡ್ಡವರಿಗೆ ನಮಸ್ಕಾರ ಸ್ವಾಮಿ.. ಪುನಃ ನಾನು ಯಾವತ್ತೂ ಬರಲ್ಲ ಎಂದು ಕೈ ಮುಗಿದು ಬಂದುಬಿಟ್ಟೆ.



ರಾಜಕೀಯ ಮುತ್ಸದ್ದಿ, ಮಿತಭಾಷಿ ಎಸ್. ಎಂ. ಕೃಷ್ಣ ಅವರೊಂದಿಗಿನ ಒಡನಾಟ



ಈ ನಾಡು ಕಂಡ ವರ್ಣರಂಜಿತ ರಾಜಕಾರಣಿ ಎಸ್. ಎಂ.ಕೃಷ್ಣ. ಅವರ ಹಾವ–ಭಾವ, ಭಂಗಿ, ಮಾತು ಮತ್ತು ಅವರ ಧಿರಿಸು ಎಲ್ಲವೂ ಅನುಕರಣೀಯ. ವಿದೇಶದಲ್ಲಿ ಕಾನೂನು ಪದವಿ ಪಡೆದಿದ್ದಂತಹ ಕೃಷ್ಣರವರು ಮದ್ದೂರಿನ ಉಪಚುನಾವಣೆಯಲ್ಲಿ ಸ್ಪರ್ಧಿಸಿದರು. ನಮ್ಮ ದೇವಲಾಪುರ ಹೋಬಳಿಯ ಕೆಲ ಭಾಗಗಳು ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ಸೇರಿತ್ತು. ವಿದ್ಯಾರ್ಥಿ ದೆಸೆಯಲ್ಲಿದ್ದ ನಾನು ನನ್ನಪ್ಪನೊಟ್ಟಿಗೆ ಹೋಗಿದ್ದು ಈಗಲೂ ನೆನಪಿದೆ. ಅವರ ಸ್ಪಷ್ಟ ಉಚ್ಚಾರಣೆ ಮತ್ತು ಅವರಿಗಿಂತ ಕಿರಿಯರಿಗೂ ಗೌರವದಿಂದ ಮಾತನಾಡುತ್ತಿದ್ದುದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿನ ಪ್ರಬುದ್ಧತೆ ಕೇಳುಗರನ್ನು ಮೂಕವಿಸ್ಮಿತರನ್ನಾಗಿಸುತ್ತಿತ್ತು. ಮಂಡ್ಯ ಜಿಲ್ಲೆಗೆ ಯಾರೇ ದೆಹಲಿ ನಾಯಕರು ಬರಲಿ ಅವರ ಭಾಷಣ ತರ್ಜುಮೆ ಇವರದಾಗಿತ್ತು. 1980 ರ ಸುಮಾರಿನಲ್ಲಿ ನನಗೊಂದು ಪತ್ರ ಬರೆದು ನಮ್ಮ ಶಾಸಕರಾದ ಚಿಗರೀಗೌಡರ ಕೈಗೆ ಕೊಟ್ಟು ಕಳುಹಿಸಿದ್ದರು. ಚಿಗರಿಗೌಡರು ನನಗೆ ತಲುಪಿಸಿದರು. ಎಸ್.ಎಂ.ಕೃಷ್ಣರವರು ಆಗ ಕೇಂದ್ರ ಕೈಗಾರಿಕಾ ರಾಜ್ಯ ಮಂತ್ರಿಯೂ ಆಗಿದ್ದರು. ಯುವ ರಾಜಕಾರಣಿ ಶ್ರೀ ಪಟೇಲ್ ಎಲ್. ರಾಮೇಗೌಡರ ಮಗ ಎಲ್.ಆರ್.ಶಿವರಾಮೇಗೌಡರೇ... ಎಂದು ಪತ್ರವು ಆರಂಭಗೊಳ್ಳುತ್ತದೆ. ಎರಡು ಸಾಲಿನ ಪತ್ರವದು. ನೀವು ಲಾಳನಕೆರೆ ಶ್ರೀ ರಾಮೇಗೌಡರ ಮಗ ಎಂದು ಕ್ಷೇತ್ರದ ಹಿತೈಷಿಗಳಿಂದ ತಿಳಿದೆ. ಯುವಕರಾದ ತಾವು ಕ್ಷೇತ್ರದೆಲ್ಲೆಡೆ ಸಂಚರಿಸಿ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತೊಡಗಿರುವ ವಿಚಾರ ಕೇಳಿ ನನಗೆ ಸಂತಸವಾಯಿತು. ನಾನು ಬೆಂಗಳೂರಿನಲ್ಲಿ ಇದ್ದಾಗ ಬಂದು ನನ್ನನ್ನ ಭೇಟಿ ಮಾಡಿ... ಧನ್ಯವಾದಗಳು. ಇತಿ, ಎಸ್ ಎಂ ಕೃಷ್ಣರವರ ಸಹಿ ಮತ್ತು ಕೇಂದ್ರ ಸರ್ಕಾರದ ಮೊಹರಿನೊಂದಿಗೆ ಪತ್ರ ಮುಗಿಸಿದರು, ಆ ಪತ್ರವನ್ನು ಮಡಿಚದೇ ಜೇಬಿನಲ್ಲಿಟ್ಟುಕೊಂಡು, ಅತಿಯಾದ ಖುಷಿ ಮತ್ತು ವಿಶ್ವಾಸದೊಂದಿಗೆ ಬೆಂಗಳೂರಿಗೆ ಬಂದು ಕೃಷ್ಣರವರನ್ನು ಖುದ್ದು ಭೇಟಿ ಮಾಡಲು, ಒಂದು ವಾರಗಳ ಕಾಲ ಬೆಂಗಳೂರಿನಲ್ಲೇ ವಾಸ್ತವ್ಯ ಹೂಡಿದೆ. ಕೃಷ್ಣರವರ ಧರ್ಮಪತ್ನಿ ಪ್ರೇಮಕ್ಕರ ಆತಿಥ್ಯ ಸವಿದೆ. ಕೃಷ್ಣರವರನ್ನು ಒಂದು ವಾರಗಳ ನಂತರ ಭೇಟಿ ಮಾಡುವ ಭಾಗ್ಯ ದೊರೆಯಿತು. ಆತ್ಮೀಯವಾಗಿ ಮಾತನಾಡಿಸಿ ಮಂಡ್ಯ ಜಿಲ್ಲೆಯ ರಾಜಕಾರಣದ ಒಳಗುಟ್ಟನ್ನು ಹೇಳಿಕೊಟ್ಟರು ಹಾಗೂ ಬೆಂಗಳೂರು ಮತ್ತು ದೆಹಲಿ ಕಡೆ ಬಂದಾಗ ನನ್ನನ್ನ ಭೇಟಿ ಮಾಡಬಹುದು ಎಂದು ಗ್ರೀನ್ ಕಾರ್ಡ್ ಎಂಟ್ರಿ ಕೊಟ್ಟರು. ಮಂಡ್ಯ ಜಿಲ್ಲೆಯ ರಾಜಕಾರಣದಲ್ಲಿ 80



ಕೆ.ಎನ್. ನಾಗೇಗೌಡರು



ಹೆಚ್.ಎನ್. ನಂಜೇಗೌಡರು

ಮತ್ತು 90 ರ ಘಟ್ಟ ಕಾಂಗ್ರೆಸ್ ಪಕ್ಷದ ಪಾಲಿಗೆ ಅತ್ಯಂತ ನಿರ್ಣಾಯಕ ಕಾಲವಾಗಿತ್ತು. ಇಬ್ಬರು ನಾಯಕರು ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರ ಪಾಲಿಗೆ ಎರಡು ಧ್ರುವಗಳಾಗಿ ಮಾರ್ಪಟ್ಟಿದ್ದರು. ಇವರ ನಡುವೆ ಕಾರ್ಯಕರ್ತರು ಏಗಬೇಕಿತ್ತು. ಅಧಿಕಾರ ಗಿಟ್ಟಿಸಿಕೊಳ್ಳಬೇಕಿತ್ತು. ಆ ನಾಯಕರುಗಳು ಬೇರಾರೂ ಅಲ್ಲ, ಎಸ್.ಎಂ. ಕೃಷ್ಣರವರು ಮತ್ತು ಜಿ. ಮಾದೇಗೌಡರು. ಒಬ್ಬರು ದೆಹಲಿಯ ಹೈಕಮಾಂಡ್ ಅಂಗಳದಿಂದ ದಾಳ ಉರುಳಿಸಿದರೆ,ಇನ್ನೊಬ್ಬರು ಸೋಲಿಲ್ಲದ ಸರದಾರನಾಗಿ ಮಂಡ್ಯದ ಅಂಗಳದಿಂದಲೇ ಹೈಕಮಾಂಡನ್ನು ನಿಯಂತ್ರಿಸುತ್ತಿದ್ದರು. ಇವರ ಬಳಿ ಹೋದರೆ ಅವರಿಗೆ, ಅವರ ಬಳಿ ಹೋದರೆ ಇವರಿಗೆ ದೂರಿತ್ತು ತಮ್ಮ ಬೇಳೆ ಬೇಯಿಸಿಕೊಳ್ಳುವ ಮುಖಂಡರಿಗೇನೂ ಕಡಿಮೆಯಿರಲಿಲ್ಲ. ಜಿ.ಮಾದೇಗೌಡರಿಗೂ ಕೃಷ್ಣರವರಿಗೂ ಒಳಗೊಳಗೆ ಸಂಘರ್ಷ, ಶೀತಲ ಸಮರ ಸದಾ ನಡೆಯುತ್ತಲೇ ಇತ್ತು. ನಾನು ಮಾದೇಗೌಡರಿಂದ ದೂರ ಸರಿದಾಗ ಕೃಷ್ಣರವರಿಗೆ ಹತ್ತಿರವಾದೆ. ಅವರು ಬೆಂಗಳೂರಿಗೆ ಬಂದಾಗಲೆಲ್ಲ ಭೇಟಿ ಮಾಡುತ್ತಿದ್ದೆ. ಕೃಷ್ಣರನ್ನು ನೋಡಲು ಹೋಗುವ ಸಂಧರ್ಭದಲ್ಲಿ ನಮ್ಮ ಜಿಲ್ಲೆಯ ಕಿರುಗಾವಲು ಕ್ಷೇತ್ರದ ಕೆ.ಎನ್. ನಾಗೇಗೌಡರು, ಹೆಚ್.ಎನ್. ನಂಜೇಗೌಡರು, ಜಿ.ಎಸ್.ಬಸವರಾಜು, ಶಾಸಕ ಮೂಡ್ಲಿಗಿರಿಯಪ್ಪ ಜೊತೆಗೆ ಮುನೇಗೌಡರು ಇದ್ದರು. ಅವರೆಲ್ಲ ಕೃಷ್ಣರನ್ನು ಕಾಣಲು ಗುಂಪಾಗಿ ಒಟ್ಟಿಗೇ ಬರುತ್ತಿದ್ದರು. ನಾನು ಅವರ ಜೊತೆ ಒಡನಾಟವನ್ನಿಟ್ಟುಕೊಂಡೆ. ಇದು 1983 ರ ಸಂಧರ್ಭ. ದಿನಕಳೆದಂತೆ ಕೃಷ್ಣರವರೊಂದಿಗೆ ಬಾಂಧವ್ಯ ಬೆಳೆಯಿತು. ಕೆ. ಎನ್. ನಾಗೇಗೌಡರೂ ನನಗೆ ತೀರ ಹತ್ತಿರವಾಗಿದ್ದರಿಂದ ಕೃಷ್ಣರವರು ದೆಹಲಿಯಲ್ಲಿ ಇರುತ್ತಿದ್ದ ದಿನಗಳಲ್ಲಿ ನಾಗೇಗೌಡರ ಮನೆಯಲ್ಲಿದ್ದು ಅವರನ್ನು ಕಾಣುವ ಪರಿಪಾಠ ರೂಢಿಸಿಕೊಂಡೆ. ನನ್ನ ರಾಜಕೀಯ ಏಳ್ಗೆಗೆ ನಾಗೇಗೌಡರ ಒತ್ತಾಸೆ ಕೂಡ ಇದೆ, ಅದನ್ನು ನಾನು ಮರೆಯುವಂತಿಲ್ಲ. 1983 ರಲ್ಲಿ ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಕೆ.ಎನ್. ನಾಗೇಗೌಡರು ಆಗ ನಡೆದ ವಿಧಾನಸಭಾ ಚುನಾವಣೆಯಲ್ಲಿ ನನ್ನ ಪರ ವಕಾಲತ್ತು ವಹಿಸಿ, ನನಗೆ ಟಿಕೆಟ್ ಕೊಡಿಸಲು ಮುಂದಾದರು. ಅಷ್ಟರಲ್ಲಿ ನನಗೆ ಟಿ. ಬಿ. ಜಯಚಂದ್ರ, ಹೆಚ್.ವಿಶ್ವನಾಥ್, ಕಡಿದಾಳ್ ದಿವಾಕರ ರಾಜ್ಯ ಯೂತ್ ಕಾಂಗ್ರೆಸ್‌ನ ಗೆಳೆಯರೆಲ್ಲರೂ ನನ್ನ ಆತ್ಮೀಯರಾಗಿದ್ದರು. ಹೆಚ್.ವಿಶ್ವನಾಥ್ ಆಗಲೇ ಒಂದು ಬಾರಿ ದೇವರಾಜ ಅರಸು ಸರ್ಕಾರದಲ್ಲಿ ಶಾಸಕರಾಗಿದ್ದರು. ಎಸ್ .ಎಂ ಕೃಷ್ಣರವರನ್ನು ಕಾಣಲು ಅವರ ಮನೆಗೆ ಎಡತಾಕಿದೊಡನೆ ಚುನಾವಣೆ ಸಂಧರ್ಭ ಅದಾಗಿತ್ತು. ಎಲ್ಲಿಗೋ ಹೊರಟಿದ್ದ ಕೃಷ್ಣರವರು ಹೊರ ನಡೆಯುತ್ತಾ ವಿಶ್ವನಾಥ್ ಬೆನ್ನ ಮೇಲೆ ಚೀಟಿಯಲ್ಲಿ ಏನೋ ಬರೆದು ಕೆ. ಹೆಚ್.ಪಾಟೀಲರಿಗೆ ಇದನ್ನು ತಲುಪಿಸಿ ಎಂದರು. ಪಾಟೀಲರ ಕಚೇರಿಗೆ ಹೋಗಿ ಎಸ್.ಎಂ.ಕೆ. ಪತ್ರ ಎಂದು ಕೈಗಿತ್ತೆವು. ಒಡನೆಯೇ ಪಾಟೀಲರು ನಾಗಮಂಗಲ ಕ್ಷೇತ್ರದ ಕಾಂಗ್ರೆಸ್ ಬಿ.ಫಾರಂ. ನನಗೆ ಕೊಟ್ಟು, ಆಲ್ ದ ಬೆಸ್ಟ್ ಅಂದರು. ನಾನು ಹಾಗೂ ಹೆಚ್. ವಿಶ್ವನಾಥ್ ಬೆಳಿಗ್ಗೆ ನಾಗಮಂಗಲ ತಲುಪಿದೆವು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿ ನಾನು ವಿಶ್ವನಾಥ್ ಪರಸ್ಪರ ಆಲಂಗಿಸಿಕೊಂಡೆವು. ವಿದ್ಯಾರ್ಥಿ ಯುವಕ ಮಿತ್ರರನ್ನೇ ಕಟ್ಟಿಕೊಂಡು ಕ್ಷೇತ್ರದಾದ್ಯಂತ ಓಡಾಡಿದೆ. ಯಾವ ಮುಖಂಡರನ್ನೂ ಕಟ್ಟಿಕೊಳ್ಳದೇ ಏಕಾಂಗಿಯಾಗಿ ಹೋರಾಡಿದೆ. ಆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಆನೆ ಗುರುತಿನ ಹೆಚ್.ಟಿ. ಕೃಷ್ಣಪ್ಪ ಗೆದ್ದರು. ನಾನು ಅಲ್ಪ ಮತಕಷ್ಟೇ ತೃಪ್ತಿಪಟ್ಟುಕೊಂಡು ಆ ಚುನಾವಣೆಯಲ್ಲಿ ಸೋಲೊಪ್ಪಿಕೊಂಡೆ. ತದನಂತರ ಅದೇ ಸೋಲನ್ನೇ ಗೆಲುವಿನ ಸೋಪಾನ ಮಾಡಿಕೊಳ್ಳಲು ಆ ಚುನಾವಣೆಯೇ ನನಗೆ ನಾಂದಿಯಾಯಿತು.



ಮದುವೆ ಮನೆಯಲ್ಲಿ ಜಟಾಪಟಿ

ಹಿರಿಸಾವೆ ಶ್ರೀಕಂಠಯ್ಯ ಅಭಿಮಾನಿಗಳ ಪಾಲಿನ ಅಣ್ಣಯ್ಯ. ಹಾಸನ ಜಿಲ್ಲೆಯ ಇಬ್ಬರು ಕಾಂಗ್ರೆಸ್ ನಾಯಕರಲ್ಲಿ ಒಬ್ಬರು. ಜಿ.ಪುಟ್ಟಸ್ವಾಮಿಗೌಡರು ಮಗದೊಬ್ಬರು ಶ್ರೀಕಂಠಯ್ಯನವರು. ಒಬ್ಬರು ಕರ್ನಾಟಕವನ್ನು ಲೋಕಸಭೆಯಲ್ಲಿ ಹಾಸನ ಜಿಲ್ಲೆಯ ಕಾಂಗ್ರೆಸ್ ಪ್ರತಿನಿಧಿಯಾಗಿ ಸಮರ್ಥಿಸಿದರೆ, ವಿಧಾನಸಭೆಯಲ್ಲಿ ಹಾಸನ ಜಿಲ್ಲೆಯ ಕಾಂಗ್ರೆಸ್ ಪ್ರತಿನಿಧಿಯಾಗಿ ಶ್ರೀಕಂಠಯ್ಯ ಜನರ ದೂರು ದುಮ್ಮಾನಗಳನ್ನು ಧ್ವನಿಸುತ್ತಿದ್ದರು.



ಶ್ರೀಕಂಠಯ್ಯ



ಜಿ. ಪುಟ್ಟಸ್ವಾಮಿಗೌಡರು

ಇಬ್ಬರೂ ಕಾಂಗ್ರೇಸ್ ಪಕ್ಷವನ್ನು ಸದೃಢಗೊಳಿಸಿ ಶ್ರೀಮಾನ್ ದೇವೇಗೌಡರಿಗೆ ಅವರ ಪಕ್ಷಕ್ಕೆ ಸವಾಲಾಗಿದ್ದ ಸೇನಾನಿಗಳಿವರು. ಕಾಂಗ್ರೆಸ್ ಕಾರ್ಯಕರ್ತರ ಪಾಲಿಗೆ ಕಣ್ಮಣಿಯಾಗಿದ್ದ ಇಬ್ಬರೂ ಸಾಮಾನ್ಯರ ಬದುಕಿನ ಮೇಲೆ ಅನ್ಯಾಯವಾದಾಗ ಸಿಡಿದೇಳುವ ಪ್ರವೃತ್ತಿ ಮೈಗೂಡಿಸಿಕೊಂಡಿದ್ದರು. 80ರ ಆರಂಭದಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ರಾಜಕೀಯದ ಚೆಸ್ ಗೇಮ್ ಆಟದಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಸೆಣಸಾಡಿ ಹೈಕಮಾಂಡ್ ಸೂಚನೆ ಮೇರೆಗೆ ಸುಮ್ಮನಾದ ಶ್ರೀಕಂಠಯ್ಯನವರ ಸೋಲು ಒಕ್ಕಲಿಗ ಜನಾಂಗದ ಸೋಲಾಗಿತ್ತು. ಆರ್.ಗುಂಡೂರಾಯರು ಮುಖ್ಯಮಂತ್ರಿಯಾದರು. ಶ್ರೀಕಂಠಯ್ಯ ಸಚಿವ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಅದೇ ಸಂದರ್ಭದಲ್ಲಿ ಕುಟುಂಬದ ಕೊನೆಯ ಮಗಳ ಮದುವೆ ಮಾಡಿದ ಶ್ರೀಕಂಠಯ್ಯನವರ ಆಹ್ವಾನಕ್ಕೆ ಇಡೀ ಹೈಕಮಾಂಡ್ ಹಾಸನ ಜಿಲ್ಲೆಯ ಚನ್ನರಾಯಪಟ್ಟಣಕ್ಕೆ ಬಂದಿಳಿದಿತ್ತು.

ದಕ್ಷ ಹಾಗೂ ಪ್ರಾಮಾಣಿಕ ಐಎಫ್ಎಸ್ ಅಧಿಕಾರಿ, ಆಯುಷ್ ಕಮಿಷನರ್ ಆಗಿ ಸೇವೆ ಸಲ್ಲಿಸಿ ಹೆಸರಾದ ಶ್ರೀಕಂಠಯ್ಯ ಮತ್ತು ಸುಮಾ ರವರ ವಿವಾಹ ಅದಾಗಿತ್ತು. ಸ್ವಕ್ಷೇತ್ರದಲ್ಲೇ ಮಗಳ ಮದುವೆ ಮಾಡಿ ಕಾರ್ಯಕರ್ತರಿಗೂ ಊಟ ಹಾಕುವ ಪ್ಲಾನ್ ಅಲ್ಲಿತ್ತು. ಹತ್ತಿರದ ಸಂಬಂಧಿಯೂ

ಆದ ಶ್ರೀಕಂಠಯ್ಯನವರು ಗಣ್ಯರಿಗೆ ಊಟ–ಉಪಚಾರದ ವ್ಯವಸ್ಥೆಯನ್ನು ಉಸ್ತುವಾರಿಯನ್ನು ನೀನೋಡಿಕೊ ಶಿವರಾಮು ಎಂದು ನನಗೆ ವಹಿಸಿದರು. ಶ್ರವಣ ಬೆಳಗೊಳದ ಐಬಿಯಲ್ಲಿ ಹಲವಾರು ಗಣ್ಯರು ಸೇರಿದ್ದರು. ನಾನು ಅದರ ವ್ಯವಸ್ಥೆ ಬಗ್ಗೆ ನಿಗಾ ವಹಿಸಿದೆ. ವೈಟ್ ಅಂಡ್ ವೈಟ್ ದಿರಿಸು ಮತ್ತು ಬಿಳಿ ಚಪ್ಪಲಿ ಹಾಕಿಕೊಂಡು ಯುವ ರಾಜಕಾರಣಿಯಂತೆ ಓಡಾಡುತ್ತಿದ್ದೆ. ಆರ್.ಗುಂಡೂರಾವ್ ಹಾಗೂ ಧರ್ಮಸಿಂಗ್ ಊಟದ ಹಾಲ್ ಕಡೆ ಬಂದು ಕುಳಿತರು. ನಾನು ಅವರ ಊಟದ ಮೇಲ್ವಿಚಾರಣೆಯನ್ನು ನೋಡಿಕೊಂಡೆ. ಗುಂಡೂರಾಯರು ಆತ್ಮೀಯವಾಗಿ ಬೆನ್ನುತಟ್ಟಿ ನಾಗಮಂಗಲದಲ್ಲಿ ಈ ಶಿವರಾಮೇಗೌಡನನ್ನು ಬೆಳೆಸಬೇಕು ಕಣ್ರೀ ಧರ್ಮಸಿಂಗ್ ಅವರೇ ಎಂದರು. ನನ್ನ ಹಿಂದಿನಿಂದ ಬಂದ ಮಾದೇಗೌಡರು ಒಡನೆಯೇ ಮುಂದೆ ಬಂದು ಏನ್ ರಾಯರೇ ನೀವು ಹೇಳಿದ್ದು ಎಂದರು. ಗೌಡ್ರ ಹಿರಿತನಕ್ಕೆ ಬೆಲೆಕೊಟ್ಟು ಸ್ವಲ್ಪ ಪಕ್ಕಕ್ಕೆ ಸರಿದೆ. ಆಗ ಜಿ. ಮಾದೇಗೌಡರು ಅಲ್ಲ ರಾಯ್ರೇ, ಆ ಕುಂಟನಾಗನ್ನ (ಕೆ.ಎನ್.ನಾಗೇಗೌಡ) ಮತ್ತು ಎಸ್.ಎಂ. ಕೃಷ್ಣನ್ನ ಬೆಳೆಸಿ ಅನುಭವಿಸುತ್ತಿರೋದೇ ಸಾಕಾಗದೇ... ಈಗ ಇವ್ನೂ ಅವ್ರ ಬಣ ಸೇರಿಕೊಂಡವ್ನೆ, ನೀವು ಈ ನನ್ಮಗ್ನ ಬೆಳ್ಸಿ ಎಂದು ಹೇಳ್ತಿದ್ದೀರಲ್ಲ ಅಂತ ಮಾದೇಗೌಡರು ಕೊಂಚ ನಿಶಾದಲ್ಲಿ ಮಾತಾಡಿದರು. ಆಗ ನಾನು ಅವ್ರು ನಮ್ಮ ನಾಯಕರು ಅವರಿಲ್ಲದ ಸಂದರ್ಭದಲ್ಲಿ ನೀವು ಮಾತಾಡೋದು ಸರಿಯಲ್ಲ ನಿಲ್ಸಿ ಎಂದೆ. ಆಗ ಒಡನೆಯೇ ಆವೇಶಗೊಂಡ ಮಾದೇಗೌಡರು, ಲೇ ಮುಚ್ಕೊಂಡು ನಿಂತ್ಕೋ ಎಂದ್ರು. ಸರ್... ಗೌರವದಲ್ಲಿ ಮಾತಾಡಿ ಎಂದೆ. ಆಗ ಕೆಟ್ಟ ಬೈಗುಳ ಬಳಸಿದರು. ಆಗ ನನಗೂ ಕೋಪ ಬಂದು ಇಬ್ಬರ ನಡುವೆ ಮಾತಿಗೆ ಮಾತು ನಡೆಯಿತು. ನಂಗೂ ಬಿಸಿರಕ್ತ, ಆಗಷ್ಟೇ ಜಿಲ್ಲಾ ಪರಿಷತ್ ಸದಸ್ಯನಾಗಿ ಜಿಲ್ಲೆಯಲ್ಲಿ ಹೊರ ಹೊಮ್ಮಿದ್ದೆ. ನನಗೂ ಸ್ವಾಭಿಮಾನವಿದೆ. ಕೋಪದಲ್ಲಿ ಡೋರ್‌ಗೆ ಹೊಡೆದೆ. ಆ ಡೋರ್ ಮೇಲೆ ಇದ್ದ ವಾಸ್ಕಲ್ಲು ಬಿದ್ದು ಹೋಯಿತು. ಊಟಕ್ಕೆ ಕುಳಿತವರೆಲ್ಲಾ ಎದ್ದು ಹೊರ ನಡೆದರು.

ಶ್ರೀ ಹರಿಖೋಡೆ, ಡಿ.ಬಿ. ಚಂದ್ರೇಗೌಡರು ಅಲ್ಲಿದ್ದ ಇನ್ನೊಂದಿಬ್ಬರು ನನ್ನನ್ನು ಮತ್ತು ಮಾದೇಗೌಡರನ್ನು ಹಿಡಿದುಕೊಂಡು ಸಮಾಧಾನಪಡಿಸಿದರು. ಅದಾದ ನಂತರದಲ್ಲಿ ನಡೆದ 1989 ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಎಂಪಿಯಾಗಿದ್ದಂತಹ ಮಾದೇಗೌಡರು ನನಗೆ ಟಿಕೆಟ್ ತಪ್ಪಿಸಲು ಹೈಕಮಾಂಡ್ ವೀಕ್ಷಕರ ಬಳಿ ಪಟ್ಟು ಹಿಡಿದು ನಾಗಮಂಗಲದಲ್ಲಿ 'ಚಂದ್ರಶೇಖರ್'ಗೆ ಟಿಕೆಟ್ ಕೊಟ್ಟು ಬಿಡಿ. ಉಳಿದ 6 ಕ್ಷೇತ್ರಗಳು ನಿಮಗೆ ಬಿಟ್ಟಿದ್ದು ಎಂದು ಹಠ ಹಿಡಿದ ಪರಿಣಾಮ ನನಗೆ ಟಿಕೆಟ್ ತಪ್ಪಿತು. ನಾನು ಜನರ ಬಳಿ ಹೋಗಿ ಜನಾಭಿಪ್ರಾಯದಂತೆ ಪಕ್ಷೇತರನಾಗಿ ಸ್ಪರ್ಧಿಸಿದೆ. ಜನರ ಆಶೀರ್ವಾದದೊಂದಿಗೆ ಅತ್ಯಧಿಕ ಮತಗಳಿಂದ ವಿಜಯಿಯಾದೆ. ನನ್ನ ಜೊತೆ ಆ ಚುನಾವಣೆಯಲ್ಲಿ ಕಾಂಗ್ರೆಸ್ ಆದಿಯಾಗಿ ಸ್ಪರ್ಧಿಸಿದ್ದ ಎಲ್ಲರೂ ಠೇವಣಿ ಜಪ್ತಿಯಾಗಿದ್ದು ವಿಶೇಷ. ಕ್ಷೇತ್ರದಾದ್ಯಂತ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಎಂದೇ ಬಿಂಬಿತಗೊಂಡಿದ್ದೆ. ಜನರೆದುರು ಕಣ್ಣೀರು ಹಾಕಿ ಮತ ಯಾಚಿಸಿದೆ. ಎಲ್ಲಿ ಹೋದರೂ ಜನ ಸಭೆಗೆ ನೆರೆಯುತ್ತಿದ್ದುದು ವಿಶೇಷ. ಇಡೀ ಜಿಲ್ಲೆಯಲ್ಲಿ ನಾನು ಜನರ ನಾಯಕನಾದೆ. ಆಗ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅತ್ಯಧಿಕ 177 ಸ್ಥಾನಗಳನ್ನು ಪಡೆದು ದಿಗ್ವಿಜಯ ಸಾಧಿಸಿತು. ಶ್ರೀ ವೀರೇಂದ್ರ ಪಾಟೀಲರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಮುಖ್ಯಮಂತ್ರಿಯಾಗಿ ಅಧಿಕಾರ ಹಿಡಿದರು. ಆಗ ನಾನು ಆಡಳಿತ ಪಕ್ಷ ಕಾಂಗ್ರೆಸ್‌ನ ಸಹ ಸದಸ್ಯ ಶಾಸಕನಾಗಿ ಮುಂದುವರಿದೆ.



ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆ ಪ್ರಕರಣ

ನಾನು ನಿರ್ದೋಷಿ

1989ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ನಾಗಮಂಗಲ ಕ್ಷೇತ್ರದ ಮತದಾರರಿಂದ ಅಭೂತಪೂರ್ವ ಮೆಚ್ಚುಗೆಯ ಮತ ಪಡೆದ ನಂತರ ಇಡೀ ಜಿಲ್ಲೆಯಲ್ಲಿ ನಾನು ಮತ್ತು ಕಿರಗಾವಲು ಕ್ಷೇತ್ರದ ಕೆ. ಎನ್. ನಾಗೇಗೌಡರು ಒಟ್ಟಿಗೆ ಓಡಾಡುತ್ತಾ ಎಲ್ಲರ ಗಮನ ಸೆಳೆದೆವು. ಮಂಡ್ಯದ ನಾಯಕರಿಗೆ ಕಣ್ಣುರಿ. ಅಂದು ಯುವ ಶಾಸಕರಾಗಿದ್ದ ನಾವುಗಳು ಸೃಷ್ಟಿಸಿದ ಹವಾನೇ ಬೇರೆ ಇತ್ತು.

1992ರ ಇಸವಿಯಲ್ಲಿ ವಕೀಲ ಹಾಗೂ ಪತ್ರಕರ್ತ ಗಂಗಾಧರ ಮೂರ್ತಿರವರ ಹತ್ಯೆಯಾಯಿತು. ಆ ಕೊಲೆಯ ಕೇಸಿನಲ್ಲಿ ಶಾಸಕನಾದ ನನ್ನನ್ನು ಕೊಲೆಗೆ ಕುಮ್ಮಕ್ಕು ಎಂದು ಐದು ತಿಂಗಳ ನಂತರ 2ನೇ ಬಾರಿ ನೀಡಿದ ದೂರಿನಲ್ಲಿ ನನ್ನ ರಾಜಕೀಯ ವಿರೋಧಿಗಳು ಷಡ್ಯಂತ್ರ ಮಾಡಿ ನನ್ನ ಹೆಸರನ್ನು ಸೇರಿಸಿ ಎಫ್.ಐ.ಆರ್. ಬುಕ್ ಮಾಡಿಸಿದರು.

ಕೊಲೆ ನಡೆದ ದಿನ ನಾನು ಬೆಂಗಳೂರಿನಲ್ಲಿದ್ದೆ. ಮುಖ್ಯಮಂತ್ರಿ ಬಂಗಾರಪ್ಪನವರ ನಿವಾಸದಲ್ಲಿ ತಿಂಡಿ ತಿನ್ನುತ್ತಾ ಕುಳಿತಿದ್ದೆ.. ಯುವ ಶಾಸಕರಿಗೆ ಶಕ್ತಿ ತುಂಬುವ ಕೆಲಸವನ್ನು ಬಂಗಾರಪ್ಪನವರು ಮಾಡುತ್ತಿದ್ದರು. ಯುವ ಕಾಂಗ್ರೆಸ್‌ನಿಂದ ಬೆಳೆದು ಬಂದವರಿಗೆ ಆಧ್ಯತೆ ಕೊಡುತ್ತಿದ್ದರು. ತನ್ನೊಂದಿಗೆ ಮೊಟ್ಟಮೊದಲ ಬಾರಿಗೆ ಕನಕಪುರ ಕ್ಷೇತ್ರದಿಂದ ಶಾಸನಸಭೆ ಪ್ರವೇಶಿಸಿದ ಡಿ.ಕೆ. ಶಿವಕುಮಾರ್‌ರವರಿಗೆ



ಬಂಧೀಖಾನೆ ಮಂತ್ರಿ ಮಾಡಿ ಎಲ್ಲರ ಹುಬ್ಬೇರುವಂತೆ ಮಾಡಿ ಯುವಕರಿಗೆ ಪ್ರೋತ್ಸಾಹಿಸಿದರು.

ಯುವ ಕಾಂಗ್ರೆಸ್‌ನ ಹೊಸ ಮುಖಗಳಿಗೆ ಮಣೆ..: ನಿಗಮ–ಮಂಡಳಿ ಸ್ಥಾನಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದ ಸಂದರ್ಭದಲ್ಲಿ ಚಾಮರಾಜಪೇಟೆ ಶಾಸಕ ಆರ್. ವಿ. ದೇವರಾಜಗೆ ನಿಗಮ ಮಂಡಳಿ ಅಧ್ಯಕ್ಷನಾಗಿ ಮಾಡಿದ್ದೀರಿ, ನಜೀರ್‌ಗೆ ಸ್ಥಾನ ಕಲ್ಪಿಸಿದ್ದೀರಿ. ನಾನು ಗ್ರಾಮಾಂತರ ಪ್ರದೇಶದಿಂದ, ಅದರಲ್ಲೂ ಬರಡು ನಾಡಿನಿಂದ ಬಂದವನು, ನನಗೂ ಒಂದು ಅವಕಾಶ ಕೊಡಿ ಸಾರ್ ಎಂದು ದುಂಬಾಲು ಬಿದ್ದ ಸಂದರ್ಭವದು. ಅಲ್ಲಿ ಮಂತ್ರಿಗಳಾದ ಚಿಕ್ಕೇಗೌಡರು, ಎಸ್. ರಮೇಶ್ ಹಾಗೂ ಆರ್.ವಿ. ದೇವರಾಜ್ ಸಹ ಇದ್ದರು. ಕರ್ನಾಟಕ ಸರ್ಕಾರದ ರಾಜ್ಯ ಪೋಲಿಸ್ ಮಹಾನಿರ್ದೇಶಕರಾಗಿದ್ದ ರಾಮಲಿಂಗಂ ರವರು ಆ ಸಂದರ್ಭದಲ್ಲಿ ನಮ್ಮ ಜೊತೆಯಲ್ಲೇ ಇದ್ದರು. ಅವರಿಗೆ ವೈರ್‌ಲೆಸ್ ಮೂಲಕ ಏನೋ ಸಂದೇಶ ಬಂದ ಕಾರಣ, ಹೊರಗೆ ಹೋದರು. ಸ್ವಲ್ಪ ಹೊತ್ತು ಬಿಟ್ಟು ಗಡಿಬಿಡಿಯಲ್ಲಿ ಒಳಗೆ ಬಂದವರು ನನ್ನ ಬಳಿ ಬಂದು ಕಿವಿಯಲ್ಲಿ ಶಿವರಾಮೇಗೌಡರೇ, ನಿಮ್ಮ ಕ್ಷೇತ್ರದ ಬೆಳ್ಳೂರು ಠಾಣೆಯ ವ್ಯಾಪ್ತಿಯಲ್ಲಿ ವಕೀಲರೊಬ್ಬರ ಕೊಲೆಯಾಗಿದೆಯಂತೆ ಎಂದರು. ಡಿ.ಜಿ. ರಾಮಲಿಂಗಂ ರವರು ಮತ್ತೆ ವೈರ್‌ಲೆಸ್ ಮೂಲಕ ಮೆಸೇಜ್ ಬಂದ ಕಾರಣ, ಪುನಃ ಹೊರಗೆ ಹೋಗಿ ಒಳ ಬಂದವರು, ಮತ್ತೆ ನನ್ನ ಬಳಿ ಬಂದು ಸರ್, ಕೊಲೆಯಾದ ಸ್ಥಳಕ್ಕೆ ಭಾರಿ ಜನ ಸೇರುತ್ತಿದ್ದಾರಂತೆ, ಬಸ್‌ಗಳಿಗೆಲ್ಲಾ ಕಲ್ಲು ಹೊಡೆಯುತ್ತಿದ್ದಾರಂತೆ. ಪ್ರತಿಭಟನೆ ನಡೆಯುತ್ತಿದೆಯಂತೆ. ಈ ಕೂಡಲೇ ಮಂಡ್ಯ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರವಾಣಿ ಕರೆಮಾಡಿ, ಪರಿಸ್ಥಿತಿ ತಹಬಂದಿಗೆ ತರಲು ಹೇಳಿ ವರದಿ ತರಸಿಕೊಳ್ಳುತ್ತಿದ್ದೇನೆ. ಕೊಲೆ ನಡೆದ ಸ್ಥಳ ಕಂಚನಹಳ್ಳಿ ಗ್ರಾಮ ಎಂದರು. 'ಇದೇನಪ್ಪ ಹೊಸ ತಲೆಬಿಸಿ' ಎನ್ನುತ್ತ ಮುಖ್ಯಮಂತ್ರಿಗಳ ಜೊತೆ ಆಹವಾಲು ಸಲ್ಲಿಸುತ್ತಿದ್ದ ನಾನು ಹೊರನಡೆದೆ.

ಕಂಚನಹಳ್ಳಿಯ ಗಂಗಾಧರ ಮೂರ್ತಿ ವಕೀಲಿ ಕೆಲಸದ ಜೊತೆಗೆ ಸುದ್ದಿ ಸಂಗ್ರಹಕರಾಗಿ ಬರೆಯುತ್ತಿದ್ದರು. ಶಾಸಕನಾಗಿದ್ದ ನನ್ನ ಮೇಲೆ ಕಪ್ಪೋಲ ಕಲ್ಪಿತ ಸುದ್ದಿಗಳನ್ನು ಸರಣಿ ರೀತಿಯಲ್ಲಿ ಪ್ರತಿವಾರ ಲಂಕೇಶ್ ಪತ್ರಿಕೆಯಲ್ಲಿ ಬರೆದು ಲೇಖನದ ಕಡೆಯಲ್ಲಿ ಶಾಸಕ ಶಿವರಾಮೇಗೌಡರ ಕುಮ್ಮಕ್ಕಿನಿಂದ ಎಂದು ಬರೆದು ಬಿಡುತ್ತಿದ್ದರು. ಅದು ಆತನ ಛಾಳಿಯಾಗಿತ್ತು. ಲೇಖನಗಳನ್ನು ಗಮನಿಸುತ್ತಿದ್ದ ನಾನು ಯಾವತ್ತೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ, ಪತ್ರಿಕಾ ವರದಿಯನ್ನು ಒಂದು ಸಾಮಾನ್ಯ ಸುದ್ದಿ ಎಂಬಂತೆ ಓದಿ ಸುಮ್ಮನಾಗುತ್ತಿದ್ದೆ.

ಗಂಗಾಧರಮೂರ್ತಿ ಕೊಲೆಯನ್ನು ನನ್ನ ವಿರುದ್ಧದ ಅಸ್ತ್ರವಾಗಿ ಬಳಸಲಾಯಿತು. ನಾನು ಕಾಂಗ್ರೆಸ್ ಪಕ್ಷದ ಸಹ ಸದಸ್ಯನಾದ್ದರಿಂದ ಪಕ್ಷಕ್ಕೂ ಮುಜುಗರ ಉಂಟಾಯಿತು. ಅದಕ್ಕೆ ಇಂಬುಕೊಟ್ಟಂತೆ ಮಾನ್ಯ ದೇವೇಗೌಡರ ನೇತೃತ್ವದ ಜನತಾದಳದ ಮುಖಂಡರು ಹಾಗೂ ಪತ್ರಕರ್ತ ಲಂಕೇಶ್ ರವರು ಖಿದ್ದು ನಾಗಮಂಗಲದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಈ ಕೊಲೆಯನ್ನು ಖಂಡಿಸಿದರು. ಶ್ರೀಮಾನ್ ಹೆಚ್.ಡಿ. ದೇವೇಗೌಡರಂತೂ ಮೃತ ಗಂಗಾಧರ ಮೂರ್ತಿಯ ಫೋಟೋವನ್ನು ತಲೆಯ ಮೇಲಿಟ್ಟುಕೊಂಡು ನಾಗಮಂಗಲದ ಬೆಳ್ಳೂರಿನಿಂದ ಕಂಚನಹಳ್ಳಿವರೆಗೆ ಬಾಯಿಗೆ ಕಪ್ಪು ಪಟ್ಟಿ ಧರಿಸಿ ಸುಮಾರು 8 ಕಿ.ಮೀ. ದೂರದವರೆಗೆ ನೂರಾರು ಕಾರ್ಯಕರ್ತರ ಜೊತೆ ಪಾದಯಾತ್ರೆ ನಡೆಸಿದರು. ಇದು ಅಂದಿನ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿತು.

ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ಆಶೀರ್ವಾದ ಮತ್ತು ಬೆಂಬಲದಿಂದ ನಿರಂತರ ಎಷ್ಟೇ ಪ್ರತಿಭಟನೆ, ಟೀಕೆ–ಟಿಪ್ಪಣಿ ನಡೆದರೂ ನಾನು



ಆರಾಮಾಗಿದ್ದೆ. ನನ್ನ ಹಣೆಬರಹಕ್ಕೆ ಈ ಕೊಲೆಯಾದ ನಾಲ್ಕು ತಿಂಗಳ ನಂತರ ಬಂಗಾರಪ್ಪನವರನ್ನು ಮುಖ್ಯಮಂತ್ರಿ ಪಟ್ಟದಿಂದ ಕೆಳಗಿಳಿಸಬೇಕು ಎಂದು ದೆಹಲಿಯಿಂದ ವೀಕ್ಷಕರಾದ ವೈ.ವಿ. ಚೌಹಾಣ್ ಮತ್ತು ಎ.ಕೆ. ಆಂಟನಿ ಬರುತ್ತಾರೆ. ಅವರು ಶಾಸಕರ ಅಭಿಪ್ರಾಯ ಕೇಳುವಾಗ, ನಾವೊಂದಷ್ಟು ಜನ ಯುವ ಶಾಸಕರು ಬಂಗಾರಪ್ಪ ಕೀ ಜೈ, ಮೇರಾ ಸಿಎಂ ಕೀ ಜೈ ಎಂದು ಜೈಕಾರ ಕೂಗಿದವು. ಈ ಗುಂಪಲ್ಲಿ ನಾನು, ಡಿಕೆ ಶಿವಕುಮಾರ್, ಆರ್.ವಿ. ದೇವರಾಜ, ನಜೀರ್ ಇನ್ನಿತರರು ಇದ್ದೆವು. ಎಲ್ಲರೂ ಸೇರಿ ವೀಕ್ಷಕರ ಮುಂದೆ ಜೈಕಾರ ಹಾಕಿದ ಫೋಟೋ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯೂ ಆಯಿತು. ಆ ಫೋಟೋಗಳ ಪ್ರತಿ ಮತ್ತು ಪತ್ರಿಕೆ ಕಟಿಂಗ್ಸ್‌ಗಳನ್ನು ಮೊಯ್ಲಿಯವರ ಮುಂದೆ ಹಿಡಿದು... ನೋಡಿ ಸಾರ್, ಹೈಕಮಾಂಡ್ ನಿಮ್ಮನ್ನು ಮುಖ್ಯಮಂತ್ರಿ ಮಾಡೋದನ್ನು ತಪ್ಪಿಸಲು ನಿಮ್ಮ ವಿರುದ್ಧ ಇವರೆಲ್ಲ ಹೇಗೆ ನಡೆದುಕೊಳ್ಳುತ್ತಿದ್ದಾರೆಂದು ದೂರಿತ್ತರು. ಹೈಕಮಾಂಡ್ ಕಡೆಗೂ ಅವರನ್ನೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಿ ಪಟ್ಟಕ್ಕೆ ಕೂರಿಸಿತು. ಮೊಯ್ಲಿಯವರು ಮುಖ್ಯಮಂತ್ರಿಯಾದ ಐದೇ ದಿನಕ್ಕೆ ನಾನು ನಿರೀಕ್ಷಿಸಿದಂತೆಯೇ ಅರೆಸ್ಟ್ ಆದೆ. ಗೌಡರು ಹಾಗೂ ಮಂಡ್ಯದ ನಾಯಕರು ನನ್ನ ಬಂಧನಕ್ಕೆ ಮೊಯ್ಲಿಯವರ ಮೇಲೆ ಒತ್ತಡ ತಂದರೆಂದು ತಿಳಿಯಿತು. ಕೊಲೆಯಾಗಿ ನಾಲ್ಕು ತಿಂಗಳ ನಂತರ ನನ್ನ ವಿರುದ್ಧದ ಶಕ್ತಿಗಳೆಲ್ಲಾ ಒಗ್ಗೂಡಿ ಕಾರ್ಯ ಸಾಧಿಸಿದವು. ನನಗೆ ಸಿಒಡಿಯಿಂದ ಅರೆಸ್ಟ್ ವಾರೆಂಟ್ ಬಂತು. 'ಶಿವರಾಮೇಗೌಡರನ್ನು ಕೊಲೆ ಕೇಸಿನ ಕುಮ್ಮಕ್ಕಿನಡಿಯಲ್ಲಿ ಬಂಧಿಸುವ ಸಾಧ್ಯತೆ ಇದೆ' ಎಂದು ಸಂಜೆವಾಣಿ ಸೇರಿದಂತೆ ಪ್ರಮುಖ ದಿನಪತ್ರಿಕೆಗಳು ಸುದ್ದಿ ಪ್ರಕಟಿಸಿದವು. ಸಿಒಡಿಯವರು ನನಗೆ ನೋಟಿಸ್ ನೀಡಿದರು. ಸಿ.ಒ.ಡಿ. ಕರೆಗೆ ಓಗೊಟ್ಟು ಮೊದಲ ದಿನ ಮಳವಳ್ಳಿಯ ಮಲ್ಲಾಜಮ್ಮ ಮತ್ತು ಗುರುದೇವ್ ಜೊತೆಯಲ್ಲಿ ತೆರಳಿ ವಿಚಾರಣೆ ಎದುರಿಸಿದೆ. ತನಿಖಾಧಿಕಾರಿಗಳು ನನ್ನ ಹೇಳಿಕೆ ದಾಖಲಿಸಿಕೊಂಡರು. 2 ನೇ, 3ನೇ ದಿನವೂ ಹೋಗಿ ಬಂದೆ. ಜೊತೆಗೆ ನ್ಯಾಯಾಲಯದಲ್ಲಿ ಬೇಲ್ ಗಾಗಿ ಅರ್ಜಿ ಹಾಕಿದ್ದೆ. ಘನ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ಮಂಜೂರು ಮಾಡಿತ್ತು. ಆದರೆ ನನ್ನ ಹಿತ ಶತ್ರುಗಳಾದವರು ತಮ್ಮ ವಕೀಲಿಕೆಯ ಎಲ್ಲ ನೈಪುಣ್ಯತೆಯನ್ನು ನನ್ನ ಕೇಸಿನ ಮೇಲೆ ಪ್ರಯೋಗಿಸಿದ ಬೆನ್ನಲ್ಲೇ ಬೇಲ್ ಸಿಗದಂತೆ ನಿಗಾವಹಿಸಿದರು. ಇದು ವಕೀಲರೊಬ್ಬರ ಕಗ್ಗೊಲೆ ಪ್ರಕರಣ ನ್ಯಾಯವಾದಿಗಳೆಲ್ಲರೂ ಒಗ್ಗೂಡಿ ಈ ಕೇಸಿನ ಪರ ನಿಲ್ಲಲು ಠರಾವು ಪಾಸು ಮಾಡಿಕೊಂಡಿದ್ದರು ಮತ್ತು ಈ ಕೇಸಿನ ಪರ ವಕಾಲತ್ತು ವಹಿಸುವ ವಕೀಲರ ವಿರುದ್ಧ ಶಿಸ್ತುಕ್ರಮಕ್ಕೆ ಮುಂದಾಗಲು ಸಜ್ಜಾಗಿದ್ದ ಸಂಧರ್ಭದಲ್ಲಿ ನನ್ನ ಆತ್ಮೀಯ ಗೆಳೆಯ ನನ್ನ ಸ್ನೇಹಿತ ಪ್ರೊ. ಬಸವರಾಜು ನನಗೇ ಗೊತ್ತಿಲ್ಲದೆ ಈ ಕೇಸಿನ ಎಲ್ಲಾ ಮಾಹಿತಿಯನ್ನು ಪಡೆದುಕೊಂಡು ನನಗೆ ಸಹಾಯ ಮಾಡುವ ದೃಷ್ಟಿಯಿಂದ ಪ್ರಖ್ಯಾತ ವಕೀಲರಾದ ಸಿ.ಹೆಚ್. ಹನುಮಂತರಾಯರನ್ನು ಒಪ್ಪಿಸಿ ಮಂಡ್ಯಕ್ಕೆ ಕರೆತರುತ್ತಾರೆ. ಈ ಸಂದರ್ಭದಲ್ಲಿ ಸ್ನೇಹಿತರಾದ ಬಸವರಾಜು ಮೇಲೆ ಮಂಡ್ಯದ ವಕೀಲರು ಹಲ್ಲೆಗೆ ಪ್ರಯತ್ನಿಸಿ ಅವರನ್ನು ಎಳೆದಾಡಿದಾಗ ಅವರ ಕೋಟ್ ಸಹ ಹರಿದು ಹೋಗುತ್ತದೆ. ಆದರೂ ಬಸವರಾಜು ರವರು ಎದೆಗುಂದದೆ ವಕೀಲರಾದ ಹನುಮಂತರಾಯರ ಜೊತೆ ಕೋರ್ಟ್ ಹಾಲ್ ಪ್ರವೇಶಿಸುತ್ತಾರೆ. ಕೇಸಿಗೆ ತಡೆಯಾಜ್ಞೆ ಸಿಗುವಂತೆ ಹನುಮಂತರಾಯರು ವಾದವನ್ನು ಸಹ ಮಂಡಿಸುತ್ತಾರೆ. ಆದರೆ ತೀರ್ಪು ಬರುವುದು ತಡವಾಗುತ್ತದೆ. ಆಗ ನನ್ನ ವಿರೋಧಿ ಬಣದವರ ಷಡ್ಯಂತ್ರದಿಂದ ಬೇಲ್ ಸಿಗದಂತೆ ಆದ ಪರಿಣಾಮ, ನನ್ನನ್ನು ಸಂಜೆ 4ರ ಸಮಯ ಸಿ.ಒ.ಡಿ. ಯವರು ಬಂಧಿಸುತ್ತಾರೆ. ಆ ಕರಾಳ ದಿನಗಳು ಯಾವ ಶತ್ರುವಿಗೂ ಬೇಡ.. ಆನಂತರ ಈ ಕೇಸು ರಾಜಕೀಯ ರೂಪ ಪಡೆದು ವೀರಪ್ಪಮೊಯ್ಲಿ ಸರ್ಕಾರದಲ್ಲಿ ನಾನೂ ಬಂಧನಕ್ಕೊಳಗಾದೆ. ಪ್ರಕರಣದ ಕುರಿತು ಸುಮಾರು ಒಂಬತ್ತು ವರ್ಷಗಳ ಕಾಲ ಸುದೀರ್ಘ ತನಿಖೆ ಮತ್ತು ನ್ಯಾಯಾಂಗ ವಿಚಾರಣೆ ನಡೆಯಿತು.

ಈ ಅವಧಿಯಲ್ಲಿ ನಾನು ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸಬೇಕಾಯಿತು. ಆದಾಗ್ಯೂ, ನ್ಯಾಯದ ಮೇಲಿನ ನನ್ನ ನಂಬಿಕೆಯನ್ನು ಕಳೆದುಕೊಳ್ಳದೆ ನ್ಯಾಯಾಲಯದ ಮುಂದೆ ಸತ್ಯವನ್ನು ಮಂಡಿಸಿದೆ. ಅಂತಿಮವಾಗಿ, ನನ್ನನ್ನು ರಾಜಕೀಯವಾಗಿ ಮಣಿಸಲು ನಡೆಸಿದ ಎಲ್ಲಾ ಪ್ರಯತ್ನವು ವಿಫಲವಾಗಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ನನ್ನನ್ನು ನಿರ್ದೋಷಿ ಎಂದು ಘನ ನ್ಯಾಯಾಲಯವು ಆದೇಶ ನೀಡಿತು. ಜೊತೆಗೆ ಈ ಪ್ರಕರಣ ನ್ಯಾಯಾಲಯದಲ್ಲಿ ನಡೆಯುತ್ತಿರುವಾಗಲೇ ನಾಗಮಂಗಲದ ಮತದಾರ ಪ್ರಭುಗಳು ಮತ್ತೊಂದು ಬಾರಿಗೆ ಅಧಿಕ ಮತಗಳಿಂದ ಆರಿಸಿ ಕಳಿಸಿದ್ದರು. ಆದರೂ ರಾಜಕೀಯ ವಿರೋಧಿಗಳು ಈ ಪ್ರಕರಣ ಮುಗಿಯುವುದರೊಳಗೆ ಮತ್ತೊಂದು ಚುನಾವಣಾ ಪ್ರಕರಣವನ್ನು ನನ್ನ ಮೇಲೆ ದಾಖಲಿಸಲು ಸನ್ನದ್ಧರಾಗಿದ್ದರು. ಈ ಕಾಲಘಟ್ಟದಲ್ಲಿ ಹಿರಿಯರು ಹೇಳಿದಂತೆ ಮಾಡಿದುಣ್ಣೋ ಮಹರಾಯ ಎಂಬಂತೆ ನನ್ನನ್ನು ರಾಜಕೀಯವಾಗಿ ಮಣಿಸಲೆತ್ನಿಸಿದ ಹಲವರು ಈಗಲೂ ದೇವರ ಕೃಪೆಯಿಂದ ಕಷ್ಟ–ಕೋಟಲೆಯಲ್ಲಿ ಬೇಯುತ್ತಿದ್ದಾರೆ.

ಆದರೂ ನನಗೆ ಕೊಡಬಾರದ ತೊಂದರೆಯನ್ನು ಕೊಟ್ಟರೂ ಆ ಎಲ್ಲಾ ಕಷ್ಟ–ಕೋಟಲೆಗಳನ್ನು ಜಯಿಸಿ ಸಮಾಜದಲ್ಲಿ ನನ್ನದೇ ಆದಂತಹ ಶೈಲಿಯಲ್ಲಿ ಜೀವನೋದ್ಧಾರದಲ್ಲಿ ನಿಮ್ಮೆಲ್ಲರ ಮುಂದೆ ಗ್ರಾಮೀಣ ಪ್ರದೇಶದಿಂದ ಬಂದು ಈ ಬೆಂಗಳೂರಿನ ಜನಮಾನಸದಲ್ಲಿ ನನ್ನನ್ನು ಶೈಕ್ಷಣಿಕೋದ್ಯಮದಲ್ಲಿ ಪರಿಚಯಿಸಿ ಸಾವಿರಾರು ವಿದ್ಯಾರ್ಥಿಗಳನ್ನು ಈ ದೇಶಕ್ಕೆ ಉನ್ನತ ಸತ್ಪ್ರಜೆಗಳನ್ನಾಗಿ ಮಾಡಿದ ಸಂತೋಷ ನನ್ನೊಂದಿಗೆ ಮತ್ತು ನನ್ನ ಕುಟುಂಬದ ಜೊತೆ ಸದಾ ನಿಲ್ಲುತ್ತದೆ.



ಗ್ರಾಮದೇವತೆಯ ನೆನೆದು



ನನ್ನೂರು ನಾಗಮಂಗಲ ತಾಲೂಕು ಕೇಂದ್ರದಿಂದ 24 ಕಿಮೀ ದೂರದಲ್ಲಿದೆ. ಲಾಳನಕೆರೆ ಶಕ್ತಿದೇವತೆ ಶ್ರೀ ಅಭಲಾ ಪರಮೇಶ್ವರಿ ಶ್ರದ್ಧಾ ಭಕ್ತಿಗಳನ್ನು ಸಮರ್ಪಿಸುತ್ತಾ, ಶ್ರೀ ದೇವಿಯ ಜಾತ್ರಾ ಮಹೋತ್ಸವವು ಪ್ರತಿವ ರ್ಷ ಯುಗಾದಿ ಹಬ್ಬದ ನಂತರ ವಿಜೃಂಭಣೆಯಿಂದ ಜರುಗುತ್ತದೆ. ಈ ಹಬ್ಬದ ಸಮಯದಲ್ಲಿ ರಂಗ ಕುಣಿತ,ಲಿಂಗದ ವೀರರ ಕುಣಿತ,ಬಸವನ ಪೂಜೆ ಮತ್ತು ಮೆರವಣಿಗೆ, ಕತ್ತಿವರಸೆ ಹಾಗೂ ಇತರ ಸಾಂಸ್ಕೃತಿಕ ಪೂಜೆಗಳು ಮೇಳೈಸಿ ಹಬ್ಬದ ವಾತಾವರಣವನ್ನು ಸೃಷ್ಟಿಸುತ್ತವೆ. ವಿಶೇಷ ಏನೆಂದರೆ ಸುಮಾರು 12 ದಿನಗಳ ಕಾಲ ಶುಚಿತ್ವದಿಂದ ಇರಬೇಕು. ಚಪ್ಪಲಿ ಧರಿಸುವಂತಿಲ್ಲ. ಧರಿಸಿ ಯಾರೂ ಗ್ರಾಮ ಪ್ರವೇಶಿಸುವಂತಿಲ್ಲ.ಮನೆಯಲ್ಲಿ ಒಗ್ಗರಣೆ ಹಾಕುವಂತಿಲ್ಲ. ಸಾತ್ವಿಕ ಆಹಾರ ಮತ್ತು ಮಾಂಸಾಹಾರಗಳೂ ಸಂಪೂರ್ಣ ನಿಷಿದ್ಧ.ಕೆಲಸದ ನಿಮಿತ್ತ ಮನೆಯಿಂದ ಹೊರಗೆ ಹೋಗಿ ವಾಪಸ್ಸು ಬಂದು ಸ್ನಾನ ಮಾಡಿ ಒಳಗೆ ಬರಬೇಕು. ಬಂಧು ಮಿತ್ರರು ಈ ಅವಧಿಯಲ್ಲಿ ಸುಮಾರು ಒಂಬತ್ತು ಗ್ರಾಮಗಳಿಗೆ ಬರುವಂತಿಲ್ಲ. ಜಾತ್ರೆಯ ದಿನ ದೇವರ ಉತ್ಸವ, ಕೊನೆಯ ದಿನ ಉರಿಗದಿಗೆಯನ್ನು ದೇವಿಯ ಅರ್ಚಕರು ಶೃದ್ಧಾ ಭಕ್ತಿಯಿಂದ ತಲೆಯ ಮೇಲೆ ಹೊತ್ತುಕೊಂಡು ಪ್ರದಕ್ಷಿಣೆ ಹಾಕುತ್ತಾರೆ. ಈ ಸಂಭ್ರಮವನ್ನು ಭಕ್ತಾಧಿಗಳು ಕಣ್ಣು ತುಂಬಿಕೊಳ್ಳುತ್ತಾರೆ. ಈ ದೇವರ ಮತ್ತೊಂದು ವಿಶೇಷವೇನೆಂದರೆ, ಯಾರೇ ತಪ್ಪು ಮಾಡಿದರೂ ಮೋಸ, ಸುಳ್ಳು ಹೇಳಿದರೂ ಕೂಡ ಈ ದೇವಿಯ ಸಮ್ಮುಖದಲ್ಲಿರುವ ಕಂಬಗಳನ್ನು ತಬ್ಬಿ ಪ್ರಮಾಣ ಮಾಡಲು ಈಗಲೂ ಹಿಂಜರಿಯುತ್ತಾರೆ. ದೇವಸ್ಥಾನದ ಮುಂದೆ ಪ್ರಮಾಣ ಮಾಡಿ ಅದೆಷ್ಟೋ ನ್ಯಾಯ – ಪಂಚಾಯಿತಿಗಳು ಬಗೆ ಹರಿದ ಉದಾಹರಣೆಗಳಿವೆ. ತಪ್ಪು ಮಾಡಿದವರು ತಪ್ಪೊಪ್ಪಿಗೆ ಕಾಣಿಕೆ ಕೊಟ್ಟು ಶರಣಾದ ಘಟನೆಗಳು ಈಗಲೂ ಜರುಗುತ್ತಿರುವುದು ಸೋಜಿಗ. ಇದು ಲಾಳನಕೆರೆ ಗ್ರಾಮದ ಐತಿಹ್ಯ. ಇತಿಹಾಸವೆಂದರೆ ಪೂರ್ವಜರ ಕಾಲದಿಂದಲೂ ದೇವಿಯ ಅತ್ಯಮೂಲ್ಯವಾದ ಆಭರಣಗಳು ನಮ್ಮ ಊರಿನ ಮನೆಯಲ್ಲಿಯೇ ಇಟ್ಟಿದ್ದು ಪ್ರತ್ಯೇಕ ಕೊಠಡಿಯನ್ನು ಇದಕ್ಕಾಗಿಯೇ ನಿರ್ಮಿಸಲಾಗಿದೆ. ವರ್ಷಕ್ಕೊಮ್ಮೆ ಊರಿನ ಹಿರಿಯರು ಹಬ್ಬದ ದಿನಗಳಲ್ಲಿ ಆಭರಣಗಳನ್ನು ತೆಗೆದುಕೊಂಡು ಹೋಗುತ್ತಾರೆ.

ವಿರೋಧಿಗಳ ತಕರಾರು ನ್ಯಾಯಾಲಯದಲ್ಲಿ ಪಾರು



ಟಿ.ಎನ್. ಶೇಷನ್



ಕಪಿಲ್ ಸಿಬಲ್



ಮಂಡ್ಯದ ಹಿರಿತಲೆಗಳು ನನ್ನನ್ನು ಕೊಲೆ ಕೇಸಿನಲ್ಲಿ ಸಿಲುಕಿಸಿ ಜೈಲಿಗೆ ಹೋಗುವಂತೆ ಮಾಡಿ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸಿದ್ದನ್ನು ಜಾಣ್ಮೆಯಿಂದ, ಕಾನೂನಿನ ಕುಣಿಕೆಯಿಂದ ಪಾರಾಗಿ ಬಂದು ನಿಟ್ಟುಸಿರು ಬಿಡುತ್ತಿರುವಾಗಲೇ ಮತ್ತೆ ಜಾಗೃತಗೊಂಡ ಮತ್ತೆ ಜಾಗೃತಗೊಂಡ ಜಿಲ್ಲಾ ರಾಜಕೀಯ ನಾಯಕರು ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು ಆ ಕೇಸು ಏನೆಂದರೆ 1989 ರ ಪಕ್ಷೇತರ ಅಭ್ಯರ್ಥಿ ಎಲ್.ಆರ್. ಶಿವರಾಮೇಗೌಡ ಮತ ಖರೀದಿಸಿ, ಕ್ಷೇತ್ರದ ಮತದಾರರಿಗೆ ಹಣ ಹಂಚಿ ನೀಡಿದ ಆಮಿಷಗಳಿಂದಾಗಿ ಗೆದ್ದು ಬೀಗಿದ್ದಾನೆ ಎಂಬುದು. ಸೋತ ಅಭ್ಯರ್ಥಿ ಕಾಂಗ್ರೇಸ್ ಪಕ್ಷದ ಉಮೇದುವಾರ

ಟಿ.ಎಂ. ಚಂದ್ರಶೇಖರ್ ರವರನ್ನು ಕರೆತಂದು ನ್ಯಾಯಾಲಯಕ್ಕೆ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿದ ಈ ಕೇಸು ಹೈಕೋರ್ಟ್‌ನಲ್ಲಿ ವ್ಯತಿರಿಕ್ತ ತೀರ್ಪು ನನ್ನ ಜಂಘಾಬಲ ಉದುಗಿಸಿತು. ಸುಪ್ರೀಂ ಕೋರ್ಟಿಗೆ ಹೋದೆ. ಅಲ್ಲಿ ನನ್ನ ಅಡ್ವೋಕೇಟ್ ಆಗಿದ್ದವರು ಜನಾರ್ಧನ್. ಅವರು ಈ ಮೊದಲು ಕರ್ನಾಟಕ ಅಡ್ವೋಕೇಟ್ ಜನರಲ್ ಕೂಡ ಆಗಿದ್ದವರು, ಅವರಿಗೆ ವೃದ್ಧಾಪ್ಯ ಬೇರೆ, ಅವರು ಸುಪ್ರೀಂ ಕೋರ್ಟಿನಲ್ಲಿ ಅಡ್ವೋಕೇಟ್ ಆಗಿ ಪ್ರಾಕ್ಟೀಸ್ ಪ್ರಾರಂಬಿಸಲು ಶುರು ಮಾಡಿದರು. ಗೌಡರೇ ಇನ್ನು ಮುಂದೆ ನಾನು ದೂರದ ದೆಹಲಿಯಲ್ಲಿ ಇರುತ್ತೇನೆ ಎಂದರು. ಇಲ್ಲಿಯವರೆಗೆ ನನ್ನ ಕೇಸನ್ನು ನೀವೇ ಹ್ಯಾಂಡಲ್ ಮಾಡಿದ್ದೀರಿ, ಯಾರಾದರೂ ನಿಮಗೆ ಗೊತ್ತಿರುವ ನಿಮ್ಮಷ್ಟೇ ಮುತುವರ್ಜಿ ವಹಿಸಿ ಕೇಸು ಮುಗಿಸಿಕೊಡುವ ಒಬ್ಬ ಖಡಕ್ ವಕೀಲರೊಬ್ಬರ ಸೂಚಿಸಿ ಅಂದೆ. ಅವರು ಒಡನೆಯೇ ವಕೀಲೆ ಪ್ರಮೀಳಾ ನೇಸರ್ಗಿಗೆ ಕೇಸು ವಹಿಸಲು ಹೇಳುತ್ತೇನೆ ಎಂದರು. ಆನಂತರದ ದಿನಗಳಲ್ಲಿ ಅವರೇ ಈ ಕೇಸನ್ನು ಮುಂದುವರೆಸಿದರು, ಪ್ರಮೀಳಾ ನೇಸರ್ಗಿಗೆ ಬೇಗ ಇತ್ಯರ್ಥಗೊಳಿಸಿ ಮೇಡಂ ಎಂದು ಕೋರಿದೆ. ಒಂದು ಬಾರಿ ಈ ಕೇಸು ಸಂಬಂಧ ಕೋರ್ಟ್ ಕಲಾಪದಲ್ಲಿ ಭಾಗಿಯಾಗಿ ಹೊರಬಂದರೆ ಲಕ್ಷಗಳಷ್ಟು ಖರ್ಚಾಗುತ್ತಿತ್ತು. ಈ ಕೇಸು ವ್ಯಾಜ್ಯ ಪ್ರಕರಣ ನಡೆಯುತ್ತಿರುವಾಗಲೇ ನನ್ನ ಮತ್ತೊಂದು ಚುನಾವಣೆ ಎದುರಾಯ್ತು, ಆವಾಗಲೂ ಸಹ 26 ಸಾವಿರ ಮತಗಳ ಅಂತರದಲ್ಲಿ ಪುನರಾಯ್ಕೆಗೊಂಡೆ.



ಸ್ಪೀಕರ್ ರಮೇಶ್ ಕುಮಾರ್‌ರವರನ್ನು ನಾನು ಮರೆಯುವಂತೆಯೇ ಇಲ್ಲ

1994 ರಲ್ಲಿ ಎರಡನೇ ಬಾರಿ ನಾನು ವಿಜಯಿಯಾದಾಗ, ನಮ್ಮ ವಕೀಲರು ಒಂದು ಯಡವಟ್ಟು ಮಾಡಿಬಿಟ್ಟರು. ಅದೇನೆಂದರೆ, ನನ್ನ ಪಿರ್ಯಾದುದಾರರಾದ ನಾಗಮಂಗಲ ಕ್ಷೇತ್ರದ ಶಾಸಕ ಎಲ್.ಆರ್. ಶಿವರಾಮೇಗೌಡರು ಮತ್ತೆ ಅದೇ ಕ್ಷೇತ್ರದಿಂದ ಅತ್ಯಧಿಕ ಮತದಿಂದ ಪುನರಾಯ್ಕೆಗೊಂಡು ಜಯಿಸಿದ್ದಾರೆ. ಜನತಾ ಜನಾರ್ಧನರ ನ್ಯಾಯಾಲಯವೇ ತೀರ್ಪಿತ್ತಿದೆ ಎಂದ ಮೇಲೆ ಈಗ ನಾವು ನಡೆಸುತ್ತಿರುವ ತಕರಾರು ಅರ್ಜಿಗೆ ಮನ್ನಣೆಗೊಡದೇ ಅರ್ಜಿ ಹಿಂಪಡೆಯುತ್ತೇನೆಂದರು. ಅಲ್ಲಿಯವರೆಗೆ ತಡೆಯಾಜ್ಞೆ ಇದ್ದ ಕೇಸು ಆನಂತರ ತಡೆಯಾಜ್ಞೆ ತೆರವುಗೊಂಡಿತು. ಅದನ್ನೇ ಕಾದು ಕುಳಿತಿದ್ದ ನನ್ನ ವಿರೋಧಿಗಳು ದೆಹಲಿಗೆ ದೌಡಾಯಿಸಿ ಅಂದಿನ ಕೇಂದ್ರ ಚುನಾವಣಾ ಆಯುಕ್ತರಾದ ಟಿ.ಎನ್.ಶೇಷನ್‌ರವರಿಗೆ ಪತ್ರ ಬರೆಯುವುದರ ಜೊತೆಗೆ ಕಾನೂನು ತಜ್ಞರ ನೇತೃತ್ವದಲ್ಲಿ ಖುದ್ದು ಹಾಜರಾಗಿ ಎಲ್ಲ ವಿಷಯ ಮಂಡಿಸಿ ಬಂದರು. ಆ ಪತ್ರವನ್ನು ಕೂಲಂಕುಷವಾಗಿ ಪರಿಶೀಲಿಸಿದ ಶೇಷನ್‌ರವರು ಆಗ ಜೆ.ಹೆಚ್. ಪಟೇಲರ ಸರ್ಕಾರದಲ್ಲಿ ವಿಧಾನಸಭಾಧ್ಯಕ್ಷರಾಗಿದ್ದ ಕೆ.ಆರ್. ರಮೇಶ್ ಕುಮಾರ್ ಅವರಿಗೆ ಈ ಕ್ಷಣ ಶಾಸಕ ಶಿವರಾಮೇಗೌಡರನ್ನು ಅನರ್ಹಗೊಳಿಸಿ ಚುನಾವಣೆ ಆಯೋಗಕ್ಕೆ ಮಾಹಿತಿ ಕೊಡಿ ಎಂದು ಪತ್ರ ಬರೆದಿದ್ದರು. ಸ್ಪೀಕರ್ ಕಛೇರಿಯಿಂದ ನನಗೆ ಬುಲಾವ್ ಬಂತು. ಆ ಪುಣ್ಯಾತ್ಮನಿಗೆ ಕೈ ಮುಗಿಯಬೇಕು, ರಮೇಶ್ ಕುಮಾರ್‌ರವರು ನೋಡಪ್ಪಾ ಗೌಡ ಎರಡನೇ ಬಾರಿ 10 ವರ್ಷ ನಿರಂತರವಾಗಿ ಪಕ್ಷೇತರ ಶಾಸಕನಾಗಿ ಗೆಲ್ಲುವುದು ಸುಲಭದ ಮಾತಲ್ಲ, ಮೊದಲ ಐದು ವರ್ಷ ಕೊಲೆಕೇಸು, ಈಗ ಚುನಾವಣಾ ತಕರಾರು, ವಿರೋಧಿಗಳಿಗೆ ಇವೆಲ್ಲ ಅರ್ಥ ಆಗೋಲ್ಲ, ನೀನೀಗ ಗೆದ್ದಿದ್ದೀಯ ನಿನ್ನನ್ನು ಕಿತ್ತಾಕಬೇಕು ಎಂದು ಭಾರಿ ಪ್ರಯತ್ನ ಮಾಡುತ್ತಿದ್ದಾರೆ, ಚುನಾವಣಾ ಆಯುಕ್ತರು ಪತ್ರ ಬರೆದಿದ್ದಾರೆ. 'ಇಮ್ಮಿಡಿಯೆಟ್ ಎಂದು ಹೇಳಿದ್ದಾರೆ ಅಷ್ಟೆ'. ನಾನು ನಿನಗಾಗಿ ಸ್ವಲ್ಪ ಸಮಯ ಮಾಡಿಕೊಡುತ್ತೇನೆ, ಅಷ್ಟರಲ್ಲಿ ನೀನು ಕೋರ್ಟಿನಿಂದ ತಡೆಯಾಜ್ಞೆ ತೆಗೆದುಕೊಂಡು ಬಾ, ನಿನ್ನ ಶಾಸಕ ಸ್ಥಾನ ಅಭಾಧಿತ, ನಾನಿದ್ದೇನೆ ಎಂದು ಧೈರ್ಯ ಹೇಳಿ ಹಾರೈಸಿದರು.

ನಾನು ಕೋರ್ಟ್‌ನ ಕಲಾಪಗಳಲ್ಲಿ ಹಾಜರಾಗುತ್ತಾ, ತಡೆಯಾಜ್ಞೆಗೆ ಪ್ರಯತ್ನಿಸಿದೆ. ಕೊನೆಗೆ ಈ ಪ್ರಕರಣ ಸುಪ್ರೀಂ ಕೋರ್ಟಿನ ಮೂವರು ನ್ಯಾಯಾಧೀಶರನ್ನೊಳಗೊಂಡ ಪೀಠದಲ್ಲಿ ಕೇಸು ಕೈಗೆತ್ತಿಕೊಂಡರು. ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ರವರಿಗೆ ಈ ಪ್ರಕರಣದ ಕೇಸು ನೀಡಿದೆ. ಅವರು ನಿರಂತರ ವಾದ ಮಂಡಿಸಿ ನನ್ನಿಂದ ನ್ಯಾಯಪೀಠಕ್ಕೆ ಕ್ಷಮೆ ಕೇಳಿಸಿ, ತಡೆಯಾಜ್ಞೆ ಕೊಡಿಸಿದರು. ಈ ಸಂದರ್ಭದಲ್ಲಿ ಮಳವಳ್ಳಿಯ ವಕೀಲರಾದ ಅಮರನಾಥ ಎಂಬುವವರು ಪ್ರಮೀಳಾ ನೇಸರ್ಗಿಯವರಿಂದ ಕೇಸನ್ನು ವಾಪಸ್ಸು ಪಡೆದು ಕೂಡಲೇ ನೀವು ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತನ್ನಿ ಎಂದು ಸಲಹೆ ನೀಡದಿದ್ದರೆ ನಾನು ಈ ಕೇಸು ಗೆಲ್ಲಲಾಗುತ್ತಿರಲಿಲ್ಲ, ಈ ಸಂದರ್ಭದಲ್ಲಿ ಅಮರನಾಥ ಮತ್ತು ನಂಜುಂಡರೆಡ್ಡಿರವರನ್ನು ಸ್ಮರಿಸಿಕೊಳ್ಳಬೇಕಿದೆ. ಕೊನೆಗೆ ಚುನಾವಣಾ ತಕರಾರು ಕೇಸು ಬರೋಬ್ಬರಿ 9 ವರ್ಷಗಳ ತರುವಾಯ ನಾನು ನಿರ್ದೋಷಿ ಎಂದು ತೀರ್ಪಿತ್ತು ನ್ಯಾಯಾಲಯದಲ್ಲಿ ಖುಲಾಸೆಯಾಗಿ ಸುಖಾಂತ್ಯ ಕಂಡಿತು. ಆಗ ನಾನು ಶಾಸಕನಾಗಿ ಮತ್ತೆ ಮುಂದುವರೆದೆ.

ಇಂದಿಗೂ ಅಚಲವಾಗಿರುವ...

ಅಭಿವೃದ್ಧಿಯ ಸಾಕ್ಷಿ ಗುಡ್ಡಗಳು



ನಾಗಮಂಗಲ ವಿಧಾನಸಭಾ ಕ್ಷೇತ್ರದ ಶಾಸಕನಾದಾಗ ನನಗೆ ವಯಸ್ಸು 29, ಯುವಕನಾದ ನನ್ನ ಮೇಲೆ ವಿಶ್ವಾಸವಿಟ್ಟು ಜನ ಬಾರಿ ಹುಮ್ಮಸ್ಸಿನಿಂದ ಗೆಲ್ಲಿಸಿದರು. ನಾನೂ ಅಷ್ಟೇ ಪ್ರಾಮಾಣಿಕತೆಯಿಂದ ಪಕ್ಷೇತರ ಶಾಸಕನಾದರೂ ಸರ್ಕಾರದ ಮುಖ್ಯಸ್ಥರಿಂದ ಅನುದಾನಗಳ ಹೊಳೆ ಹರಿಸಿದೆ. ಆಗ ಈಗಿನಷ್ಟು ಬೃಹತ್ ಹಣ ಸಂಗ್ರಹಣೆ ಆಗಲಿ, ಕ್ಷೇತ್ರಕ್ಕೆ ಅನುದಾನ, ಪ್ಯಾಕೇಜು ಯಾವುದೂ ಇಲ್ಲದ ಕಾಲದಲ್ಲಿ ನಾನು ಕಾಡಿಬೇಡಿ ಪಟ್ಟು ಬಿಡದೇ ತರುತ್ತಿದ್ದೆ. 1989ರಲ್ಲಿ ಮೊದಲ ಬಾರಿ ಎಂಎಲ್‌ಎ ಆದಾಗ ನಾನು ಕೊಲೆ ಕೇಸ್ ನಿಂದ ಎರಡು ವರ್ಷ ನಾಗಮಂಗಲಕ್ಕೆ ಹೋಗಬಾರದು ಎಂದು ಕೋರ್ಟ್ ಆರ್ಡರ್ ಇದ್ದರೂ ಸಹ ಬಂಗಾರಪ್ಪನವರ ಆಶೀರ್ವಾದದಿಂದ ನಾಗಮಂಗಲದಲ್ಲಿ ಸುಮಾರು 18 ದೊಡ್ಡ ದೊಡ್ಡ ಸೇತುವೆಗಳನ್ನ ಒಂದೇ ಸಲ ಮಂಜೂರು ಮಾಡಿಸಿದೆ. ಸುಮಾರು 200ಕ್ಕೂ ಹೆಚ್ಚು ಕಿಲೋ ಮೀಟರ್ ಡಾಂಬರ್ ರಸ್ತೆ ಮಾಡೋಕೆ ಸಪೇರಟಾಗಿ ಹಣವನ್ನು ಕೊಟ್ಟರು. ಇಲ್ಲಿವರೆಗಿನ ಎಲ್ಲಾ ಶಾಸಕರ ಕೆಲಸಗಳನ್ನ ತಾಳೆ ಮಾಡಿದರೆ ನಾಗಮಂಗಲದಲ್ಲಿ ಹೆಚ್ಚು ಕೆಲಸ ಮಾಡಿರುವುದು ನಾನೇ ಅದನ್ನು ಅಂಕಿ ಅಂಶದ ಸಮೇತ ಕೊಡಬಲ್ಲೆ. ಇಡೀ ತಾಲೂಕಿನಲ್ಲಿ ಕುಡಿಯುವ ನೀರಿನ ಘಟಕ ಮಾಡಿದೆ. ಹೆಂಗಸರು ಬಿಂದಿಗೆ ಹಿಡಿದು ಕೆರೆ, ಬಾವಿ ಸುತ್ತುತ್ತಿದ್ದ ಕಾಲವದು. ತಾಲೂಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರತಿ ಗ್ರಾಮಕ್ಕೆ ಕಿರುನೀರು ಸರಬರಾಜು ಘಟಕ ಉದ್ಘಾಟಿಸಿ ಮತ್ತು ಮೇಜರ್ ವಾಟರ್ ಟ್ಯಾಂಕ್‌ಗಳನ್ನು ಸ್ಥಾಪಿಸಿ ಕೊಳವೆ ಮುಖಾಂತರ ಶುದ್ಧಕುಡಿಯುವ ನೀರು ಸರಬರಾಜಾಯಿತು. ಆ ಮೂಲಕ ಗ್ರಾಮೀಣರ ಆರೋಗ್ಯದಲ್ಲಿ ಸುಧಾರಣೆ ಕಂಡಿತು. ಆ ಹೆಮ್ಮೆ ನನಗಿದೆ.

ಕೇಂದ್ರ ಹಣಕಾಸು ಸಚಿವ ಬಿ. ಜನಾರ್ಧನ ಪೂಜಾರಿ ಅವರನ್ನು ತಾಲ್ಲೂಕು ಯೂತ್ ಕಾಂಗ್ರೆಸ್ ವತಿಯಿಂದ ಕರೆಸಿ ಪೂಜಾರಿ ಸಾಲಮೇಳ ಆಯೋಜಿಸಿ ವಿದ್ಯಾವಂತ ನಿರುದ್ಯೋಗ ಯುವಕರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸುಮಾರು 30 ಕೋಟಿ ರೂ.ಗಳ ಬ್ಯಾಂಕ್ ಸಾಲ ವಿತರಿಸಿದ್ದು ನನ್ನ ರಾಜಕಾರಣದ





ಮೈಲುಗಲ್ಲು. ಅದರ ಜೊತೆಗೆ ಕರಡಹಳ್ಳಿ, ಕಾಂತಾಪುರ, ಚಿಣ್ಯಾ, ಅಂಚೆಚಿಟ್ಟನಹಳ್ಳಿ, ಆರಣಿ, ದೇವಲಾಪುರ, ಮೈಲಾರಪಟ್ಟಣ, ಬ್ರಹ್ಮದೇವರಹಳ್ಳಿಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನ 8 ಶಾಖೆಗಳ ಮಂಜೂರು ಮಾಡಿಸಿದೆ. ಕೇಂದ್ರ ಕೃಷಿ ಸಚಿವರಾದ ಭಜನ್‌ಲಾಲ್‌ರವರನ್ನು ಕರೆಸಿ 17 ಕೋಟಿ ರೂಪಾಯಿಗಳನ್ನು ತೆಂಗು ಅಭಿವೃದ್ಧಿ ಪಡಿಸಲು ರೈತರುಗಳಿಗೆ ಕೊಡಿಸಲಾಯಿತು. ಹೋಬಳಿಯ ಜನರ ಅನುಕೂಲತೆಗಾಗಿ ಬಿಂಡಿಗೆನವಿಲೆಯಲ್ಲಿ ನೂತನ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿಸಿ ಆ ಗ್ರಾಮದ ಸುಪುತ್ರರಾದ ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿದ್ದ ಬಿ. ಗರುಡಾಚಾರ್‌ರವರಿಂದ ಉದ್ಘಾಟನೆ ಮಾಡಿಸಿದ್ದೊಂದು ಮೈಲುಗಲ್ಲು. ಐದು ಕೆರೆಗಳ ನಿರ್ಮಾಣಕ್ಕೆ ಆದೇಶ ಮಾಡಿಸಿದೆ. ಹಾಸನದ ಗೊರೂರಿನಿಂದ ಹೇಮಾವತಿ ಎಡದಂಡೆ ನಾಲೆಯ ನೀರು ಬರಲಿಕ್ಕೆ ಒತ್ತುಕೊಟ್ಟೆ. ನಾಗಮಂಗಲ ತಾಲೂಕಿನಲ್ಲಿ ಪಶುಸಂಗೋಪನೆ ಸಚಿವರಾಗಿದ್ದ ಮಿತ್ರ ಕೆ.ಎನ್. ನಾಗೇಗೌಡರಿಂದ ನಾಲ್ಕು ದನದ ಆಸ್ಪತ್ರೆ ಇದ್ದ ಕ್ಷೇತ್ರಕ್ಕೆ ಏಕಕಾಲದಲ್ಲಿ 18 ದನದ ಆಸ್ಪತ್ರೆ ಮಂಜೂರು ಮಾಡಿಸಿದ್ದನ್ನೂ ನನ್ನ ಜನ ಮರೆತಿಲ್ಲ. ನಾನು. ಸುಮಾರು 150 ಬಸ್ ಪ್ರಯಾಣಿಕರ ತಂಗುದಾಣ ಮಾಡಿಸಿದೆ. ಹೊಸ ಜೆ.ಎಂ.ಎಫ್.ಸಿ. ಕೋರ್ಟ್ ಬಿಲ್ಡಿಂಗ್ ಮತ್ತು ಜನರಲ್ ಆಸ್ಪತ್ರೆ ಕಟ್ಟಡ ಹಾಗೂ ಹೆಚ್ಚುವರಿ ಹೆರಿಗೆ ವಾರ್ಡ್ ನನ್ನ ಕಾಲದಲ್ಲಿ ಆಯಿತು. ಬಗರ್ ಹುಕುಂ ಸಾಗುವಳಿಯಲ್ಲಿ ನನ್ನ ಅವಧಿಯಲ್ಲಿ ನನ್ನ ಕ್ಷೇತ್ರದಲ್ಲಿದ್ದ ಸರ್ಕಾರಿ ಗೋಮಾಳ, ಖರಾಬು ಭೂಮಿಗಳೆಲ್ಲವನ್ನೂ ಪತ್ತೆ ಹಚ್ಚಿ ಭೂ ರಹಿತರಿಗೆ 28,000 ಎಕರೆ ಜಮೀನನ್ನು ಮಂಜೂರು ಮಾಡಿಸಿ ಕೊಟ್ಟೆ. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ಫಾರಂ ನಂಬರ್ 50–53ರ ಅಡಿಯಲ್ಲಿ ಈ ಸವಲತ್ತು ಲಭಿಸುವಂತೆ ಮಾಡಿದ್ದು ನನ್ನ ಸಾರ್ಥಕ ಕ್ಷಣಗಳಲ್ಲೊಂದು. ನನ್ನ ತರುವಾಯ ಬಂದ ಶಾಸಕರು ಬಡ ಬೋರೇಗೌಡನಿಗೆ ಏನು ಮಾಡಿದರೆಂಬುದು ನಿಮ್ಮ ಕಣ್ಣ ಮುಂದೆ ರಾಚುತ್ತದೆ. ಇವರಿಬ್ಬರ ಕಾಲದಲ್ಲಿ ಬರಿ 500 ಎಕರೆ ಮಾಡಿಸೋಕೆ ಆಗಿಲ್ಲ. ಸುರೇಶ್‌ಗೌಡರ 10 ವರ್ಷದ ಅವಧಿಯಲ್ಲಿ ಬಗರ್ ಹುಕುಂ ಸಾಗುವಳಿಯಲ್ಲಿ ಎಷ್ಟು ರೈತರಿಗೆ ಜಮೀನು ಮಂಜೂರು ಮಾಡಿದ್ದಾರೆ. ಚೆಲುವರಾಯಸ್ವಾಮಿ ಅವರು ಈಗಾಗಲೇ ನಾಲ್ಕನೇ ಬಾರಿ ಶಾಸಕರಾಗಿ, ಪವರ್ ಫುಲ್ ಮಿನಿಸ್ಟರಾಗಿ ಕ್ಷೇತ್ರವನ್ನು ಪ್ರತಿನಿಧಿಸಿ ಮೂರು ಖಾತೆಗಳ ನಿಭಾಯಿಸಿದರೂ, ಎಷ್ಟು ಬಡ ರೈತರಿಗೆ ಜಮೀನು ಮಂಜೂರು ಮಾಡಿಸಿದ್ದಾರೆ ಮಾಹಿತಿ ಕೊಡಲಿ. ಇದು ಈಗಿನ ನಾಗಮಂಗಲದ ಕಥೆ. ಮೊದಲ ಬಾರಿ ನಾನು ಶಾಸಕನಾಗಿ ಅಷ್ಟೆಲ್ಲಾ ಕೆಲಸ ಮಾಡಿದ್ದರೂ ನನಗೆ ಎರಡನೇ ಅವಧಿಗೆ ಟಿಕೆಟ್ ತಪ್ಪಿಸಲು ಈ ಮಾದೇಗೌಡರು ಮತ್ತು ಟೀಮ್ ಯಶಸ್ವಿಯಾದರು. ಎರಡನೇ ಬಾರಿ ಇಂಡಿಪೆಂಡೆಂಟಾಗಿ ಗೆಲ್ಲೋದು ಎಂದರೆ ನಾಟ್ ಈಜಿ, ನನ್ನ ಅಭಿವೃದ್ಧಿ ಕೆಲಸಕ್ಕೆ ಮತ್ತೆ ನನಗೆ ನನ್ನ ಕ್ಷೇತ್ರದ ಜನರು ಅತಿ ಹೆಚ್ಚು ಮತ ಕೊಟ್ಟರು, ಸುಮಾರು 26 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದರು. ಮೂರನೇ ಬಾರಿ ನಾನು ಸೋತಿದ್ದು ಕುರುಬ ಜನಾಂಗದ ವೋಟಿನಿಂದ. ಕಾರಣ ಏನೆಂದರೆ, ಅಷ್ಟೊತ್ತಿಗೆ ಜೆಡಿಎಸ್ ರಾಜ್ಯದಲ್ಲಿ ಗಟ್ಟಿಯಾಗಿ ಬೇರೂರಿತ್ತು. ಜೆಡಿಎಸ್‌ನಲ್ಲಿ ಸಿದ್ದರಾಮಯ್ಯನವರು ಉತ್ತಮ ನಾಯಕತ್ವ ಮತ್ತು ಖದರು ಹೊಂದಿದ್ದರು. ಅವರ ಆದೇಶದಿಂದಾಗಿ ಕುರುಬ ಜನಾಂಗದ ವೋಟೆಲ್ಲಾ ಜೆಡಿಎಸ್ ಕಡೆಗೆ ಜಮಾವಣೆಗೊಂಡ ಪರಿಣಾಮ ಮೂರನೇ ಸಲವೂ ನಾನು ಸೋಲೊಪ್ಪಿಕೊಳ್ಳಬೇಕಾಯಿತು. ಕ್ಷೇತ್ರದ ಜನತೆಗೆ ಅನುದಾನ, ಕಷ್ಟ ಸುಖಗಳಲ್ಲಿ ಭಾಗಿಯಾಗುವ ಪರಿಪಾಠ ರೂಢಿಸಿಕೊಳ್ಳುವುದರ ಜೊತೆಗೆ ಚುನಾವಣಾ ತಂತ್ರಗಾರಿಕೆಯೂ ಮುಖ್ಯವಾಯಿತು. ನನ್ನದಲ್ಲದ ತಪ್ಪಿಗೆ ನಾನು ರಾಜಕೀಯ ವನವಾಸ ಅನುಭವಿಸಿದ್ದು ಮಾತ್ರ. ಒಬ್ಬ ಜನಪ್ರತಿನಿಧಿಯ ದುರಂತಗಾಥೆ ಎನ್ನಬಹುದೇನೋ...

ಅತಿಮುಖ್ಯವಾಗಿ ಆಗಿರುವಂತಹ ಕೆಲ ಯೋಜನೆಗಳ ಪಟ್ಟಿ

- ನಾಗಮಂಗಲ ತಾಲ್ಲೂಕಿಗೆ 08 ಬ್ಯಾಂಕ್‌ಗಳನ್ನು ತಂದು 6000 ಜನರುಗಳಿಗೆ ರೂ. 50,000 ದಂತೆ ಸಚಿವರಾದ ಜನಾರ್ಧನ ಪೂಜಾರಿ ಸಾಲ ಮೇಳ ಮಾಡಿ ಪ್ರೋತ್ಸಾಹ.
- 1989ರ ಅವಧಿಯಲ್ಲಿ ತಾಲ್ಲೂಕಿನಲ್ಲಿ 508 ಗ್ರಾಮಗಳಿದ್ದು ಕೇವಲ 23 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಳಿದ್ದು 1989ರಲ್ಲಿ ಶಾಸಕರಾಗಿ ಆಯ್ಕೆಯಾದ ಒಂಬತ್ತೂವರೆ ವರ್ಷಗಳ ಅಧಿಕಾರಾವಧಿಯಲ್ಲಿ 411 ಗ್ರಾಮಗಳಿಗೆ ಮಿನಿ ವಾಟರ್ ಸಪ್ಲೈ, ಮೇಜರ್ ವಾಟರ್ ಸಪ್ಲೈ ಮಾಡಿಸಿದ ಕೀರ್ತಿ.
- 28,000 ಎಕರೆ ಜಮೀನನ್ನು ಮಂಜೂರು ಮಾಡಿಸಿ ಮನೆ ಬಾಗಿಲಿಗೆ ಮಂಜೂರು ಚೀಟಿಯನ್ನು ಬಡ ರೈತರಿಗೆ ತಲುಪಿಸಿದ ಕೀರ್ತಿ.
- 1989 ರ ವರೆಗೂ 24 ಬಸ್ ನಿಲ್ದಾಣಗಳಿದ್ದವು. ನನ್ನ ಅವಧಿಯಲ್ಲಿ 36 ಬಸ್ ನಿಲ್ದಾಣ ನಿರ್ಮಾಣ.
- 1989 ರ ವರೆಗೂ 04 ದನಗಳ ಆಸ್ಪತ್ರೆಗಳಿದ್ದವು, ನನ್ನ 10 ವರ್ಷಗಳ ಅವಧಿಯಲ್ಲಿ 18 ಆಸ್ಪತ್ರೆಗಳ ನಿರ್ಮಾಣ.
- 1989 ರ ವರೆಗೂ ತಾಲ್ಲೂಕಿನಲ್ಲಿ 10 ಆಸ್ಪತ್ರೆಗಳಿದ್ದು, ನನ್ನ ಅವಧಿಯಲ್ಲಿ 3 ಆಸ್ಪತ್ರೆಗಳ ಕೊಡುಗೆ



- ಕೇಂದ್ರ ಸಚಿವರಾದ ಭಜನ್‌ಲಾಲ್ ಅವರನ್ನು ಕರೆಸಿ ಚನ್ನರಾಯಪಟ್ಟಣ ಹಾಗೂ ನಾಗಮಂಗಲ ರೈತರಿಗೆ 17 ಕೋಟಿ ರೂ. ಸಹಾಯಧನ ವಿತರಣೆ.
- ಸ್ವತಂತ್ರ್ಯ ಪೂರ್ವದಿಂದ ಪಿಯುಸಿ ಕಾಲೇಜ್‌ಗಳ ಸಂಖ್ಯೆ 04 ಇದ್ದವು. ನನ್ನ ಅವಧಿಯಲ್ಲಿ ಹೆಚ್ಚಿನದಾಗಿ 09 ಕಾಲೇಜ್‌ಗಳ ನಿರ್ಮಾಣ
- 159 ಜನರಿಗೆ ಏಕಕಾಲದಲ್ಲಿ ಆರೋಗ್ಯ ಇಲಾಖೆಯಲ್ಲಿ ಸರ್ಕಾರಿ ನೌಕರಿ ಕೊಡಿಸಿದ ಹೆಗ್ಗಳಿಕೆ
- ನಾಗಮಂಗಲ ತಾಲ್ಲೂಕಿಗೆ ಎಸ್.ಟಿ.ಡಿ ಮಂಜೂರು
- ಬೆಳ್ಳೂರು ಕ್ರಾಸ್‌ನಲ್ಲಿ ವಿದ್ಯುಚ್ಛಕ್ತಿ ಸಬ್‌ಸ್ಟೇಷನ್ ಮಂಜೂರು
- ಅದ್ದಿಹಳ್ಳಿ ಕ್ರಾಸ್‌ನಲ್ಲಿ ಸಬ್‌ಸ್ಟೇಷನ್ ಮಂಜೂರಾತಿ
- ನಾಗಮಂಗಲ ಪಟ್ಟಣಕ್ಕೆ ಸೂಳೆಕೆರೆಯಿಂದ ಕುಡಿಯುವ ನೀರಿನ ಸರಬರಾಜು ಯೋಜನೆ ವೆಚ್ಚದಲ್ಲಿ ಕಾಮಗಾರಿ ಆರಂಭಿಸಬೇಕಿತ್ತು..
- ಬೆಳ್ಳೂರು ಪಟ್ಟಣಕ್ಕೆ ದಾಸನಕೆರೆಯಿಂದ ಕುಡಿಯುವ ನೀರು ಸರಬರಾಜು ಯೋಜನೆ
- ವಿಶ್ವಬ್ಯಾಂಕ್ ಆರೋಗ್ಯ ಯೋಜನೆಯಡಿ ನಾಗಮಂಗಲ ಪಟ್ಟಣದಲ್ಲಿ ಜನರಲ್ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಕೆಲಸ





ಅಂದಿನ ಕೇಂದ್ರ ಕೃಷಿ ಸಚಿವ ಭಜನ್‌ಲಾಲ್

- ಬಿಂಡಿಗೆನವಿಲೆಯಲ್ಲಿ ಪೊಲೀಸ್ ವಸತಿಗೃಹಗಳ ನಿರ್ಮಾಣ
- ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಕೋಟೆಬೆಟ್ಟದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭ.
- ಕೆ.ಆರ್.ಪೇಟೆ ನಾಗಮಂಗಲ ರಸ್ತೆಯಲ್ಲಿ ಕರಿಕ್ಯಾತನಹಳ್ಳಿ ಹತ್ತಿರ ಸೇತುವೆ
- ಬಿಂಡಿಗೆನವಿಲೆ ಕದಬಹಳ್ಳಿ ರಸ್ತೆಯಲ್ಲಿ ಬಿಂಡಿಗೆನವಿಲೆ ಹತ್ತಿರ ಸಾರೋಟು ಸೇತುವೆ
- ಮಂಡ್ಯ ನಾಗಮಂಗಲ ರಸ್ತೆಯಲ್ಲಿ ಚಿಕ್ಕಯಗಟಿ ಹತ್ತಿರ ಸೇತುವೆ
- ಶ್ರೀರಂಗಪಟ್ಟಣದ ಬೀದರ್ ರಸ್ತೆಯಲ್ಲಿ ಹೊಣಕೆರೆ ಹತ್ತಿರ ಸೇತುವೆ
- ಶ್ರೀರಂಗಪಟ್ಟಣದ ಬೀದರ್ ರಸ್ತೆ ಬ್ರಹ್ಮದೇವರ ಹಳ್ಳಿ ಹತ್ತಿರ ಸೇತುವೆ
- ಕಾಂತಾಪುರ ಹೊಸಮನೆ ಹತ್ತಿರ ಸೇತುವೆ
- ತಿಗಳನಹಳ್ಳಿ ಆರಣೆ ಹತ್ತಿರ ಸೇತುವೆ
- ಶ್ರೀರಂಗಪಟ್ಟಣ ಬೀದರ್ ರಸ್ತೆಯಲ್ಲಿ ಚೌಡೇನಹಳ್ಳಿ ಹತ್ತಿರ ಸೇತುವೆ
- ಭೀಮನಹಳ್ಳಿ ಹೊಸಹಳ್ಳಿ ರಸ್ತೆಯಿಂದ ಕೊಲ್ಲಾಪುರದಮ್ಮ ದೇವಸ್ಥಾನದ ಹತ್ತಿರ ಸೇತುವೆ
- ನೆಲ್ಲಿಗೆರೆ ಹತ್ತಿರ ದೊಡ್ಡ ಸೇತುವೆಗಳು (ಮೂರು)

ನನ್ನ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿ ಯೋಜನೆಗಳು ಆಗಿದ್ದು, ಅದರಲ್ಲಿ ಮುಖ್ಯವಾದ ಕೆಲವು ಪ್ರಮುಖ ಯೋಜನೆಗಳನ್ನು ಇಲ್ಲಿ ನೀಡಲಾಗಿದೆ.

- ಚಾಮಲಾಪುರದಿಂದ ಬಿಂಡಿಗೆನವಿಲೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಕದಬಹಳ್ಳಿಯಿಂದ ಬಿಂಡಿಗೆನವಿಲೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಕದಬಹಳ್ಳಿಯಿಂದ ಶಿಖರನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಾರ್ಕೋನಹಳ್ಳಿಯಿಂದ ಮಾವಿನಕೆರೆ ಮಾರ್ಗ ದೇವಲಾಪುರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಂಡ್ಯದಿಂದ ನಾಗಮಂಗಲ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಕೊಪ್ಪ ಮಾರ್ಗವಾಗಿ ದೇವಲಾಪುರದಿಂದ ನಾಗಮಂಗಲ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಅದ್ದಿಹಳ್ಳದಿಂದ ಕರಿಕ್ಯಾತನಹಳ್ಳಿ ರಸ್ತೆ ಅಭಿವೃದ್ಧಿ



ಮತ್ತು ಡಾಂಬರೀಕರಣ

- ಮಾಯಾಣ್ಣಗೌಡನ ಕೊಪ್ಪಲುದಿಂದ ಹೊನ್ನಾವರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಟಿಬಿ ಕ್ರಾಸ್‌ನಿಂದ ಬಿಜಿಎಸ್‌ನಗರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಾಯಿಗೋನಹಳ್ಳಿ ಗೇಟ್‌ನಿಂದ ಕರಿಕ್ಯಾತನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಾಯಿಗೋನಹಳ್ಳಿ ಗೇಟ್‌ನಿಂದ ಅಂಚೆಭೂವನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಇರುಬನಹಳ್ಳಿಯಿಂದ ಬಿಳಿಗುಂದ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಚುಂಚನಹಳ್ಳಿಯಿಂದ ಕದಬಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಬೆಳ್ಳೂರಿನಿಂದ ಬ್ಯಾಲದಕೆರೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಚಿಣ್ಯದಿಂದ ಗಂಗವಾಡಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಗಂಗವಾಡಿಯಿಂದ ಬ್ರಹ್ಮದೇವರಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಬ್ರಹ್ಮದೇವರಹಳ್ಳಿಯಿಂದ ಮಂಡ್ಯ ಬಸರಾಳು ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಂಡ್ಯ ರಸ್ತೆಯಿಂದ ದೊಡ್ಡಯಗಟಿಯಿಂದ ದೇವಲಾಪುರ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಂಡ್ಯ ರಸ್ತೆಯಿಂದ ಚಿಕ್ಕಯಗಟಿಯಿಂದ ದೇವಲಾಪುರ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಂಡ್ಯ ರಸ್ತೆಯಿಂದ ಅರಳಕೆರೆಯಿಂದ ದೇವಲಾಪುರ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಮಂಡ್ಯ ರಸ್ತೆಯಿಂದ ಕಲ್ಲಿನಾಥಪುರದಿಂದ ದೇವಲಾಪುರ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಉಳ್ಳೇನಹಳ್ಳಿ ಗೇಟ್‌ನಿಂದ ಭೀಮನಹಳ್ಳಿ, ಮಾವಿನಕೆರೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಚಿಣ್ಯದಿಂದ ಸ್ವಾಮನಳ್ಳಿ ದೇವಸ್ಥಾನ, ಅಲ್ಪಹಳ್ಳಿಯಿಂದ ಕರಿಕ್ಯಾತನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಶ್ರವಣಬೆಳಗೊಳದ ರಸ್ತೆಯಿಂದ ಸಾತೇನಹಳ್ಳಿ ಚನ್ನಾಪುರ ಬೋಗಾದಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಸುಖಧರೆ ಮಾಯಿಗೋನಹಳ್ಳಿ ಬೋಗಾದಿ ರಸ್ತೆ



ಅಭಿವೃದ್ಧಿ ಮತ್ತು ಡಾಂಬರೀಕರಣ

- ಬೆಂಗಳೂರು ಮಂಗಳೂರು ರಸ್ತೆಯಿಂದ ಅಂಕನಹಳ್ಳಿ ಮೈಲಾರಪಟ್ಟಣ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ನಾಗಮಂಗಲದಿಂದ ಬೆಟ್ಟದ ಮಲ್ಲೇನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಪಡುವಲ ಪಟ್ಟಣದಿಂದ ಬೋಗಾದಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಕಾಂತಪುರದಿಂದ ಗಂಗನಹಳ್ಳಿ ವಡ್ಡರಹಳ್ಳಿ ಹೊಣಕೆರೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಚಿಕ್ಕಜಟಕ ಗೇಟ್ ವಳಗೆರೆಪುರ ದೊಡ್ಡಜಟಕ ಮೈಲಾರಪಟ್ಟ ರಸ್ತೆ, ಚಿಕ್ಕಜಟಕದಿಂದ ವಳಗೆರೆಪುರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ
- ಹಂಪಾಪುರದಿಂದ ತಿರುಮಲಾಪುರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ



ಕೃಷ್ಣ ಸಾರಥ್ಯಕ್ಕೆ ಅಂಬಿ ಸಾಥ್

ಕಾಂಗ್ರೆಸ್‌ಗೆ ಕರೆ ತಂದಿದ್ದೇ ನಾನು...





ನಾನು ಎರಡನೇ ಬಾರಿ ಎಂಎಲ್‌ಎ ಇದ್ದ ಸಂದರ್ಭದಲ್ಲಿ ಬಿಡಿಎ ಅಧ್ಯಕ್ಷನಾಗಿದ್ದೆ. ಆವಾಗ ಡಿಕೆ ಶಿವಕುಮಾರ್ ಅವರು ವಾರದಲ್ಲಿ ಮೂರ್ನಾಲ್ಕು ದಿನ ನನ್ನ ಆಫೀಸ್‌ಗೆ ಆಗಮಿಸಿ ರಾಜಕೀಯ ವಿಶ್ಲೇಷಣೆಯಲ್ಲಿ ಕೂರುತ್ತಿದ್ದೆವು, ನಾನು ಅವರಿಗೆ ಒಂದು ಚೇಂಬರನ್ನೇ ಬಿಟ್ಟು ಕೊಟ್ಟಿದ್ದೆ. ಆಗ ಡಿ.ಕೆ ಅವರು ನನಗೆ ಒಂದು ಸಲಹೆ ಕೊಟ್ಟರು. ಕೃಷ್ಣ ಸಾಹೇಬರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ರಾಜ್ಯದಾದ್ಯಂತ ಈ ಬಾರಿ ಕಾಂಗ್ರೆಸ್ ಅಲೆ ಬೀಸುತ್ತಿದೆ. ಕೃಷ್ಣರವರು ಎಲ್ಲ ಜಿಲ್ಲೆಗಳಿಗೂ ಪಾಂಚಜನ್ಯ ರಥಯಾತ್ರೆ ಮುಖಾಂತರ ಯುಪಿಎ ಸಾಧನೆ ಮತ್ತು ಕಾಂಗ್ರೆಸ್ ಪಕ್ಷದ ಜನಪರ ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸಿದ್ದಾರೆ.

ಈ ಸಂಧರ್ಭದಲ್ಲಿ ನೀವು ಕಾಂಗ್ರೆಸ್‌ಗೆ ಬಂದು ಸೇರಬೇಕು ಎಂದು ನನ್ನ ಮನವೊಲಿಸಿ, ನಿಮ್ಮ ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ ಬಾರಿಸುವ ಮುಖಾಂತರ ಶ್ರೀಮಾನ್ ಎಸ್.ಎಂ.ಕೃಷ್ಣರ ಕೈ ಬಲಪಡಿಸಬೇಕೆಂದು ತಿಳಿಸಿದರು. ಜೆಡಿಎಸ್ ಮತ್ತು ಜೆ.ಹೆಚ್.ಪಟೇಲರ ಜೆಡಿಯು ಪಕ್ಷಗಳ ಬಾಧೆಯಿಂದ ಬಸವಳಿದಿದ್ದ ನಾನು ಮುಂದಿನ ಆಶಾಕಿರಣ ಕಾಂಗ್ರೆಸ್ ಮತ್ತು ನಮ್ಮ ನಾಯಕ ಎಸ್.ಎಂ.ಕೃಷ್ಣರವರ ಕರೆಗೆ ಓಗೊಟ್ಟು ಪಕ್ಷ ಸೇರಲು ತೀರ್ಮಾನಿಸಿದೆ. ಅಲ್ಲಿ ಇನ್ನೊಂದು ವಿಷಯವೇನೆಂದರೆ ಅಂಬರೀಶ್‌ರವರನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬರಬೇಕು ಎಂದು ಒತ್ತಡ ಮಾಡಿದರು. ಆಮೇಲೆ ಕೃಷ್ಣ ಸಾಹೇಬರೇ ನನಗೆ ದಿನಂಪ್ರತಿ ಫೋನ್ ಮಾಡಿ ಮಾತನಾಡುತ್ತಿದ್ದರು.

ಕೃಷ್ಣಸಾಹೇಬರು ಒಂದು ಸಲ ನನಗೆ, ನೋಡಪ್ಪ ನಾನು ಮುಖ್ಯಮಂತ್ರಿ ಆಗಬೇಕು, ಮಂಡ್ಯದಲ್ಲಿ ಐದರಿಂದ ಆರು ಕ್ಷೇತ್ರ ಗೆಲ್ಲಬೇಕು. ನೀನು ಮತ್ತು ಅಂಬರೀಶ್ ಇಬ್ಬರು ಕಾಂಗ್ರೆಸ್‌ಗೆ ಬರಬೇಕು ಎಂದು ಒತ್ತಡ ತಂದರು. ಅವಾಗ 1999ರ ಸಂದರ್ಭ. ಆಗ ಅಸೆಂಬ್ಲಿ ಚುನಾವಣೆ ಸಮೀಪದಲ್ಲಿ ಇತ್ತು.ಚಿತ್ರನಟ ಅಂಬರೀಶ್ ಬರ್ತೀನಿ, ಬರ್ತೀನಿ ಎಂದು ತುಂಬಾ ಸಲ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಒಂದು ಸಲ ಸೂಪರ್ ಸ್ಟಾರ್ ರಜನಿಕಾಂತ್, ಬಾಲಿವುಡ್ ನಟ ಶತ್ರುಘ್ನ ಸಿನ್ಹಾ ಅವರು ಬೆಂಗಳೂರಿಗೆ ಬಂದಿದ್ದರು. ಅಂಬರೀಶ್‌ರವರೇ ಅವರನ್ನು ನನ್ನ ಕೆ.ಆರ್. ರೋಡ್ ಮನೆಗೆ ಕರೆದುಕೊಂಡು ಬಂದಿದ್ದರು. ನಮ್ಮ ಮನೆಯಲ್ಲಿ ಎಲ್ಲರೂ ಆತಿಥ್ಯ ಸ್ವೀಕರಿಸಿ ಕುಳಿತಿದ್ದ ಸಂದರ್ಭದಲ್ಲಿ ಈ ಮೊದಲೇ ನನಗೆ ಆತ್ಮೀಯರಾಗಿದ್ದ ರಜನಿಕಾಂತ್ ಬಳಿ ಅದೇ ಆತ್ಮೀಯತೆಯಿಂದ ನಾನು ಕಾಂಗ್ರೆಸ್ ಸೇರುವ ವಿಚಾರ ಮತ್ತು ಎಸ್.ಎಂ.ಕೆ. ಮುಖ್ಯಮಂತ್ರಿಯಾಗುವ ಅವಕಾಶದ ಕುರಿತು ಪ್ರಸ್ತಾಪಿಸಿ, ಅವರ ಕಡೆಯಿಂದ ಅಂಬರೀಶ್‌ಗೆ ಹೇಳಿಸಿದೆ. 'ಎಸ್.ಎಂ.ಕೃಷ್ಣ ಜೆಂಟಲ್ ಮ್ಯಾನ್; ಅವರು ಕರ್ನಾಟಕದ ಸಿಎಂ ಆಗೋದಾದರೆ ನೀನು ಸಪೋರ್ಟ್ ಮಾಡು' ಎಂದು ಅಂಬರೀಶ್‌ಗೆ ರಜನಿಕಾಂತ್ ಹೇಳಿದರು. ಆಗ ಬರಲು ಒಪ್ಪಿದ ಅಂಬರೀಶ್, ಸರಿ ನಾನು ಬರ್ತಿನಿ, ಮತ್ತೆ ನಾನು ಸಿನಿಮಾ ಶೂಟಿಂಗ್, ಡಬ್ಬಿಂಗ್ ಹೋಗೋಕೆ ಆಗಲ್ಲ. ನನ್ನ ಖರ್ಚು ವೆಚ್ಚಕ್ಕೆ ದುಡ್ಡು ಕೊಡೋರು ಯಾರು.. ಎಸ್.ಎಂ. ಕೃಷ್ಣ ಕೊಡ್ತಾರ...? ಬಾ.. ಬಾ.. ಕಾಂಗ್ರೆಸ್ ಪಕ್ಷಕ್ಕೆ ಎಂದು ನನಗೆ ಹಿಂಸೆ ಕೊಡುತ್ತಿದ್ದೀಯಲ್ಲ ಎಂದು ನನ್ನ ಬಳಿ ಜಗಳ ತೆಗೆದರು, ಆಗ ನಾನೇ ಒಂದು ದೊಡ್ಡ ಬಹುಮಾನ ಕೊಟ್ಟು ಪಕ್ಷಕ್ಕೆ ಸೇರುವಂತೆ ಮಾಡಿದೆ. ನಂತರ ಇಬ್ಬರು ದಿಲ್ಲಿಗೆ ಹೋಗಿ ಸೋನಿಯಾ ಗಾಂಧಿ ಮತ್ತು ಎಸ್.ಎಂ. ಕೃಷ್ಣಾ ಅವರ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರಿಕೊಂಡೊ. ಒಂದೇ ವಾರದಲ್ಲಿ ಎಲೆಕ್ಷನ್ ಅನೌನ್ಸ್ ಆಯ್ತು, ನನ್ನ ಮನೆಗೆ ಟಿಕೆಟ್ ಬಂತು. ಮತ್ತೆ ನಾನು ಎಂಎಲ್‌ಎಗೆ, ರೆಬಲ್ ಸ್ಟಾರ್ ಅಂಬರೀಶ್ ಲೋಕಸಭೆಗೆ ನಿಂತೆವು. ಜಿಲ್ಲೆಯಲ್ಲಿ ಆವತ್ತು ಕೃಷ್ಣ ರವರ ಪರ ಬಿರುಸಿನ ಪ್ರಚಾರದಲ್ಲಿ ಪಾಲ್ಗೊಂಡೆವು. ಅವತ್ತು ನಾನು ಕಾಂಗ್ರೆಸ್‌ನಿಂದ ನಿಲ್ಲದೆ, ಇಂಡಿಪೆಂಡೆಂಟಾಗಿ ನಿಂತಿದ್ದರೆ ಖಂಡಿತ ಮತ್ತೆ ಗೆಲ್ಲುತಿದ್ದೆ. ನಾನು ನಾಗಮಂಗಲದ ಶಾಶ್ವತ ಎಂಎಲ್‌ಎ ಆಗಿ ಇರುತ್ತಿದ್ದೆನೋ ಏನೋ. ಆದರೆ ಗ್ರಹಚಾರ ಹೇಗಿರುತ್ತೆ ಎಂದರೆ... ಜನತಾದಳದ ಚೆಲುವರಾಯಸ್ವಾಮಿ ವಿರುದ್ಧ ಕಡಿಮೆ ಅಂತರದಿಂದ ಸೋಲುಂಡೆ. ಅಂಬರೀಶ್ ಲೋಕಸಭೆಗೆ ಆಯ್ಕೆಗೊಂಡರು. ನಮ್ಮ ನಾಯಕ ಎಸ್.ಎಂ ಕೃಷ್ಣರವರು ನಮ್ಮ ನಿರೀಕ್ಷೆಯಂತೆ ಮುಖ್ಯಮಂತ್ರಿಗಳಾದರು. ನನ್ನ ಸೋಲಿನ ಬಗ್ಗೆ ತೀವ್ರ ಅನುಕಂಪ ವ್ಯಕ್ತಪಡಿಸಿದ ಕೃಷ್ಣರವರು ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನು ನನಗೆ ನೀಡಿ ಹರಸಿದರು.



ದೇವೇಗೌಡರ ಅಭಯ ಮತ್ತು ಪಟೇಲರ ವರ



1994 ರಲ್ಲಿ ಜನತಾದಳ ಸರ್ಕಾರದ ಮುಖ್ಯಮಂತ್ರಿಯಾಗಿ ದೇವೇಗೌಡರು ಇದ್ದ ಸಂದರ್ಭ. ಆ ಚುನಾವಣೆಯಲ್ಲಿ ಪಕ್ಷೇತರರಾಗಿ 13 ಮಂದಿ ಆಯ್ಕೆಗೊಂಡಿದ್ದರು. ಆ ಗುಂಪಿನ ನೇತೃತ್ವ ವಹಿಸಿದ ನಾನು, ಎಲ್ಲರನ್ನೂ ಒಟ್ಟಿಗೆ ಸೇರಿಸಿದ್ದೆ. ಆ ಗುಂಪಿನಲ್ಲಿ ಡಿಕೆ ಶಿವಕುಮಾರ್ ಕೂಡ ಸೇರಿದ್ದರು. ದೇವೇಗೌಡರು ನನಗೆ ಒಂದು ದಿನ, ಇಂಡಿಪೆಂಡೆಂಟ್ ಎಂಎಲ್ಎ ಎಲ್ಲರನ್ನು ತಿಂಡಿಗೆ ಕರೆದುಕೊಂಡು ಕೃಷ್ಣಾಗೆ ಬಾ ಎಂದರು. ನಾವೆಲ್ಲ ಅಲ್ಲಿಗೆ ಹಾಜರಾದೆವು. ಆದರೆ ಡಿಕೆ ಶಿವಕುಮಾರ್, ಮತ್ತೊಬ್ಬ ಶಾಸಕ ಯಾಕೋ ಬರಲಿಲ್ಲ. ಉಳಿದವರೆಲ್ಲ ಹೋದೆವು. ಎಲ್ಲರಿಗೂ ತಿಂಡಿ ಕೊಟ್ಟರು. ದೇವೇಗೌಡರ ಸರ್ಕಾರಕ್ಕೆ ಆಗ ಅಲ್ಪ ಮತಗಳ ಬಹುಮತವಿತ್ತು. ಹೆಚ್ಚೆಂದರೆ, ಎರಡರಿಂದ ಮೂರು ಎಂಎಲ್ಎಗಳು ಜಾಸ್ತಿ ಇದ್ದರು ಅಷ್ಟೆ. ಆಗ ನಮಗೆ ಅವರು, ನೀವು ನಮಗೆ ಬೇಕಾದರೆ ನಿಮ್ಮ ಬಹುಮತ ಕೇಳ್ತೀವಿ. ನಿಮಗೆ ಏನು ಕೆಲಸ ಬೇಕು, ಕ್ಷೇತ್ರದ ಅನುದಾನ ನಮ್ಮ ಸರ್ಕಾರದಿಂದ ನೀವು ನಿರೀಕ್ಷಿಸಬಹುದು. ನಮ್ಮ ಜೊತೆ ಬೆಂಬಲವಾಗಿ ಇರಿ ಎಂದು ಹೇಳಿದರು. ಅಷ್ಟರಲ್ಲಿ ಎಂಪಿ.ಯಲ್ಲಿ ಮಾದೇಗೌಡರ ಸೋಲಿಸಿ ಕೆ.ಆರ್ ಪೇಟೆ ಕೃಷ್ಣ ಅವರನ್ನ ಗೆಲ್ಲಿಸಿ ಎಂಪಿ ಮಾಡಿದ್ದೋ, ನಾನು ಇಂಡಿಪೆಂಡೆಂಟ್ ಇದ್ದಿದ್ದರಿಂದ ದೇವೇಗೌಡರ ಜೊತೆಗೆ ಹೆಚ್ಚು ಒಡನಾಟ ಇಟ್ಟುಕೊಂಡಿದ್ದೆ.

ನಾನು ನಾಗೇಗೌಡರು ತುಂಬಾ ಸ್ಟ್ರಾಂಗ್ ಇದ್ದು, ನಾವಿಬ್ಬರು ಸೇರಿ ಮಳವಳ್ಳಿಯ ರೊಟ್ಟಿಕಟ್ಟೆಯಲ್ಲಿ ಒಂದು ಕಾರ್ಯಕ್ರಮ ಮಾಡಿ ಸುಮಾರು 3000 ಜನ ಸೇರಿಸಿದೆವು. ಅಲ್ಲಿ ನಾವು ನಮ್ಮ ಅಭ್ಯರ್ಥಿ ಕೆ.ಆರ್ ಪೇಟೆ ಕೃಷ್ಣ ಅವರು ಎಂದು ಅನೌನ್ಸ್ ಮಾಡಿದೆವು. ಅದು ಎಲ್ಲಾ ಟಿವಿಯಲ್ಲು ಬಂತು. ಆಗ

ಬಸವರಾಜ್ ಬೊಮ್ಮಾಯಿಯವರು ಜನರಲ್ ಸೆಕ್ರೆಟರಿ, ಅಷ್ಟರಲ್ಲಿ ಅಂಬರೀಷ್‌ಗು ನನಗೂ ಸ್ವಲ್ಪ ಇರಿಸು ಮುರಿಸು ಇತ್ತು. ಕಾರಣ ಏಕೆಂದರೆ, ನಾನು ಕಾಂಗ್ರೆಸ್ ಸೇರಿಸಿದ ಮೇಲೆ ಆ ಮನುಷ್ಯ ನಮಗೆ ಹೇಳದೆ ಕೇಳದೆ ಹೋಗಿ ರಾಮನಗರದಲ್ಲಿ ದೇವೇಗೌಡರಿಂದ ತೆರವಾದ ಸ್ಥಾನಕ್ಕೆ ಉಪ ಚುನಾವಣೆಗೆ ನಿಂತು ಸೋತಿದ್ದರು. ಅಂಬರೀಶ್ ದಳದ ಕಡೆಗೆ, ಕಾಂಗ್ರೆಸ್ ಕಡೆಗೆ, ಎಲ್ಲಾ ಕಡೆಗೂ ಚೆನ್ನಾಗಿದ್ದರು. ಆಗ ಬಸವರಾಜ ಬೊಮ್ಮಾಯಿ ಅವರು ಅಂಬರೀಶ್ ಮತ್ತು ನನ್ನ ಕೂರಿಸಿ ರಾಜಿ ಮಾಡಿಸಿದರು. ಅಂಬರೀಶ್‌ರನ್ನು ನಿಲ್ಲಿಸಬೇಕು ಎಂದು ದೇವೇಗೌಡರ ತೀರ್ಮಾನದಿಂದ ನಮ್ಮ ರಾಜಿ ಮಾಡಿಸಿದರು. ಆಗ ಅಂಬರೀಶ್ ನನ್ನ ಬಳಿ, ನನ್ನ ಬಗ್ಗೆ ಬೇಸರ ಇದ್ದರೆ ಮರೆತು ಬಿಡು ಎಂದರು. ನಾನು ಸರಿ ಬಿಡು ಎಂದು ಒಟ್ಟಿಗೆ ಕೆಲಸ ಮಾಡಿದೆವು. ಆ ಬಾರಿ ಜೆಡಿಎಸ್ 16 ಎಂಪಿ ಸೀಟ್ ಗೆದ್ದಿತ್ತು. ದೇವೇಗೌಡರು 1996ರಲ್ಲಿ ಪ್ರಧಾನಿಯಾದರು.



ಭೈರೇಗೌಡರು

ಹೌಸಿಂಗ್ ಬೋರ್ಡ್ ಚೇರ್ಮನ್ ಹೇಗಾದೆ ಎಂದರೆ?: ಅತ್ತ ಡೆಲ್ಲಿಗೆ ಹೋದ ಗೌಡರು, ಜೆ.ಹೆಚ್. ಪಟೇಲರನ್ನು ಮುಖ್ಯಮಂತ್ರಿಯನ್ನಾಗಿಸಿದರು. ನಾನು ಪಾರ್ಟಿಗೆ ಸೇರದೆ ಬಾಹ್ಯ ಬೆಂಬಲ ಕೊಟ್ಟಿದ್ದೆ ಅಷ್ಟೇ. ಒಂದು ದಿನ ಎರಡು ಗಂಟೆ ರಾತ್ರಿಯಲ್ಲಿ ಒಬ್ಬ ಡಿಸಿಪಿ ನನಗೆ ಫೋನ್ ಮಾಡಿದರು. ಇದೇನಪ್ಪ ಇಷ್ಟೊತ್ತಿನ ರಾತ್ರಿಯಲ್ಲಿ ಡಿಸಿಪಿ ಫೋನ್ ಬರ್ತಾ ಇದಿಯಲ್ಲ ಎಂದು ಮಲಗಿದ್ದವನು ಎದ್ದು, ಹೇಳಿ ಸಾರ್ ಎಂದೆ. ಆಗ ಡಿಸಿಪಿ, "ಸಾರ್ ಸಿ.ಎಂ ಮಾತನಾಡಬೇಕಂತೆ" ಎಂದರು. ಜೆ.ಹೆಚ್. ಪಟೇಲರು ಆ ಕಡೆಯಿಂದ, ಏನಪ್ಪಾ.. ಗೌಡ ಮಲಗಿದ್ದೆ ಅನ್ಸುತ್ತೆ ಡಿಸ್ಟರ್ಬ್ ಆಯ್ತಾ ಎಂದರು. ಆಗ ನಾನು, ನೀವು ಫೋನ್ ಮಾಡಿದರೆ ಯಾವ ಡಿಸ್ಟರ್ಬ್ ಹೇಳಿ ಸರ್ ಎಂದೆನು. ಜಿಂದಾಲ್ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಸ್ವಲ್ಪ ಆರೋಗ್ಯ ಸರಿಯಿಲ್ಲ ಎಂದು ಅಡ್ಮಿಟ್ ಆಗಿ, ಅಲ್ಲಿಂದ ನನಗೆ ಫೋನ್ ಮಾಡಿದ್ದರು. ಆಗ ಅವರು ಇಲ್ಲಿ ನಿಮ್ಮ ನಾಗೇಗೌಡ, ಭೈರೇಗೌಡ, ನಂಜೇಗೌಡ ಎಲ್ಲಾ ಇದ್ದಾರೆ, ನಿನ್ನನ್ನ ಮಿನಿಸ್ಟರ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ಮಿನಿಸ್ಟರ್ ಮಾಡಲಿಕ್ಕೆ ಈಗ ಆಗಲ್ಲ, ಅದಕ್ಕೆ ನಿನಗೆ ಹೌಸಿಂಗ್ ಬೋರ್ಡ್ ಚೇರ್ಮನ್ ಮಾಡುತ್ತಿದ್ದೀನಿ ಎಂದರು. ಅವರೆಲ್ಲಾ ಬಿಡಿಎ ಚೇರ್ಮನ್ ಮಾಡಿ ಎಂದರು. ಅದು ಬರಿ ಬೆಂಗಳೂರಿಗೆ ಮಾತ್ರ ಸೇರುತ್ತೆ, ಹೌಸಿಂಗ್ ಬೋರ್ಡ್ ಅಂದರೆ ಇಡೀ ರಾಜ್ಯಕ್ಕೆ ನೀನು ಸೈಟ್ ಕೊಡಬಹುದು, ನಾಳೆ ಬಂದು ಚಾರ್ಜ್ ತಗೋ ಎಂದರು. ನಾನು ಬೆಳಗ್ಗೆ ಹೋಗಿ ಚಾರ್ಜ್ ತಗೊಂಡೆ. ಸಿದ್ದರಾಮಯ್ಯನವರು, ನಾಗೇಗೌಡರು, ಬೈರೇಗೌಡರು, ಬಚ್ಚೇಗೌಡರು, ನಂಜೇಗೌಡರು ಇವರೆಲ್ಲರ ಒಂದು ಟೀಮ್ ಸ್ಟ್ರಾಂಗಾಗಿತ್ತು. ಇವರೆಲ್ಲರೂ ಸೇರಿ ನನ್ನನ್ನು ಹೌಸಿಂಗ್ ಬೋರ್ಡ್ ಚೇರ್ಮನ್ ಮಾಡಿದರು. ಆಗ ವಸತಿ ಖಾತೆ ಮಂತ್ರಿ ಎಚ್.ಡಿ. ರೇವಣ್ಣ ಇದ್ದರು. ನಾನು ಆರ್ಡರ್ ತಗೊಂಡು ಹೋದಮೇಲೆ ಮೂರು ದಿನ ರೇವಣ್ಣ ನನ್ನ ಕೈಗೆ ಸಿಗಲಿಲ್ಲ. ಮಂಗಲ ತಿಮ್ಮೇಗೌಡ ಎಂಬ ಐಎಎಸ್ ಆಫೀಸರ್ ಇದ್ದರು. ಅವರಿಗೆ ಮುಖ್ಯಮಂತ್ರಿಗಳಿಂದ ನಾನು ಹೆಚ್ಚುವರಿ ಪದೋನ್ನತಿ ಆದೇಶ ಮಾಡಿಸಿಕೊಂಡು ಹೌಸಿಂಗ್ ಬೋರ್ಡ್ ಕಮಿಷನರ್ ಆಗಿ ಮಾಡಿಕೊಂಡೆ. ಇದು ವಸತಿ ಸಚಿವರ ಕಣ್ಣು ಕೆಂಪಾಗಿಸಿತ್ತು.





'ಗೃಹ ಮಂಡಳಿ ಫೈಲ್' - ಶೀತಲ ಸಮರ



ಹೌಸಿಂಗ್ ಬೋರ್ಡ್‌ನಲ್ಲಿ ನಾನು ಯಾವುದೇ ಫೈಲ್ ಕಳಿಸಿದರು ಹೌಸಿಂಗ್ ಮಿನಿಸ್ಟರ್ ಆಗಿದ್ದ ರೇವಣ್ಣನವರು ಸ್ಪಂದಿಸುತ್ತಿರಲಿಲ್ಲ. ನನಗೂ ಬೇಜಾರಾಗಿ ಒಂದು ದಿನ ಮಿನಿಸ್ಟರ್ ಬಿಟ್ಟು ಒಂದು ಮೀಟಿಂಗ್ ಮಾಡಿದೆ. ಪಿ.ಬಿ. ಮಹಿಶಿ ಎಂದು ಕಮಿಷನರ್ ಇದ್ದರು. ಸಚಿವರು ಫೈಲ್ ಸರಿಯಾಗಿ ನೋಡಿ ಕಳಿಸಲಿಲ್ಲ ಅಂದರೆ ನೆಕ್ಸ್ಟ್ ಚೀಫ್ ಮಿನಿಸ್ಟರ್‌ಗೆ ಫೈಲ್ ಕಳಿಸುತ್ತೇನೆ ಎಂದೆ. ದಿನ ಕಳೆದಂತೆ ರೇವಣ್ಣನಿಗೂ ನನಗೂ ಜಟಾಪಟಿ ಜೋರಾಯಿತು. ಈ ವಿಷಯ ತಿಳಿದ ದೇವೇಗೌಡರು ನನ್ನನ್ನು ಹೌಸಿಂಗ್‌ಬೋರ್ಡ್ ಚೇರ್ಮೆನ್‌ನಿಂದ ತಗಿಯಬೇಕು ಎಂದು ಡೆಲ್ಲಿಯಲ್ಲಿ ಕುಳಿತುಕೊಂಡು ಒಂದು ದಿನ ಬೆಳಿಗ್ಗೆ 10 ಗಂಟೆಯಿಂದ ಶಿವರಾಮೇಗೌಡನ ಗೃಹ ಮಂಡಳಿ ಅಧ್ಯಕ್ಷ ಸ್ಥಾನದಿಂದ ತೆಗೆಯಬೇಕು ಎಂದು ಪಟ್ಟು ಹಿಡಿದಿದ್ದಾರೆ ಎಂಬುದು ಗೊತ್ತಾಯಿತು. ಸಿ.ಎಂ ಆಗಿದ್ದ ಜೆ.ಹೆಚ್ ಪಟೇಲರು ಆಗ ನನ್ನನ್ನ ಕರೆಸಿದರು. ಅಲ್ಲಿ ಎಂ.ಸಿ ನಾಣಯ್ಯ, ಸಿದ್ದರಾಮಯ್ಯ, ನಾಗೇಗೌಡರು, ಬೈರೇಗೌಡರು ಎಲ್ಲರೂ ಸಹ ಇದ್ದರು. ಇದಕ್ಕೂ ಮೊದಲು ಸಿಎಂ ಜೆ.ಹೆಚ್. ಪಟೇಲರು ದೇವೇಗೌಡರ ಬಳಿ ಏನು ತಪ್ಪು ಮಾಡದೆ ಇರುವ ಶಿವರಾಮೇಗೌಡನ ತೆಗೆಯುವುದಾದರೂ ಹೇಗೆ ಗೌಡಪ್ಪ..? ಎಂದು ಕೇಳಿದ್ದಾರೆ. ಆದರೆ ದೇವೇಗೌಡರು ಅದೆಲ್ಲ ನನಗೆ ಗೊತ್ತಿಲ್ಲ, ತೆಗೆಯಬೇಕು ಅಷ್ಟೇ ಎಂದು ಪಟ್ಟು ಹಿಡಿದಿದ್ದಾರೆ. ಕೊನೆಗೆ 4 ಗಂಟೆ ಸಮಯ ನಾನು ರಿಸೈನ್ ಮಾಡೋದು ಎಂದು ತೀರ್ಮಾನ ಆಯ್ತು. ರಿಸೈನ್ ಆದ ಮೇಲೆ ನನ್ನ ಮಿನಿಸ್ಟರ್ ಮಾಡೋದು ಎಂದು ಸಹ ತೀರ್ಮಾನ ಆಯ್ತು. ಮುಂದಿನ ಕ್ಯಾಬಿನೆಟ್ ಬದಲಾವಣೆ ಸಂದರ್ಭದಲ್ಲಿ ನಿನ್ನನ್ನು ಸಚಿವನನ್ನಾಗಿ ಮಾಡ್ತೀವಿ ಎಂದರು. ಆಗ ನಾಗೇಗೌಡರು, ಬೈರೇಗೌಡರು ಅಲ್ಲಿಯವರೆಗೆ ಕಾಯುವುದು ಬೇಡ. ಆಮೇಲೆ ಇವರು ಮತ್ತೆ ಏನಾದರೂ ವಿಷಯ ತೆಗೆದು ಅಡ್ಡಗಾಲು ಹಾಕಿದರೆ ಕಷ್ಟ ಎಂದು ಹೇಳಿ, ಬಿಡಿಎ ಚೇರ್ಮನ್ ಮಾಡಿ ಎಂದರು. ಬಿಡಿಎ ಚೇರ್ಮನ್ ಮಾಡೋಕೆ ಪರ್ಮಿಷನ್ ಇರಲಿಲ್ಲ. ಒಂದು ಕಾನೂನನ್ನ ಸರ್ಕಾರದಿಂದಲೇ ಮಾಡಿದ್ದರು,



ಅದೇನೆಂದರೆ, ಎಲೆಕ್ಷನ್‌ನಲ್ಲಿ ಗೆದ್ದಂತಹ ವ್ಯಕ್ತಿಗಳನ್ನ ಅಂದರೆ, ರಾಜಕಾರಣಿಗಳನ್ನ ಬಿಡಿಎ ಚೇರ್ಮನ್ ಮಾಡೋ ಹಾಗಿಲ್ಲ, ಐಎಎಸ್ ಅಧಿಕಾರಿಗಳನ್ನು ಮಾತ್ರ ಮಾಡಬೇಕು ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿತ್ತು. ಸಿಎಂ ಕಾರ್ಯದರ್ಶಿಗಳು ಸಿಎಂಗೆ, ಸರ್, ಬಿಡಿಎ ಚೇರ್ಮನ್ ಮಾಡೋಕೆ ಆಗಲ್ಲ ಕಾನೂನು ಅಡೆತಡೆಗಳಿವೆ ಎಂದರು. ಆಗ ಜೆ.ಹೆಚ್. ಪಟೇಲರು ಚೀಫ್ ಮಿನಿಸ್ಟರ್ ನೀನಾ? ಇಲ್ಲಾ ನಾನಾ? ಎಂದು ಚೀಫ್ ಸೆಕ್ರೆಟರಿಗೆ ಅದೇನ್ ಕಾನೂನು ತಿದ್ದುಪಡಿ ಮಾಡಬೇಕು ಎಲ್ಲಾ ಮಾಡಿಕೊಂಡು ಆ ಫೈಲ್ ತೆಗೆದುಕೊಂಡು ಬಾ ಎಂದು ಹೇಳಿ ನನಗೆ ಏ.. ಶಿವರಾಮೇಗೌಡ ನೀನು ಬಿಡಿಎ ಚೇರ್ಮನ್ ಆಗು ಎಂದರು. ಆಗಲೂ ದೊಡ್ಡವರು ಸುಮ್ಮನೆ ಇರಲಿಲ್ಲ. ಬೆಂಗಳೂರಿನ ಕೆಲ ಎಂಎಲ್‌ಎಗಳನ್ನು ನನ್ನ ಮೇಲೆ ಎತ್ತಿ ಕಟ್ಟಿ ನನಗೆ ಬಿಡಿಎ ಚೇರ್ಮನ್ ಕೊಡಬಾರದು ಎಂದು ಪ್ರತಿಭಟನೆ ಮಾಡೋ ಹಾಗೆ ಮಾಡಿದರು. ಇವರೆಲ್ಲ ಸಿಎಂ ಜೆ.ಹೆಚ್. ಪಟೇಲರ ಮನೆ ಮುಂದೆ ಏ. ಸೋಮಣ್ಣನನ್ನ ಚೇರ್ಮನ್ ಮಾಡಬೇಕು ಎಂದು ಘೋಷಣೆ ಕೂಗಿದರು. ನಾನು ಜ್ಯೋತಿಷ್ಯ ಕೇಳಿ ಬುಧವಾರ ಒಳ್ಳೆಯ ದಿನ ಚಾರ್ಜ್ ತಗೊಳ್ಳೋಣ ಎಂದು ಸುಮ್ಮನಿದ್ದೆ. ಎಸ್.ಆರ್. ವಿಜಯ್ ಎಂದು ಮಂಡ್ಯದಲ್ಲಿ ಡಿಸಿ ಆಗಿದ್ದರು. ಅವರು ನನಗೆ ಫೋನ್ ಮಾಡಿ, ನಾನು ಎಸ್. ಆರ್. ವಿಜಯ್ ಮಾತನಾಡುತ್ತಿದ್ದೇನೆ. ಮಂತ್ರಿ ಆಗಬಹುದು ಬಿಡಿಎ ಚೇರ್ಮನ್ ಆಗೋದು ನಾಟ್ ಸೋ ಈಜಿ. ಮೊದಲು ಬಂದು ಚಾರ್ಜ್ ತಗೊಳಿ ಎಂದರು. ಅವರಿಗೂ ನನಗೂ ಪರಿಚಯ ಇರಲಿಲ್ಲ. ಪಾಪ ಅವರು ಅದೆಲ್ಲಿ ನನ್ನ ನಂಬರ್ ತಗೊಂಡರೋ ಏನೋ, ಒಟ್ಟಿನಲ್ಲಿ ಫೋನ್ ಮಾಡಿ ಹೀಗೆ ಹೇಳಿದರು. ಆಗ ಐಎಎಸ್ ಅಧಿಕಾರಿ ರವೀಂದ್ರರವರು ಚೇರ್ಮನ್ ಆಗಿದ್ದರು. ಆಗ ನಾನು ತತ್‌ಕ್ಷಣ ಸಂಜೆ ಏಳೂವರೆಯಲ್ಲಿ ಚಾರ್ಜ್ ತಗೊಂಡೆ. ಮತ್ತೆ ಬುಧವಾರ ಅದ್ದೂರಿಯಾಗಿ ಜ್ಯೋತಿಷಿಗಳು ಹೇಳಿದಂತೆ, ಇನ್ನೊಂದು ಸಲ ಎಲ್ಲಾ ಮುಖಂಡರ ಸಮ್ಮುಖದಲ್ಲಿ ಚಾರ್ಜ್ ತಗೊಂಡೆ. ಬಿಡಿಎ ಚೇರ್ಮನ್ ಆದಮೇಲೆ ನಮ್ಮ ನಾಗಮಂಗಲದವರೆಲ್ಲ ಸೈಟ್ ಬೇಕು, ಸೈಟ್ ಬೇಕು ಎಂದು ಅರ್ಜಿ ಹಿಡಿದುಕೊಂಡು ಬರೋಕೆ ಶುರುವಾದರು. ಹಾಗೆಲ್ಲ ಸುಖಾಸುಮ್ಮನೆ ಸೈಟ್ ಕೊಡೋಕೆ ಬರುತ್ತಿರಲಿಲ್ಲ. ಇವರೆಲ್ಲ ನಮಗೆ ಸೈಟ್ ಕೊಡುತ್ತಿಲ್ಲವಲ್ಲ ಅಂತ ಹೇಳಿ ಇವನನ್ನು ಬಲಿ ಹಾಕಬೇಕು ಎಂದು ತೀರ್ಮಾನ ಮಾಡಿ, ಅಸೆಂಬ್ಲಿ ಎಲೆಕ್ಷನ್ನಲ್ಲಿ ನನ್ನ ಸೋಲಿಸಿದರು. ಆಗ ಮೊದಲೇ ಹೇಳಿದಂತೆ ಚೆಲುವರಾಯಸ್ವಾಮಿ ಕಡಿಮೆ ಅಂತರದ ವೋಟಿನಿಂದ ಗೆದ್ದರು. ಅವರು ಗೆಲ್ಲುವುದಕ್ಕೆ ಇನ್ನೊಂದು ಕಾರಣವೂ ಇತ್ತು. ಜೆಡಿಎಸ್‌ನಲ್ಲಿ ಸಿದ್ದರಾಮಯ್ಯ ಆ ಸಮಯದಲ್ಲಿ ಪ್ರಾಬಲ್ಯವಾಗಿ ಬೆಳೆದಿದ್ದರು. ಕುರುಬ ಜನಾಂಗದ ಓಟು ಜೆಡಿಎಸ್‌ಗೆ ಹೆಚ್ಚು ಬಿದ್ದ ಪರಿಣಾಮ, ಚೆಲುವರಾಯಸ್ವಾಮಿ ಗೆಲ್ಲೋಕೆ ಅವಕಾಶ ಆಯಿತು. ಅವಾಗ 1999ನೇ ಇಸವಿ. ಮತ್ತೆ 2004ರಲ್ಲೂ ಅಲ್ಪಮತಗಳಿಂದ ಸೋತೆ. ಮತ್ತೆ ಚೆಲುವರಾಯಸ್ವಾಮಿ ನನ್ನ ವಿರುದ್ಧ ಗೆದ್ದು ಮಿನಿಸ್ಟರ್ ಕೂಡ ಆದರು. ಆಗ ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂತು.





‘ಅಹಿಂದ’ ಕಟ್ಟಲು ಸಿದ್ದು ಪಣ, ನಾನವರೊಂದಿಗೆ ನಿಂತ ಕ್ಷಣ!

ಮಾಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನ ಜೆಡಿಎಸ್‌ನಿಂದ ಶ್ರೀಮಾನ್ ದೇವೇಗೌಡರು ಸಕಾರಣಗಳಿಲ್ಲದೆ ಉಚ್ಚಾಟನೆ ಮಾಡಿದಾಗ ಅವರು ಅಹಿಂದ ಸಂಘಟನೆ ಕಟ್ಟಿದರು. ಆಗ ನಾನು ಸಿದ್ದರಾಮಯ್ಯನವರನ್ನು ಸಪೋರ್ಟ್ ಮಾಡಿದೆ. ಆವಾಗ ನಾನು ಕಾಂಗ್ರೆಸ್ನಲ್ಲೇ ಇದ್ದೆ. ಹುಬ್ಬಳ್ಳಿಗೆ 100 ಬಸ್ಸು, ತುಮಕೂರಿಗೆ ನೂರು ಬಸ್ಸು, ಹಾಸನಕ್ಕೆ 100 ಬಸ್ಸು ಕಳಿಸಿದೆ. 100 ಬಸ್ಸು ಜನ ಎಂದರೆ 5,000 ಜನ ಆಗುತ್ತಾರೆ. ಆ 5000 ಜನಕ್ಕೆ ಊಟ ತಿಂಡಿ ಅವರ ಖರ್ಚು ವೆಚ್ಚ ಎಲ್ಲ ನಾನೇ ನೋಡಿಕೊಂಡೆ. ತಾಲೂಕಿನ ಪ್ರತಿ ಕುರುಬರು ವಾಸವಾಗಿರುವ ಎಲ್ಲ ಹಳ್ಳಿಗೂ ಹೋಗಿ ಬನ್ರಪ್ಪೋ... ಸಿದ್ದರಾಮಯ್ಯನವರನ್ನ ದೇವೇಗೌಡರು ರಾಜಕೀಯವಾಗಿ ತೀರಿಸಿಬಿಡುತ್ತಾರೆ, ಸಪೋರ್ಟ್ ಮಾಡಿ ಬನ್ನಿ ಎಂದು ಕರೆಯುತ್ತಿದ್ದೆ. ಕುರುಬ ಜನಾಂಗದವರು ಸಾವಿರಾರು ಜನ ನನ್ನ ಹಿಂದೆ ಬರೋಕೆ ಶುರುವಾದರು.

ಎಲ್ಲರನ್ನೂ ಒಗ್ಗೂಡಿಸಿಕೊಂಡು ಎಲ್ಲಾ ಕಡೆಗೂ ನಾನು ಸುತ್ತಿದೆ. ಬಹಿರಂಗವಾಗಿ ಭಾಷಣವನ್ನು ಮಾಡಿದೆ. ಆಮೇಲೆ ಕಾಂಗ್ರೆಸ್‌ಗೆ ಸಿದ್ದರಾಮಯ್ಯನವರು ಬಂದು ಸೇರಿಕೊಂಡರು. 2008ರ ವಿಧಾನಸಭೆ ಚುನಾವಣೆಗೆ ನನಗೆ ಟಿಕೆಟ್ ಕೊಡಿಸಬೇಕು ಎಂದು ತುಂಬಾ ಪ್ರಯತ್ನಪಟ್ಟರು. ಆದರೆ ಹೈಕಮಾಂಡ್‌ನಲ್ಲಿ ಎರಡನೇ ಸಲ

ಸೋತಿರುವವರಿಗೆ ಪುನಃ ಟಿಕೆಟ್ ಕೊಡಬಾರದು ಎಂದು ತೀರ್ಮಾನ ಮಾಡಿದ ಕಾರಣದಿಂದ ಕೈ ಟಿಕೆಟ್ ನನಗೆ ತಪ್ಪಿತು. ಆಗ ಕೆಪಿಸಿಸಿ ಪ್ರೆಸಿಡೆಂಟಾಗಿ ಡಾ. ಪರಮೇಶ್ವರ್ ಅವರು ಇದ್ದರು. ಮನಮೋಹನ್ ಸಿಂಗ್ ಅವರು ಪ್ರಧಾನಮಂತ್ರಿಗಳಿದ್ದರು, ದಿಗ್ವಿಜಯ್ ಸಿಂಗ್ ಅವರು ಜನರಲ್ ಸೆಕ್ರೆಟರಿ ಇದ್ದರು. ನನಗೆ ಟಿಕೆಟ್ ತಪ್ಪಿದಾಗ ಸಿದ್ದರಾಮಯ್ಯನವರು ನನಗೆ ಒಂದು ಮಾತು ಹೇಳಿದರು, ಶಿವರಾಮೇಗೌಡ ನೀನು ನನಗೋಸ್ಕರ ಅಹಿಂದ ಸಂದರ್ಭದಲ್ಲಿ ಬಾರಿ ಶ್ರಮ ಪಟ್ಟಿದ್ದೀಯಾ, ನೀನು ಈಗಾಗಲೇ ಎರಡು ಬಾರಿ ಇಂಡಿಪೆಂಡೆಂಟಾಗಿ ಗೆದ್ದಿದ್ದೀ ಕೂಡ. ಈಗಲೂ ಇಂಡಿಪೆಂಡೆಂಟಾಗಿ ನಿಲ್ಲು, ನಾನು ನಿನಗೆ ಸಂಪೂರ್ಣ ಸಪೋರ್ಟ್ ಮಾಡುತ್ತೇನೆ. ಯಾವುದಾದರೂ ಒಂದು ಕಲ್ಯಾಣ ಮಂಟಪದಲ್ಲಿ ನಮ್ಮ ಸಮುದಾಯದ 500 ಜನ ಮುಖಂಡರನ್ನ ಸೇರಿಸು, ನಾನು ಅವರಿಗೆಲ್ಲ ಶಿವರಾಮೇಗೌಡರನ್ನ ಸಪೋರ್ಟ್ ಮಾಡಿ, ಅವನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಾನೆ. ಗೆದ್ದ ಮೇಲೆ ನನ್ನ ಬೆಂಬಲಕ್ಕೆ ನಿಲ್ಲುತ್ತಾನೆ ಎಂದು ಹೇಳುತ್ತೇನೆ ಎಂದರು. ಆಗ ನಾನೇ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಬೇರೆ ಆಗಿದ್ದೆ. 1999ರಲ್ಲಿ ಸೋತ ನಂತರ 2001ರಲ್ಲಿ ಕೃಷ್ಣ ಸಾಹೇಬರು ನನ್ನನ್ನ ಅಧ್ಯಕ್ಷನನ್ನಾಗಿ ಮಾಡಿದ್ದರು. ಇಂಡಿಪೆಂಡೆಂಟಾಗಿ ಗೆಲ್ಲೋದು ಸುಲಭದ ಮಾತಲ್ಲ, ಮತ್ತೆ ಏನಾದರೂ ಮೂರನೇ ಬಾರಿ ನಾನು ಸೋತರೆ ನನ್ನ ಭವಿಷ್ಯ ಹಾಳಾಗುತ್ತದೆ ಎಂದು ನಾನು ಇಂಡಿಪೆಂಡೆಂಟಾಗಿ ನಿಲ್ಲಲು ಮನಸ್ಸು ಮಾಡಲಿಲ್ಲ.



ನನ್ನ ಪುತ್ರ ಚೇತನ್‌ಗೆ MLA ಟಿಕೆಟ್



2013ರಲ್ಲಿ ನನಗೆ ನಾಗಮಂಗಲದ ಟಿಕೆಟ್ ಕೊಡಲಿಲ್ಲ. ನನ್ನ ಮಗನಿಗೆ ಟಿಕೇಟ್ ಕೊಡುತ್ತೇವೆ ಎಂದು ಡಿಕೆ ಆವರೆಲ್ಲ ತೀರ್ಮಾನ ಮಾಡಿ ಪದ್ಮನಾಭನಗರಕ್ಕೆ ಟಿಕೆಟ್ ಕೊಟ್ಟರು. ಆಗ ಚೇತನ್ ಇಲ್ಲಿ ನಿಂತುಕೊಂಡ. ಅಲ್ಲಿಯವರೆಗೂ ಬಿಜೆಪಿಯ ಆರ್. ಅಶೋಕನ ವಿರುದ್ಧ ಹೆಚ್ಚು ಮತವನ್ನು ಯಾರು ಪಡೆದುಕೊಂಡಿರಲಿಲ್ಲ. ಚೇತನ್ ಯುವಕರನ್ನು ಚೆನ್ನಾಗಿ ಸೆಳೆದ. ಆತನ ಸುತ್ತ ಯುವಕರ ದಂಡೇ ಇತ್ತು. ಈ ಕ್ಷೇತ್ರದಲ್ಲಿ ಸಮಸ್ಯೆ ಇರುವುದು ಯುವಕರಿಂದಲ್ಲ, ಕಾಂಗ್ರೆಸ್ ಹಳೇ ತಲೆಗಳಿಂದ. ಚೇತನ್ 33 ಸಾವಿರ ಓಟ್‌ಗಳನ್ನ ತೆಗೆದುಕೊಂಡ. ಆ ಸಂದರ್ಭದಲ್ಲಿ ನಮಗೆ ಹೆಚ್ಚು ಸಮಯವು ಸಿಗದೆ ಹಿನ್ನೆಡೆಯಾಯಿತು, ಜೊತೆಗೆ ಕ್ಷೇತ್ರದ ನಾಯಕರೊಬ್ಬರ ಪಿತೂರಿಯಿಂದ ಕ್ಷೇತ್ರದ ವಾರ್ಡ್‌ಗಳ ನಾಯಕರು ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ಕೆಲ ಮುಖಂಡರು ವಿರೋಧಿಗಳೊಂದಿಗೆ ಶಾಮೀಲಾಗಿ ನನ್ನ ಮಗನ ಸೋಲಿಗೆ ಕಾರಣರಾದರು. ಒಟ್ಟಿನಲ್ಲಿ ನಾಗಮಂಗಲದ ಎಲೆಕ್ಷನ್ನೇ ಬೇರೆ ಬೆಂಗಳೂರಿನ ಎಲೆಕ್ಷನ್ನೇ ಬೇರೆ ಎಂದು ಅರಿವಾಗುವಷ್ಟರಲ್ಲಿ ಕೈ ಮೀರಿತ್ತು.

ಮತ್ತೆ ಕಾಂಗ್ರೇಸ್‌ನಿಂದ ಮಂಡ್ಯದಲ್ಲಿ ಎಂಎಲ್‌ಸಿಗೆ ನಿಂತ ಸಂದರ್ಭ..

ಒಂದು ದಿನ ಡಿ.ಕೆ. ಶಿವಕುಮಾರ್ ಅವರು, ಡೆಲ್ಲಿಯಿಂದ ಫೋನ್ ಮಾಡಿ, ಡೆಲ್ಲಿಗೆ ಬಾರಯ್ಯ ಅರ್ಜೆಂಟ್ ಎಂದು ಕರೆದರು. ನಾನು ಡೆಲ್ಲಿಗೆ ಹೋಗಿ ಭೇಟಿ ಮಾಡಿದೆ. ಮಂಡ್ಯ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಳ್ಳುವ ವಿಧಾನ ಪರಿಷತ್ ಚುನಾವಣೆಗೆ ರೆಡಿಯಾಗು ಎಂದರು. ನಾನು ಬೇಡ ಎಂದೆ. ನಿಂತ್ಕಳಯ್ಯ, ಏನಿಲ್ಲ ನಾನಿದ್ದೀನಿ ಅಂದರು. ಸರಿ ಎಂದು ಕೊನೆಗೆ ಒಪ್ಪಿಕೊಂಡು ಎಂಎಲ್‌ಸಿಗೆ ನಿಂತುಕೊಂಡೆ. ಆ ಸಂದರ್ಭದಲ್ಲಿ ಒಂದಿಬ್ಬರು ದೊಡ್ಡ ನಾಯಕರು ಹೆಸರು ಹೇಳೋದು ಬೇಡ. ಅವರು ಬಂದು ನಾನು ಜೆಡಿಎಸ್ ಪಕ್ಷದಿಂದ ವೋಟ್ ಕ್ರಾಸ್ ಮಾಡಿಸುತ್ತೇನೆ ಎಂದು ಹೇಳಿ ನನ್ನಿಂದ ಒಂದು ಅಸೆಂಬ್ಲಿ ಎಲೆಕ್ಷನ್ ಆಗುವಷ್ಟು ಧನಸಹಾಯ ಪಡೆದುಕೊಂಡು ಹೋದವರು, ಒಂದೇ ಒಂದು ವೋಟು ಹಾಕಿಸಲಿಲ್ಲ. ಆ ಸಂದರ್ಭದಲ್ಲಿ ನನ್ನ ಸಾಕಷ್ಟು ಹಣ ಪೋಲಾಯಿತು. ಜೆಡಿಎಸ್ ಅಭ್ಯರ್ಥಿ ನಾಗಮಂಗಲದ ಎನ್. ಅಪ್ಪಾಜಿಗೌಡರ ವಿರುದ್ಧ ಕೇವಲ 120 ವೋಟಿನಿಂದ ಸೋತೆ, ಇದು 2016ರ ಸಂದರ್ಭ. ನಂತರ ಹಾಗೆ ಕೂತು ಯೋಚನೆ ಮಾಡಿದೆ. ಕಾಂಗ್ರೆಸ್‌ನಿಂದ ಎಂಎಲ್‌ಎಗೆ ನಿಂತು ಎರಡು ಸಲ ಸೋತಿದ್ದೀನಿ. ಮೂರನೇ ಸಲ ಟಿಕೆಟ್ ಕೊಡಲಿಲ್ಲ, ನಾಲ್ಕನೇ ಸಲ ಎಂಎಲ್‌ಸಿಗೆ ನಿಂತು ಸೋತಿದ್ದೀನಿ. ಏನಪ್ಪ ಮಾಡೋದು ಎಂದು ಯೋಚನೆ ಮಾಡಿ, ಈ ರಾಜಕೀಯದಿಂದ ಸ್ವಲ್ಪ ದೂರವಿರೋಣವೆಂದು ತೀರ್ಮಾನ ಮಾಡಿ ಜನರ ಕಷ್ಟ ಸುಖಕ್ಕೆ ಸ್ಪಂದಿಸಿ ಸುಮ್ಮನಿದ್ದು, ರಾಜಕೀಯದಿಂದ ವಿರಾಮ ಪಡೆದೆ.

ಈ ಮಧ್ಯೆ ಅಂಬರೀಷ್‌ರವರೊಂದಿಗೆ ನಾನು ಸೇರಿಕೊಂಡು ಅವರ ಸುಮಾರು ಎಲೆಕ್ಷನ್ ಮಾಡಿದೆ. ಆಗ ಅಂಬರೀಶ್ ಮೂರು ಬಾರಿ ಎಂಪಿಯಾಗಿ ಗೆದ್ದರು. ಕೊನೆಗೆ ಸೆಂಟ್ರಲ್ ಮಿನಿಸ್ಟರ್ ಕೂಡ ಆದರು, ಕಾವೇರಿ ವಿವಾದದ ತೀರ್ಪಿನಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಸೆಂಟ್ರಲ್ ಮಿನಿಸ್ಟರ್‌ಗೆ 2008ರಲ್ಲಿ ರಾಜೀನಾಮೆ ಕೊಟ್ಟು ನನಗೆ ಒಂದು ಕಿವಿ ಮಾತು ಹೇಳಿದರು. ಒಂದ್ ಕೆಲ್ಸ ಮಾಡು ಗೌಡ, ನನ್ನಿಂದಾಗಿ ಬಹಳ ಹಣ ಕಳಕೊಂಡಿದ್ದೀಯ ಈ ಸಲ ಮಂಡ್ಯ ಲೋಕಸಭೆಗೆ ನೀನು ನಿಲ್ಲು, ನಾನು ಅಸೆಂಬ್ಲಿಗೆ ಹೋಗ್ತಿನಿ ಎಂದರು. ನನ್ನನ್ನು ಹುರುದುಂಬಿಸಿಕೊಂಡು ಎಲ್ಲಾ ಕಡೆ ಓಡಾಡಿಸಿಕೊಂಡು ತಿರುಗಿದರು. 2008ರಲ್ಲಿ ಅವರು ಶ್ರೀರಂಗಪಟ್ಟಣಕ್ಕೆ ಎಂಎಲ್‌ಎಗೆ ನಿಂತು ಅಲ್ಲಿ ಸೋತರು. ನಾನು ಎಂಪಿಗೆ ನಿಲ್ಲಲ್ಲ ಎಂದು ಹೇಳಿದವರು, ಮತ್ತೆ ಅವರೇ ಎಂಪಿಗೆ ನಿಂತರು. ಆವಾಗ ನಾನು ಅವರ ಮೇಲೆ ಬೇಸರ ಮಾಡಿಕೊಂಡು ಮನೆಯಲ್ಲಿ ಸುಮ್ಮನಿದ್ದೆ. ಒಟ್ಟಾರೆ ಅಂಬರೀಶ್‌ರವರ ಎಲೆಕ್ಷನ್‌ಗಳಲ್ಲಿ ಎಷ್ಟೇ ಹಣ ಖರ್ಚಾದರೂ ಅವರಿಂದ ನಾನು ಒಂದೇ ಒಂದು ರೂಪಾಯಿಯನ್ನು ಪಡೆದುಕೊಳ್ಳುತ್ತಿರಲಿಲ್ಲ. ನನ್ನ ಮನೆಯಿಂದ ಹಣವನ್ನು ತೆಗೆದುಕೊಂಡು ಹೋಗಿ ಅವರಿಗೆ ಎಲೆಕ್ಷನ್ ಮಾಡಿದ್ದು ನೀರಿನಲ್ಲಿ ಹೋಮ ಮಾಡಿದಂತಾಯಿತು, ಸಮಯ, ಶ್ರಮ, ಹಣ ಎಲ್ಲವೂ ವ್ಯರ್ಥವಾಯಿತು.



ಬಿಜೆಪಿಗೆ ಸೇರಿದ ಸಂದರ್ಭ



ರಾಜಕೀಯದಿಂದ ಸ್ವಲ್ಪ ದೂರ ಉಳಿದು ನನ್ನ ಪಾಡಿಗೆ ನಾನು ಮನೆಯಲ್ಲಿ ಇದ್ದೆ. 2009ರಲ್ಲಿ ಒಂದು ದಿನ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಇಬ್ಬರು ಮಿನಿಸ್ಟರ್‌ಗಳನ್ನ ಮನೆಗೆ ಕಳುಹಿಸಿ ನನ್ನ ಕರೆದುಕೊಂಡು ಬರಲು ಹೇಳಿದ್ದರು. ಮನೆಗೆ ಬಂದ ಮಿನಿಸ್ಟರ್‌ಗಳು ನನ್ನನ್ನು ಕರೆದುಕೊಂಡು ಹೋದರು, ನಾನು ವಾಕ್ ಹೋಗೋಣ ಎಂದು ಟ್ರಾಕ್ ಸೂಟ್ ಹಾಕಿಕೊಂಡಿದ್ದೆ, ಹಾಗೆ ಅರ್ಜೆಂಟ್‌ನಲ್ಲಿ ಕರೆದುಕೊಂಡು ಹೋದರು. ಯಡಿಯೂರಪ್ಪನವರ ಮನೆ ಧವಳಗಿರಿಗೆ ಹೋದೆವು. ಅಲ್ಲಿ ಶಿವರಾಮೇಗೌಡ ಬಿಜೆಪಿಗೆ ಬಂದರೆ ನಾನು ವಾಪಸ್ಸು ಬರ್ತಿನಿ ಎಂದು ಡಿ.ಬಿ. ಚಂದ್ರೇಗೌಡರು ಹೇಳಿದರು. ಹೆಚ್. ಸಿ. ಶ್ರೀಕಂಠಯ್ಯನವರು ಸಹ ಶಿವರಾಮೇಗೌಡನಿಗೆ ಬಿಜೆಪಿ ಟಿಕೆಟ್ ಕೊಟ್ಟರೆ ಹಾಸನದಿಂದ ನಾನೂ ರೆಡಿ ಅಂದರು. ಹಾಸನ ಎಂಪಿ ಟಿಕೇಟ್ ಶ್ರೀಕಂಠಯ್ಯನವರಿಗೆ, ಡಿ. ಬಿ. ಚಂದ್ರೇಗೌಡರಿಗೆ ಬೆಂಗಳೂರು ಉತ್ತರ ಕ್ಷೇತ್ರದ ಎಂಪಿ ಟಿಕೇಟ್ ಕೊಟ್ಟರು. ಆ ಸಂದರ್ಭದಲ್ಲಿ ವಿ. ಸೋಮಣ್ಣ ಇದ್ದರು, ಕೇಂದ್ರ ಮಂತ್ರಿ ಅನಂತ್‌ಕುಮಾರ್ ಅವರು ಆಗಷ್ಟೇ ಬಂದರು. ಪ್ರೆಸ್‌ನವರನ್ನ ಕರೆದು ಮಂಡ್ಯದಿಂದ ಎಂಪಿಗೆ ಶಿವರಾಮೇಗೌಡರಿಗೆ ಟಿಕೆಟ್ ಕೊಡುತ್ತಿದ್ದೇವೆ, ಅವರೇ ನಮ್ಮ ಅಭ್ಯರ್ಥಿ. ಚಂದ್ರೇಗೌಡರು, ಶ್ರೀಕಂಠಯ್ಯನವರು, ಶಿವರಾಮೇಗೌಡರು ಮೂವರು ಒಕ್ಕಲಿಗ ಸಮುದಾಯಕ್ಕೆ ಸೇರಿದ ನಾಯಕರು, ಇದೀಗ ಬಿಜೆಪಿಗೆ ಮೆಚ್ಚಿ ಬಂದಿರೋದು, ಬಿಜೆಪಿ ಪಕ್ಷಕ್ಕೆ ಆನೆ ಬಲ ಬಂದಂತಾಯಿತು ಎಂದು ಯಡಿಯೂರಪ್ಪನವರು ಹೇಳಿಕೆ ಕೊಟ್ಟರು. ಆಮೇಲೆ ನಾನು ಬಿ ಫಾರಂ ಕವರ್ನಲ್ಲಿ ಇಟ್ಟುಕೊಂಡು ಡಿ.ಕೆ ಹತ್ತಿರ ಹೋದೆ. ಆಗ ಡಿ.ಕೆ ತುಂಬಾ ಬೇಜಾರ್ ಮಾಡಿಕೊಂಡು, ನೀನು ಹೋಗಬಾರದಿತ್ತು ಎಂದರು. ಆಗ ನಾನು ಇನ್ನು ಎಷ್ಟು ದಿನ ಕಾಯ್ತಾ ಇರೋಣ ಸ್ವಾಮಿ ಇಲ್ಲಿ. ಅಂಬರೀಶ್ ಬಿಡ್ತಾನ ನಮ್ಮನ್ನ, ಅವನನ್ನ ತೀರಿಸಬೇಕು ಎಂದೇ ನಾನು ಹೋಗ್ತಾ ಇರೋದು ಎಂದು ಹೇಳಿ 2009ರಲ್ಲಿ ಅಂಬರೀಶ್ ವಿರುದ್ಧ ನಾನು ಎಂಪಿಗೆ ನಿಂತೆ. ನಾನು ಅವತ್ತು ಬಿಜೆಪಿಯಿಂದ ನಿಲ್ಲದೇ ಇದ್ದಿದ್ದರೆ ಅಂಬರೀಶ್ ಗೆಲ್ಲುತ್ತಿದ್ದರು. ಅವತ್ತು ನಾನು ನಿಲ್ಲಲಾಗಿ ಕಾಂಗ್ರೆಸ್‌ನಿಂದ ನಿಂತಿದ್ದ ಅಂಬರೀಶ್ ಸೋತರು. ನಾನು ಸಹ ಸೋತೆ, ಆದರೆ ಜೆಡಿಎಸ್‌ನಿಂದ ಚೆಲುವರಾಯಸ್ವಾಮಿ ಗೆದ್ದರು. ನಾಗಮಂಗಲದಲ್ಲಿ ಅಂಬರೀಷ್‌ಗೆ ಹೋಗುವ ವೋಟ್‌ಗಳನ್ನ, ನಾನು ಮತ್ತು ಚೆಲುವರಾಯಸ್ವಾಮಿ ಹಂಚಿಕೊಂಡೆವು.

ಬರೀ 25,000 ಮತಗಳ ಅಂತರದಿಂದ ಚೆಲುವರಾಯಸ್ವಾಮಿ ಗೆದ್ದರು. ತಕ್ಷಣ ನನಗೆ ಹೊನ್ನಾವರದ ಶಂಕರ ಫೋನ್ ಕೊಟ್ಟ, ಆ ಕಡೆಯಿಂದ ಚೆಲುವರಾಯಸ್ವಾಮಿ, ಅಲ್ಲಿದ್ದ ನೆಲ್ಲಿಗೆರೆ ಬಾಲು ಮೊದಲು ದೇವೇಗೌಡರಿಗೆ ಫೋನ್ ಮಾಡಿ ಆಶೀರ್ವಾದ ಪಡೀರಿ ಅಂದರೂ ಸಹ ನನ್ನ ಜೊತೆ ಫೋನ್‌ನಲ್ಲಿ ನಾನು ಗೆದ್ದಿರುವುದು ನಿಮ್ಮಿಂದ ಸ್ವಾಮಿ ನಿಮಗೆ ಧನ್ಯವಾದಗಳು ಎಂದರು. ಆಗ ಮಂಡ್ಯದ ನೆಲದಲ್ಲಿ ಬಿಜೆಪಿ ಕಟ್ಟಬೇಕು ಎಂದು ಬಾರಿ ಹೋರಾಟ ಮಾಡಿದೆ. ಮೊದಲು ರಾಮಚಂದ್ರಗೌಡರು ಡಿಸ್ಟ್ರಿಕ್ಟ್ ಮಿನಿಸ್ಟರ್ ಇದ್ದರು, ನಾನೇ ಯಡೂರಪ್ಪನವರ ಬಳಿ ಹೋಗಿ ನಾವು ಮಂಡ್ಯದಲ್ಲಿ ಪಕ್ಷ ಬಲಪಡಿಸಬೇಕು. ಆದ್ದರಿಂದ ನಮಗೆ ಆರ್. ಅಶೋಕ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿ, ರಾಮಚಂದ್ರಗೌಡರು ಬೇಡ ಎಂದು ಹಾಕಿಸಿಕೊಂಡು ಬಂದೆ. ಪಾಪ ಯಡಿಯೂರಪ್ಪನವರು ನಾವು ಹೇಳಿದ ತಕ್ಷಣ ಹಾಕಿಕೊಟ್ಟರು. ಅಶೋಕರವರು ಮೊದಲು ಧಾಮ್ ಧೂಮ್ ಎಂದು ಗ್ರಾಮ ಪಂಚಾಯಿತಿಗೆ ಬಡಿದು ಬಿಸಾಕಿ ಬಿಡೋಣ, ಕಟ್ಟಿ ಪಾರ್ಟಿಯ ಎಂದರು. ಎಲ್ಲಾ ಏಳು ಬ್ಲಾಕ್ ಅಧ್ಯಕ್ಷರುಗಳ ನಮ್ಮ ಹುಡುಗರನ್ನು ಮಾಡಿಕೊಂಡಿದ್ದೆ. ಜಿಲ್ಲಾಧ್ಯಕ್ಷರನ್ನು ನನ್ನ ಕಡೆಯವರನ್ನೇ ಮಾಡಿಕೊಂಡೆ, ಕೊನೆಗೆ ಗ್ರಾಮ ಪಂಚಾಯತಿ ಎಲೆಕ್ಷನ್ ಬಂತು. ಆಗ ಸಾಮ್ರಾಟ್ ಅಶೋಕ್‌ಗೆ ನಾನು ಒಂದು ಪ್ರಪೋಸಲ್ ಕೊಟ್ಟೆ, 3600 ರಿಂದ 3700 ಮೆಂಬರ್‌ಗಳು ಮಂಡ್ಯದಲ್ಲಿ ಎಲೆಕ್ಷನ್‌ಗೆ ನಿಲ್ಲಬೇಕಾಗುತ್ತದೆ. ಪಾರ್ಟಿ ಕಟ್ಟಬೇಕು ಅಂದರೆ ಈಗ ಬಿಜೆಪಿ ಸರ್ಕಾರನೇ ಇದ್ರೆ ಗ್ರಾಮ ಪಂಚಾಯತಿಗೆ ನಿಲ್ಲುವ ಸದಸ್ಯರುಗಳಿಗೆ ಆರ್ಥಿಕ ನೆರವು ನೀಡಿದರೆ ಎಲೆಕ್ಷನ್ ಮಾಡಬಹುದು ಎಂದೆ. ಆಗ ಅಶೋಕ್ ಆಯ್ತು ಕೊಡೋಣ ನೀವು ಎಲ್ಲ ರೆಡಿ ಮಾಡಿಕೊಳ್ಳಿ ಎಂದರು. ಆಗ ಬಿಜೆಪಿಗೆ ನಿಲ್ಲುವವರೇ ಇರಲಿಲ್ಲ. ನಾವು ಊರೂರು ಸುತ್ತಿ ಈ ರೀತಿ ಹಣ ಸಹಾಯ ಮಾಡ್ತೀವಿ, ಎಲ್ಲ ಕಡೆ ಎಲೆಕ್ಷನ್‌ಗೆ ಸ್ಪರ್ಧಿಸಲೇಬೇಕು ಎಂದು ಮೆಂಬರ್ಗಳನ್ನ ತಯಾರು ಮಾಡಿದೆವು. ದುಡ್ಡು ಕೊಡುವ ಸಮಯ ಬಂದಾಗ ಈ ಅಶೋಕ್ ಏನು ಹೇಳಿದರು ಎಂದರೆ, ನಾವು ಎಲ್ಲಾ ಕುಳಿತುಕೊಂಡು ಯೋಚನೆ ಮಾಡಿದೆವು. ಇದು ಪಾರ್ಟಿ ಚಿಹ್ನೆ ಮೇಲೆ ಎಲೆಕ್ಷನ್ ನಡೆಯಲ್ಲ, ವ್ಯಕ್ತಿಗತವಾಗಿ ನಡೆಯುತ್ತದೆ. ಆದ್ದರಿಂದ ಇದಕ್ಕೆ ಆರ್ಥಿಕ ನೆರವು ನೀಡುವುದು ಬೇಡ ಎಂದು ತೀರ್ಮಾನ ತಗೊಂಡಿದ್ದೀವಿ ಎಂದರು. ಇವರ ಸಹವಾಸ ಸಾಕು ಎಂದು ನಾನು ಸುಮ್ಮನಾದೆ. ಆಗ ಇನ್ನೊಂದು ಮಾತು ಹೇಳಿದರು, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿ ಎಲೆಕ್ಷನ್‌ನಲ್ಲಿ ಬಡಿದು ಬಿಸಾಕೋಣ ಎಂದರು. ಮತ್ತೆ ನಾವು ಹುರುಪಿನಿಂದ ಆ ಎಲೆಕ್ಷನ್ ಇನ್ನೇನು ಬಂದೆ ಬಿಡುತ್ತಲ್ಲ ಎಂದು ಮತ್ತೆ ಸಕ್ರಿಯರಾದೆವು. ಆ ಎಲೆಕ್ಷನ್ ಸಹ ಬಂತು. ಎಲ್ಲಾ ಕಡೆಗೆ ಓಡಾಡಿ ಸಂಘಟನೆ ಮಾಡಿ ಮತ್ತೆ ಒಂದು ಪ್ರಪೋಸಲ್ ರೆಡಿ ಮಾಡಿದೆವು. ಜಿಲ್ಲಾ ಪಂಚಾಯಿತಿ ಅಭ್ಯರ್ಥಿಗಳಿಗೆ, ತಾಲ್ಲೂಕು ಪಂಚಾಯತಿ ಅಭ್ಯರ್ಥಿಗಳಿಗೆ ಆಯಾ ಕ್ಷೇತ್ರದ ಖರ್ಚುವೆಚ್ಚಗಳಿಗೆ ಆರ್ಥಿಕ ನೆರವು ನೀವೇ ನೀಡಿ ಎಂದೆವು. ಆಮೇಲೆ ಇನ್ನೊಂದು ಮಾತನ್ನು ಹೇಳಿದೆವು, ಅಭ್ಯರ್ಥಿಗಳಿಗೆ ನೀವೇ ತಲುಪಿಸಿ ಎಂದೂ ಸಹ ತಿಳಿಸಿದೆವು. ನಾವು ಪಾರ್ಟಿ ಕಟ್ಟೋಣ ಎಂದು ಇಷ್ಟೆಲ್ಲ ಪ್ರಯತ್ನ ಮಾಡಿದರೆ ಈ ಅಶೋಕ್ ಮಾಡೋಣ ಎಂದವರು ಎಂಎಲ್‌ಎ ಎಲೆಕ್ಷನ್‌ಗೆ ಜೆಡಿಎಸ್ ಜೊತೆಗೆ ಸೀಟಿಯಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದೇವೆ, ಇಲ್ಲಿ ನಾವು ಕ್ಯಾಂಡಿಡೇಟ್ ಹಾಕೋದಿಲ್ಲ ಎಂದರು. ಒಂದೂವರೆ ವರ್ಷ ಬಿಜೆಪಿ ಜೊತೆಗೆ ಇದ್ದು ಅಷ್ಟೆಲ್ಲ ನಾವು ಪಾರ್ಟಿ ಕಟ್ಟೋಣ ಎಂದು ಸುತ್ತಿ ಸಾಕಾಗಿದ್ದೆವು. ಇವರು ಈ ರೀತಿ ಹೇಳಿದಾಗ ಏನ್ ಮಾಡೋದು ಹೇಳಿ? ಬಿಜೆಪಿಗೆ ನಮಸ್ಕಾರ ಮಾಡಿ ಸುಮ್ಮನೆ ಮನೆಯಲ್ಲಿ ಇದ್ದುಬಿಟ್ಟೆ.







ನನ್ನ, ಅಂಬಿ ವಿರಸಕ್ಕೆ ಬೆಸುಗೆಯಾದ ಬಾಲಗಂಗಾಧರನಾಥರು

ಸಲಮಂಗಲದ ನರಸಿಂಹಯ್ಯ ವೃತ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ. ಮಾಜಿ ಸಚಿವ ಹೆಚ್.ಟಿ. ಕೃಷ್ಣಪ್ಪನವರ ಸಂಬಂದಿಗಳೂ ಕೂಡ. ಜೊತೆಗೆ ಶ್ರೀ ಮಠದ ಭಕ್ತರಾದ ಇವರು, ಪರಮಪೂಜ್ಯರು ನಮ್ಮೆಲ್ಲರ ಆರಾಧ್ಯ ದೈವ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಲ್ಲಿ ನಾನು ನಿಮ್ಮ ಶ್ರೀ ಕ್ಷೇತ್ರದ ಇತಿಹಾಸ ಮತ್ತು ಪುರಾಣ ಐತಿಹ್ಯಗಳನ್ನು ಸೇರಿಸಿ ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಎಂಬ ವರ್ಣ ಚಿತ್ರ ತೆಗೆಯಲು ಇಚ್ಛಿಸಿದ್ದೇನೆ. ತಾವು ಆಶೀರ್ವದಿಸಬೇಕೆಂದು ಕೋರಿದ್ದಾರೆ. ಸ್ವಾಮೀಜೀಗಳು ಸಂಪನ್ನರಾಗಿ ಭಕ್ತರಿಗೆ ಶ್ರೀ ಕ್ಷೇತ್ರದ ಬಗ್ಗೆ ಅಭಿಮಾನ ಮೂಡುವಂತಿರಲಿ, ಹೋಗಿ ಬನ್ನಿ ಎಂದಿದ್ದಾರೆ. ಒಡನೆಯೇ ಕಾರ್ಯಪ್ರವೃತ್ತರಾದ ನರಸಿಂಹಯ್ಯ ಮಠದ ಭಕ್ತರಾದ ರೆಬಲ್ ಸ್ಟಾರ್ ಅಂಬರೀಷ್ ರವರನ್ನು 'ಆರಣಿ ರಾಜನ ಪಾತ್ರ'ಕ್ಕೆ ಒಪ್ಪಿಸಿದ್ದಾರೆ. ಸರ್, ಈ ಚಿತ್ರದ ನಿರ್ದೇಶಕ ಸಾಯಿಪ್ರಕಾಶ್ ಎಂದಿದ್ದಾರೆ. ಸಂಭಾವನೆ ಏನೂ ಬೇಡ, ಚಿತ್ರ ಜಗದ್ಗುರುಗಳಿಗೆ ಇಷ್ಟ ಆಗಬೇಕಷ್ಟೆ. ಯಾವಾಗ ಬರಬೇಕು ಹೇಳಿ ನನ್ನ ಪಾತ್ರ ಮುಗಿಸಿ ಕೊಡ್ತೀನಿ ಎಂದು ಖಡಕ್ ಸಂದೇಶ ನೀಡಿದ್ದಾರೆ. ಚಿತ್ರ ನಟಿ ಶೃತಿ ಮಹಾರಾಜನ ಪತ್ನಿಯಾಗಿ, ಉಳಿದೆಲ್ಲ ಪಾತ್ರಗಳೂ ಮಠದ ಭಕ್ತರಾದ ರಾಜಕಾರಣಿಗಳನ್ನು ಒಪ್ಪಿಸಿದ ನಿರ್ಮಾಪಕರು ಶೂಟಿಂಗ್ ಪ್ರಾರಂಭಿಸಿದ್ದಾರೆ. ನಾಗಮಂಗಲದ ಸುತ್ತಮುತ್ತ? ಹಾಗೂ ಶ್ರೀ ಮಠದ ಪ್ರಾಂಗಣದಲ್ಲಿ ಶೂಟಿಂಗ್ ಸಾಗವಾಗಿ ನೆರವೇರುತ್ತದೆ. ಆಗ ಅರಣ್ಯ ಸಚಿವರಾಗಿದ್ದ ಚಿತ್ರನಟ ಸಿ.ಪಿ. ಯೋಗೀಶ್ವರ್, ರೆಬೆಲ್‌ಸ್ಟಾರ್ ಆದಿಯಾಗಿ, ಎಲ್ಲಾ ನನ್ನ ರಾಜಕೀಯ ಒಡನಾಡಿಗಳು ಬಹಳ ಶ್ರದ್ಧಾ ಭಕ್ತಿಯಿಂದ ಹೇಳಿದ ಸಮಯಕ್ಕೆ ಮುಂಚೆ ಮೇಕಪ್ ಸಮೇತ ಶೂಟಿಂಗ್‌ನಲ್ಲಿ ಭಾಗವಹಿಸಿದ್ದು ಇದೇ ಮೊದಲು, ಮತ್ತು ಇದೇ ಕೊನೆ ಇರಬೇಕು. ಏಕೆಂದರೆ ಸ್ವಾಮೀಜಿಗಳಿಗೆ ನಮ್ಮ ಬಗ್ಗೆ ಯಾವುದೇ ಭಿನ್ನ ಮಾಹಿತಿ ತಲುಪಬಾರದೆನ್ನುವ ಎಚ್ಚರವನ್ನು ನಾನೂ ಸೇರಿದಂತೆ ಎಲ್ಲರೂ

ಪಾಲಿಸಿದ್ದೆವು. ಶ್ರೀ ಆದಿಚುಂಚನಗಿರಿ ಚಿತ್ರದ ಶೂಟಿಂಗ್ ಹೈದರಾಬಾದಿನ ರಾಮೋಜಿ ಫಿಲ್ಮ್ ಸಿಟಿಯಲ್ಲಿ ನಡೆಯುತ್ತಿತ್ತು. ರೆಬೆಲ್ ಸ್ಟಾರ್ ಆದಿಯಾಗಿ ಎಲ್ಲ ನಟರು, ರಾಜಕೀಯ ನಾಯಕರುಗಳು ಜಮಾವಣೆಗೊಂಡು ಹೊಸ ವೇಷ ಹಾಗೂ ಮೇಕಪ್ಪಿನಲ್ಲಿ ರಾಜನ ಆಸ್ಥಾನದಲ್ಲಿ ಸಾಮಂತ ರಾಜರಾಗಿ ಆಸ್ಥಾನದಲ್ಲಿ ಬಿಜಯಂಗೈದಿದ್ದರು. ಫಿಲ್ಮ್ ಸಿಟಿಗೆ ಬಂದು ನೋಡಿದರೆ ನಾನೇ ತಬ್ಬಿಬ್ಬು. ಅವರ ಧ್ವನಿಯಿಂದ ಇವರು ಹೆಚ್. ಟಿ.ಕೃಷ್ಣಪ್ಪ, ಹೆಚ್.ವಿಶ್ವನಾಥ್, ಹೆಚ್. ಎಂ. ರೇವಣ್ಣ, ಹೆಚ್.ಸಿ. ಬಾಲಕೃಷ್ಣ ಹಾಗೂ ರಮೇಶ್ ಬಂಡಿಸಿದ್ದೇಗೌಡ ಎಂದು ಪತ್ತೆಹಚ್ಚಿದೆ. ಅಲ್ಲಿಯ ಮೇಕಪ್ ಮ್ಯಾನ್ಗೆ ಐದು ಸಾವಿರ ಕೊಟ್ಟೆ. ಖುಷಿಯಿಂದ ಹೊಸ ಧಿರಿಸು ತರಿಸಿ ಕೊಟ್ಟ. ಅದು ರಾಜನ ಪಾತ್ರಕ್ಕೆ ಸರಿಹೊಂದುತ್ತಿತ್ತು. ಇಷ್ಟೊಂದು ಗ್ರಾಂಡ್ ಆಗಿರೋದು ಬೇಡ ಕಣೋ, ಅಂಬರೀಶ್ ಉರ್ಕೋತಾನೇ, ನಾನವನನ್ನ ಲೋಕಸಭೆ ಚುನಾವಣೆಯಲ್ಲಿ ಸೋಲಿಸಿದ ನಂತರ ಮುಖಾಮುಖಿಯಾಗುತ್ತೀರೋ ಸೀನ್ ಇದು ಎಂದೆ. ಇನ್ನೊಂದು ಧಿರಿಸು ಹಾಕಿಕೊಂಡು ಕ್ಯಾಮೆರಾಗೆ ಕೈ ಮುಗಿದೆ. ಇವನೆಲ್ಲಿಂದ ಬಂದ ಎಂದು ಹೆಚ್.ಟಿ. ಕೃಷ್ಣಪ್ಪ ನೋಡುತ್ತಿದ್ದರು. ಮಹಾರಾಜರು ಆಸೀನರಾಗಿ ಎಂದು ಕುರ್ಚಿ ಕಡೆ ಕೈತೋರಿದರು. ನಾನು ಕುಳಿತುಕೊಂಡೆ. ನಮ್ಮೆಲ್ಲರ ಪರವಾಗಿ ರಂಗಭೂಮಿ ಕಲಾವಿದರೂ ಆಗಿದ್ದ ಕೃಷ್ಣಪ್ಪನವರಿಗೆ ಒಂದೇ ಒಂದು ಡೈಲಾಗು. ನಿಮ್ಮ ಆಡಳಿತದಲ್ಲಿ ಏನೂ ಕೊರತೆಯಿಲ್ಲ ಮಹಾಸ್ವಾಮಿ.. ಎಂದರು. ನಾವೆಲ್ಲರೂ ಒಟ್ಟಿಗೆ ಹೌದು ಮಹಾಪ್ರಭು ಎಂದೆವು. ಇಷ್ಟುದ್ದದ ಡೈಲಾಗು ಚಿತ್ರೀಕರಿಸಲು ಸಂಜೆಯಾಯಿತು. ಈ ಶೂಟಿಂಗೂ ಸಾಕು, ಈ ರಾಮಾಯಣವೂ ಸಾಕೆನ್ನಿಸಿತ್ತು. ತಂಗಿದ್ದ ರೂಮು ಕಡೆ ಹೊರಡೋಣ ಎಂದು ಸಿದ್ಧನಾದೆ. ಅಷ್ಟರಲ್ಲಿ ನಿರ್ದೇಶಕ ಸಾಯಿ ಪ್ರಕಾಶ್ ಬಂದು ಒಂದೇ ಒಂದು ಸಾಂಗ್ ಶೂಟಿಂಗ್ ಇದೆ. ಕಂಟಿನ್ಯೂಟಿ ಸೀನ್ ನೀವಿರಲೇಬೇಕು ಎಂದು ರಿಕ್ವೆಸ್ಟ್ ಮಾಡಿಕೊಂಡರು. ಆಯ್ತು ಬೇಗ ಮುಗಿಸಪ್ಪ ಎಂದು ಶೂಟಿಂಗ್‌ನಲ್ಲಿ ಭಾಗವಹಿಸಿದೆವು. ಮಹಾರಾಜರಾದ ಅಂಬರೀಶ್ ನಾನಿರುವುದೇ ನಿಮಗಾಗಿ... ನಿಮ್ಮ ಒಳಿತಿಗಾಗಿ.. ಎಂಬ ಹಾಡು ಹಾಡಿಕೊಂಡು ನಮ್ಮ ಕಡೆಗೆ ಕೈ ತೋರುವ ದೃಶ್ಯ. ನಾವು ಕೈ ಮುಗಿಯುವ ದೃಶ್ಯ. ಶೂಟಿಂಗ್ ಬಿಡುವಿನ ಸಮಯದಲ್ಲಿ ಗೆಳೆಯರೊಟ್ಟಿಗೆ ಈ ಅಂಬರೀಶ.. ನಾನಿರುವುದೇ ನಿಮಗಾಗಿ.. ಎಂದು ಹಾಡುತ್ತಿದ್ದಾನೆ, ಆದರೆ ವಾಸ್ತವವಾಗಿ ಅವನಿರುವುದೇ ಅವನಿಗಾಗಿ, ಅವನಿಗೋಸ್ಕರ ಎಂದು ಹಾಸ್ಯ ಮಾಡಿದೆ. ಆಗ ಒಡನೆಯೇ ಕೇಳಿಸಿಕೊಂಡ ಅಂಬಿ, ಏನಂದೇ, ಏನಂದೇ.. ಎಂದು ನನ್ನ ಹತ್ತಿರ ಬಂದು ಮಾತನಾಡಿಸಿಬಿಟ್ಟ. ಆಗಲೇ ನಾನಂದು ಕೊಂಡೆ 'ಈ ಮನುಷ್ಯನಿಗೆ ದ್ವೇಷವಿಲ್ಲ'ಎಂದು. ಆಯ್ತು ಬಿಡಪ್ಪ ಎಂದು ಆತ್ಮೀಯವಾಗಿ ತಬ್ಬಿಕೊಂಡ.. ಆ ಸಂದರ್ಭದಲ್ಲಿ ಶ್ರೀರಂಗಪಟ್ಟಣ ಸಚ್ಚಿ ಇದ್ದ. ಅವನಿಗೆ ರಾತ್ರಿ ಗೌಡನನ್ನು ಕರೆದುಕೊಂಡು ಅಲ್ಲಿಗೆ ಬಾ ಎಂದ. ಅದು ಹೋಟೆಲ್ಲೋ, ಮನೆಯೋ ಮರೆತುಹೋಗಿದೆ. ಒಟ್ಟಿನಲ್ಲಿ ಆ ರಾತ್ರಿ ಬಹಳ ವರ್ಷಗಳ ಬೆಸುಗೆ ಒಂದಾಯಿತು. ನೋಡಪ್ಪ.. ಇನ್ನು ಮುಂದೆ ನಾನೂ ನೀನು ಜೊತೆಯಾಗಿರೋಣ. ಹಳೇ ವಿಚಾರವೆಲ್ಲ ಈಗ ಬೇಡ, ಬಿಟ್ಹಾಕು.. ಎಲ್ಲ ಮರೆತು ಬಿಡು ಎಂದರು ರೆಬಲ್ ಸ್ಟಾರ್, ಸರಿ ಆಯ್ತು ಬಿಡು ಗುರು ಎಂದೆ. ಮತ್ತೆ ನಮ್ಮ ಒಡನಾಟ ಮಾಮೂಲಿನಂತೆ ಆಯ್ತು.ಅವರೊಂದಿಗೆ ಕೊನೇವರೆಗೂ ಚೆನ್ನಾಗಿಯೇ ಇದ್ದೆ. ಆರೋಗ್ಯ ಸಮಸ್ಯೆ ಉಲ್ಬಣವಾದಾಗ ಸಿಂಗಾಪೂರ್‌ಗೆ ನಾನು ಸಹ ಎರಡು ಸಲ ಹೋಗಿದ್ದೆ. ಇನ್ನೂ ಬಹಳ ವರ್ಷ ನಮ್ಮೊಂದಿಗಿರಬೇಕಿತ್ತು. ಜೆಂಟಲ್ ಮ್ಯಾನ್. ಆದ್ರೆ ಏನ್ ಮಾಡೋದು ಪಡಕೊಂಡು ಬಂದಿದ್ದಷ್ಟು, ಇದು ಅವರ ಕೋಟ್ಯಾಂತರ ಅಭಿಮಾನಿಗಳಿಗೆ, ಅವರ ಹಿತೈಷಿ, ಬಂಧು ಬಾಂಧವರಿಗೆ ಒಂದು ರೀತಿಯ ಮರೆಯಲಾರದ ಸಂಕಟ. ಇಂದು ಮೇ 29, ಇವತ್ತು ಅವರ ಹುಟ್ಟಿದ ದಿನ, ಈ ಸಂದರ್ಭದಲ್ಲಿ ಗೆಳೆಯ ಅಂಬರೀಶ್ ಅವರಿಗೆ ನುಡಿ ನಮನವನ್ನು ಈ ರೀತಿ ವ್ಯಕ್ತಪಡಿಸಿದ್ದೇನೆ.



ನನಗೆ ಕಾಂಗ್ರೆಸ್ ಟಿಕೆಟ್ ಮಿಸ್ ರಮ್ಯಾಗೆ ಒಲಿದ ಅದೃಷ್ಟ



ಚೆಲುವರಾಯಸ್ವಾಮಿ ಜೆಡಿಎಸ್‌ನಿಂದ 2009ರ ಚುನಾವಣೆಯಲ್ಲಿ ನನ್ನ ಮತ್ತು ಅಂಬರೀಶ್ ಮತ್ತು ಅವರ ತ್ರಿಕೋನ ಸ್ಪರ್ಧೆಯಿಂದಾಗಿ ಅದೃಷ್ಟದ ಎಂಪಿ ಆಗಿದ್ದರು. ಅವರು ಮತ್ತೆ ಜೆಡಿಎಸ್‌ನಿಂದ 2013ರಲ್ಲಿ ಎಂ.ಎಲ್.ಎ.ಗೆ ನಾಗಮಂಗಲದಿಂದ ನಿಂತು ಗೆದ್ದರು. ಆಗ ಅವರು ಎಂಪಿಗೆ ರಾಜೀನಾಮೆ ನೀಡಿದರು. ಆಗ ಮಂಡ್ಯದ ಲೋಕಸಭಾ ಬೈಎಲೆಕ್ಷನ್ ಅನೌನ್ಸ್ ಆಯಿತು. 2014ರಲ್ಲಿ ಮತ್ತೆ ನನಗೆ ಎಂಪಿ ಟಿಕೆಟ್ ಕಾಂಗ್ರೆಸ್‌ನಿಂದ ಫಿಕ್ಸ್ ಆಗೋ ಮೂವ್‌ಮೆಂಟ್ ಅದು. ಡೆಲ್ಲಿಯಿಂದ ಫೋನ್ ಬರೋಕೆ ಶುರುವಾಯಿತು. ನಿನಗೆ ಟಿಕೆಟ್ ಫೈನಲ್ ಎಂದು. ಸ್ಕ್ರೀನಿಂಗ್ ಕಮಿಟಿಯಲ್ಲೂ ನನ್ನ ಹೆಸರೇ ಫೈನಲ್ ಆಗಿತ್ತು. ಅದ್ಯಾವ ಗ್ಯಾಪ್‌ನಲ್ಲಿ ಈ ರಮ್ಯಾ ಹೆಸರು ಸೇರ್ಪಡೆಯಾಯಿತೋ ಗೊತ್ತಿಲ್ಲ. ಕೊನೆಗೆ ಆಕೆ ಹೆಸರು ಅನೌನ್ಸ್ ಕೂಡ ಆಯಿತು. ನನ್ನ ಗ್ರಹಚಾರ ಹೇಗಿದೆ ನೋಡಿ, ಎಂಪಿ ಅಂತ ರಮ್ಯಾ ಹೆಸರು ಸಂಜೆ ಸಮಯದಲ್ಲಿ ಅನೌನ್ಸ್ ಆಯಿತು. ನನಗೆ ಮಾರನೆಯ ದಿನ ಬೆಳಿಗ್ಗೆ 5 ಗಂಟೆ ಸಮಯದಲ್ಲಿ ಕೆಪಿಸಿಸಿ ಆಫೀಸ್‌ನಿಂದ ನಾರಾಯಣ ಎಂಬ ಆಫೀಸ್ ಮ್ಯಾನೇಜರ್ ಫೋನ್ ಮಾಡಿ, ಹೈಕಮಾಂಡ್‌ನವರು ನಿಮ್ಮ ಜೊತೆ ಮಾತನಾಡಬೇಕಂತೆ ಎಂದರು. ಆಗ ಹೈಕಮಾಂಡ್‌ನವರು ನನಗೆ ಹೇಳಿದ್ದಿಷ್ಟು... ನೋಡಪ್ಪ ಶಿವರಾಮೇಗೌಡ, ನೀನು ನಾಮಿನೇಷನ್ ಫೈಲ್ ಮಾಡೋಕೆ ಎಲ್ಲಾ ರೆಡಿ ಮಾಡಿಕೊಂಡು ಬಾ. ರಮ್ಯಾ ಅವರ ತಾಯಿ, ಮಗಳನ್ನು ಕಣಕ್ಕಿಳಿಸಲು ಯಾಕೋ ಒಪ್ಪುತ್ತಿಲ್ಲ, ನಾವು ಯೋಚನೆ ಮಾಡಿ ನೋಡ್ತಿವಿ, ನೀನು ಒಟ್ಟಿನಲ್ಲಿ ನಾಮಿನೇಷನ್ ಫೈಲ್ ಮಾಡೋಕೆ ಎಲ್ಲಾ ರೆಡಿ ಮಾಡಿಕೊಂಡು ಬಾ. ಆದರೆ ಚಿತ್ರನಟಿ ಮತ್ತು ವರ್ಚಸ್ಸಿನ ಹಿನ್ನೆಲೆಯಲ್ಲಿ ಆಕೆಯನ್ನ ಮೊದಲ ಅಪ್ಷನ್‌ನಲ್ಲಿ ಪರಿಗಣಿಸುತ್ತೇವೆ. ಏನಾದರೂ ಕೊನೆ ಸಮಯದಲ್ಲಿ ಆಕೆ ಬೇಡ ಎಂದು ತೀರ್ಮಾನವಾದರೆ ಮಾತ್ರ ನೀನು ಹಾಕಬಹುದು ಎಂದು ಹೇಳಿದರು. ಸರಿ ಸಾರ್ ಎಂದು ನಾನು ತರಾತುರಿಯಲ್ಲಿ ಎಲ್ಲ ರೆಡಿ ಮಾಡಿಕೊಂಡು ಹೋದೆ. ಚಿತ್ರನಟಿ ರಮ್ಯಾ ನಾಮಿನೇಷನ್ ಫೈಲ್ ಮಾಡಿದರು, ನಾನು ಸಹ ಫೈಲ್ ಮಾಡಿದೆ. ನಾಮಿನೇಷನ್ ಪ್ರಕ್ರಿಯೆ ಎಲ್ಲ ಮುಗಿಯಿತು. ರಮ್ಯಾರ ಸಾಕು ತಂದೆ ಆರ್.ಟಿ. ನಾರಾಯಣ ದಡದಡನೆ ಡಿ.ಸಿ. ಕಚೇರಿಯಿಂದ ಕೆಳಗೆ ಬಂದು ಗೌಡ್ರೆ, ಚಾಕಲೇಟ್ ಇದಿಯಾ ಎಂದು ನನ್ನನ್ನು ಕೇಳಿದರು.



ನನ್ನ ಬಳಿ ಇಲ್ಲವೆಂದು ನನ್ನ ಕಾರಿನಲ್ಲಿ ಬಿಸ್ಕಟ್ ಇದೆ ತರಿಸುತ್ತೇನೆ ಇರಿ ಎಂದು ನನ್ನ ಗನ್ ಮ್ಯಾನ್ ಹುಡುಕುತ್ತಿದ್ದೆ. ಅಷ್ಟರಲ್ಲಿ ಬೆವರುತ್ತಿದ್ದ ನಾರಾಯಣ್, ಗೌಡ್ರೇ ನನ್ನ ಕಾರ್ ಬಂತು ಎಂದು ಹೇಳಿ ಕಾರ್ ಹತ್ತಿ ಆಸ್ಪತ್ರೆ ಕಡೆ ಹೊರಟರು. ಅವರು ಆಸತ್ರೆಗೆ ಹೋಗುವುದರೊಳಗೆ ತೀರಿ ಹೋದರು ಎಂದು ಸುದ್ದಿ ಆಯ್ತು. ಅಷ್ಟರಲ್ಲಿ ರಮ್ಯಾರದ್ದು ನಾಮಿನೇಷನ್ ಫೈಲ್ ಆಗಿ ಹೋಗಿತ್ತು. ನಾನು ಸಹ ನಾಮಿನೇಷನ್ ಮಾಡಿದ್ದೆ. ರಮ್ಯನ ಹಣೆಬರಹ ಚೆನ್ನಾಗಿತ್ತು. ಕೊನೆಗೆ ರಮ್ಯಾ ಅಪ್ಲಿಕೇಶನ್ ಓಕೆ ಆಯ್ತು. ಅವರನ್ನ ಉಳಿಸಿ ನನ್ನ ಆಪ್ಲಿಕೇಶನ್ ವಾಪಸ್ ತಗೊಂಡೆ. ಆಕೆ ಪರ ನಾವೆಲ್ಲ ತುಂಬಾ ಪ್ರಚಾರ ಸಹ ಮಾಡಿದೆವು. ಗೆದ್ದ ಮೇಲೆ ಕ್ಷೇತ್ರಗಳಿಗೆ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮವನ್ನು ಪ್ರತಿ ತಾಲೂಕಿನಲ್ಲೂ ಜಿಲ್ಲಾ ಕಾಂಗ್ರೆಸ್ ಆಯೋಜಿಸಿತ್ತು. ಒಂದು ದಿನ ನಾಗಮಂಗಲಕ್ಕೆ ಬರೋಕೆ ರೆಡಿಯಾದರು. ಯಾವತ್ತೂ ಬರ್ತಾ ಇದೀನಿ ಎಂದು ನಮಗೆ ಹೇಳಿರಲಿಲ್ಲ. ಸುರೇಶ್ ಗೌಡನಿಗೆ ಮಾತ್ರ ಮಾಹಿತಿ ನೀಡಿ ಕಾರ್ಯಕ್ರಮ ಫಿಕ್ಸ್ ಮಾಡಿರುವುದು ತಿಳಿಯಿತು. ಆಗ ನಾನು ಅವರಿಗೆ ಫೋನ್ ಮಾಡಿ, ನೋಡಮ್ಮ ನೀನು ಸುರೇಶ್ ಗೌಡನ ಕೇಳಿ ಪ್ರೊಗ್ರಾಮ್ ಫಿಕ್ಸ್ ಮಾಡಿದ್ದೀಯ, ಅವನು ಎಂಎಲ್ಎ ಇದ್ದಾನೆ, ಅದು ಸರಿ ಇದೆ. ಆದರೆ ಅದೇ ದಿನ ನೀನು ನಮ್ಮನ್ನು ಕರಿಯಬೇಕು ತಾನೆ, ನಾವು ನಿನಗೆ ವೋಟ್ ಹಾಕ್ಸಿದ್ದೀವಿ ಅಲ್ವಾ, ನೀನು ನೋಡಿದರೆ ನಾಳೆನೇ ಬರ್ತಾ ಇದ್ದೀಯಾ, ನಾವು ಏನು ಏರ್ಪಾಡು ಮಾಡಿಕೊಂಡಿಲ್ಲ. ಹೀಗಾದರೆ ಹೇಗೆ, ನಾಳೆ ಕ್ಯಾನ್ಸಲ್ ಮಾಡು, ನೆಕ್ಸ್ಟ್ ಸುರೇಶ್‌ಗೌಡ ಕೊಟ್ಟ ಡೇಟಿಗೆ ನಾನು ಬರ್ತೀನಿ, ಎಲ್ಲರೂ ಕೂಡಿ ಕಾರ್ಯಕ್ರಮವನ್ನು ಚೆನ್ನಾಗಿ ಮಾಡೋಣ ಬೇರೆ ದಿನಾಂಕ ನಿಗದಿ ಮಾಡು ಅಂದೆ. ಆಗ ಸಂಸದೆ, 'ಅದೆಲ್ಲ ಆಗಲ್ಲ ಶಿವರಾಮೇಗೌಡ್ರೆ, ನೀವು ಇನ್ನೊಂದು ದಿನ ಫಿಕ್ಸ್ ಮಾಡಿ ಹೇಳಿ' ನಾನು ಬರುತ್ತೇನೆ ಅಂದರು. ಆಗ ನಾನು, ನೋಡಮ್ಮ ಆ ರೀತಿ ಮಾಡಿದರೆ ಎರಡು ಗುಂಪಾಗುತ್ತೆ. ನಾನು ಆ ರೀತಿ ಮಾಡೋಕೆ ರೆಡಿ ಇಲ್ಲ ಅಂದೆ. ಈ ಘಟನೆಯಾದ ಮೇಲೆ ಆಕೆಗೂ ನನಗೂ ಸಂಬಂಧ ಕಟ್ ಆಯ್ತು. ಅವರು ಎಂಪಿಯಾಗಿದ್ದಂತಹ ಸಂದರ್ಭದಲ್ಲಿ ಮುಖಂಡರಿಗೆ ಹಾಗೂ ಕಾರ್ಯಕರ್ತರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಮತ್ತೆ ಬಂದ 2014ರ ಜನರಲ್ ಎಲೆಕ್ಷನ್‌ನಲ್ಲಿ ರಮ್ಯರವರನ್ನು ಸೋಲಿಸುವ ನಿರ್ಧಾರಕ್ಕೆ ಕೆಲ ಮುಖಂಡರುಗಳು ಬಂದರು. ಅದಕ್ಕೆ ನಾನು ಸಹಮತಿಸಿದೆ. ಕೆ.ಆರ್.ಎಸ್. ಹತ್ತಿರ ಪಾಲಹಳ್ಳಿ ಚಂದ್ರಶೇಖರ್‌ರವರ ಕಲ್ಯಾಣ ಮಂಟಪದಲ್ಲಿ ಸುಮಾರು 200ಕ್ಕೂ ಹೆಚ್ಚು ಮುಖಂಡರು ಸೇರಿದರು. ಅಲ್ಲಿ ಕಾಂಗ್ರೆಸ್ ಮುಖಂಡರುಗಳೆಲ್ಲಾ ಈ ಬಾರಿ ಆಕೆಯನ್ನು ಸೋಲಿಸಲೇಬೇಕು ಎಂದು ಪಣ ತೊಟ್ಟರು. ಹಾಗೆಯೇ ಪತ್ರಿಕಾಗೋಷ್ಠಿ ಕರೆದು ಈ ಚುನಾವಣೆಯಲ್ಲಿ ನಾವು ರಮ್ಯಾಳಿಗೆ ಸಪೋರ್ಟ್ ಮಾಡೋದಿಲ್ಲ ಎಂದು ತಿಳಿಸಿ, ಹೈ ಕಮಾಂಡ್ ವೀಕ್ಷಕರಿಗೂ ವಿಚಾರ ಮುಟ್ಟಿಸಿದರು. ಆ ಎಲೆಕ್ಷನ್‌ನಲ್ಲಿ ರಮ್ಯಾರವರು ಸೋತರು. ಕಡಿಮೆ ಅಂತರದಲ್ಲಿ ಚಿನಕುರಳಿಯ ಪುಟ್ಟರಾಜು ಜೆಡಿಎಸ್‌ನಿಂದ ಗೆದ್ದು ಎಂಪಿ ಆದರು.







ನನ್ನನ್ನು ಜೆ.ಡಿ.ಎಸ್‌ಗೆ HDD ಬರಮಾಡಿಕೊಂಡರು, ಸಕಾರಣವಿಲ್ಲದೆ HDK ಉಚ್ಚಾಟಿಸಿದರು

ಈ ಕಾಂಗ್ರೆಸ್‌ನವರು ಮಂಡ್ಯ ಜಿಲ್ಲೆಯ ಯಾವುದೇ ವಿಚಾರಕ್ಕೂ, ತೀರ್ಮಾನಕ್ಕೂ, ಅಂಬರೀಶ್ ಕೇಳಿ, ಅವರನ್ನು ಒಪ್ಪಿಸಿಕೊಂಡು ಮುಂದುವರೆಯಿರಿ ಅನ್ನೋಕೆ ಶುರುಮಾಡಿದರು. ಸ್ಥಳೀಯ ನಾಯಕರಿಗೂ ಬೇಜಾರಾಗಿ ಸುಮ್ಮನಾದೊ. ಈ ನಡುವೆ ದೇವೇಗೌಡರು ನನ್ನ ಜೆಡಿಎಸ್ ಪಾರ್ಟಿಗೆ ಸೇರಿಸಿಕೊಳ್ಳಬೇಕು ಎಂದು ತೀರ್ಮಾನ ಮಾಡಿ, 2017ರಲ್ಲಿ ಒಂದು ದಿನ ಅವರ ಮನೆಗೆ ಕರೆದರು. ನಾನು ಮನೆಗೆ ಹೋದೆ. ಆಗ ಅವರು, ನೋಡಪ್ಪ, ನೀನು ಮದುವೆ ಆಗಿರೋದು ತುರುವೇಕೆರೆಯ ನಮ್ಮ ರಾಮಕೃಷ್ಣಯ್ಯನ ಮಗಳಂತೆ ಎಂದರು. ಹೌದು ಅವರ ಮಗಳೇ..ಸಾರ್ ಎಂದೆ. ನಾನು ಸಹ ಮದುವೆಗೆ ಬಂದಿದ್ದೆ, ಬಹಳ ವರ್ಷಗಳ ಹಳೇ ನೆನಪು ಮರೆತಿದ್ದೇನೆ ಎಂದರು. ಮುಂದುವರೆದು, ನೋಡು ನಾಗಮಂಗಲದಲ್ಲಿ ಅವಳಿಗೆ ಒಳ್ಳೆ ಹೆಸರಿದೆ. ನೀನು ಈ ಬಾರಿ ನಮ್ಮ ಪಕ್ಷದಿಂದ ಅವಳನ್ನು ಕ್ಯಾಂಡಿಡೇಟ್ ಮಾಡು. ಮುಂದಕ್ಕೆ ನಿನಗೆ ಏನು ಬೇಕು ಮಾಡೋಣ ಎಂದರು. ನಾನು ಅವಳನ್ನ ಒಮ್ಮೆ ಕೇಳಿ ಹೇಳುತ್ತೇನೆ ಸರ್ ಎಂದು ಮನೆಗೆ ಬಂದೆ. ನನ್ನ ಹೆಂಡತಿಗೆ ಈ ವಿಚಾರ ತಲುಪಿಸಿದೆ. ಒಡನೆಯೇ ಆಕೆ, ನಮ್ಮ ಅಪ್ಪ ಎಂಎಲ್‌ಎ ಆಗಿದ್ದರು, ನೀವು ಎರಡು ಸಲ ಶಾಸಕರಾಗಿದ್ದೀರಿ. ನನ್ನ ಮಗನು ಒಂದು ಸಲ ಪದ್ಮನಾಭನಗರದಲ್ಲಿ ನಿಂತಿದ್ದಾನೆ. ನನಗೆ ಎಂಎಲ್‌ಎ, ಈ ಚುನಾವಣೆ ಎಂದರೆ ವಾಕರಿಕೆ ಆಗೋಗಿದೆ. ನನಗೆ ಯಾವ ಎಂಎಲ್‌ಎ ಟಿಕೇಟು ಬೇಡ, ಎಂ.ಪಿ. ಟಿಕೇಟು ಬೇಡ. ತಗೊಳಿ.. ಫೋನ್ ದೊಡ್ಡೋರಿಗೆ ನಾನೇ ವಿನಂತಿ ಮಾಡುತ್ತೇನೆ ಎಂದಳು. ಆಗ ನಾನು ದೊಡ್ಡೋರಿಗೆ ಫೋನ್ ಮಾಡಿದೆ, ಆಗ ಇವಳು, ಅಪ್ಪ ನಾನು ಅಲ್ಲಿಗೆ ಬಂದು ನಿಮ್ಮ ಕಾಲು ಹಿಡಿದು ಕೇಳುತ್ತೇನೆ .ನನಗೆ ಯಾವ ಟಿಕೇಟ್ ಬೇಡ, ಕೊಡೋದಾದ್ರೆ ಇವರಿಗೆ ಕೊಡಿ ಎಂದಳು.

ನಂತರ ದೇವೇಗೌಡರು ನನ್ನ ಮತ್ತು ಸುರೇಶ್ ಗೌಡನನ್ನ ಮನೆಗೆ ಕರೆಸಿದರು. ಅವತ್ತು ಮಂತ್ರಿಗಳಾದ ಡಿ.ಸಿ. ತಮ್ಮಣ್ಣ, ಸಿ.ಎಸ್. ಪುಟ್ಟರಾಜು, ಸಾರಾ ಮಹೇಶ್ ಸಹ ದೇವೇಗೌಡರ ಮನೆಯಲ್ಲಿ ಇದ್ದರು. ಆಗ ದೇವೇಗೌಡರು, ನೋಡಿ ನಾಗಮಂಗಲದಲ್ಲಿ ಎಂ.ಎಲ್.ಎ.ಗೆ ನಿಲ್ಲೋರು ಯಾರು ಎಂದು ನೀವಿಬ್ಬರು ತೀರ್ಮಾನ ತೆಗೆದುಕೊಳ್ಳಿ. ಅಲ್ಲಿ ಎಂ.ಎಲ್.ಎ.ಗೆ ಸುರೇಶ್ ಗೌಡ ನಿಂತರೆ, ಶಿವರಾಮಗೌಡ ನೀನು ಸಪೋರ್ಟ್ ಮಾಡಬೇಕು. ಶಿವರಾಮೇಗೌಡ ನಿಂತರೆ ಸುರೇಶ್ ಗೌಡ ನೀನು ಸಪೋರ್ಟ್ ಮಾಡಬೇಕು. ಉಳಿದ ಒಬ್ಬರಿಗೆ ನಾನು ಬೆಂಗಳೂರಿನಲ್ಲಿ ಎಂಎಲ್‌ಸಿ ಮಾಡ್ತೀನಿ ಎಂದರು. ನನಗೆ ತುಂಬಾ ಸಂತೋಷವಾಯಿತು. ಇದು ಒಂಥರ ಚೆನ್ನಾಗಿದೆಯಲ್ಲ ಎಂದು ನಾನು ಎಂಎಲ್‌ಸಿಗೆ ಹೋಗೋಣ ಎಂದು ತೀರ್ಮಾನಮಾಡಿಕೊಂಡು, ಸುರೇಶ್‌ಗೆ ಎಂಎಲ್‌ಎ ಟಿಕೆಟ್ ಕೊಡಿ, ನಾನು ಎಂಎಲ್‌ಸಿಗೆ ಹೋಗುತ್ತೇನೆ ಎಂದು ಒಪ್ಪಿಕೊಂಡೆ. ಈ ಮಾತುಕತೆ ನಡೆವ ಸಂದರ್ಭದಲ್ಲಿ ಮುಖಂಡ ಆ. ದೇವೇಗೌಡ ಇದ್ದರು. ಆತ ಮೂರು ಬಾರಿ ಬೆಂಗಳೂರು ಪದವಿಧರ ಕೇತ್ರದ ವಿಧಾನ ಪರಿಷತ್ ಕ್ಷೇತ್ರಕ್ಕೆ ನಿಂತು ಸೋತಿದ್ದರು. ನನಗೆ ಟಿಕೆಟ್ ಕೊಡುತ್ತಾರೆ ಎಂದು ಗೊತ್ತಾದ ಕೂಡಲೇ ಆತ ಗೌಡರ ಮೇಲೆ ಮುನಿಸಿಕೊಂಡು ಹೊರಟು ಹೋದರು. ಎಂಎಲ್‌ಸಿ ಎಲೆಕ್ಷನ್ ಇನ್ನೂ ಆರು ತಿಂಗಳು ಇತ್ತು. ಆ ವರ್ಷದಲ್ಲಿ ಪದವಿ ಪಡೆದವರನ್ನು ಪದವೀಧರ ಕ್ಷೇತ್ರದ ಮತದಾರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕಾರ್ಯ ಕೈಗೆತ್ತಿಕೊಂಡೆ. ಅದಕ್ಕಾಗಿ ನಾನು ಒಂದು ಟೀಮನ್ನು ರೆಡಿ ಮಾಡಿ, ನಮ್ಮ ಚಾಮರಾಜಪೇಟೆ ಸ್ಕೂಲಿನ ಖಾಲಿಯಿದ್ದ ಬಿಲ್ಡಿಂಗ್‌ನಲ್ಲಿ ಎರಡು ಫ್ಲೋರನ್ನು ಆಫೀಸ್ ಮಾಡಿದೆ. ದಿನ 400 ರಿಂದ 500 ಜನ ಸೇರ್ಪಡೆಗೊಳಿಸಲು ಬರೋರು. ಒಂದು ಫ್ಲೋರ್‌ನಲ್ಲಿ ಅಡುಗೆ ನಡೆದರೆ, ಮತ್ತೊಂದು ಫ್ಲೋರ್‌ನಲ್ಲಿ ಅವರಿಗೆ ಊಟದ ವ್ಯವಸ್ಥೆ ಇರುತ್ತಿತ್ತು. ದಿನನಿತ್ಯ ಮೆಂಬರ್ಶಿಪ್ ಕೆಲಸ ಭರದಿಂದ ಸಾಗುತ್ತಿತ್ತು.

ಆನೇಕಲ್ ತಾಲೂಕು, ಚಿಕ್ಕಬಳ್ಳಾಪುರ ತಾಲೂಕು, ದೊಡ್ಡಬಳ್ಳಾಪುರ, ಮಾಗಡಿ, ಚನ್ನಪಟ್ಟಣ, ರಾಮನಗರ, ಬೆಂಗಳೂರು ಇಷ್ಟು ತಾಲೂಕುಗಳಿಂದ ಮೆಂಬರ್ಶಿಪ್ ಮಾಡಿಸಬೇಕಿತ್ತು. ಬರಿ ಎರಡು ಮೂರು ತಿಂಗಳಲ್ಲೇ ಸುಮಾರು 25 ರಿಂದ 26 ಸಾವಿರ ಹೊಸ ಮೆಂಬರ್ಶಿಪ್ ಮಾಡಿಸಲಾಯಿತು. ಈ ಮಧ್ಯೆ 2018ರ ವಿಧಾನಸಭೆ ಎಲೆಕ್ಷನ್ ಅನೌನ್ಸ್ ಆಯಿತು. ನಾಗಮಂಗಲದ ಎಂ. ಎಲ್.ಎ. ಎಲೆಕ್ಷನ್ ಬಂತು. ಆಗ ಹೆಚ್.ಡಿ ದೇವೇಗೌಡರು ಕರೆದು, ನಿಮ್ಮ ಕುಮಾರಣ್ಣ ಮುಖ್ಯಮಂತ್ರಿಯಾದರೆ ನಿನ್ನ ಎಂಎಲ್‌ಸಿ ಎಲೆಕ್ಷನ್ ವಿಚಾರ ಅರ್ಧಗಂಟೆಯಲ್ಲಿ ಮುಗಿಸಿಕೊಡುತ್ತಾನೆ. ನೀನು ನಾಗಮಂಗಲಕ್ಕೆ ಹೋಗಿ ಸುರೇಶ್‌ಗೌಡನಿಗೆ ಸಪೋರ್ಟ್ ಮಾಡು. ಆ ಮುತ್ಸಾಳನನ್ನ ಸೋಲಿಸಬೇಕು ಎಂದರು. ಆಗ ಪದವೀಧರ ಕ್ಷೇತ್ರದ ಕೆಲಸ ಕಾರ್ಯ ಬಿಟ್ಟು, ಪ್ರತಿ ದಿನ ನಾಗಮಂಗಲಕ್ಕೆ ಹೋಗೋಕೆ ಶುರು ಮಾಡಿದೆ. ಅದೇ ಸಮಯ 2017ರ ಡಿಸೆಂಬರ್‌ನಲ್ಲಿ ನನ್ನ ಮಗಳ ಮದುವೆ ಬೇರೆ ಫಿಕ್ಸ್ ಆಯ್ತು, ಡೇಟ್ ಫೈನಲ್ ಸಹ ಆಯ್ತು. ಮದುವೆಗೆ ಒಂದು ತಿಂಗಳು ಬಿಜಿಯಾದೆ. ನಮ್ಮ ಮಗಳ ಮದುವೆಯೂ ಸಹ ಚೆನ್ನಾಗಿ ಆಯ್ತು. 2018ರ ಎಂಎಲ್‌ಎ ಎಲೆಕ್ಷನ್‌ನಲ್ಲಿ ಸುರೇಶ್ ಗೌಡ ಕೂಡ 47,000 ಮತಗಳ ಅಂತರದಿಂದ ಗೆದ್ದರು. ಮತ್ತೆ ಮೆಂಬರ್‌ಶಿಪ್ ಶುರು ಮಾಡೋಣ ಬನ್ನಿ ಎಂದು ಎಲ್ಲರನ್ನು ಕರೆದೆ. ಆಗ ಅವರು, ಸರ್ ನೀವು ಚುನಾವಣೆಗೆ ನಿಲ್ಲಲ್ಲ ಎಂದು ತಿಳಿದುಕೊಂಡು ಆ. ದೇವೇಗೌಡರಿಗೆ ಮಾತು ಕೊಟ್ಟಿದ್ದೀವಿ ಎಂದರು. ಈ ಮಧ್ಯೆ ಗೆದ್ದಿದ್ದ ಎಂಎಲ್‌ಎ ಗಳನ್ನೆಲ್ಲ ಕರೆದುಕೊಂಡು ಹೈದರಾಬಾದ್‌ಗೆ ಕುಮಾರಸ್ವಾಮಿಯವರು ಹೊರಟು ಹೋದರು. ನಾನು ಎಂಎಲ್‌ಸಿ ಚುನಾವಣೆ ಏನ್ಮಾಡೋದು ಅಣ್ಣ ಎಂದು ಕುಮಾರಣ್ಣನ ಕೇಳಿದರೆ, ಇರಣ್ಣ ನಮ್ಮದು ಒಂದು ಸರ್ಕಾರ ರಚನೆಯ ಗೊಂದಲ ಮುಗಿದು ಬಿಡ್ಲಿ ಅನ್ನೋರು. ಕಾಂಗ್ರೆಸ್,



ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ರಚನೆಯಾಯಿತು, ಅಷ್ಟರಲ್ಲಿ, ಇನ್ನು ಒಂದೇ ಒಂದು ತಿಂಗಳು ಎಂಎಲ್‌ಸಿ ಎಲೆಕ್ಷನ್ ಮಾಡೋಕೆ ಉಳಿದದ್ದು. ನಾನು ಯಾಕೋ ಇದು ಎಡವಟ್ಟು ಆಗೋತರ ಇದೆ ಎಂದು ತೀರ್ಮಾನ ಮಾಡಿ, ದೇವೇಗೌಡರ ಬಳಿ ಹೋಗಿ ಸರ್, ನಾನು ನಿಲ್ಲಲ್ಲ ಎಂ.ಎಲ್.ಸಿ ಚುನಾವಣೆಗೆ ಎಂದು ಬರೆದು ಕೊಟ್ಟೆ. ಕಾರಣ, ಮತ್ತೆ ನಾನು ಇಲ್ಲಿ ಎಂಎಲ್‌ಸಿಗೆ ನಿಂತು ಸೋತರೆ ಮರ್ಯಾದೆ ಏನಾಗುತ್ತದೆ ಎಂದು ಯೋಚಿಸಿ ಸುಮ್ಮನಿದ್ದೆ. ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಜಿಲ್ಲೆಗಳ 26 ಸಾವಿರ ಪದವೀಧರರ ಸದಸ್ಯತ್ವ ಸೇರ್ಪಡೆ ಅಭಿಯಾನ ನಡೆಸಿದ ಶ್ರಮವೆಲ್ಲಾ ವ್ಯರ್ಥವಾಯಿತು. ಮತ್ತೆ ಇನ್ನೊಂದು ಸಾರಿ ಕರೆದರು. ಎಂಎಲ್‌ಸಿಗೆ ಯಾರನ್ನ ನಿಲ್ಲಿಸೋದು ಎಂದು ಮೀಟಿಂಗ್ ಮಾಡುವಾಗ ವಕೀಲ ಎ.ಪಿ. ರಂಗನಾಥ್ ಜೊತೆಗೆ ಒಬ್ಬ ಒಕ್ಕಲಿಗರ ಸಂಘದ ಮೆಂಬರ್ ಇದ್ದರು. ನಾನು ಆ ಮೆಂಬರ್‌ಗೆ ಎಂಎಲ್‌ಸಿಗೆ ಟಿಕೆಟ್ ಕೊಡಿ ಸ್ವಲ್ಪ ಓಡಾಡಿಕೊಂಡು ಇದ್ದಾನೆ ಎಂದು ಹೇಳಿ ಕೊಡಿಸಿದೆ. ಅವನು ಒಂದು ರೌಂಡ್ ಸುತ್ತಿಕೊಂಡು ಓಟ್ ಕೇಳಿ ಬರುವುದರೊಳಗೆ ಆ. ದೇವೇಗೌಡ ಗೆದ್ದು ಬೀಗಿದರು. ಇವು ನಾನು ಕಾಂಗ್ರೆಸ್‌ನಿಂದ ಬಿಜೆಪಿಗೆ, ಅಲ್ಲಿಂದ ಜೆಡಿಎಸ್‌ಗೆ ಯಾಕೆ ಹೋದೆ ಎನ್ನುವುದಕ್ಕೆ ಕಾರಣಗಳು. ಎಂಎಲ್‌ಸಿ ಚುನಾವಣೆ ಎಲ್ಲ ಮುಗಿದ ನಂತರವೂ ನಾನು ಜೆಡಿಎಸ್‌ನಲ್ಲಿಯೇ ಉಳಿದಿದ್ದೆ.

"ಜೆಡಿಎಸ್‌ನಿಂದ ಎಂಪಿಗೆ ನಿಂತ ಸಂದರ್ಭ"

2018ರಲ್ಲಿ ಜೆಡಿಎಸ್‌ನಿಂದ ಪುಟ್ಟರಾಜು ಹಾಲಿ ಎಂಪಿಯಾಗಿ ಇದ್ದರು.ಸಾರ್ವತ್ರಿಕ ಚುನಾವಣೆಯಲ್ಲಿ ಎಂ.ಎಲ್.ಎ.ಗೆ ನಿಂತು ಗೆದ್ದು ಮಂಡ್ಯ ಎಂಪಿಗೆ ರಾಜೀನಾಮೆ ಕೊಟ್ಟ ಪರಿಣಾಮ ಬೈ ಎಲೆಕ್ಷನ್ ಬಂತು. ಆಗ ಜೆಡಿಎಸ್‌ನಿಂದ ನನ್ನ ನಿಲ್ಲಿಸುವುದೆಂದು ತೀರ್ಮಾನ ಮಾಡಿದರು. ಕ್ಷೇತ್ರದಲ್ಲಿ ಎಲ್ಲರ ಸಹಕಾರದಿಂದ ಮಂಡ್ಯದ ಎಂಪಿ ಚುನಾವಣೆಯಲ್ಲಿ ಸಮ್ಮಿಶ್ರ ಸರ್ಕಾರದ ಬೆಂಬಲದೊಂದಿಗೆ ಮಂಡ್ಯ ಲೋಕಸಭಾ ಚುನಾವಣೆ ಇತಿಹಾಸದಲ್ಲೇ ಆವರೆವಿಗೆ ಯಾವ ಅಭ್ಯರ್ಥಿ ಪಡೆಯದಷ್ಟು ಲೀಡ್ ವೋಟ್‌ನಿಂದ ಗೆದ್ದೆ. 3,52,000 ಲೀಡ್ ತಗೊಂಡಿದ್ದೆ. ಗೆದ್ದ ಮೇಲೆ ದೆಹಲಿಯ ದೇವೇಗೌಡರ ನಿವಾಸಕ್ಕೆ ಹೋಗುವ ಪರಿಪಾಠ ರೂಢಿಸಿಕೊಂಡೆ. ಅವರನ್ನು ಕಾಯುತ್ತಾ, ಕುಳಿತುಕೊಳ್ಳುವುದು ಒಂದು ದಿನ ಸ್ವಲ್ಪ ತಡವಾದರೂ, ಕರ್ನಾಟಕ ಭವನದ ಅನಂತ ನನಗೆ ಫೋನ್ ಮಾಡಿ ಇನ್ನು ಬಂದಿಲ್ಲವಲ್ಲಣ್ಣ, ಬಾರಣ್ಣ ಬೇಗ, ರಾಜ್ಯಸಭಾ ಸದಸ್ಯರಾದ ಕುಪೇಂದ್ರರೆಡ್ಡಿ ಅವರು ಬಂದು ಕಾಯುತ್ತಿದ್ದಾರೆ. ನೀವು ಇನ್ನು ಬಂದೇ ಇಲ್ಲವಲ್ಲ ಎನ್ನುತ್ತಿದ್ದ. ನಾನು ತತ್‌ಕ್ಷಣ ಹೋಗುತ್ತಿದ್ದೆ. ನಾನಾಗ ಎಂಟು ತಿಂಗಳು ಅಲ್ಪಾವಧಿಯ ಎಂಪಿಯಾಗಿದ್ದೆ. ದೊಡ್ಡಗೌಡರ ಮೇಲೆ ನನಗಿದ್ದ ಅಪಾರ ಗೌರವದಿಂದ ಅವರು ಪಾರ್ಲಿಮೆಂಟ್ ಬಳಿ ಬಂದು ಕಾರು ಇಳಿದ ತಕ್ಷಣ, ನಾನು ಅವರನ್ನು ಪಾರ್ಲಿಮೆಂಟ್ ಒಳಗೆ ಕರೆದುಕೊಂಡು ಹೋಗುತ್ತಿದ್ದೆ, ಹಾಗೆ ವಾಪಸ್ಸು ಬರುವಾಗಲೂ ಅವರನ್ನು ಹೊರಗೆ ಬಂದು ಕಾರ್ ಹತ್ತಿಸುತ್ತಿದ್ದೆ. ಮತ್ತೆ ಜನರಲ್ ಎಲೆಕ್ಷನ್‌ನಲ್ಲಿ ನನಗೆ ಎಂಪಿ ಟಿಕೆಟ್ ಕೊಡುತ್ತಾರೆ ಎಂದು ಭಾವಿಸಿಕೊಂಡಿದ್ದೆ. ಆದರೆ ಅವರು ನನಗೆ ಟಿಕೆಟ್ ಕೊಡದೆ ಮತ್ತೆ ಬಂದ 2019ರ ಜನರಲ್ ಎಲೆಕ್ಷನ್‌ನಲ್ಲಿ ನಿಖಿಲ್‌ಗೆ ಕೊಟ್ಟರು. ಆದರು ನಾನು ನಿಖಿಲ್ ಕುಮಾರಸ್ವಾಮಿ ಗೆಲ್ಲಲಿ ಎಂದು ಪ್ರಾಮಾಣಿಕವಾಗಿ ಎಲೆಕ್ಷನ್ ಮಾಡಿದೆ. ಇಡೀ ಮಂಡ್ಯ ಜಿಲ್ಲೆಯ ಯಾವ ತಾಲೂಕಿನಲ್ಲೂ ಮೆಜಾರಿಟಿ ಬಂದಿರಲಿಲ್ಲ. ನಾಗಮಂಗಲದಲ್ಲಿ ಎಂಟು ಸಾವಿರ ಲೀಡ್ ತಂದು ಕೊಡಲು ನಮ್ಮ ಶ್ರಮ ಸದ್ವಿನಿಯೋಗವಾಯಿತು. ಸುರೇಶ್‌ಗೌಡ ಈ

ಎಲೆಕ್ಷನ್‌ನಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಡಿದ್ದ ಸಾಲ, ನಿಖಿಲ್ ನಿಂತಾಗ ತೀರಿಸಿಕೊಂಡ ಎಂದು ಜನ ಮಾತನಾಡುತ್ತಿದ್ದರು. ಕಾರಣ, ನಮ್ಮ ಕ್ಷೇತ್ರದ ಹಣಕಾಸಿನ ವ್ಯವಹಾರ ಅವನಿಗೆ ವಹಿಸಲಾಗಿತ್ತು. ಕುಮಾರಸ್ವಾಮಿ ಅವರು ಸಹ ನಿಖಿಲ್ ಎಲೆಕ್ಷನ್‌ನಲ್ಲಿ ಹಣದ ಹೊಳೆಯನ್ನೇ ಹರಿಸಿದರು. ಮುಖ್ಯಮಂತ್ರಿಯಾಗಿ ಅವರೇ ಇದ್ದುದರಿಂದ ಚೆನ್ನಾಗಿ ಖರ್ಚು ಮಾಡಿದರು. ಆದರೂ ನಿಖಿಲ್ ಕುಮಾರಸ್ವಾಮಿ ಸೋಲಾಯಿತು.

ಜೆಡಿಎಸ್ ಉಚ್ಚಾಟನೆ ಪರ್ವ.

ಜೆಡಿಎಸ್‌ನಿಂದ ಮಂಡ್ಯ ಎಂಪಿಯಲ್ಲಿ ನಿಖಿಲ್ ಸೋತ ನಂತರ ನಾನು ಮತ್ತೆ ನಾಗಮಂಗಲದಲ್ಲಿ ಜನರೊಟ್ಟಿಗೆ ಸಕ್ರಿಯವಾಗಿದ್ದೆ. ಜೊತೆಗೆ ಹೆಚ್ಚಿನ ಸಂಘಟನೆ ಮಾಡಬೇಕೆಂದು ತೀರ್ಮಾನ ಮಾಡಿ, ಕ್ಷೇತ್ರದಾದ್ಯಂತ ಹೆಚ್ಚಾಗಿ ಓಡಾಡಲು ಶುರು ಮಾಡಿದೆ. ನನ್ನ ಸಂಘಟನೆ ನೋಡಿದ ಸುರೇಶ್ ಗೌಡನಿಗೆ ಕಣ್ಣು ಕೆಂಪಗಾಗಿ ನನ್ನ ಮೇಲೆ ಒಂದು ಪಿತೂರಿ ಮಾಡಿದ, ಅದೇನೆಂದರೆ, ನಾನು ಕೊಪ್ಪ ಹೋಬಳಿಗೆ ಪ್ರವೇಶ ಕೊಡಲು ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೆ. ಆ ಭಾಗದ ಎಲ್ಲ ಜೆಡಿಎಸ್ ಮುಖಂಡರು, ಕಾರ್ಯಕರ್ತರನ್ನ ಖುದ್ದು ಭೇಟಿಯಾಗಿ, ಇನ್ನೊಂದಷ್ಟು ಮುಖಂಡರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ನನ್ನ ರಾಜಕೀಯದ ಪೂರ್ವಾಪರ, ನಾನು ನಡೆದು ಬಂದ ಹಾದಿಯನ್ನು ಅವರೊಂದಿಗೆ ಪ್ರಸ್ತಾಪಿಸಿ ಅವರ ಅವಗಾಹನೆಗೆ ತರುವ ಕಾರ್ಯ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಆ ಭಾಗದಲ್ಲಿ ಜೆಡಿಎಸ್ ಜಾಲತಾಣದಲ್ಲಿ ನಾಯಕರ ಪೋಸ್ಟ್ ಹಾಕುತ್ತಾ, ಹೆಣ್ಣು ಮಗಳು ಸಕ್ರಿಯವಾಗಿದ್ದಳು. ಅವಳು ಈ ಸುರೇಶ್ ಗೌಡನ ಪರಮ ಭಕ್ತೆ ಕೂಡ. ನಾನು ಎಲ್ಲಾ ಕಾರ್ಯಕರ್ತರಿಗೂ ಫೋನ್ ಮಾಡಿ ಕಾರ್ಯಕ್ರಮದ ವಿಚಾರ ತಿಳಿಸುವಂತೆ, ಆಕೆಗೂ ಫೋನ್ ಮಾಡಿ ಕಾರ್ಯಕ್ರಮದ ವಿಷಯ ತಿಳಿಸಿ, ಭಾಗವಹಿಸುವಂತೆ ಹೇಳಿದೆ. ಆಗ ಆಕೆ ನಮಗೆ ಕ್ಷೇತ್ರದಲ್ಲಿ ಸುರೇಶಗೌಡರು ಇದ್ದಾರೆ. ನೀವು ಯಾಕೆ ಈ ರೀತಿ ಕಾರ್ಯಕ್ರಮಗಳ ಮಾಡುತ್ತಿದ್ದೀರಿ ಎಂದು ಕೇಳಿದಳು. ಆಗ ನಾನು ಸುರೇಶ್ ಗೌಡರು ಇದ್ದಾರೆ...ಎಂದು ನಾನು ಸಂಘಟನೆ ಮಾಡುವುದರಿಂದ ತಪ್ಪೇನಿದೆ. ನೋಡಮ್ಮ ನಾನು ಎರಡು ಬಾರಿ ಇಂಡಿಪೆಂಡೆಂಟಾಗಿ ಗೆದ್ದಿದ್ದೆ. ಮತ್ತೆ ಎರಡು ಬಾರಿ ಕಡಿಮೆ ಅಂತರದಿಂದ ಸೋತಿದ್ದೇನೆ.ಐದನೇ ಬಾರಿ ಗೆಲ್ಲಲೇಬೇಕೆಂದು ತೀರ್ಮಾನ ಮಾಡಿ ಸಿದ್ದರಾಮಯ್ಯನವರು ಅಹಿಂದ ಸಂಘಟನೆ ಕಟ್ಟಿದಾಗ ಅವರಿಗೆ ಸಹಕಾರಿಯಾಗಿ ನಿಂತೆ. ಅವರು ಕಾರ್ಯಕ್ರಮ ಮಾಡಿದ ಕಡೆಗೆಲ್ಲ ನೂರಾರು ಬಸ್ಸಿನ ಜನರನ್ನು ಕರೆದುಕೊಂಡು ಹೋಗುತ್ತಿದ್ದೆನು. ಆ ಸಂದರ್ಭದಲ್ಲಿ ಕುರುಬ ಜನಾಂಗದ ಮತಗಳನ್ನು ಮುಂದಿನ ನನ್ನ ಚುನಾವಣೆಗೆ ಪಡೆಯಲು ಆಹಿಂದ ಸಂಘಟನೆಗೆ ಬೆಂಬಲವಾಗಿ ನಿಲ್ಲುವ ಮೂಲಕ ಒಗ್ಗೂಡಿಸಿದ್ದೆ. ಆ ಸಂದರ್ಭದಲ್ಲಿ ನನಗೆ ಕಾಂಗ್ರೆಸ್‌ನಿಂದ ಟಿಕೆಟ್ ತಪ್ಪಿತು. ಆಗ ಸುರೇಶ್ ಗೌಡನಿಗೆ ಟಿಕೆಟ್ ನೀಡಿದರು. ನಾನು ಮಾಡಿದ ಅಡುಗೆಯನ್ನ ಸುರೇಶ್ ಗೌಡ ಊಟ ಮಾಡಿಕೊಂಡ ಎಂದು ಆ ಹೆಣ್ಣು ಮಗಳಿಗೆ ವಿವರಿಸುವ ಸಂದರ್ಭದಲ್ಲಿ, ಆ ಹೆಣ್ಣು ಮಗಳು ನನಗೆ ಸ್ವಲ್ಪ ಕೋಪ ಬರುವ ರೀತಿಯಲ್ಲಿ ಮಾತನಾಡಿದಳು, ಆಗ ನಾನು ಸ್ವಲ್ಪ ಕೋಪದಿಂದ ಮಾತನಾಡಿದೆ. ನಾನು ಮಾತನಾಡಿದ ವಾಯ್ಸ್ ಅನ್ನ ರೆಕಾರ್ಡ್ ಮಾಡಿಕೊಂಡು ಸುರೇಶ್‌ಗೌಡರ ಆಜ್ಞೆಯಂತೆ ಕ್ಷೇತ್ರದ ತುಂಬೆಲ್ಲ ಜನರ ವಾಟ್ಸಪ್ ಗ್ರೂಪ್‌ಗಳಿಗೆ ಹರಿಬಿಟ್ಟರು. ಈಕೆ ಸುರೇಶಗೌಡನ ಭಕ್ತೆಯಾಗಿದ್ದರಿಂದ ಸುರೇಶ್ ಗೌಡ ಪಿತೂರಿ ಮಾಡಿ ಈ ರೆಕಾರ್ಡ್‌ನ ಎಲ್ಲಾ ಕಡೆಗೆ ಹಂಚಿಸಿದ. ಈ ಕುಂಟು ನೆಪವನ್ನು ಇಟ್ಟುಕೊಂಡು ಜೆಡಿಎಸ್‌ನಿಂದ ಕುಮಾರಸ್ವಾಮಿ ಅವರು 2022ರ ಜನವರಿ 31ರಂದು ನನ್ನನ್ನ ಉಚ್ಚಾಟನೆ



ಮಾಡಿದರು. ಕುಮಾರಸ್ವಾಮಿಯವರು ಎಂಪಿಗೆ ಜೆಡಿಎಸ್‌ನಿಂದ ಟಿಕೆಟ್ ನೀಡಿದಾಗ ಒಂದು ರೂಪಾಯಿ ಹಣ ಪಡೆಯದೆ ನಾನೇ ನನ್ನ ಸ್ವಂತ ಹಣವನ್ನು ಖರ್ಚು ಮಾಡಿ ಮೂರುವರೆ ಲಕ್ಷ ಮತಗಳ ಅಂತರದಿಂದ ಗೆದ್ದು ಗೌರವ ತಂದು ಕೊಟ್ಟಿದ್ದೆ. ಅವರ ಮಗನ ಎಲೆಕ್ಷನ್‌ನಲ್ಲಿ ಮಂಡ್ಯದ ಯಾವ ತಾಲೂಕಿನಲ್ಲೂ ಲೀಡ್ ಬಂದಿರಲಿಲ್ಲ, ನಮ್ಮ ನಾಗಮಂಗಲದಲ್ಲಿ ಮಾತ್ರ 8,000 ವೋಟು ಲೀಡ್ ತಂದುಕೊಟ್ಟಿದ್ದೆವು, ಪ್ರಾಮಾಣಿಕವಾಗಿ ಜೆಡಿಎಸ್ ಪಕ್ಷಕ್ಕೆ ಮಣ್ಣು ಹೊತ್ತು ದುಡಿದಿದ್ದರೂ ನನ್ನ ಪಕ್ಷದಿಂದ ಹೊರಗೆ ಹಾಕಬೇಕೆಂದು ಪಿತೂರಿ ಮಾಡಿ, ನನಗೆ ನೋವುಂಟು ಮಾಡಿದರು. ನಾನು ಅವರ ಪಕ್ಷದ ಮಾಜಿ ಸಂಸದ ಎಂದೂ ಲೆಕ್ಕಿಸದೇ.. ಅಟ್ಲೀಸ್ಟ್, ನೋಟಿಸ್ ಕೊಡದೆ ಉಚ್ಚಾಟನೆ ಮಾಡಿದರು. ಆಗ ನಾನು ಆ ಪಕ್ಷದಿಂದ ಹೊರಗೆ ಬರಬೇಕಾಯಿತು. ಅಂತಹಾ ಸಿದ್ಧರಾಮಯ್ಯ, ರಾಮಕೃಷ್ಣ ಹೆಗಡೆಯವರನ್ನೇ ಸಕಾರಣವಿಲ್ಲದೇ ಹೊರ ದೂಡಿದ ಪಕ್ಷ ಅದು. ಇವರ ಸಾಧನೆ, ಶ್ರಮದ ಮುಂದೆ ನನ್ನದೇನು ಅಲ್ಪ ಎಂದು ಸಮಾಧಾನಿಯಾದೆ. ನಮ್ಮ ಕುಮಾರಸ್ವಾಮಿಯವರಿಗೆ 'ಹಿತ್ತಾಳೆ ಕಿವಿ'. ಯಾರೋ ಹೇಳಿದ ಮಾತು ಕೇಳಿ ದುಡುಕಿ ನನ್ನ ಉಚ್ಚಾಟನೆ ಮಾಡಿದ್ದು ಮಾತ್ರ ಅಕ್ಷಮ್ಯ. ಗಾದೆ ಮಾತಿನಂತೆ ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ. ಮುಂದಾದ ಬದಲಾವಣೆಯ ದಿನಗಳಲ್ಲಿ ಆರೋಪ, ಬಂಧನ, ತೀರ್ಮಗಳು ಏನೆಲ್ಲಾ ನಡೆದರೂ ಯಾರನ್ನೂ ಪಕ್ಷದಿಂದ ಈಗ ಮಾತ್ರ ಉಚ್ಚಾಟಿಸದೆ ಇರುವುದರ ಬಗ್ಗೆ ಸಮಾಜಕ್ಕೆ ಉತ್ತರ ನೀಡಬೇಕಾಗುತ್ತದೇನೋ?

ನಾಗಮಂಗಲ ವಿಧಾನಸಭೆ:

ಒಲ್ಲದ ಮನಸ್ಸಿನಿಂದ ಬಿಜೆಪಿ ಅಭ್ಯರ್ಥಿಯಾದ ಸುಧಾ



ನಾನು ಜೆಡಿಎಸ್‌ನಿಂದ ಉಚ್ಚಾಟನೆಯಾದರೂ ಸಹ ಸುಮ್ಮನೆ ಕೂರದೆ ನಾಗಮಂಗಲದಲ್ಲಿ ಜನರೊಟ್ಟಿಗೆ ಸಕ್ರಿಯವಾಗಿ ಓಡಾಡುತ್ತಿದ್ದೆ. ಮತ್ತೆ ಮುಂದಿನ ವಿಧಾನ ಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿಯಾದರೂ ಸ್ಪರ್ಧೆ ಮಾಡಲೇಬೇಕೆಂದು ಜನರ ಹಾಗೂ ಅಭಿಮಾನಿಗಳ ಒತ್ತಾಯವಿತ್ತು. ಎಲ್ಲರ ಸಲಹೆ ಮೇರೆಗೆ ತೀರ್ಮಾನ ಮಾಡಿ ಸಭೆಗಳನ್ನ ಮಾಡಲು ಶುರು ಮಾಡಿದೆ. ನಾಗಮಂಗಲದಲ್ಲಿ ಒಂದು ಸಭೆ ಮಾಡಿದೆ. ಕೊಪ್ಪದಲ್ಲಿ ಒಂದು ಸಭೆ ಮಾಡಿದೆ. ಕೊಪ್ಪದ ಸಭೆಗೆ ಸುಮಾರು ಎಂಟು ಸಾವಿರ ಮಹಿಳೆಯರನ್ನ ಸೇರಿಸಿದ್ದೆ. ಈ ರೀತಿ ಸಂಘಟನೆ ಮಾಡುತ್ತಾ ಇರುವ ಸಂದರ್ಭದಲ್ಲಿ ಮುಖ್ಯಮಂತ್ರಿ ಆಗಿದ್ದಂತಹ ಬಸವರಾಜ ಬೊಮ್ಮಾಯಿ ಅವರು ನನಗೆ ದೆಹಲಿಯಿಂದ ಫೋನ್ ಮಾಡುತ್ತಾರೆ. ಅವತ್ತು ರಾತ್ರಿ ನಾನು ತಿರುಪತಿಯಲ್ಲಿ ಇದ್ದೆ, ಅವರು ಫೋನ್‌ನಲ್ಲಿ ಎಲ್ಲಿ.. ಇದ್ದೀರಾ... ಗೌಡ್ರೆ ಎಂದು ಕೇಳಿದರು. ನಾನು ಈ ಸಭೆಗಳೆಲ್ಲ ಮುಗಿಸಿ ತಿರುಪತಿಗೆ ಹೋಗಿದ್ದೆ. ತಿರುಪತಿಯಲ್ಲಿ ಇದ್ದೇನೆ ಬೊಮ್ಮಾಯಿಯವರೇ ಎಂದು ಹೇಳಿದೆ. ಆಗ ಅವರು ನಾನು ದೆಹಲಿಯಲ್ಲಿ ಇದ್ದೇನೆ. ನೋಡಿ ನಿಮಗೊಂದು ಅವಕಾಶ ಕೊಡಲು ಪಕ್ಷದೊಂದಿಗೆ ತೀರ್ಮಾನಿಸಿದ್ದೇವೆ. ಈಗ ಒಂದು ಒಳ್ಳೆ ಕಾಲ ಬಂದಿದೆ. ನಾವು ಹಳೆ ಮೈಸೂರು ಭಾಗದಲ್ಲಿ ಪಾರ್ಟಿ ಕಟ್ಟಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದು ನಿಮ್ಮ ಮೂಲಕವೇ ಸಾದುವಾಗಲಿ ಎಂಬ ಸದಾಶಯ, ಕರ್ನಾಟಕದಲ್ಲಿ ಈಗ ನಮ್ಮ ಸರ್ಕಾರವೇ ಇದೆ. ಕಾಂಗ್ರೆಸ್ – ಜೆಡಿಎಸ್ ಪಕ್ಷಗಳ ಪರಂಪರಾಗತ ಸೆಣಸಾಟ ಜೊತೆಯಲ್ಲಿ ಭಾರತೀಯ ಜನತಾ ಪಕ್ಷ ಕಟ್ಟಲೇಬೇಕೆಂದು ನಿರ್ಧಾರ ಮಾಡಿದ್ದೇವೆ. ನೀವು ಪಾರ್ಟಿಗೆ ಬರಬೇಕು ಎಂದರು. ಆಗ ನಾನು ಬೊಮ್ಮಾಯಿಯವರೆ, ನಾನು ದೇವಸ್ಥಾನಕ್ಕೆ ಬಂದಿದ್ದೇನೆ, ಈಗ ಯಾವುದೇ ನಿರ್ಧಾರ ಹೇಳೋಕೆ ಆಗೋಲ್ಲ .ಊರಿಗೆ ಹೋಗಿ ಮನೆಯವರ ಜೊತೆಗೆ ಮತ್ತು ನನ್ನ ಕ್ಷೇತ್ರದ ಕಾರ್ಯಕರ್ತರ ಜೊತೆ ಮಾತನಾಡಿ ಆಮೇಲೆ ನನ್ನ ತೀರ್ಮಾನ ಹೇಳುತ್ತೇನೆ ಎಂದೆ. ಮತ್ತೆ 15 ನಿಮಿಷಗಳ ನಂತರ ಬೊಮ್ಮಾಯಿ ಅವರು ಫೋನ್ ಮಾಡಿ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದಂತಹ ನಾಡ್ಡಾಜಿರವರಿಗೆ ಫೋನ್ ಕೊಡುತ್ತೇನೆ ಮಾತನಾಡಿ ಎಂದರು.



ಅವರು ಸಹ ಬೊಮ್ಮಾಯಿಯವರು ಹೇಳಿದ ಮಾತುಗಳನ್ನೇ ಹೇಳಿ ನಮ್ಮ ಪಕ್ಷಕ್ಕೆ ಬನ್ನಿ ಒಳ್ಳೆಯದಾಗುತ್ತೆ ನಿಮಗೆ ಎಂದರು. ಆಗ ನಾನು ಅವರಿಗೆ ಸರ್, ಈಗಾಗಲೇ ನಾನು ಒಮ್ಮೆ ಬಿಜೆಪಿಯಲ್ಲೇ ಇದ್ದೆ. ಮಂಡ್ಯದ ನೆಲದಲ್ಲಿ ಪಾರ್ಟಿ ಕಟ್ಟೋಕೆ ಆಗಲಿಲ್ಲ. ಸರಿಯಾದ ರೀತಿ ಸಪೋರ್ಟ್ ಸಿಗಲಿಲ್ಲ ಎಂದೆ. ಆಗ ಅವರು ಈಗ ಹಾಗೆಲ್ಲ ಆಗೋದಿಲ್ಲ. ನಾವು ಮೋದಿ ಅವರ ನಾಯಕತ್ವದಲ್ಲಿ ಪಾರ್ಟಿಯನ್ನು ಕಟ್ಟಲೇಬೇಕೆಂದು ತೀರ್ಮಾನ ಮಾಡಿದ್ದೇವೆ ನೀವು ಬರಲೇಬೇಕು ಎಂದರು. ಆಗ ಸರಿ ಸರ್ ನಾನು ದೇವಸ್ಥಾನಕ್ಕೆ ಬಂದಿದ್ದೇನೆ ಊರಿಗೆ ಹೋದಮೇಲೆ ತೀರ್ಮಾನ ಮಾಡಿ ತಮ್ಮನ್ನು ಬಂದು ಭೇಟಿ ಮಾಡಿ ಹೇಳುತ್ತೇನೆ ಎಂದೆ.



ಮತ್ತೆ ಸ್ವಲ್ಪ ಹೊತ್ತಿಗೆ ಪುನಃ ಬೊಮ್ಮಾಯಿಯವರು ಫೋನ್ ಮಾಡಿದರು. ಅಮಿತ್ ಶಾ ಅವರಿಗೆ ಫೋನ್ ಕೊಟ್ಟರು. ಅವರು ಸೇಮ್ ಅದೇ ರೀತಿ ಹೇಳಿದರು. ನಾನು ದೊಡ್ಡವರೊಂದಿಗೆ ಹೆಚ್ಚಾಗಿ ಚರ್ಚಿಸುವುದು ಬೇಡ ಎಂದು ನಾನು ಬೆಂಗಳೂರಿಗೆ ಬಂದ ನಂತರ ತೀರ್ಮಾನ ಮಾಡಿ ತಮ್ಮನ್ನು ಭೇಟಿ ಮಾಡುತ್ತೇನೆ ಎಂದು ಹೇಳಿದೆ. ನನ್ನನ್ನು ದೆಹಲಿಗೆ ಕರೆದುಕೊಂಡು ಹೋಗಲು ಇವರು ತಯಾರಿ ಮಾಡಿಕೊಂಡಿದ್ದರು. ಅಷ್ಟರಲ್ಲಿ ಚಿಕ್ಕಬಳ್ಳಾಪುರದಲ್ಲಿ ಒಂದು ಕಾರ್ಯಕ್ರಮ ನಿಮಿತ್ತ ಜೆ.ಪಿ. ನಡ್ಡಾರವರು ಮತ್ತು ಅಮಿತ್ ಶಾ ಅವರು ಬೆಂಗಳೂರಿಗೆ ಬಂದರು. ಅವರಿಗೆ ನನ್ನ ಭೇಟಿ ಸಹ ಮಾಡಿಸಿದರು. ಮತ್ತೆ ನಾನು ಬೊಮ್ಮಾಯಿ ಅವರ ಒತ್ತಡಕ್ಕೆ ಮಣಿದು ಎರಡನೇ ಬಾರಿಗೆ ಬಿಜೆಪಿಗೆ ಸೇರಬೇಕಾದಂತಹ ಸಂದರ್ಭ ಬಂತು. ಒಲ್ಲದ ಮನಸ್ಸಿನಿಂದ ಮತ್ತೆ ಬಿಜೆಪಿಗೆ ಸೇರಿದೆ. ಕರ್ನಾಟಕ ಬಿಜೆಪಿ ಪಾರ್ಟಿಯಲ್ಲೂ ಎರಡು ಗುಂಪು. ಒಂದು ಬಿ.ಎಲ್. ಸಂತೋಷ್‌ರದ್ದು, ಇನ್ನೊಂದು ಸುರಾನ್‌ರವರದು. ನಾಗಮಂಗಲ ಕ್ಷೇತ್ರಕ್ಕೆ ಫೈಟರ್ ರವಿಯೆಂದು ತೀರ್ಮಾನ ಮಾಡಿಕೊಂಡಿದ್ದರು. ಟಿಕೆಟ್ ಕೊಡುವ ವಿಚಾರ ಆಗಲೇ ಟಿವಿಯಲ್ಲಿ, ಜನ ಸಾಮಾನ್ಯರ, ಪತ್ರಕರ್ತರ ಅಭಿಪ್ರಾಯದಲ್ಲಿ ವ್ಯಕ್ತಗೊಳ್ಳುತ್ತಿತ್ತು. ಮಂಡ್ಯದಲ್ಲಿ ಮೋದಿಯ ಕೈಕುಲುಕಿದ ಬುಕ್ಕಿ ಫೈಟರ್ ರವಿ ಎಂದು ಸುದ್ದಿಯಾಗಿ ಪ್ಯಾನಲ್ ಡಿಸ್ಕಷನ್ ನಲ್ಲಿ ರವಿಯೊಂದಿಗೆ ಸಂದರ್ಶನ ನಡೆಯುತ್ತಿತ್ತು. ಆಗ ಬಸವರಾಜ ಬೊಮ್ಮಾಯಿಯವರು ನನ್ನ ಪರ ಹೋರಾಟ ಮಾಡಿ ಟಿಕೆಟ್ ನಿಮಗೆ ಕೊಡಿಸುತ್ತೇನೆ ಚುನಾವಣೆಗೆ ನಿನ್ನ ಧರ್ಮಪತ್ನಿಯನ್ನು ನಿಲ್ಲಿಸು ಎಂದರು. ಅವರು ಹಾಗೆ ಹೇಳೋಕೆ ಕಾರಣ ಬಿಜೆಪಿಯಿಂದ ದಕ್ಷಿಣ ಕರ್ನಾಟಕದಲ್ಲಿ ಮಹಿಳೆ ಅಭ್ಯರ್ಥಿಗಳೇ ಇರಲಿಲ್ಲ. ಇನ್ನ ಮಂಡ್ಯ ಜಿಲ್ಲೆಯಲ್ಲೂ ಮಹಿಳಾ ಅಭ್ಯರ್ಥಿಯನ್ನ ಹಾಕದಿದ್ದರೆ ಸುಮಾರು ಐದು ಜಿಲ್ಲೆಯನ್ನೊಳ ಗೊಂಡ ಸುಮಾರು ಬರೋಬ್ಬರಿ ಐವತ್ತು ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳೇ ಇಲ್ಲದಂತೆ ಆಗುತ್ತದೆ. ಮಹಿಳಾ ಮೀಸಲಾತಿ ಕುರಿತು ಬದ್ಧತೆ ಇರುವ ಪಕ್ಷ ನಮ್ಮದು ಎಂದ ಕಮಲ ನಾಯಕರು, ನಾಗಮಂಗಲ ಕ್ಷೇತ್ರಕ್ಕೆ ನಿನ್ನ ಧರ್ಮಪತ್ನಿಯನ್ನ ನಿಲ್ಲಿಸಲೇಬೇಕೆಂದು

ಪಟ್ಟುಹಿಡಿದರು. ನಾವು ಮನೆಯಲ್ಲಿ ಯಾರೂ ಒಪ್ಪಿರಲಿಲ್ಲ. ನನ್ನ ಹೆಂಡತಿ ನಾಲ್ಕು ದಿನ ಊಟ ಸಹ ಬಿಟ್ಟಳು, ನನಗೆ ಎಲೆಕ್ಷನ್ ಬೇಡ ಎಂದು. ಆದರೂ ಬೊಮ್ಮಾಯಿಯವರು ಕನ್ವಿನ್ಸ್ ಮಾಡಿ ಒಪ್ಪಿಸಿದರು. ಶ್ರೀ ನರೇಂದ್ರ ಮೋದಿಯವರ ಮೇಲೆ ಇಡೀ ದೇಶದ ಜನರ ವಿಶ್ವಾಸವಿದೆ. ಮೋದಿ ಅಲೆ ಈ ಬಾರಿ ಕರ್ನಾಟಕದ ರಾಜಕಾರಣವನ್ನು ಬದಲು ಮಾಡಲಿದೆ. ಪಕ್ಷದ ಕುರಿತಾಗಿ ಕಾರ್ಯಕರ್ತರು ಮತ್ತು ಸಂಘ ಆಂತರಿಕವಾಗಿ ಉತ್ತಮ ಕೆಲಸ ಮಾಡಿದೆ. ಮೋದಿಯವರ ಹೆಸರಿಗೆ ಆ ಶಕ್ತಿ ಮತ್ತು ಸೆಳೆತವಿದೆ, ವೋಟು ಬರುತ್ತೆ ನಿಲ್ಲಿ ಎಂದು ಬಿ ಫಾರಂ ಕೊಟ್ಟರು. ಸರಿ ಎಲೆಕ್ಷನ್‌ಗೆ ನಿಂತಿದ್ದು ಆಯಿತು.

ಬಿಜೆಪಿಯ ಮಹಿಳಾ ಅಭ್ಯರ್ಥಿಯಾಗಿ ನಾಗಮಂಗಲದ 2023ರ ರಾಜಕೀಯ ಅಖಾಡಕ್ಕಿಳಿದ ಸುಧಾ ಶಿವರಾಮೇಗೌಡರ ಬಗ್ಗೆ ಕ್ಷೇತ್ರದೆಲ್ಲೆಡೆ ಒಳ್ಳೆಯ ಅಭಿಪ್ರಾಯ ಮೂಡಿಬಂದಿತು. ಚುನಾವಣೆಯ ಸ್ಟಾರ್ ಕ್ಯಾಂಪೇನರ್‌ಗಳಾಗಿ ಕೇಂದ್ರ ಸಚಿವೆ ಸ್ಮೃತಿ ಇರಾನಿ, ಸಂಸದೆ ಶ್ರೀಮತಿ ಸುಮಲತಾ ಅಂಬರೀಷ್, ಫೈರ್ ಬ್ರಾಂಡ್ ಸಿ.ಟಿ.ರವಿಯವರುಗಳು ಬಂದು, ನಾಗಮಂಗಲ ತಾಲ್ಲೂಕಿನ ಎಲ್ಲಾ ಹೋಬಳಿ ಕೇಂದ್ರಗಳಲ್ಲೂ ಅಭ್ಯರ್ಥಿ ಸುಧಾ ಶಿವರಾಮೇಗೌಡರ ಪರ ಮತ ಯಾಚಿಸಿದರು. ಸ್ಮೃತಿ ಇರಾನಿಯಂತೂ ಭಾಷಣದಲ್ಲಿ.. ನಿಮ್ಮ ಕ್ಷೇತ್ರದ ಅನ್ನಪೂರ್ಣೇಶ್ವರಿ ನಿಮ್ಮ ಮನೆಗೆ ಮತ ಕೇಳಲು ಬಂದಿದ್ದಾರೆ. ಅವರನ್ನು ಗೆಲ್ಲಿಸುವ ಮುಖಾಂತರ ನಾಗಮಂಗಲ ಕ್ಷೇತ್ರ ಸುಭಿಕ್ಷವಾಗಲಿ ಎಂದು ಮತದಾರರ ಮನವೊಲಿಸಿದರು. ನಮ್ಮ ಮಂಡ್ಯದಲ್ಲಿ ಮೊದಲೇ ಬಿಜೆಪಿಗೆ ವೋಟು ಕಡಿಮೆ, ಬಿಜೆಪಿ ಬೇಸ್ ಇಲ್ಲ. ಮೊದಲು ನಾನು ಸಂಘಟನೆ ಮಾಡುತ್ತೇನೆ ಎಂದಾಗ ಆ ಸಾಮ್ರಾಟ್ ಆಶೋಕ್ ಸರಿಯಾಗಿ ಸಪೋರ್ಟ್ ಮಾಡಲಿಲ್ಲ. ಕೊನೆಗೆ ನನ್ನ ಹೆಂಡತಿ ಭಾರಿ ಅಂತರದಿಂದ ಸೋಲಬೇಕಾಯಿತು. ಆಕೆಗೂ ಜನರ ಮೇಲಿಟ್ಟಿದ್ದ ವಿಶ್ವಾಸವು ಮತವಾಗಲಿಲ್ಲವಲ್ಲ ಎಂಬ ಕೊರಗು ಈಗಲೂ ಇದೆ. ಚುನಾವಣೆ ನಂತರ ಒಂದು ವರ್ಷ ಸುಮ್ಮನಿದ್ದು, ನಂತರ ಕಾಂಗ್ರೆಸ್‌ಗೆ ಸೇರುವ ಪ್ರಯತ್ನ ಮಾಡಿದೆ. ಆಗ ಕೆಪಿಸಿಸಿ ಅಧ್ಯಕ್ಷರಾದಂತಹ ಡಿಕೆ ಶಿವಕುಮಾರ್ ಅವರು ಬಾರಯ್ಯ, ಕಾಂಗ್ರೆಸ್‌ಗೆ ನೀನು ಮತ್ತು ನಿನ್ನ ಮಗ ಪಕ್ಷಕ್ಕೆ ಸೇರಿಕೊಳ್ಳಿ, ಮುಂದೆ ಭವಿಷ್ಯವಿದೆ. ಏನಾದರೂ ಮಾಡೋಣ ಎಂದರು. ಫೆಬ್ರವರಿ ತಿಂಗಳು 2025ರಲ್ಲಿ ಡಿ.ಕೆ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಮತ್ತೆ ನಾನು ಮಾತೃ ಪಕ್ಷ ಕಾಂಗ್ರೆಸ್‌ಗೆ ಸೇರಿದೆ.









ರಾಜಕಾರಣದ ಮಧ್ಯೆ ಬಿಡುವು, ರಾಯಲ್ ಕಾನ್ ಕಾರ್ಡ್ ಶಿಕ್ಷಣ ಸಂಸ್ಥೆ ಕಟ್ಟಿದ ಯಶೋಗಾಥೆ

ನಾನು 1996–1999ರ ಆಸುಪಾಸಿನಲ್ಲಿ ಕರ್ನಾಟಕ ಗೃಹ ಮಂಡಳಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಈ ಸಂದರ್ಭದಲ್ಲಿ ಬೆಂಗಳೂರಿನ ನನ್ನ ಹಲವಾರು ಸ್ನೇಹಿತರು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಕೊಂಡು ಯಶಸ್ವಿ ಉದ್ಯಮಿಗಳಾಗಿ ಹೊರಹೊಮ್ಮಿದ್ದರು. ಆಗಾಗ್ಗೆ ನಮ್ಮೆಲ್ಲ ಸ್ನೇಹಿತರೆಲ್ಲರೂ ಬೆಂಗಳೂರಿನ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಕುಳಿತು ತಮ್ಮ ತಮ್ಮ ವ್ಯವಹಾರಗಳ ಬಗ್ಗೆ ಮಾತನಾಡಿಕೊಳ್ಳುತ್ತಿದ್ದೆವು. ಈ ಮಾತುಗಳಿಂದ ನಾನೂ ಸಹ ಉತ್ತೇಜನಗೊಂಡು ಬೆಂಗಳೂರಿನಲ್ಲಿ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯನ್ನು ಪ್ರಾರಂಭ ಮಾಡಬೇಕು ಎಂದು ತೀರ್ಮಾನಿಸಿ, ನನ್ನ ಬಹಳ ದಿನಗಳ ಸ್ನೇಹಿತನೂ ಆಗಿದ್ದ ವಿ.ವಿ.ಪುರಂ ಕಾಲೇಜಿನಲ್ಲಿ





ಅಧ್ಯಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೇವಲ 25 ಸಾವಿರ ಸಂಬಳ ತೆಗೆದುಕೊಳ್ಳುತ್ತಿದ್ದ ಮಂಡ್ಯದ ಬೂದನೂರಿನ ಬಿ.ಎಸ್. ಶಿವರಾಂ ಜೊತೆ ಚರ್ಚೆ ಮಾಡಿ ರಿಯಲ್ ಎಸ್ಟೇಟ್ ಮಾಡಬೇಕೆಂದು ಹಾಗೂ ಅವನ ಸ್ನೇಹಿತ ಗೋಪಾಲರೆಡ್ಡಿ ಈತ ಟ್ರ್ಯಾಕ್ಟರ್ ಇಟ್ಟುಕೊಂಡು ಮರಳು, ಜಲ್ಲಿ ಸಪ್ಲೈ ಮಾಡುತ್ತಿದ್ದ. ಜೊತೆಗೆ ಭೂ ವ್ಯವಹಾರದ ದಲ್ಲಾಳಿಯಾಗಿದ್ದರು. ಈ ಇಬ್ಬರನ್ನು ಸೇರಿಸಿಕೊಂಡು ನನ್ನ ಧರ್ಮಪತ್ನಿ ಸುಧಾ ಶಿವರಾಮೇಗೌಡರನ್ನು ಪಾಲುದಾರರನ್ನಾಗಿ ಮಾಡಿ, ಕಾನ್‌ಕಾರ್ಡ್ ಡೆವಲಪರ್ಸ್ ಎಂಬ ಪಾಲುದಾರಿಕಾ ಸಂಸ್ಥೆಯನ್ನು ಪ್ರಾರಂಭ ಮಾಡಿದೆವು. ಮೂವರಿಗೂ ತಲಾ 33% ಪಾಲುದಾರಿಕೆಯ ಒಪ್ಪಂದದ ಮೇರೆಗೆ ಕಾನ್‌ಕಾರ್ಡ್ ಸಂಸ್ಥೆ ಪ್ರಾರಂಭಿಸಿದೆವು. ಈ ಕಚೇರಿಯನ್ನು ಜಯನಗರದಲ್ಲಿ ಶ್ರೀಶ್ರೀಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿಯವರ ಅಮೃತ ಹಸ್ತದಿಂದ ಉದ್ಘಾಟಿಸಿದೆವು. ಈ ಕಾನ್‌ಕಾರ್ಡ್ ಎಂಬ ಪದವನ್ನು ನಾನು ಹೌಸಿಂಗ್ ಬೋರ್ಡ್ ಚೇರ್ಮನ್ ಆಗಿದ್ದಾಗ ನನಗೆ ತ್ರೋಟ್ ಇನ್ಫೆಕ್ಷನ್ ಆಗಿ ಶಸ್ತ್ರಚಿಕಿತ್ಸೆಗೆ ಪ್ಯಾರಿಸ್‌ಗೆ ಹೋದೆ. ಆಗ ಪ್ಯಾರಿಸ್ ಏರ್‌ಪೋರ್ಟ್‌ನಲ್ಲಿ ಒಂದು ದೊಡ್ಡ ಸಭೆ ನಡೆಯುತ್ತಿತ್ತು. ಒಂದು ಫ್ಲೈಟ್ ಸಿಂಗಾರ ಮಾಡಿ ನಿಲ್ಲಿಸಿದ್ದರು. ಆದೇನೆಂದು ನಾನು ವಿಚಾರಿಸಿದಾಗ, ಕಾನ್‌ಕಾರ್ಡ್ ಫ್ಲೈಟ್ ಎಂದು ಹೊಸದಾಗಿ ಇಂಟ್ರುಡ್ಯೂಸ್ ಮಾಡಿದ್ದಾರೆ. ಇದು ಪ್ರಪಂಚದಲ್ಲೇ ಹೊಸತರದ ವಿಮಾನ. ಇದು ಮೂರೇ ಕಡೆಗೆ ನಿಲ್ಲೋದು. ಪ್ಯಾರಿಸ್, ಲಂಡನ್, ನ್ಯೂಯಾರ್ಕ್‌ನಲ್ಲಿ, ಮತ್ತೆ ಇನ್ನೊಂದು ವಿಶೇಷ ಏನೆಂದರೆ, ಉದಾಹರಣೆಗೆ ಇಂಡಿಯಾದಿಂದ ಇಂಗ್ಲೆಂಡಿಗೆ ತಲುಪಲು 9 ಗಂಟೆ ಟೈಮ್ ಬೇರೆ ಫ್ಲೈಟ್‌ಗಳಿಗೆ ಬೇಕಾಗುತ್ತದೆ. ಆದರೆ ಈ ಫ್ಲೈಟ್‌ಗೆ ಬರೀ 4 ಗಂಟೆ ಸಾಕು. ಅಷ್ಟರಲ್ಲೇ ರೀಚ್ ಆಗುತ್ತೆ ಪ್ರಯಾಣದ ಅರ್ಧ ಸಮಯ ಉಳಿಸುತ್ತೆ. ಹಾಗೆ ಲ್ಯಾಂಡಿಂಗ್ ಮಾಡೋದಕ್ಕೂ ಸಹ ಸಪರೇಟ್ ಏರ್‌ಪೋರ್ಟ್ ಇದಕ್ಕೆ ಬೇಕು. ಮಾಮೂಲಿ ಏರ್‌ಪೋರ್ಟಿನಲ್ಲಿ ಆಗಲ್ಲ. ಆ ರೀತಿಯ ವಿಶೇಷವಾದ ಫ್ಲೈಟ್ ಇದು ಎಂದು ಅಲ್ಲಿ ನನಗೆ ವಿಷಯ ತಿಳಿಯಿತು. ಈ ಹೆಸರಿನಲ್ಲೇ ನನ್ನ ವ್ಯವಹಾರ ಪ್ರಾರಂಭಿಸಬೇಕು. ಆ ಫ್ಲೈಟ್ ಸ್ಪೀಡ್‌ನಲ್ಲಿ ನನ್ನ ಕಂಪನಿ ಬೆಳೆಯಬೇಕು ಎಂದು ತೀರ್ಮಾನ ಮಾಡಿ, ನಾನು ಪ್ರಾರಂಭಿಸಿದ ಸಂಸ್ಥೆಗೆ ಕಾನ್‌ಕಾರ್ಡ್ ಡೆವಲಪರ್ಸ್ ಎಂದು ಹೆಸರಿಟ್ಟೆ.

ಈ ಸಂಸ್ಥೆಗೆ ಹಣಕಾಸಿನ ವ್ಯವಸ್ಥೆಯನ್ನು ಅವರಿಬ್ಬರಿಗಿಂತಲೂ ಅತಿಹೆಚ್ಚಿನ ಬಂಡವಾಳವನ್ನು ನಾನೇ ಭರಿಸಿದೆ. ಬರಿಗೈ ದಾಸರಂತಿದ್ದ ಇವರಿಬ್ಬರು ಅಲ್ಪಸ್ವಲ್ಪ ಹಣ ವಿನಿಯೋಗಿಸಿದರು. ನಂತರದ ದಿನಗಳಲ್ಲಿ ನಾನು ರಾಜಕೀಯದ ಒತ್ತಡದ ಕೆಲಸದಲ್ಲಿ ಇವರುಗಳೊಡನೆ ಹೆಚ್ಚುಕಾಲ ಈ ವ್ಯವಹಾರದ ಬಗ್ಗೆ ಗಮನ ಹರಿಸಲಾಗಲಿಲ್ಲ. ಆದರೂ ನನ್ನ ಶಿಫಾರಸ್ಸು ಮತ್ತು ನನ್ನ ವರ್ಚಸ್ಸನ್ನು ಬಳಸಿಕೊಂಡ ಇವರು, ಬೆಂಗಳೂರಿನ ಆನೇಕಲ್ ಹಾಗೂ ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ ಕಡೆಗಳಲ್ಲಿ ಶಾಖೆಗಳನ್ನು ತೆರೆದು ಸರಣಿ ಕಂತುಗಳ ಮೂಲಕ ಸಾವಿರಾರು ಸದಸ್ಯರನ್ನು ಮಾಡಿಕೊಂಡು ಅವರಿಂದ ತಿಂಗಳ ಕಂತುಗಳನ್ನು ಪಡೆದು ಕೋಟ್ಯಂತರ ಹಣ ಸಂಸ್ಥೆಗೆ ಬರುವಂತಾಯಿತು. ರಾಜ್ಯದಲ್ಲಿ ಇರುವಂತಹ ಕೆಲ ಶಿಕ್ಷಕರಿಗೆ ಬೆಂಗಳೂರಿನಲ್ಲಿ ನಿವೇಶನ ಹೊಂದಬೇಕೆಂಬ ಬಯಕೆ ಇರುತ್ತೆ.



ಆದರೆ ಶಿಕ್ಷಕರು ಒಂದೇ ಬಾರಿಗೆ ಹಣ ಕೊಟ್ಟು ನಿವೇಶನ ಕೊಳ್ಳುವುದಕ್ಕೆ ಕಷ್ಟಸಾಧ್ಯ. ಅವರ ಕಷ್ಟ ನನಗೆ ಅರಿವಾಗಿದ್ದರಿಂದ ಬೆಂಗಳೂರಿನ ಚಂದಾಪುರ ರಸ್ತೆಯಲ್ಲಿ ಸುಮಾರು 60 ಎಕರೆ ಜಾಗದಲ್ಲಿ ಕಾನ್‌ಕಾರ್ಡ್ ಟೀಚರ್ಸ್ ಟೌನ್ ಎಂಬ ಹೆಸರಿನಲ್ಲಿ ಉದ್ಯಮ ಪ್ರಾರಂಭಿಸಿ ಕಂತುಗಳ ಮೂಲಕ ಹಣ ಪಡೆದು ನಿವೇಶನಗಳನ್ನು ಹಂಚಿದ್ದೇವೆ. ಹುಬ್ಬಳ್ಳಿ, ಧಾರವಾಡ, ಕಡೆಗಳಲ್ಲಿ ಕಾನ್‌ಕಾರ್ಡ್ ಸಂಸ್ಥೆ ಪ್ರಾರಂಭ ಮಾಡಿದಾಗ ಅಲ್ಲಿನ ಮುಖಂಡರಿಗೆ ಕಣ್ಣು ಕೆಂಪಗಾಗಿ ಇವರನ್ನು ಅಲ್ಲಿಂದ ಖಾಲಿ ಮಾಡಿಸಲು ತೊಂದರೆ ಕೊಡುತ್ತಿದ್ದರು. ಅಂಥ ಸಂದರ್ಭದಲ್ಲಿ ನಾನೇ ಮುಂದೆ ನಿಂತು ಎಲ್ಲ ನಾಯಕರುಗಳನ್ನು ಒಗ್ಗೂಡಿಸಿ ಸಂಸ್ಥೆ ಬೆಳವಣಿಗೆಗೆ ಸಹಕರಿಸುವಂತೆ ಅವರನ್ನು ಸಮಾಧಾನ ಮಾಡಿ ಇವರ ನೆರವಿಗೆ ಹಾಗು ಸಂಸ್ಥೆಗೆ ಶಕ್ತಿಯಾಗಿದ್ದೆ. ನಾನು ಸಂಸ್ಥೆ ಪ್ರಾರಂಭವಾದ 4–5 ವರ್ಷಗಳವರೆಗೂ ಯಾವುದೇ ಲೆಕ್ಕಪತ್ರ ಕೇಳಿರಲಿಲ್ಲ. 5 ವರ್ಷಗಳ ನಂತರ ಇವರಿಬ್ಬರನ್ನೂ ಕೂರಿಸಿಕೊಂಡು ಲೆಕ್ಕ ಕೇಳಿದೆ. ಆಗ ಅವರು ಎಚ್ಚೆತ್ತುಕೊಂಡು, ಲೆಕ್ಕ ಕೊಡುತ್ತೇವೆ ಎಂದು ಸಮಾಧಾನ ಮಾಡುತ್ತ 2–3 ವರ್ಷಗಳ ಕಾಲ ಮುಂದೂಡಿದರು. ಕೇಳಿದಾಗಲೆಲ್ಲಾ ಇವನು ಅವನ ಮೇಲೆ, ಅವನು ಇವನ ಮೇಲೆ ಸಬೂಬು ಹೇಳಿಕೊಂಡು ಕಾಲ ದೂಡುತ್ತಿದ್ದರು. ಕೊನೆಗೂ ಬೇಸತ್ತು ಲಾಯರ್ ಮುಖಾಂತರ ನೋಟೀಸ್ ಕೊಡಿಸಿದೆ. ಅವರು ನೋಟಿಸ್‌ಗೆ ಉತ್ತರ ಕೊಟ್ಟಿದ್ದು ಏನೆಂದರೆ ನಿಮ್ಮ ಧರ್ಮಪತ್ನಿ ಸ್ವಯಂ ನಿವೃತ್ತಿಯಾಗಿ 3ವರ್ಷಗಳು ಕಳೆದಿವೆ, ಈಗ ನೀವು ಲೆಕ್ಕ ಕೇಳುತ್ತಿದ್ದೀರಿ ಎಂದು. ನನ್ನ ಧರ್ಮಪತ್ನಿ ಸಹಿಯನ್ನೇ ಫೋರ್ಜರಿ ಮಾಡಿ, ಪಾಲುದಾರಿಕೆ ಸಂಸ್ಥೆಯಿಂದ ಕೈ ಬಿಡಲಾಗಿದೆ ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು. ನನ್ನ ಧರ್ಮಪತ್ನಿಗೆ ಪಾಲುದಾರಿಕಾ ಒಪ್ಪಂದದಂತೆ ನ್ಯಾಯಸಮ್ಮತವಾಗಿ ಬರಬೇಕಾದ 33% ಪಾಲಿಗಾಗಿ ನ್ಯಾಯಾಲಯದಲ್ಲಿ ನಾನು ದಾವೆ ಹೂಡಿದೆ. ಅಂದು ನನ್ನ ಕನಸಿನ ಕೂಸಿನಂತೆ ಪ್ರಾರಂಭಿಸಿದ ಸಂಸ್ಥೆ ಬೆಂಗಳೂರಿನ ಸುತ್ತಮುತ್ತ ವರ್ಷಕ್ಕೆ ಈಗ ಸುಮಾರು ಏಳು ಸಾವಿರ ಕೋಟಿ ಆನ್‌ಗೋಯಿಂಗ್ ವರ್ಕ್ಸ್ ನಡೆಯುತ್ತಿದೆ. ಈ ವಂಚನೆಯ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ.

ಈ ವಂಚಕರಿಗೆ ನಮಸ್ಕಾರ ಹೇಳಿ, ಇವರ ಸಹವಾಸ ಬೇಡ ಎಂದು ತೀರ್ಮಾನ ಮಾಡಿದೆ. ನನ್ನ ಕನಸಿನ ಹೆಸರಾದ 'ಕಾನ್‌ಕಾರ್ಡ್' ಎಂಬ ಹೆಸರಿನ ಬದಲು 'ರಾಯಲ್ ಕಾನ್‌ಕಾರ್ಡ್' ಎಂಬ ಹೊಸ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದೆ. ಆ ಸಂಸ್ಥೆಗಳನ್ನು ಚೆನ್ನಾಗಿ ಬೆಳೆಸಿ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸಿದ್ದೇನೆ, ಮತ್ತೆ ಈಗ ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ಸುಮಾರು 7 ಸಾವಿರ ಮಕ್ಕಳಿಗೆ ವಿಶ್ವದರ್ಜೆಯ ವಿದ್ಯಾಭ್ಯಾಸ ಅವಕಾಶ ಕಲ್ಪಿಸಿದ್ದೇನೆ. ನಮ್ಮ ಕುಟುಂಬದವರೆಲ್ಲ ಭಾಗಿಯಾಗಿ ಚೆನ್ನಾಗಿ ಶಾಲೆಗಳನ್ನು ನಡೆಸಿಕೊಂಡು ಪ್ರಗತಿಯತ್ತ ಕೊಂಡೊಯ್ಯುತ್ತಿದ್ದೇವೆ. ಮೊದಲ ಶಾಲೆಯನ್ನು ಬೆಂಗಳೂರಿನ ಕಲ್ಯಾಣ ನಗರದಲ್ಲಿ, ನಂತರ ಬೆಂಗಳೂರು–ಮೈಸೂರು ಸೇರಿದಂತೆ ಒಟ್ಟು ಎಂಟು ಶಾಲೆಗಳನ್ನು ಪ್ರಾರಂಭಿಸಿದೆ. ಅದರಲ್ಲಿ ನಾಲ್ಕು ಶಾಲೆಗಳು ನನ್ನ ಕುಟುಂಬದಿಂದ, ಉಳಿದ ನಾಲ್ಕು ಶಾಲೆಗಳು ಪ್ರಾಂಚೈಸಿ ಮೂಲಕ ಯಶಸ್ವಿಯಾಗಿ ಸುಮಾರು 20 ವರ್ಷಗಳಿಂದ ಶೈಕ್ಷಣಿಕ ಕೈಂಕರ್ಯದಲ್ಲಿ ತೊಡಗಿದ್ದೇವೆ. ನನ್ನ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ನೂರಕ್ಕೆ ಶೇ. ತೊಂಬತ್ತೈದಕ್ಕೂ ಹೆಚ್ಚಿನ ಅಂಕಗಳನ್ನು ಪಡೆಯುವುದರ ಮೂಲಕ ಅತ್ಯುತ್ತಮ ವಿದ್ಯಾರ್ಥಿಗಳಾಗಿ ಸಂಸ್ಥೆಗೆ ಗೌರವ ತಂದಿದ್ದಾರೆ. ನಮ್ಮ ಶಾಲೆಗಳಲ್ಲಿ ಓದಿದಂತಹ ವಿದ್ಯಾರ್ಥಿಗಳು, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ನಮ್ಮ ಸಂಸ್ಥೆಗಳಿಗೆ ಪ್ರಪಂಚದ ಅತ್ಯುನ್ನತ ಪ್ರಶಸ್ತಿ ಆಗಿರುವ 'ಬ್ರಿಟಿಷ್ ಕೌನ್ಸಿಲ್' ಮತ್ತು ವರ್ಲ್ಡ್ ಸ್ಕೂಲ್ ಸಂಸ್ಥೆಗಳಿಂದ ಪ್ರಶಂಸೆಗೆ ಒಳಗಾಗಿದೆ.



ತಿಮ್ಮಲಾಪುರ ಗೇಟ್
ಡಿಸ್ಟಿಲರಿ ನಿರ್ಮಾಣದ ಕಥೆ



ಎರಡನೇ ಬಾರಿ ಮತ್ತೆ ನಾಗಮಂಗಲ ಶಾಸಕನಾಗಿ ಮುಂದುವರೆದ ನಾನು ಲಾಲ್‌ಬಾಗ್‌ನಲ್ಲಿ ಬೆಳಗಿನ ವಾಕ್ ಹೋಗುವ ಸಂದರ್ಭದಲ್ಲಿ ಸ್ನೇಹಿತರಾದಂತಹ ಶಾಸಕರಾದ ರಾಮಲಿಂಗರೆಡ್ಡಿ, ವಕೀಲ ಮತ್ತು ಶಾಸಕರಾದ ಸುಬ್ಬಾರೆಡ್ಡಿ, ಆರ್.ವಿ.ದೇವರಾಜ್, ಗಂಗಾಧರಗೌಡ ಹೀಗೆ ಅನೇಕರು ಪರಿಚಯವಾದರು. ಅದರಲ್ಲೊಬ್ಬರು ನೀವು ಡಿಸ್ಟಿಲರಿ ಮಾಡಿ ಎಂದು ಸಲಹೆ ನೀಡಿದರು. ಡಿಸ್ಟಿಲರಿ ಎಂದರೆ ವಿಸ್ಕಿಗೆ ಬೇಕಾದಂತಹ ಕಚ್ಚಾ ವಸ್ತುವನ್ನು ತಯಾರು ಮಾಡಿ ಕಳುಹಿಸುವುದು. ಅದನ್ನು ಮದ್ಯದ ಫ್ಯಾಕ್ಟರಿಗಳಿಗೆ ಸಪ್ಲೇ ಕೊಡುವುದು ಪ್ರಕ್ರಿಯೆ. ಚಾಮುಂಡೇಶ್ವರಿ ಡಿಸ್ಟಿಲರಿ ಎಂದು ಮೈಸೂರಿನಲ್ಲಿ ಒಂದು ಫ್ಯಾಕ್ಟರಿ ಇತ್ತು. ಅದನ್ನು ನಾನು ಹೋಗಿ ನೋಡಿಕೊಂಡು ಬಂದೆ. 1994ರಲ್ಲಿ ಈ ಫ್ಯಾಕ್ಟರಿ ಮಾಡೋಕೆ 25 ಕೋಟಿ ಬೇಕು ಎಂದು ಅಂದಾಜಿತ್ತು. ಆದರೆ ನನ್ನ ಬಳಿ ಲೈಸೆನ್ಸ್ ಇರಲಿಲ್ಲ. ಹಿರಿಯೂರು ಸುಧಾಕರ್ ಅವರ ಅಪ್ಪ ಜಯಣ್ಣ ಎಂದು ಅವರ ಬಳಿ ಲೈಸೆನ್ಸ್ ಇದೆ ಎಂದು ಗೊತ್ತಾಯಿತು. ಆಗ ನಾನು ಹೋಗಿ ಲೈಸೆನ್ಸ್ ಕೇಳಿದೆ, ಶಾಸಕ ಸುಧಾಕರ್ ನಾನು ಸಹ ಪಾರ್ಟ್ನರ್ ಆಗಿ ಬರ್ತಿನಿ ಎಂದು ದುಂಬಾಲು ಬಿದ್ದರು. ಸರಿ ಬಾ ಗುರು ಎಂದು ಅವನನ್ನು ಜೊತೆಗೆ ಸೇರಿಸಿಕೊಂಡೆ. ನನ್ನದು ನಾಗಮಂಗಲ ತಾಲೂಕಿನಲ್ಲಿ 50 ಎಕರೆ ಜಮೀನಿತ್ತು. ಬೆಂಗಳೂರು ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿತ್ತು. ಅದನ್ನ ಡಿಸ್ಟಿಲರಿ ಕಂಪನಿಯ ಹೆಸರಿಗೆ ಬರೆದೆ.ಸುಧಾಕರ್ ಹಿರಿಯ ಸಹೋದರನನ್ನೂ ಎಂ.ಡಿ. ಮಾಡಿದೆ. ನಾನು ಒಂದು ಕೋಟಿ ಬಂಡವಾಳ ಹಾಕಿದೆ. ಸುಧಾಕರ್ ಒಂದು ಕೋಟಿ ಹಾಕಿದರು, ಅವರ ಅಣ್ಣ ಅರವತ್ತರಿಂದ 70ಲಕ್ಷ ಹಾಕಿದರು, ಇನ್ನೊಬ್ಬ ಮುರುಳಿ ಎಂದು ಅವನು 60 ರಿಂದ 70 ಲಕ್ಷ ಹಾಕಿದ. ಕನ್‌ಸ್ಟ್ರಕ್ಷನ್ ಕೆಲಸ ಶುರುವಾಯಿತು. ಫ್ಯಾಕ್ಟರಿಯ ಮಾಡೋಕೆ ನನಗೆ ಗೊತ್ತಿದ್ದ ಒಬ್ಬ ಕಂಟ್ರಾಕ್ಟರ್‌ನ ನೇಮಿಸಿದೆ. ಅವನ







ಹೆಸರು ನಾಗರಾಜ್ ಅಂತ. ಎಲ್ಲ ಭರ್ಜರಿಯಾಗಿ ನಡೆಯುತ್ತಿತ್ತು, ನಾನು ಎರಡನೆ ಬಾರಿ ಎಂಎಲ್‌ಎ ಆಗಿದ್ದ ಅವಧಿ ಮುಗಿದು, ಚೆಲುವರಾಯಸ್ವಾಮಿ ಎಂಎಲ್‌ಎ ಆಗಿ ಗೆದ್ದರು. ಅವರು ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿ ತಗಾದೆ ತೆಗೆದರು. ಆಗ ಸಿಎಂ ಇದ್ದ ಎಸ್.ಎಂ ಕೃಷ್ಣ ಅವರು ನನ್ನ ಕರೆದು ನಾನು ಟೈಮ್ ತಗೊಂಡಿದ್ದೇನೆ, ಏನು ಮಾಡುತ್ತೀರಾ ನೀವು ಬೇಗ ತಿಳಿಸಿ ಎಂದು ಕೇಳಿದರು. ಆಗ ನಾನು ಕೆಲಸ ನಿಲ್ಲಿಸುತ್ತೇವೆ ಸರ್ ಎಂದು ಹೇಳಿದೆ. ಅಷ್ಟರಲ್ಲಿ ಸುಧಾಕರ್ ಅವರ ಮತ್ತೊಬ್ಬ ಅಣ್ಣ ನೇಮಿರಾಜ ಅಂತ, ಆತ ನನಗೂ ನಮ್ಮಪ್ಪನ ಡಿಸ್ಟಿಲರಿ ಲೈಸೆನ್ಸಿನಲ್ಲಿ ಪಾಲು ಬರಬೇಕು ಎಂದು ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ಅಷ್ಟರಲ್ಲಾಗಲೇ ನಾಲ್ಕು ಕೋಟಿ ಉದ್ದಿಮೆ ಪ್ರಾರಂಭಿಸಲು ಕೈ ಬಿಟ್ಟಿತ್ತು. ಕೆಲಸದ ಮೇಲೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ಕಂಟ್ರಾಕ್ಟರ್‌ನ ನಾನು ಕರೆದುಕೊಂಡು ಹೋದ ತಪ್ಪಿಗೆ ನನ್ನದೊಂದು ಬೆಂಗಳೂರಿನಲ್ಲಿ ಸೈಟ್ ಇತ್ತು, ಅವತ್ತೆ ಒಂದುವರೆ ಕೋಟಿಗೆ ಬಾಳುತ್ತದೆ. ಅದನ್ನು ಅವನಿಗೆ ಬರೆದುಕೊಟ್ಟೆ. ಇವತ್ತು ಆ ಸೈಟ್ ಬೆಲೆ ಸುಮಾರು 25 ಕೋಟಿ ಆಗಿರಬಹುದು. ಐವತ್ತು ಎಕರೆ ಜಾಗವನ್ನು ಈ ಸುಧಾಕರ್ ಅವರಿಗೆ ಬರೆದು ಕೊಟ್ಟಿದ್ದಕ್ಕೆ ನಾನು ದುಡ್ಡು ತೆಗೆದುಕೊಂಡಿರಲಿಲ್ಲ. ಅದು ಕಂಪನಿಯ ಹೆಸರಿನಲ್ಲಿತ್ತು. ಅದನ್ನ ಮಾರೋಕೆ ಇವರು ಪ್ಲಾನ್ ಮಾಡಿದರು. ಆಗ ನನಗೆ ವಿಷಯ ಗೊತ್ತಾಗಿ ತಡೆ ಮಾಡಿದೆ. ಆಗ ಮಳವಳ್ಳಿ ನರೇಂದ್ರಸ್ವಾಮಿಯ ಮಧ್ಯಸ್ಥಿಕೆಯಲ್ಲಿ ತೀರ್ಮಾನವಾಗಿ ಎರಡು ಕೋಟಿ ಹಣವನ್ನು ನನಗೆ ಕೊಡುವುದು ಎಂದು ಆಯಿತು. ಕೊಡ್ತೀನಿ ಕೊಡ್ತೀನಿ ಎಂದು ಹೇಳಿದ್ದು ಬಿಟ್ಟರೆ, ಈ ಸುಧಾಕರ್ ಹಣ ಕೊಡಲೇ ಇಲ್ಲ. ಈ ಸುಧಾಕರನನ್ನ ಸನ್ಮಾನ್ಯ ಡಿ.ಕೆ ಶಿವಕುಮಾರ್ ಅವರ ಬಳಿ ಕರೆದುಕೊಂಡು ಹೋಗಿ ಪರಿಚಯಿಸಿ ಬಿಟ್ಟಿದ್ದೇ ನಾನು. ಇವತ್ತು ನಮ್ಮನ್ನು ಅಗಲಿರುವುದರಿಂದ ಹೆಚ್ಚು ಹೇಳುವುದು ಸೂಕ್ತವಲ್ಲವೆಂದು ನನಗೂ ಅರಿವಿದೆ. ಆದರೆ 1998ರಿಂದ ಇಲ್ಲಿಯವರೆಗೆ ಎರಡು ಕೋಟಿ ಕೊಡಲೇ ಇಲ್ಲ. ಐವತ್ತು ಎಕರೆಯನ್ನು ಅವರು ಆಗಲೇ ಸುಮಾರು 6 ಕೋಟಿಗೆ ಮಾರಿಕೊಂಡರು. ಸುಧಾಕರ್ ಅವರಿಗೆ ಹೇಳಿ ನನಗೆ ಹಣ ಕೊಡಿಸಿ ಎಂದು ನರೇಂದ್ರ ಸ್ವಾಮಿಯವರಿಗೆ ಹತ್ತಾರು ಬಾರಿ ಹೇಳಿದೆ, ಅವರು ಮಧ್ಯಸ್ಥಿಕೆ ವಹಿಸಿದರೇ ಹೊರತು, ನನಗೆ ಹಣ ಕೊಡಿಸಲಿಲ್ಲ. ಇದು ನನ್ನ ಹಣೆಬರಹ.

ಕೂಡಿ ಬಂದ ಕಂಕಣ



ನನಗೆ ಒಳ್ಳೆಯ ಕಡೆ ಹುಡುಗಿಯ ನೋಡಿ ಮದುವೆ ಮಾಡಬೇಕೆಂದು ನಮ್ಮ ತಂದೆಯವರು ಹುಡುಗಿಯನ್ನ ಹುಡುಕಲು ಶುರು ಮಾಡಿದರು. ಕೆ.ಆರ್ ಪೇಟೆಯ ಪಕ್ಕ ಬರುವ ಮಂದಗೆರೆಯಿಂದ ಎರಡು ಹುಡುಗಿಯರ ಪ್ರಪೋಸಲ್ ಕೂಡ ಬಂತು. ನಾನು ಸಹ ಒಂದು ದಿನ ಹೋಗಿ ನೋಡಿ, ಒಂದು ಹುಡುಗಿಯ ಒಪ್ಪಿಕೊಂಡು ಬಂದಿದ್ದೆ. ನಮ್ಮ ಮಾವನವರಾದ ಶಿವಣ್ಣನವರು, ನಾನು ನೋಡಿದ್ದ ಹುಡುಗಿಯ ನೋಡಿ ಬಂದು ನನಗೆ ಬೈದರು. ಆ ಹುಡುಗಿ ಏನ್ ಚೆನ್ನಾಗಿದೆ, ನಾವು ಒಳ್ಳೆ ಕಡೆ ನೋಡಿ ಮಾಡೋಣ ಎಂದು ಇದ್ದೇವೆ, ನೀನು ಸುಖಾಸುಮ್ಮನೆ ಒಪ್ಪಿಕೊಂಡು ಬಂದಿದ್ದೀಯಲ್ಲ ಎಂದರು. ಆಗ ನಾನು ನಿಮಗೆ ಇಷ್ಟ ಇಲ್ಲ ಎಂದ ಮೇಲೆ, ಬೇರೆ ಕಡೆ ನೋಡಿ ಎಂದು ಆ ಹುಡುಗಿಯ ರಿಜೆಕ್ಟ್ ಮಾಡಿ ಸುಮ್ಮನಾದೆ. ನಾನು ಸೆಕೆಂಡ್ ಇಯರ್ ಡಿಗ್ರಿಯನ್ನು ಆದಿಚುಂಚನಗಿರಿ ಕಾಲೇಜಿನಲ್ಲಿ ಓದುವಾಗ ಸ್ನೇಹಿತರ ಜೊತೆಗೆ ತುರುವೇಕೆರೆಗೆ ಆಗಾಗ ಹೋಗುತ್ತಿದ್ದೆ. ಒಂದು ದಿನ ಅಲ್ಲಿನ ತಂಡಗ ಗ್ರಾಮದ ನನ್ನ ಸ್ನೇಹಿತ, ತುರುವೇಕೆರೆಯ ಅಂದಿನ ಎಂ.ಎಲ್.ಎ. ಆದಂತಹ ರಾಮಕೃಷ್ಣಯ್ಯನವರ ಮನೆಗೆ ಹೋಗುತ್ತಿದ್ದೇನೆ ನೀನು ಬಾ, ಹೋಗಿ ಬರೋಣ ಎಂದು ಜೊತೆಗೆ ಕರೆದುಕೊಂಡು ಹೋದ. ರಾಮಕೃಷ್ಣಯ್ಯನವರ ಮನೆಗೆ ಹೋದೆ. ಅವರಿಗೆ ನಮ್ಮ ತಂದೆ ಚೆನ್ನಾಗಿ ಗೊತ್ತಿದ್ದರು. ನಮ್ಮ ನೋಡಿದ ತಕ್ಷಣ ಚೆನ್ನಾಗಿ ಮಾತನಾಡಿಸಿ, ಕುಳಿತುಕೊಳ್ಳಲು ಹೇಳಿದರು. ಅವರು ಸ್ವಲ್ಪ ಏರು ಧ್ವನಿಯಲ್ಲಿ ಮಾತನಾಡುತ್ತಿದ್ದದ್ದು, ಹಾಲ್ ಪಕ್ಕದಲ್ಲೇ ಕಿಚನ್ ಸಹ ಇತ್ತು. ಅವರು ನಮ್ಮ ಅತ್ತೆಗೆ ಯೇ... ಲೀಲಾ ನಮ್ಮ ನಾಗಮಂಗಲದ ಲಾಳನಕೆರೆಯ ರಾಮೇಗೌಡರ ಮಗ ಶಿವರಾಮೇಗೌಡ ಬಂದಿದ್ದಾನೆ ಕಾಫಿ ಮಾಡಿ ಕೊಡು ಎಂದರು. ಹಾಗೇ ಮುಂದುವರೆದು ನಾವು ನಮ್ಮ ಸುಧಾಗೆ ಅಲ್ಲಿ ಇಲ್ಲಿ ಹುಡುಗನ ಹುಡುಕೋದು ಬ್ಯಾಡ. ಶಿವರಾಮೇಗೌಡನಿಗೆ ಕೊಡೋಣ ಮನೆಯ ಕಡೆಯೂ ಜೋರಾಗಿದ್ದಾರೆ ಎಂದರು. ಆಗ ನಮ್ಮ ಅತ್ತೆ ಸುಮ್ನೆ ಹೋಗಿ ಅದೇನ್ ಕೆಲ್ಸ ನೋಡಿ. ಅವನು ಪೋಲಿಯಂತೆ ಅಂದ್ರು. ಅವರು ಹೇಳಿದ್ದು ನನಗೆ ಕೇಳಿಸಿತು. ಆಗ ನಾನು ಇನ್ನೆಲ್ಲಿ ಹೆಣ್ಣು ಕೊಡ್ತಾರೆ ನಡಿ, ಮುಗಿಯಿತು ನನ್ನ ಕಥೆ ಎಂದು



ವಾಪಸ್ಸಾದೆ. ಆಮೇಲೆ ಸ್ವಲ್ಪ ದಿನ ಹುಡುಗಿಯರ ನೋಡೊದನ್ನ ನಿಲ್ಲಿಸಿದೆ. ಮೂರನೇ ವರ್ಷದ ಡಿಗ್ರಿ ಓದಲು ನಾನು ಚುಂಚನಗಿರಿಯಿಂದ ಹಾಸನಕ್ಕೆ ಹೋದಾಗ ಅಲ್ಲಿ ಸ್ನೇಹಿತರಾಗಿದ್ದ ವೆಂಕಟೇಶ್, ಮಂಜುನಾಥ, ಪಾಂಡುರಂಗ ವಿಠಲ ಹೀಗೆ ನಮ್ಮದೊಂದು ಟೀಮೇ ಇತ್ತು. ಮೂರನೇ ವರ್ಷದ ಡಿಗ್ರಿಯಲ್ಲಿ ಓದುವುದಕ್ಕಿಂತ ಹೆಚ್ಚಾಗಿ ಪಾಂಡುರಂಗ ವಿಠಲನನ್ನ ಕಾಲೇಜ್ ಪ್ರೆಸಿಡೆಂಟ್ ಮಾಡಲು ಹೆಚ್ಚು ಓಡಾಡಿದ್ದೆ ಆಯಿತು. ಕೊನೆಗೆ ಅವನು ಕಾಲೇಜ್ ಪ್ರೆಸಿಡೆಂಟ್ ಸಹ ಆದ. ನಾವೆಲ್ಲ ಟೀಮ್ ಸೇರಿಕೊಂಡು ಇಡೀ ಚಿಕ್ಕಮಗಳೂರು ಮಡಿಕೇರಿಯಲ್ಲಿ ಇರೋ ಬರೋ ಹುಡುಗಿಯರನೆಲ್ಲ ನೋಡಲು ಶುರು ಮಾಡಿದೆವು. ಎಲ್ಲಾ ಮೈಸೂರಿನ ಟೆರಿಶಿಯನ್ ಕಾಲೇಜ್ ಹುಡುಗಿಯರ ತರಹ ಇದ್ದರು. ಯಾರ ಮನೆಗೆ ಹೋದರೂ ಬಿಸ್ಕೆಟು, ಉಪ್ಪಿಟ್ಟು, ಕೇಸರಿಬಾತ್ ಕೊಡುತ್ತಿದ್ದರು. ನಾವು ತಿನ್ನುವುದು, ಹುಡುಗಿಯರನ್ನ ನೋಡಿಕೊಂಡು ಬರುವುದು. ಇದೇ ಕೆಲಸ ಮಾಡುತ್ತಾ ಸುಮಾರು ನೂರಕ್ಕೂ ಹೆಚ್ಚು ಹೆಣ್ಣು ಮಕ್ಕಳ ಮನೆ ಸುತ್ತಿದೆವು. ಈ ಹುಡುಗರು ಸುಮ್ಮನೆ ಹೆಣ್ಣು ಮಕ್ಕಳನ್ನು ನೋಡುವ ಚಾಳಿಯಿಂದಾಗಿ ಹೀಗೆ ನಾಟಕವಾಡುತ್ತಿರಬಹುದು ಎಂದು ತೀರ್ಮಾನಕ್ಕೆ ಬಂದ ಪೋಷಕರು ಬಡಿಯಲು ರೆಡಿಯಾದರು. ಅಷ್ಟರಲ್ಲಿ ನಾವು ಹುಷಾರಾದೋ. ಮತ್ತೆ ಆ ಕಡೆ ತಲೆಹಾಕಲಿಲ್ಲ.. ಅವರ ಮನೆಯಲ್ಲಿದ್ದ ಕೋವಿಗೆ ಹೆದರಿ ಕಾಲ್ಕಿತ್ತೆವು.

ಪಾಂಡವಪುರದ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದ ಹಲಗೇಗೌಡರು ನಮ್ಮ ತಂದೆಯವರಿಗೆ ಒಳ್ಳೆಯ ಸ್ನೇಹಿತರು. ನಮ್ಮ ತಂದೆ ಸಹ ಡಿಸಿಸಿ ಬ್ಯಾಂಕ್ ಸದಸ್ಯರಾಗಿದ್ದರು. ನಮ್ಮ ತಂದೆಯವರು ಹಲಗೇಗೌಡರಿಗೆ ಮಾತನಾಡಿ, ತುರುವೇಕೆರೆಗೆ ಹೋಗಿ ರಾಮಕೃಷ್ಣಯ್ಯನವರ ಬಳಿ ಮತ್ತು ನಮ್ಮ ಅತ್ತೆ ಲೀಲಾ ಅವರ ಬಳಿ ಮಾತನಾಡಲು ಹೇಳಿದಾಗ ಹಲಗೇಗೌಡರು ನಮ್ಮ ಮಾವ ಮತ್ತು ಅತ್ತೆ ಬಳಿ ಮಾತನಾಡಿ ಒಪ್ಪಿಸಿ ಕೊನೆಗೆ ಮದುವೆ ಫಿಕ್ಸ್ ಮಾಡಿದರು. 1981ರಲ್ಲಿ ತಿಪಟೂರಿನಲ್ಲಿ ನನ್ನ ಮತ್ತು ಸುಧಾ ಮದುವೆ ಹಿರಿಯರ ಒಪ್ಪಿಗೆ ಮೇರೆಗೆ ಆಯಿತು. ನನ್ನ ಮದುವೆಗೆ ಎಸ್ ಆರ್ ಬೊಮ್ಮಾಯಿಯವರು ಮತ್ತು ರಾಮಕೃಷ್ಣ ಹೆಗಡೆಯವರು ಕಾಂಟೆಸ್ಸಾ ಕಾರಿನಲ್ಲಿ ಬಂದಿದ್ದರು. ಆಗ ಶ್ರೀನಿವಾಸ ಪ್ರಸಾದ್ ಎಂಪಿ ಇದ್ದರು. ಅವರು ಸಹ ಬಂದಿದ್ದರು, ಎಚ್. ಟಿ. ಕೃಷ್ಣಪ್ಪನವರು, ಆಸ್ಕರ್ ಫರ್ನಾಂಡಿಸ್, ಜಾರ್ಜ್, ಡಾ. ಪರಮೇಶ್ವರ್, ಎಸ್ಎಂ ಕೃಷ್ಣ ಅವರು ಹೀಗೆ ಹಲವು ರಾಜಕೀಯ ಗಣ್ಯಾತಿ ಗಣ್ಯರು ಬಂದು ಹರಸಿದರು. ನಮ್ಮ ಮಾವ ಪ್ರೆಸೆಂಟ್ ಎಮ್ಎಲ್ಎ ಇದ್ದಿದ್ದರಿಂದ ತುಂಬಾ ಜನ ಎಂಎಲ್ಎಗಳು ಸಚಿವರು ಹಾಗೂ ಅಧಿಕಾರಿಗಳು ಸಹ ಬಂದಿದ್ದರು. ನಂತರ 1982ರಲ್ಲಿ ನನ್ನ ಮಗ ಚೇತನ್ ಹುಟ್ಟಿದ. 84ರ ಸಂದರ್ಭದಲ್ಲಿ ಮಗಳು ಭವ್ಯ ಹುಟ್ಟಿದಳು. ಇಬ್ಬರೂ ಹಾಸನದ ಮಿಷನ್ ಆಸ್ಪತ್ರೆಯಲ್ಲಿ ಜನಿಸಿದರು. ಸುಧಾಳ ಸಿಸ್ಟರ್ ಒಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ಹಾಸನದಲ್ಲಿ ಇದ್ದರು. ಅವರ ಮನೆಗೆ ಡೆಲಿವರಿ ದಿನಗಳ ಮೊದಲು ಹೋಗಿ ಉಳಿದುಕೊಂಡು ಅಲ್ಲಿಂದ ಆಸ್ಪತ್ರೆಗೆ ಹೋಗುತ್ತಿದ್ದುದು ನೆನಪಿದೆ. ಸ್ಟೆಲ್ಲಾ ಮೇರಿ ಎಂದು ಬೆಂಗಳೂರಿನ ಎಂ.ಜಿ. ರಸ್ತೆಯ ಕಾರ್ನರ್ ಎದುರಿಗೆ ಇದ್ದ ಶಾಲೆಯಲ್ಲಿ ನನ್ನ ಮಗನನ್ನ ಸೇರಿಸಿದೆ. ಅಲ್ಲಿ ಎರಡು ವರ್ಷ ಓದಿದ. ನಂತರ ಬಿಷಪ್ ಕಾಟನ್‌ಗೆ ಸೇರಿಸಿದೆ. ಆಗ ಬಿಷಪ್ ಕಾಟನ್‌ನಲ್ಲಿ ಸೀಟ್ ಸಿಗುವುದು ತುಂಬಾ ಕಷ್ಟ ಇತ್ತು. ನನ್ನ ಮಗನಿಗೆ ಅರಕಲಗೂಡಿನ ಎ. ಮಂಜು ಸೀಟ್ ಕೊಡಿಸಿದರು. ನನ್ನ ಮಗಳಿಗೆ ಗೋವಿಂದಯ್ಯ ಎಂಬ ಎಸಿಪಿ ಇದ್ದರು, ಅವರು ಕೊಡಿಸಿದರು. ಪಿಯುಸಿ ತನಕ ಇಬ್ಬರೂ ಅಲ್ಲೇ ಓದಿದರು. ಡಿಗ್ರಿ ಓದಲು ಚೇತನ್ ಲಂಡನ್‌ಗೆ ಹೋದ. ಅಲ್ಲಿ ಬ್ರೆನ್‌ಟೆನ್ ಯುನಿವರ್ಸಿಟಿಯಲ್ಲಿ ಪದವಿ ಓದಿ ಬಂದ. ನನ್ನ ಮಗಳು ಅಲ್ಲಿನ ಹೆಸರಾಂತ ಲೀಡ್ಸ್ ಯೂನಿವರ್ಸಿಟಿಯಲ್ಲಿ ಡಿಗ್ರಿ ಮುಗಿಸಿದಳು. ಇದು ನನ್ನ ಪುಟ್ಟ ಸಂಸಾರ.

ನನ್ನದೇ ಒಂದು ಸೂರು ಕಟ್ಟಿಕೊಳ್ಳಲು ನಾನು ಪಟ್ಟ ಪಾಡು...



ನಾನು ಬೆಂಗಳೂರಿಗೆ ಬಂದಾಗ ಹೆಚ್ಚಾಗಿ ಮೆಜೆಸ್ಟಿಕ್ ಬಳಿಯ ಗಾಂಧಿನಗರದ ಕಾನಿಷ್ಕ ಹೋಟೆಲ್ನ ರೂಮ್ ನಲ್ಲಿ ಉಳಿಯುತ್ತಿದ್ದೆ. 1984ರ ಸಂದರ್ಭದಲ್ಲಿ ಒಂದು ರೂಮ್ ಕೀ ನನ್ನ ಬಳಿಯೇ ಯಾವಾಗಲೂ ಇರುತ್ತಿತ್ತು. ಹಣಕಾಸಿನ ಅನುಕೂಲತೆಯಾದಾಗ ಮೂರು ತಿಂಗಳದ್ದೋ, ಆರು ತಿಂಗಳದ್ದೋ ರೂಮ್ ಬಾಡಿಗೆ ಕಟ್ಟಿ ಒಂದು ರೂಮ್ ನಾನೇ ಇಟ್ಟುಕೊಂಡಿದ್ದೆ. ಕಾನಿಷ್ಕದಲ್ಲಿ ಯಾವಾಗ ಜಯರಾಜ್ ಮೇಲೆ ಅಟ್ಯಾಕ್ ಆಯಿತೋ, ಆನಂತರ ಸ್ನೇಹಿತರು ನೀನು ಈ ಹೋಟೆಲ್ನಲ್ಲಿ ಇರೋದು ಬೇಡ ಎಂದು ಸಲಹೆ ನೀಡಿದರು. ನಾನು ಸಹ ಅಟ್ಯಾಕ್ ಆದ ದಿನ ಅಲ್ಲೇ ಇದ್ದೆ. ಈ ಕುರಿತು ನಾನು ಸಹ ತೀರ್ಮಾನ ತೆಗೆದುಕೊಂಡು ಕನಿಷ್ಕಾ ಬಿಟ್ಟೆ.

ನಮ್ಮ ಮಾವನವರು ಎಂಎಲ್ಎ ಇದ್ದರು. ಆಗ ನಾನು ಫ್ಯಾಮಿಲಿ ಸಮೇತ ಅವರಿಗೆ ಶಾಸಕರ ಭವನದಲ್ಲಿ ಕೊಟ್ಟಿದ್ದ ಕೊಠಡಿಗೆ ಶಿಫ್ಟ್ ಆದೆ. ನಂತರ ಶಾಂತಿನಗರದಲ್ಲಿ ಮನೆ ಮಾಡಿಕೊಂಡೆ. ಶಾಂತಿನಗರದಲ್ಲಿ ಮೂರು ಮನೆ ಚೇಂಜ್ ಮಾಡಿದೆ. ಮೊದಲು ಮೂಗ ಎಂದು ಒಬ್ಬ ಓನರ್, ಅವನ ಮನೆಯಲ್ಲಿ ಮೂರರಿಂದ ನಾಲ್ಕು ತಿಂಗಳಿದ್ದೆ. ಆಮೇಲೆ ಸೇಟು ಮನೆಗೆ ಹೋದೆ. ಸೇಟು ಮನೆ ಆದ ಮೇಲೆ ಇನ್ನೊಂದು ಮನೆಗೆ ಹೋದೆ. ಅಷ್ಟರಲ್ಲಾಗಲೇ ನಾನು ಶಾಸಕನಾಗಿದ್ದೆ. ಆ ಮನೆಗೆ ಊಟಕ್ಕೆ ಧರ್ಮಸಿಂಗ್ ಅವರು, ಖರ್ಗೆ ಸಾಹೇಬರು, ಶಾಮನೂರು ಶಿವಶಂಕರಪ್ಪನವರು, ಹೆಚ್.ಸಿ. ಶ್ರೀಕಂಠಯ್ಯನವರು ಹೀಗೆ ಹಲವಾರು ಗಣ್ಯರು ಬಂದಿದ್ದರು. ಆ ಮನೆ ನನಗೆ ಅದೃಷ್ಟದ ಮನೆಯಾಗಲಿಲ್ಲ. ಆ ಮನೆಯಲ್ಲಿ ಇದ್ದಾಗಲೇ ನನಗೆ ಮರ್ಡರ್ ಕೇಸ್ ಆಗಿದ್ದು, ನಾನು ಅರೆಸ್ಟ್ ಆಗಿ ಜೈಲಿಗೆ ಹೋದಮೇಲೆ ನಾನು ಜೈಲಿನಿಂದ ಆರೋಗ್ಯ ಸರಿಯಿಲ್ಲವೆಂದು ಸಾರ್ಕ್ ಸಮ್ಮೇಳನಕ್ಕೆ ಎಂದು



ಮಾಡಿದ್ದ ವಿಕ್ಟೋರಿಯಾ ಆಸ್ಪತ್ರೆಗೆ ಶಿಫ್ಟ್ ಆದಾಗ ಅಲ್ಲಿ ಒಂದು ಅಜ್ಜಿ ಕಸ ಹೊಡೆಯಲು ಬರುತ್ತಿತ್ತು. ಆ ಅಜ್ಜಿ ಶಾಂತಿನಗರದಲ್ಲಿ ನಮ್ಮ ಮನೆಯ ಪಕ್ಕದಲ್ಲಿತ್ತಂತೆ. ಅಲ್ಲಿ ನನ್ನ ನೋಡಿ ಕಂಡುಹಿಡಿದು, ಆ ಮನೆಗೆ ಯಾಕಪ್ಪ ಹೋದೆ, ಮೂರು ಹಾದಿ ಕೂಡಿರುವ ಜಾಗ ಅದು, ಗಾಳಿ ಕಟ್ಟುವ ಜಾಗ, ಮೊದಲು ಆ ಮನೆ ಖಾಲಿ ಮಾಡು ಎಂದು ಹೇಳಿತು. ಆಗ ಶಾಂತಿನಗರದ ಬ್ಲಾಕ್ ಪ್ರೆಸಿಡೆಂಟ್ ಅಪ್ಪಯ್ಯ ಎಂದು ಇದ್ದರು. ಅವರು ಆಗಾಗ ನನ್ನ ನೋಡಲು ಬರುತ್ತಿದ್ದರು. ಅವರಿಗೆ ಒಂದು ಮನೆ ಹುಡುಕಿ ಕೊಡಿ ಎಂದು ಹೇಳಿ ನಾನಿದ್ದ ಮನೆಯನ್ನು ಶೀಘ್ರ ಖಾಲಿ ಮಾಡಲು ನಮ್ಮ ಕುಟುಂಬದವರಿಗೆ ತಿಳಿಸಿದೆ. ಆಗ ಆತ ಒಂದು ಮನೆಯನ್ನು ಹುಡುಕಿದ. ಅವನು ನೋಡಿದ ಮನೆಯ ಓನರ್ ತುರುವೇಕೆರೆಯವರೇ ಆಗಿದ್ದರು. ಅದು ಒಂದು ಫ್ಲೋರ್ ಇತ್ತು, ನಾನು ಓನರ್ ಜೊತೆಗೆ ಮಾತನಾಡಿ ಪರ್ಮಿಷನ್ ತೆಗೆದುಕೊಂಡು ಅಡ್ವಾನ್ಸ್ ಹಣವನ್ನು ಹೆಚ್ಚಿಗೆ ಕೊಟ್ಟು ಎರಡು ಫ್ಲೋರ್ ಹೆಚ್ಚುವರಿ ಅಂತಸ್ತು ಕಟ್ಟಿಕೊಂಡೆ. ಕೆ.ಆರ್ ರೋಡ್‌ನಲ್ಲಿ ಆ ಮನೆ ಇದ್ದದ್ದು. ಮಾಲೀಕ ಬ್ರಾಹ್ಮಣ ಸಮುದಾಯದವರು. ಅವರಲ್ಲಿ ಖರೀದಿಗೆ ಪ್ರಯತ್ನಿಸಿದೆ. ಯಾಕೋ ಅವರು ಮನೆ ಮಾರಲು ಒಪ್ಪಿ ನಂತರ ನಿರ್ಧಾರ ಬದಲಿಸಿಕೊಂಡರು. ನಾನ್ ಬೇರೆ ಎರಡು ಫ್ಲೋರ್ ಮೇಲೆ ಕಟ್ಟಾಗಿತ್ತು. ಇವನು ಬಿಡಲ್ಲ ಎಂದು ಅವರು ತಿಳಿದು ಕೊರಗುವುದಕ್ಕೆ ಶುರು ಮಾಡಿದರು. ಆಮೇಲೆ ನಾನೇ 2000 ಇಸವಿಯಲ್ಲಿ ನನಗೆ ಇದ್ದ ಖಾಲಿ ಸೈಟ್ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ತೀರ್ಮಾನ ಮಾಡಿ ಅವರಿಗೆ ವಾಪಸ್ ಮನೆ ನೀಡಲು ನಿರ್ಧಾರ ಮಾಡಿದೆ.



ಇಂದಿರಾ ನಗರದಲ್ಲಿ ಒಂದು ಜಾಗವಿತ್ತು. ಅಲ್ಲಿ ಕಟ್ಟೋಣ ಎಂದುಕೊಂಡೆ, ನನ್ನ ಹೆಂಡತಿ ಒಪ್ಪಲಿಲ್ಲ. ಜೆ.ಪಿ ನಗರದಲ್ಲಿ ಅಂಬರೀಶ್ ಅವರ ಮನೆ ಮುಂದೆ ಒಂದು ದೊಡ್ಡ ಸೈಟ್ ಇತ್ತು. ಅಲ್ಲಿ ಕಟ್ಟೋಣ ಎಂದು ಸೈಟ್ ಕ್ಲೀನ್ ಮಾಡಿಸಲು ಹೋದೆ, ಅಲ್ಲಿ ಎರಡು ನಾಗರಹಾವು ಮೇಲೆ ಎದ್ದವು. ಸರ್ಪ ಸಂಚಾರ ಇದೆ ಅಂತಾರೆ, ಅಲ್ಲಿ ಬ್ಯಾಡ ಎಂದು ನನ್ನಾಕೆ ಹೇಳಿದಳು. ನಂತರ ಸ್ವಲ್ಪ ದಿನ ಬಾಡಿಗೆ ಮನೆಯಲ್ಲೇ ಕಾಲ ತಳ್ಳಿದೆವು. ನಂತರ ಮಕ್ಕಳ ಮದುವೆ ಮಾಡಬೇಕು, ಸ್ವಂತ ಮನೆ ಇರಬೇಕು ಎಂದು ತೀರ್ಮಾನ ಮಾಡಿ ಕೊನೆಗೆ 2002ರಲ್ಲಿ ಈಗ ಇರುವ ಈ ಬನಶಂಕರಿ ಮನೆ ಕಟ್ಟಲು ಶುರು ಮಾಡಿದೆವು. 2004ರಲ್ಲಿ ಎಲೆಕ್ಷನ್ ಬಂತು ಎಂದು ಇನ್ನೂ ಮನೆ ಸಂಪೂರ್ಣವಾಗಿ ರೆಡಿಯಾಗಿರಲಿಲ್ಲ. ಆಗಲೇ ಬಂದು ಮನೆಗೆ ಸೇರಿಕೊಂಡೆವು. ನಂತರ ಎಲೆಕ್ಷನ್ ಆದ ಮೇಲೆ ಮತ್ತೆ ಎರಡು ವರ್ಷ ಮನೆಯ ಉಳಿಕೆ ಕೆಲಸವನ್ನೆಲ್ಲ ಸಂಪೂರ್ಣವಾಗಿ ಮುಗಿಸಿದ್ದಾಯಿತು.

ಎಲ್ಲರೂ ನಮ್ಮವರೇ ನಾವೆಲ್ಲರೂ ಒಂದೇ...



ಆಗ ತಾನೆ ಎಸ್.ಎಸ್.ಎಲ್.ಸಿ. ಮುಗಿಸಿದ್ದೆ. ನನ್ನಪ್ಪ ತುಮಕೂರು ಜಿಲ್ಲೆಯ ತುರುವೇಕೆರೆ ಎಂ.ಎಲ್.ಎ. ಆಗಿದ್ದರು. ನಾಗಮಂಗಲ ಮತ್ತು ತುರುವೇಕೆರೆ ಅಕ್ಕ ಪಕ್ಕದ ತಾಲೂಕುಗಳು. ಹೀಗಾಗಿ ಸಂಬಂಧ, ವಹಿವಾಟು ಎಲ್ಲ ಮಾಮೂಲಿ. ನನ್ನಪ್ಪನಿಗೆ ಪಾಂಡವಪುರದ ಶಾಸಕರಾಗಿದ್ದ ಹಲಗೇಗೌಡರು ಮತ್ತು ನಾಗಮಂಗಲದ ಹೆಚ್. ಟಿ.ಕೃಷ್ಣಪ್ಪನವರು ನನ್ನ ತಂದೆಗೆ ಮತ್ತು ಲಾಳನಕೆರೆ ರಾಮೇಗೌಡರಿಗೆ ಒಡನಾಡಿಗಳಾಗಿದ್ದರು. ಹಲಗೇಗೌಡರು ನಮಗೆ ಸಂಬಂಧಿಗಳು. ಹೀಗಾಗಿ ನನ್ನ ಅವರ ವರಸ್ವಾಮ್ಯ ಕುರಿತು ಮಾತುಕತೆಯಾಗಿ ಮದುವೆ ನಿಶ್ಚಯವಾಯಿತು. ಹಿರಿಯರ ಒತ್ತಾಸೆಯಿಂದ ಮದುವೆ ತುರುವೇಕೆರೆಯಲ್ಲಿ ಅದ್ಧೂರಿಯಾಗಿ ಜರುಗಿತು. ಗಣ್ಯಾತಿಗಣ್ಯರೆಲ್ಲಾ ಬಂದು ಹರಸಿದರು. ಲಾಳನಕೆರೆಯಲ್ಲಿ ಸಂಸಾರ ಪ್ರಾರಂಭಿಸಿದೆವು. ನನ್ನ ಅತ್ತೆ ಮಾವ ಬಹಳ ಒಳ್ಳೆಯವರು. ಅವರ ಆಶೀರ್ವಾದ ನಮ್ಮ ಕುಟುಂಬದ ಮೇಲೆ ಸದಾ ಇದೆ. ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದ ನಾವು ಸೂಕ್ತ ಮನೆಗಾಗಿ ಹುಡುಕಾಟ ನಡೆಸಿದೆವು. ಅಲ್ಲಿವರೆಗೆ ನಮ್ಮ ತಂದೆಯವರ ಶಾಸಕರ ಭವನದ ಕೊಠಡಿ ಸಂಖ್ಯೆ–9 ರಲ್ಲಿ ಅನಿವಾರ್ಯವಾಗಿ ಉಳಿಯಬೇಕಾಯಿತು. ಆ ಸಮಯದಲ್ಲಿ ಶಿವರಾಮೇಗೌಡರು ಜಿಲ್ಲಾ ಪರಿಷತ್ ಸದಸ್ಯರಾಗಿದ್ದರು. ಎರಡು ಬಾರಿ ಪಕ್ಷೇತರ ಶಾಸಕರಾಗಲು ಜನರ ಪ್ರೀತಿ–ಬೆಂಬಲವೇ ಕಾರಣ. ಆದ್ದರಿಂದ ನಾನು ಗೌಡರಿಗೆ ಒಂದು ಮಾತು ಹೇಳಿದ್ದೇನೆ. ಜನ ನಿಮ್ಮ ಕೈ ಹಿಡಿದು ಬೆಂಬಲಿಸಿದ್ದಾರೆ, ಪ್ರೀತಿಸಿದ್ದಾರೆ, ಹಗಲಿರುಳು ಊಟ, ನಿದ್ದೆ ಬಿಟ್ಟು, ಕಡ್ಲೆಪುರಿ ತಿಂದು ಮನೆಯ ದನ ಕರ ಕುರಿ ಮಾರಿ ಕ್ಷೇತ್ರದ ಜನ ನಿಮ್ಮ ಗೆಲುವಿಗೆ ಶ್ರಮಿಸಿದ್ದಾರೆ. ಆವತ್ತಿಗೆ ನಿಮ್ಮನ್ನ ಪೊರೆದ ಆ ಜನರ ಋಣವನ್ನು ನಾವು ಮರೆಯಬಾರದು. ನಾವು ಬದುಕಿರುವವರೆಗೂ ಅವರಿಗೆ ಋಣಿಯಾಗಿರಬೇಕು ಎಂದು ಇವತ್ತಿಗೂ ಜನರ



ಕಷ್ಟ ಸುಖಗಳಲ್ಲಿ ಭಾಗಿಯಾಗುವ ಅವರ ಜೊತೆ ನಿಲ್ಲುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಾ ಬಂದಿದ್ದೇವೆ. ನಾನು ಗೌಡರಿಗೂ ಅದನ್ನೇ ಹೇಳಿದ್ದೇನೆ. ನಾವು ಇರೋವರೆಗೂ ನಮ್ಮ ಜನರ ಸೇವೆ ಮಾಡಿ ಬದುಕೋಣ. ಜನ ಸೇವೆಯೇ ಜನಾರ್ಧನ ಸೇವೆ ಎಂಬುದು ನಮ್ಮ ನಂಬಿಕೆ.

ನಾನು ವೈಯುಕ್ತಿಕವಾಗಿ ಅಧಿಕಾರಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟವಳಲ್ಲ. ನಮ್ಮ ನೇಚರ್ ಏನೆಂದರೆ, ನಮ್ಮ ಬಳಿ ಇದೆ ಎಂದಾಗ ಕೈಲಾದಷ್ಟು ಜನರಿಗೆ ಸಹಾಯ ಮಾಡೋಣ. ಅಧಿಕಾರವಿರಲಿ ಬಿಡಲಿ, ಇದೇ ನಮ್ಮ ಧ್ಯೇಯ. ಈ ರೀತಿ ಇರಬೇಕೆಂದು ನಮ್ಮ ಅತ್ತೆ, ಮಾವ, ನಮ್ಮ ಅಪ್ಪ ಅಮ್ಮ ತುಂಬಾ ಸಲ ನಮಗೆ ಹೇಳಿಕೊಟ್ಟಿದ್ದಾರೆ, ಹಾಗೇ ನಡೆದುಕೊಳ್ಳುತ್ತಿದ್ದೇವೆ. ಗೌಡರಿಗೆ ತುಂಬಾ ವಿಲ್‌ಪವರ್ ಇದೆ. ಅದು ಅವರಿಗೆ ದೊಡ್ಡ ಶಕ್ತಿ. ಗೌಡರಿಂದ ನಮಗೆ ಎಂದೂ ನೋವಾಗಿಲ್ಲ, ಫ್ಯಾಮಿಲಿ ಎಂದರೆ ಅವರಿಗೆ ಮೊದಲ ಆದ್ಯತೆ. ಈ ವಿಷಯದಲ್ಲಿ ನಾವು ಅದೃಷ್ಟವಂತರು. ಒಳ್ಳೆ ಸೊಸೆ, ಒಳ್ಳೆಯ ಮಕ್ಕಳು ಅವರವರ ಕೆಲಸ ಮಾಡಿಕೊಂಡು ಅನ್ಯೋನ್ಯತೆಯಿಂದ ಹೋಗುತ್ತಿದ್ದಾರೆ. ಟೈಮ್ ಸಿಕ್ಕಾಗ ಎಲ್ಲರೂ ಜೊತೆ ಸೇರುತ್ತೇವೆ, ಸಂತೋಷದಿಂದ ಸಮಯವನ್ನು ಕಳೆಯುತ್ತೇವೆ. ಗೌಡರ ಇನ್ನೊಂದು ವಿಶೇಷ ಗುಣ ಏನೆಂದರೆ, ಅವರು ಮನೆಯಿಂದ ಹೊರಗೆ ಹೋಗುವಾಗ, ಸುಧಾ ನಾನು ಹೋಗಿಬರುತ್ತೇನೆ ಎಂದು ನನಗೆ ಹೇಳಿಯೇ ಹೋಗೋದು, ಹೇಳದೆ ಯಾವತ್ತೂ ಹೋಗೋದಿಲ್ಲ, ಇದು ನನಗೆ ತುಂಬಾ ಇಷ್ಟವಾದ ಗುಣ. ನಾನು ಏನಾದರೂ ಆಸ್ಪತ್ರೆಗೆ ಸೇರಿದರೆ, ನಾನು ವಾಪಸ್ ಮನೆಗೆ ಬರುವವರೆಗೂ ನನ್ನ ಜೊತೆಯಲ್ಲಿಯೇ ಇರುತ್ತಾರೆ, ಆ ರೀತಿಯ ಸ್ವಭಾವ ಅವರದು. ಫ್ಯಾಮಿಲಿ ವಿಷಯದಲ್ಲಿ ತುಂಬಾ ಪ್ರೀತಿ ಅವರಿಗೆ. ನಾನು ಮಕ್ಕಳಿಗೆ, ಮೊಮ್ಮಕ್ಕಳಿಗೆ ಹೆಚ್ಚು ಪ್ರೀತಿ ತೋರಿಸಬೇಡಿ ಎಂದು ಹೇಳಿದರೂ ಕೇಳುವುದಿಲ್ಲ, ಅವರಿಗೆ ಕಷ್ಟ ಗೊತ್ತಾಗಲು ಬಿಡುವುದೇ ಇಲ್ಲ.

ವೈಯುಕ್ತಿಕವಾಗಿ ನನ್ನ ಕಷ್ಟ–ಸುಖದ, ಬೇಕು–ಬೇಡಗಳ ವಿಷಯದಲ್ಲಿ ಗೌಡರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಜೊತೆಗೆ ಮಕ್ಕಳು, ಸೊಸೆ ಹಾಗೆ ನನ್ನ ಸಿಸ್ಟರ್ಸ್‌ಗಳು ನನ್ನ ಜೊತೆಗೆ ಯಾವಾಗಲೂ ಇರುತ್ತಾರೆ. ನಮ್ಮ ತಂದೆ ತಾಯಿ ಬಗ್ಗೆಯಲ್ಲೂ ಗೌಡರಿಗೆ ತುಂಬಾ ಗೌರವ ಇತ್ತು. ಈಗಲೂ ನಮ್ಮ ತಾಯಿ ನಮ್ಮ ಜೊತೆಗೇ ಇದ್ದಾರೆ. ಅಡುಗೆ ವಿಚಾರದಲ್ಲಿ ಗೌಡರಿಗೆ ನಾಟಿ ಸ್ಟೈಲ್ ಬೇಕು, ಊಟದ ವಿಚಾರದಲ್ಲಿ ಸ್ವಲ್ಪ ಶುಚಿಯಾಗಿ, ರುಚಿಯಾಗಾಗಿ ಇರಬೇಕು. ತುಂಬಾ ಹೊರದೇಶಕ್ಕೆ ಹೋಗಿದ್ದೇವೆ. ಅದೆಲ್ಲ ಎಂಟರಿಂದ ಹತ್ತು ದಿನಗಳು ಇರೋಕೆ ಅಷ್ಟೇ ಖುಷಿ, ನಮ್ಮ ದೇಶ, ನಮ್ಮ ಊರೇ ನಮಗೆ ತುಂಬಾ ಇಷ್ಟ.

ನಮ್ಮ ತಂದೆ ತೀರಿಹೋದಾಗ ನಮ್ಮ ತುರುವೇಕೆರೆ ತಾಲ್ಲೂಕಿನ ಜನರೆಲ್ಲಾ ಬಂದು ಎಂ.ಎಲ್.ಎ.ಗೆ ನಿಲ್ಲಿ ಎಂದು ಕರೆದರು. ನನಗೆ ರಾಜಕೀಯದ ಹುಚ್ಚಿಲ್ಲ, ಜೊತೆಗೆ ಶಿವರಾಮೇಗೌಡರೇ ರಾಜಕೀಯದಲ್ಲಿ ಇರುವಾಗ ನಾನು ಹೋಗೋಕೆ ಆಗುತ್ತಾ? ಗೌಡರಿಗೆ ಅವರದೇ ಆದಂತಹ ಗೌರವ, ಬೆಲೆ ಇದೆ. ಅದನ್ನ ಉಳಿಸಿಕೊಳ್ಳುವುದು, ಜೊತೆಗೆ ಗೌರವಿಸೋದು ನಮ್ಮ ಜವಾಬ್ದಾರಿ. ಆದ್ದರಿಂದ ನಾನು ಕೈ ಮುಗಿದು, ನನಗೆ ರಾಜಕೀಯ ಬೇಡಪ್ಪ, ನಾನು ಬರಲ್ಲ ಎಂದು ಹೇಳಿ ಕಳಿಸಿದೆ, ಇಲ್ಲದಿದ್ದರೆ ಆಗಲೇ ನಾನು ಎಂ.ಎಲ್.ಎ.ಗೆ ನಿಲ್ಲಬಹುದಿತ್ತು. ಅಷ್ಟೆಲ್ಲ ನಾನು ಸಹಿಸಿಕೊಂಡು ರಾಜಕೀಯದಿಂದ

ದೂರ ಉಳಿದಿದ್ದರೂ ಸಹ 2023ರಲ್ಲಿ ಬಿ.ಜೆ.ಪಿ.ಯ ಕೆಲ ನಾಯಕರು ಬಿಡದೆ ಕೊನೆಗೂ ನಾಗಮಂಗಲದಿಂದ ಅಭ್ಯರ್ಥಿ ಮಾಡಿ ನಿಲ್ಲಿಸಿದರು. ಆ ಸಂದರ್ಭದಲ್ಲಿ ನಾನು ನಾಲ್ಕೈದು ದಿನ ಮಲಗಿಬಿಟ್ಟೆ, ಮೇಲೆ ಏಳಲೇ ಇಲ್ಲ. ಬೇಡ ಎಂದರೂ ಹೀಗೆ ಮಾಡುತ್ತಿದ್ದಾರಲ್ಲ ಎಂದು. ಕೊನೆಗೂ ಎಲ್ಲರ ಒತ್ತಾಯದಿಂದ ಸ್ಪರ್ದೆ ಮಾಡಬೇಕಾಯ್ತು. ನಾನು ಸಾಕಷ್ಟು ಜನರಿಗೆ ಸಹಾಯ ಮಾಡಿದ್ದೇನೆ. ಸಹಾಯ ಮಾಡಿದ್ದನ್ನು ಹೇಳಿಕೊಳ್ಳಲು ನನಗೆ ಇಷ್ಟವಿಲ್ಲ. ಜೊತೆಗೆ ಸಹಾಯ ಮಾಡಿದ್ದನ್ನು ಹೇಳಿಕೊಳ್ಳಲೂಬಾರದು. ಹೇಳಿಕೊಂಡರೆ ಪ್ರಯೋಜನವಿಲ್ಲ, ಆ ರೀತಿ ನನ್ನ ನೇಚರ್. ಇದೆಲ್ಲ ಎಲೆಕ್ಷನ್‌ಗೆ ವೋಟಾಗಲಿ ಎಂದು ನಾವು ಎಂದೂ ಯೋಚಿಸಿಲ್ಲ. ನಾವು ಜನರಿಗೆ ಸಹಾಯ ಮಾಡಿದ್ದರೂ ಅದು ಅವರಿಗೆ ಎಲೆಕ್ಷನ್ ಸಮಯದಲ್ಲಿ ನೆನಪಿಗೆ ಬರೋದಿಲ್ಲ, ಅವರಿಗೆ ಅವತ್ತಿನದು ಮಾತ್ರ ಕಾಣುತ್ತದೆ. ನಾನು ಜನರನ್ನು ನಂಬಿದ್ದೆ. ಆದರೆ ನನ್ನ ನಂಬಿಕೆ ಹುಸಿಯಾಯಿತು.



ಶ್ರೀಮತಿ ಲೀಲಾವತಿ ಹಾಗೂ ದಿ. ರಾಮಕೃಷ್ಣಯ್ಯ
ಮಾಜಿ ಶಾಸಕರು, ತುರುವೇಕೆರೆ

ಜೀವನದಲ್ಲಿ ಕಷ್ಟ ಸುಖ ಮನುಷ್ಯನಿಗೆ ಸಹಜವಾಗಿ ಬರುತ್ತೆ. ಅದನ್ನೆಲ್ಲ ಜಯಿಸಿ ಮುಂದೆ ಸಾಗುವುದೇ ಜೀವನ, ಅದೇ ನಮ್ಮ ಪಾಲಿಸಿ. ನನಗೆ ಯಾವಾಗಲೂ ಜನ ಇರಬೇಕು, ನನ್ನ ಜೊತೆ ಇರುತ್ತಾರೆ. ಜನ ಜೊತೆಗಿದ್ದರೆ ನನಗೆ ಖುಷಿ, ಯಾರೂ ಇಲ್ಲ ಎಂದರೆ ನನಗೆ ತುಂಬಾ ಹಿಂಸೆ. ಒಬ್ಬಳೇ ಇರೋಕೆ ನನಗೆ ತುಂಬಾ ಬೇಸರವಾಗುತ್ತೆ. ನಾನು ಎಂದೂ ಸಹ ನಮ್ಮ ಮನೆಯ ಕಡೆಯವರು, ನಮ್ಮ ಗಂಡನ ಮನೆಯ ಕಡೆಯವರು ಎಂದು ನೋಡಿಲ್ಲ. ಎಲ್ಲರೂ ನಮ್ಮ ಮನೆಯವರೇ, ನಾವೆಲ್ಲರೂ ಒಂದೇ ಎಂದು ಬೇಧ ಭಾವ ಮಾಡದಂತೆ ಎಲ್ಲರನ್ನೂ ನೋಡಿದ್ದೇನೆ. ಎಲ್ಲರಿಗೂ ನಮ್ಮ ಕೈಲಾದ ಸಹಾಯ ಮಾಡುತ್ತಾ ಬಂದಿದ್ದೇನೆ.

ಗೌಡರಿಗೆ ನಂಜನಗೂಡಿನ ರಸ ಬಾಳೆಹಣ್ಣು ಎಂದರೆ ತುಂಬಾ ಇಷ್ಟ. ಬೇರೆ ಬಾಳೆಹಣ್ಣುಗಳನ್ನು ಅವರು ತಿನ್ನುವುದಿಲ್ಲ. ವಾರಕ್ಕೊಮ್ಮೆ ನಾಲ್ಕೈದು ಚಿಪ್ಪು ಬಾಳೆಹಣ್ಣನ್ನು ನಂಜನಗೂಡಿನಿಂದ ಬಸ್ಸಿಗೆ ಕಳುಹಿಸುತ್ತಾರೆ. ನಮ್ಮ ಮನೆಯ ಕೆಲಸದವರು ಯಾರಾದರೂ ಹೋಗಿ ಸ್ಯಾಟಲೈಟ್ ಬಸ್ ಸ್ಟ್ಯಾಂಡಿನಿಂದ ತೆಗೆದುಕೊಂಡು ಬರುತ್ತಾರೆ. ನಂಜನಗೂಡಿನ ರಸಬಾಳೆಹಣ್ಣು ಇವರಿಗೆ ಊಟದ ನಂತರ ಇರಲೇಬೇಕು. ಅದು ಅವರು ಪಾಲಿಸಿಕೊಂಡು ಬಂದ ಪದ್ಧತಿ.



ಎಲ್ಲರಂತಲ್ಲ ನನ್ನಪ್ಪ

ನಾವು ಚಿಕ್ಕವರಿದ್ದಾಗ ನಮ್ಮ ತಂದೆಯವರು ಪ್ರತಿದಿನ ಹೆಚ್ಚು ಬ್ಯುಸಿ ಇರುತ್ತಿದ್ದರು. ತುಂಬಾ ಕಷ್ಟಪಟ್ಟು ಮೇಲೆ ಬಂದವರು. ಎ ಸೆಲ್ಫ್ ಮೇಡ್ ಮ್ಯಾನ್ ಅಂತಾರಲ್ಲ ಆ ರೀತಿ. ಲಾಳನಕೆರೆ ಪಟೇಲ್ ರಾಮೇಗೌಡರ ಮಗನಾಗಿ ದೂರದ ಲಾಳನಕೆರೆಯಿಂದ ಮಹಾನಗರ ಬೆಂಗಳೂರಿಗೆ ಬಂದು ತಮ್ಮದೇ ಆದಂತಹ ಸಾಮ್ರಾಜ್ಯ ಕಟ್ಟೋಕೆ 40 ವರ್ಷ ಶ್ರಮಿಸಿದ್ದಾರೆ. ಅದರ ಜೊತೆಗೆ ಅವರ ರಾಜಕಾರಣದಲ್ಲಿ ಬಹಳಷ್ಟು ತೊಡುಕುಗಳನ್ನ ನೋಡಿದ್ದಾರೆ. ಅವರನ್ನು ಕಂಡರೆ ಹೆಚ್ಚು ಜನರಿಗೆ ಹೊಟ್ಟೆಕಿಚ್ಚು. ಕಾರಣ ಅವರು ನೇರವಾದಿ. ನೇರವಾದಿ ಎಂದರೆ... ನಿಷ್ಠೂರ ಆಗೋ ರೀತಿಯಲ್ಲಿ ಮಾತನಾಡುವುದು ಅವರು ರೂಢಿಸಿಕೊಂಡು ಬಂದ ಮಾತಿನ ವರಸೆ. ಇದರಿಂದಾಗಿ ಅವರಿಗೆ ಮೊದಲಿನಿಂದಲೂ ಶತ್ರುಗಳಿಗಿಂತ, ಹಿತ ಶತ್ರುಗಳೇ ಜಾಸ್ತಿ.

ಈ ಹೋರಾಟಗಳ ನಡುವೆ ಅವರು ಹೆಚ್ಚು ಸಮಯ ಮೀಸಲಿಟ್ಟು, ಕುಟುಂಬದವರ ಜೊತೆ ಹೆಚ್ಚು ಸಮಯ ಕಳೆಯೋಕೆ ಸಾಧ್ಯವಾಗಲಿಲ್ಲ. ಆದರೆ ನಾವು ಬೆಳಿತಾ ಇದ್ದಂತೆ ನಮಗಾಗಿ ಹೆಚ್ಚು ಸಮಯ ಕಳೆಯೋಕೆ ಶುರು ಮಾಡಿದರು. ನಿಜ ಹೇಳಬೇಕು ಎಂದರೆ, ನಾವಿಬ್ಬರೂ ಅಪ್ಪ ಮತ್ತು ಮಗ ಎನ್ನುವುದಕ್ಕಿಂತ ಹೆಚ್ಚಾಗಿ ಒಳ್ಳೆಯ ಸ್ನೇಹಿತರು, ಅವರು ಮತ್ತು ನನ್ನ



ನಡುವೆ ಒಳ್ಳೆ ಭಾಂದವ್ಯವಿದೆ.



ಕಳೆದ 25 ವರ್ಷದಿಂದ ಅವರ ಬೆನ್ನೆಲುಬಾಗಿ ಪ್ರತಿದಿನ, ಪ್ರತಿ ಕೆಲಸದಲ್ಲೂ ಜೊತೆಗೆ ನಿಂತಿದ್ದೇನೆ. ಅವರು ಅಧಿಕಾರದಲ್ಲಿದ್ದಾಗ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದರೆ ಇವತ್ತು ಜನ ಕೆಲಸ ನೋಡಿ ಗುರುತಿಸುವುದಿಲ್ಲ. 90ರ ದಶಕದ ಹಿಂದಿನ ಕರ್ನಾಟಕದ ರಾಜಕಾರಣವೇ ಬೇರೆ, ಇವತ್ತಿನದೇ ಬೇರೆ.ಒಳ್ಳೆ ಕೆಲಸ ಮಾಡುವವರಿಗೆ, ಹಾಗೆ ಒಳ್ಳೆಯ ವ್ಯಕ್ತಿತ್ವ ನೋಡಿ ಮನೆತನ ನೋಡಿ ಪಾರಂಪರಾಗತವಾಗಿ ವೋಟು ಹಾಕುತ್ತಿದ್ದ ಕಾಲವಿತ್ತು. ಆದರೆ ಈಗ ರಾಜಕಾರಣ ಅನ್ನೋದು ವ್ಯಾಪಾರ ಆಗೋಗಿದೆ, ನನ್ನಪ್ಪ ನಾಗಮಂಗಲದಲ್ಲಿ ಎರಡು ಬಾರಿ ಶಾಸಕರಿದ್ದಾಗ.. ಅದರ ಜೊತೆ ಹೌಸಿಂಗ್ ಬೋರ್ಡ್ ಛೇರ್ಮನ್, ಬಿಡಿಎ ಛೇರ್ಮನ್ ಇದ್ದಾಗಲೆಲ್ಲ ಅದ್ಭುತವಾದ ಕೆಲಸಗಳನ್ನು ಮಾಡಿದ್ದಾರೆ. ಅವರ ಅವಧಿಯಲ್ಲಿ ನಮ್ಮ ನಾಗಮಂಗಲ ತಾಲೂಕಿನ ಬಡ ಜನರಿಗೆ 28 ಸಾವಿರ ಎಕರೆ ಸರ್ಕಾರಿ ಜಮೀನನ್ನು ಗುರ್ತಿಸಿ ಭೂರಹಿತರಿಗೆ, ಕಡುಬಡವರಿಗೆ, ರೈತಾಪಿವರ್ಗಕ್ಕೆ ಒಂದು ರೂಪಾಯಿ ಲಂಚ ಪಡೆಯದೆ ಮಂಜೂರು ಮಾಡಿಸಿ ಕೊಟ್ಟಿದ್ದಾರೆ. ಹಾಗೆ ನಾನು ಕೂಡ ನನ್ನ ತಂದೆಯ ನೆರಳಿನಲ್ಲಿ ರಾಜಕೀಯ ಮಾಡುತ್ತ 25 ವರ್ಷಗಳಿಂದ ನಮ್ಮ ತಾಲೂಕಿನಲ್ಲಿ ಓಡಾಡುತ್ತಿದ್ದೇನೆ. ಪ್ರತಿ ಹಳ್ಳಿಯಲ್ಲೂ ನಿಮ್ಮ ತಂದೆಯವರಿದ್ದಾಗ ಕುಡಿಯುವ ನೀರು ತಂದುಕೊಟ್ಟರು. ಕರೆಂಟ್ ತಂದರು. ಟಾರು ರೋಡ್ ಮಾಡಿಸಿಕೊಟ್ಟರು ಎಂದು ಇವತ್ತಿಗೂ ನೆನೆಯುವ ಹಿರಿಯರು, ಗ್ರಾಮಿಣ ಮಹಿಳೆಯರು ಸ್ಮರಿಸುವುದನ್ನು ಕಂಡಾಗ ನನ್ನ ಅಪ್ಪನ ಬಗ್ಗೆ ಹೆಮ್ಮೆ ಮೂಡುತ್ತದೆ.

ಇವತ್ತಿನ ನನ್ನ ವಾರಿಗೆಯ ಯುವ ಪೀಳಿಗೆಗೆ ಇದೆಲ್ಲ ಅರಿವಿಲ್ಲ. ಇವತ್ತಿನ ಕಾಲದಲ್ಲಿ ಕೆಲಸ ಮಾಡೋದು ದೊಡ್ಡದಲ್ಲ. ಈಗಲೂ ಶಾಸಕರುಗಳು ಕೆಲಸ ಮಾಡುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಇಂತಿಷ್ಟು ಅನುದಾನ ಕ್ಷೇತ್ರಕ್ಕೆ ಬಂದು ಜಮೆಯಾಗುತ್ತದೆ. ವಿಧಾನ ಪರಿಷತ್ ಸದಸ್ಯರಿಗೆ ವರ್ಷಕ್ಕೊಮ್ಮೆ ಎರಡು ಕೋಟಿ ರೂಪಾಯಿ ಅನುದಾನವಿದೆ. ಆದರೆ 30 ವರ್ಷಗಳ ಹಿಂದೆ... ಪ್ರತಿ ಹಳ್ಳಿಗಳಿಗೂ ಮೂಲಭೂತ ಸೌಕರ್ಯ ಒದಗಿಸಲು ತುಂಬಾ ಸವಾಲುಗಳಿದ್ದವು. ಸರ್ಕಾರಗಳಲ್ಲಿ ಈಗಿನ ರೀತಿಯಲ್ಲಿ ಭರಪೂರ ಬಜೆಟ್ ಇರುತ್ತಿರಲಿಲ್ಲ ಆದರೂ ಸಹ ನಮ್ಮ ತಾಲೂಕಿನ ಅಭಿವೃದ್ಧಿಗೆ ದೊಡ್ಡ ಮಟ್ಟದಲ್ಲಿ ಅನುದಾನದ ಹೊಳೆ ಹರಿಸಿರುವ ಹೆಗ್ಗಳಿಕೆ ತಂದೆಯವರಿಗೆ ಸಲ್ಲುತ್ತದೆ. ಅದರಲ್ಲೂ ಆಡಳಿತ ಪಕ್ಷದ ಶಾಸಕರು, ಮಂತ್ರಿಗಳು ಅಧಿಕಾರ ರೂಢ ಮುಖ್ಯಮಂತ್ರಿಗಳ ಮನವೊಲಿಸಿ ಪಕ್ಷೇತರ ಶಾಸಕನೋರ್ವ ಅನುದಾನ ಗಿಟ್ಟಿಸುವುದು ಅಷ್ಟು ಸುಲಭದ ಮಾತಲ್ಲ. ಅದನ್ನು ಸಾಧಿಸಿದ, ಚಾಕಚಕ್ಯತೆಯ ರಾಜಕೀಯ ತಂತ್ರಗಾರಿಕೆ ನನ್ನಪ್ಪನದಾಗಿತ್ತು.

ಅವರು ಮಾಡಿರುವ ಕೆಲಸಗಳು ಕ್ಷಣ ಮಾತ್ರದ ಕಣ್ಣೊರೆಸುವ ತಂತ್ರವಾಗಿರದೆ ಈಗಲೂ ಕಣ್ಣ ಮುಂದೆ ಸಾಕ್ಷಿಯಾಗಿ ಕ್ಷೇತ್ರದಲ್ಲಿ ನೆಲೆ ನಿಂತಿವೆ.





ನಾನು ಡಿಗ್ರಿ ಓದಲಿಕ್ಕೆ ಮೂರು ವರ್ಷ ಇಂಗ್ಲೆಂಡಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ನನ್ನ ನೋಡೋಕೆ ಎರಡು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಬರುತ್ತಿದ್ದರು. ಅವರಿಗೆ ಮಕ್ಕಳು ಎಂದರೆ ತುಂಬಾ ಪ್ರೀತಿ, ಹಾಗೆ ನನ್ನ ಮದುವೆ ಶಾಸ್ತ್ರದ ಸಂದರ್ಭದ ಬಗ್ಗೆ ಹೇಳಬೇಕು... ಒಂದು ಕುಟುಂಬದ ಸಮಾರಂಭ ಮನೆ ಮಂದಿಗೆ ಹಬ್ಬವಾಗಿರುತ್ತದೆ. ಆದರೆ ಕ್ಷೇತ್ರದ ಲಕ್ಷಾಂತರ ಜನರ ಸಮ್ಮುಖದಲ್ಲಿ ದೊಡ್ಡ ಜಾತ್ರೆ ಆಗಿ ಸೃಷ್ಟಿಸಿದ್ದು ನನ್ನ ಅಪ್ಪನ ತಾಕತ್ತು. ಮದುವೆ ಶಾಸ್ತ್ರದ ಹೆಸರಿನಲ್ಲಿ ಐದು ದಿನಗಳು ನಾನು ನಿಂತು ನಿಂತು ಕಾಲು ನೋವು ಬಂದು ಮದುವೆ ಎಲ್ಲಾ ಮುಗಿದ ಮೇಲೆ ಎರಡು ದಿನ ಮಲಗಿ ಬಿಟ್ಟಿದ್ದೆ. ಅಷ್ಟು ಜನ. ನಮ್ಮ ಕುಟುಂಬದ ಮೇಲೆ ಜನರಿಗೆ ಆ ರೀತಿಯ ಪ್ರೀತಿ, ಗೌರವ. ಎಲ್ಲಾ ವರ್ಗದಲ್ಲೂ ತಂದೆಯವರಿಗೆ ಸ್ನೇಹಿತರಿದ್ದಾರೆ. ರಾಜಕೀಯ ಒಂದೇ ಅಲ್ಲ, ಬಿಜಿನೆಸ್ ವಲಯದಲ್ಲಿ, ಚಲನ ಚಿತ್ರರಂಗದಲ್ಲಿ, ಹಾಗೆ ವಕೀಲರು, ನ್ಯಾಯಾಧೀಶರುಗಳು, ನಗರದ ಪ್ರತಿಷ್ಠಿತ ಆಸ್ಪತ್ರೆಯ ಡಾಕ್ಟರ್ಸ್‌ಗಳು, ಎಲ್ಲ ವರ್ಗದ ಅಧಿಕಾರಿಗಳು ಹೀಗೆ ಎಲ್ಲರೂ ನೆರೆದು ಹರಸಲು ಬಂದಿದ್ದರು. 2011ರಲ್ಲಿ ನನ್ನ ಮದುವೆ ಆಯಿತು. ಬಹುಶಃ ಆ ರೀತಿ ಮದುವೆಯನ್ನು ಯಾರು ಮಾಡೋಕೆ ಆಗಲ್ಲ. ತುಂಬಾ ಹಣ ಖರ್ಚು ಮಾಡಿ ಮದುವೆ ಮಾಡಿದ್ದಾರೆ. ಆದರೆ ಆ ರೀತಿ ಎಕ್ಸಿಕ್ಯೂಟ್ ಮಾಡೋದು ಕಷ್ಟ, ಆ ರೀತಿ ತಮ್ಮದೇ ಆದ ಕಲ್ಪನೆಯ ಕಾರ್ಯಕ್ರಮಗಳನ್ನು ಉತ್ತಮವಾಗಿ ಕಾರ್ಯರೂಪಕ್ಕೆ ತರುವುದರಲ್ಲಿ ತಂದೆ ಅವರ ಚಾಕಚಕ್ಯತೆ ಕಾಣಬಹುದು.

"ಮರೆಯಲಾಗದ ಘಟನೆ"

ಒಂದೋ ಎರಡೋ ಹೇಳೋದು ಕಷ್ಟ, ಕಾರಣ ಅವರ ಕಷ್ಟ ಸುಖ, ನೋವು ನಲಿವುಗಳಲ್ಲಿ ಸದಾ ನಾನು ಇದ್ದೇ ಇರುತ್ತೇನೆ, ಆದರಿಂದ ಪ್ರತಿಯೊಂದು ಅವರ ಸೀಕ್ರೆಟ್‌ಗಳು ನನಗೆ ಮತ್ತು ನಮ್ಮ ಅಮ್ಮನಿಗೆ ಗೊತ್ತಿರುತ್ತೆ, ಆದ್ದರಿಂದ ಒಂದೆರಡು ಘಟನೆ ಹೇಳುವುದು ಕಷ್ಟ, ಲಾಟ್ ಆಫ್ ಹ್ಯೂಮರಸ್ ಥಿಂಗ್ಸ್ ಇದ್ದಾವೆ. ಕೆಲವು ಸಲ ಅವರು ಮಾಡಿರುವ ತಪ್ಪಿಗೆ ನಾವು ನಕ್ಕಿರೋದು ಇದೆ. ಬೇಸರ ಮಾಡಿಕೊಂಡು ಕೆಲವು ಮಾತುಗಳನ್ನು ಹೇಳಿರೋದು ಇದೆ. ಪ್ರತಿದಿನ ಏನಾದರೂ ಒಂದನ್ನು ಜೀವನದಲ್ಲಿ ಕಲಿಯೋದು ಇದ್ದೇ ಇರುತ್ತೆ. ಹಾಗೇ ಅರ್ಥ ಮಾಡಿಕೊಳ್ಳೋದು ಕೂಡ. ಆದರಿಂದ ಒಂದು ಎರಡು ಹೇಳೋದು ಕಷ್ಟ. ನಾನು ಅವರ ಜೊತೆ ಇದ್ದೇನೆ ಎಂದರೆ, ನಾನು ಅವರ ಕೈ ಹಿಡಿದುಕೊಂಡರೆ ಅವರಿಗೆ ಆನೆಬಲ ಇದ್ದ ಹಾಗೆ. ಅವರಿಗೆ ನನ್ನ ಮಗ ನನ್ನ ಜೊತೆಗಿದ್ದಾನೆ ಎಂಬ ನಂಬಿಕೆ. ಆದರಿಂದ ನಾನು ಯಾವಾಗಲೂ ಅವರ ಜೊತೆ ಇರುತ್ತೇನೆ. ಅವರಿಗೆ ನಾವು ತುಂಬಾ ಧೈರ್ಯ ಹೇಳುವಷ್ಟು ದೊಡ್ಡವನಲ್ಲ. ಆರೋಗ್ಯದಲ್ಲಿ ಏನಾದರೂ ಏರುಪೇರು ಆದಾಗ ಸ್ವಲ್ಪ ಟೆನ್ಶನ್ ಆಗುತ್ತಾರೆ. ಆ ಸಂದರ್ಭಗಳಲ್ಲಿ ನಾವು ಇದ್ದೇವೆ ಆರಾಮಾಗಿರಿ. ಎಂತೆಂತದ್ದೋ ಫೈಟ್ ಮಾಡಿದ್ದೀರಿ, ಇದ್ಯಾವುದೊ ಸಣ್ಣ ವಿಷಯಕ್ಕೆ ಗಾಬರಿಯಾಗುತ್ತೀರಲ್ಲಾ. ಎಂದು ಧೈರ್ಯ ಹೇಳಿದ್ದೇವೆ.

ಬೇರೆ ವಿಷಯಗಳಲ್ಲಿ ಅವರೇ ನಮಗೆ ಧೈರ್ಯ ಹೇಳುತ್ತಾರೆ.

ಕುಟುಂಬ ಎಂದ ಮೇಲೆ ಕೆಲವೊಮ್ಮೆ ಸಣ್ಣಪುಟ್ಟ ಮಾತುಗಳು ಬರುತ್ತೆ, ಹೋಗುತ್ತೆ .ಹಾಗೆ ಸಣ್ಣದಾಗಿ ನೋವು ಸಹ ಆಗುತ್ತೆ. ಇದೆಲ್ಲಾ ಪ್ರತಿ ಮನೆಯಲ್ಲೂ ನಡೆಯುವಂತಹ ಸಹಜ ಪ್ರಕ್ರಿಯೆ. ನಮ್ಮ ಮನೆಯಲ್ಲೂ ಸಣ್ಣಪುಟ್ಟ ಘಟನೆಗಳು ನಡೆದಾಗ ಅವರಿಂದ ನಮಗೆ, ನಮ್ಮಿಂದ ಅವರಿಗೆ ನೋವು ಆಗಿದೆ, ಹೋಗಿದೆ ಅದೆಲ್ಲ ತಲೆಯಲ್ಲಿ ಹಾಕಿಕೊಳ್ಳೋಕೆ ಆಗಲ್ಲ. ಅದರಲ್ಲೂ ರಾಜಕೀಯದ ಕುಟುಂಬ ಎಂದಾಗ ಸಾರ್ವಜನಿಕರ ವಲಯದಲ್ಲಿ ಇದ್ದಾಗ ಸ್ವಲ್ಪ ಇವೆಲ್ಲ ಮಾಮೂಲು. ಅದೆಲ್ಲಾ ಮರೆತು ಮುಂದೆ ಹೋಗುತ್ತಿರಬೇಕು.

ಅಧಿಕಾರ ಇಲ್ಲದಿದ್ದರೂ ಸದಾಕಾಲ ಜನರ ಸೇವೆಯಲ್ಲೇ ತೊಡಗಿಸಿಕೊಂಡಿರುತ್ತಾರೆ. ರಾಜಕಾರಣಿಗೆ ಇರಬೇಕಾದ ಬದ್ಧತೆ ಅದು. ಜನರೊಟ್ಟಿಗೆ ಅಧಿಕಾರ ಇದ್ದಾಗ ಇರುತ್ತೇವೆ. ಅಧಿಕಾರ ಇಲ್ಲದಿದ್ದಾಗ ಇರುವುದಿಲ್ಲ ಎಂಬ ಮನೋಭಾವ ಇರುವವರು ಸಾರ್ವಜನಿಕ ವಲಯಕ್ಕೆ ಬರಬಾರದು. ತಂದೆಯವರಿಗೆ ಸುಮಾರು 25 ವರ್ಷಗಳಿಂದ ಅಧಿಕಾರವಿಲ್ಲದಿದ್ದರೂ ಅವರು ನಾಗಮಂಗಲದ ಮನೆಗೆ ಪ್ರತಿ ಶುಕ್ರವಾರ ಬರುತ್ತಾರೆ. ಅವರು ಬರುತ್ತಿದ್ದೇನೆ ಎಂದು ಒಂದು ಸಂದೇಶವನ್ನು ತಾಲೂಕಿಗೆ ತಿಳಿಸಿದರೆ ಆ ದಿನ ಸುಮಾರು 300 ರಿಂದ 400 ಜನ ಬಂದು ತಂದೆಯವರನ್ನ ಭೇಟಿ ಮಾಡಿ ಅವರ ಕಷ್ಟ ಸುಖಗಳನ್ನ ಹೇಳಿಕೊಳ್ಳುತ್ತಾರೆ. ತುಂಬಾ ಜನಕ್ಕೆ ಅಲ್ಲೇ ತಂದೆಯವರು ಪರಿಹರಿಸುವ ಕೆಲಸವನ್ನು ಮಾಡುತ್ತಾರೆ ಜೊತೆಗೆ ಅಧಿಕಾರಿಗಳೊಟ್ಟಿಗೆ ಉತ್ತಮವಾದ ಬಾಂಧವ್ಯ ಅಪ್ಪ ಅವರಿಗಿದೆ. ಆದ್ದರಿಂದ ಅಧಿಕಾರಿಗಳ ಕಡೆಯಿಂದ ತುಂಬಾ ಚೆನ್ನಾಗಿ ಕೆಲಸ ಮಾಡಿಸುತ್ತಾರೆ. ರಾಜ್ಯಮಟ್ಟದ ಅಧಿಕಾರಿಗಳಿರಲಿ, ರಾಷ್ಟ್ರಮಟ್ಟದ ಅಧಿಕಾರಿಗಳಿರಲಿ ನೇರವಾಗಿ ಮಾತನಾಡಿ ಕೆಲಸ ಮಾಡಿಸುತ್ತಾರೆ. ಕಾರಣ ಇವರು ಅಧಿಕಾರದಲ್ಲಿದ್ದ ಅವಧಿಯಲ್ಲಿ ಯಾವ ಅಧಿಕಾರಿಯ ಬಳಿಯೂ ಲಂಚ ಪಡೆದಿಲ್ಲ. ನಿರ್ಮಲ ಮನಸ್ಸಿನ ಜನರ ಜನೋಪಯೋಗಿ ಕಾರ್ಯಕ್ಕಾಗಿ ದುಂಬಾಲು ಬಿದ್ದು, ಕೆಲವೊಮ್ಮೆ ಕೋರಿಕೆಯಿಂದ, ಅಧಿಕಾರ ವಾಣಿಯಿಂದ ಅದಕ್ಕೂ ಬಗ್ಗದಿದ್ದರೆ ಇದೆಯಲ್ಲ ವರ್ಗಾವಣೆ ಮಾಡಿಸಿ, ಬೇರೊಬ್ಬನನ್ನು ಆ ಸ್ಥಾನಕ್ಕೆ ಪ್ರತಿಷ್ಠಾಪಿಸಿ ಜನಪರ ನಿಲ್ಲುವ ನನ್ನಪ್ಪನ ಕಾರ್ಯ ಶೈಲಿ ನನಗಿಷ್ಟ, ಆದರೆ ಅದನ್ನು ಅನುಸರಿಸಲಾಗದು.



ನನ್ನ ಮಗ ಅಹನ್‌ಗೌಡ ಜೊತೆ...



ಅವರು ನನ್ನ ಮಾವ ಅಲ್ಲ ; ಅಪ್ಪಾಜಿ

-ಡಾ. ಶ್ರುತಿಗೌಡ



ನಾನು ನಮ್ಮ ಮಾವನವರನ್ನು ಅಪ್ಪಾಜಿ ಎಂದೇ ಕರೆಯುವುದು. ನಮ್ಮ ತಂದೆಯವರು ಹಾಗೂ ಮಾವನವರು ಹಾಸನದಲ್ಲಿ ಕಾಲೇಜ್ ಫ್ರೆಂಡ್ಸ್ ಎಂದು ಗೊತ್ತಾಯಿತು. ನಮ್ಮ ತಂದೆ ಹೆಸರು ನಾಗರಾಜ್ ಅಂತ. ನಮ್ಮ ತಂದೆಯವರು ಆಗಾಗ ಇವರು ಕಾಲೇಜ್ ದಿನಗಳಲ್ಲಿ ಜೀಪ್ ತೆಗೆದುಕೊಂಡು ಕಾಲೇಜಿಗೆ ಬರುತ್ತಿದ್ದ ಸ್ಟೋರೀಸ್ ಹಾಗೆ ಇವರು ಕಾಲೇಜಿನಲ್ಲಿ ಹೇಗೆಲ್ಲಾ ಇರುತ್ತಿದ್ದರು ಎಂಬುದನ್ನು ನೆನಪು ಮಾಡಿಕೊಂಡು ನಮಗೆಲ್ಲ ಹೇಳುತ್ತಿದ್ದರು. ಆಗಿನಿಂದಲೇ ತುಂಬಾ ಡೇರಿಂಗ್ ನೇಚರ್ ಇವರದು.

ನಮ್ಮ ಮಾವನವರಿಗೆ ಲೀಡರ್‌ಶಿಪ್ ಕ್ವಾಲಿಟಿ ಜೊತೆಗೆ ನಮ್ಮ ಮಾವನವರಿಗೆ ತುಂಬಾ ಹೆಲ್ಪಿಂಗ್ ನೇಚರ್ ಇದೆ. ಯಾರೇ ಬಂದು ಏನೇ ಕೇಳಿದರೂ ಅದು ಹಣದ ವಿಷಯ ಇರಲಿ, ಕೆಲಸದ ವಿಷಯ ಇರಲಿ ಅವರ ಕೈಲಾಗುತ್ತೆ ಅನ್ನೋದನ್ನ 100% ಮಾಡುತ್ತಾರೆ. ಹಾಗೆ ಸುಮ್ಮನೆ ವಾಪಸ್ ಕಳಿಸೋಲ್ಲ. ಅವರು ಅಧಿಕಾರದಲ್ಲಿ ಇದ್ದಿದ್ದರೆ, ಇನ್ನೂ ಸಾಕಷ್ಟು ಜನರಿಗೆ ಸಹಾಯ ಮಾಡುತ್ತಿದ್ದರು. ಆದರೆ ರೂಲಿಂಗ್‌ನಲ್ಲಿ ಇಲ್ಲದಿದ್ದರೂ ಸಹ ಜನರ ಸೇವೆಯನ್ನ ನಿಲ್ಲಿಸಿಲ್ಲ. ನಾನು ಈ ಮನೆಗೆ ಬಂದ ಮೇಲೆ ಹೆಲ್ಪಿಂಗ್ ನೇಚರನ್ನ ಕಲಿತೆ.

ನಮ್ಮ ಮಾವನವರು ನಾನು ಮದುವೆಯಾದಾಗಿನಿಂದ ಯಾವತ್ತೂ ನನ್ನನ್ನ ಹೆಸರಿಡಿದು ಕರೆದೇ ಇಲ್ಲ. ಅವರು ನನ್ನ ಅವ್ವ ಎಂದೇ ಕರೆಯುವುದು. ಆ ಪದ ಕೇಳಿದ್ದೇ ಈ ಮನೆಗೆ ಬಂದ ಮೇಲೆ. ಅವ್ವ ಪದದ ಅರ್ಥ ಗೊತ್ತಿತ್ತು ಆದರೆ ಈ ರೀತಿ ಕರೆಯುವುದನ್ನ ನಾನು ನೋಡಿರಲಿಲ್ಲ. ಆದರೆ ಈ ಮನೆಗೆ ಬಂದ ಮೇಲೆ ನನ್ನನ್ನ ಅವಣ್ಣಿ, ಅವ್ವ ಎಂದೇ ಕರೆಯುತ್ತಾರೆ.

ಇವತ್ತು ಫೋನ್ ಮಾಡಿದರೂ ಅವರು ಮೊದಲು ಶುರು ಮಾಡುವುದೇ ಅವ್ವ ಎಂದು. ನಮಗೆ ಅವರ ಮೇಲೆ ಏನೇ ಕೋಪ ಇದ್ದರೂ ಅವರು ಒಂದು ಬಾರಿ ಅವ್ವ ಎಂದಾಕ್ಷಣ ಅದೆಲ್ಲ ತಣ್ಣಗಾಗುತ್ತೆ. ಅವರು ಅವ್ವ ಎಂದು ನಮ್ಮ ಮನೆಗೆ ಬರುವ ಅತ್ತೆಯ ಮನೆ ಕಡೆಯವರಿಗೆ, ಕೆಲವು ಕಜಿನ್ಸ್ ಹೆಣ್ಣುಮಕ್ಕಳಿಗೆ ಅವರು ಶುರು ಮಾಡುವುದೇ ಅವ್ವ ಎಂದು ಕರೆಯುವುದರ ಮೂಲಕ.

ನಾನು ನೋಡಿದಂತಹ ಒನ್ ಆಫ್ ದ ಸ್ಪೆಷಲ್ ತಂದೆ ಕ್ಯಾರೆಕ್ಟರ್ ನಮ್ಮ ಮಾವ. ಅವರು ಇಲ್ಲಿಯವರೆಗೂ ತುಂಬಾ ರೋಲ್ ಮಾಡಿದ್ದಾರೆ. ಪೊಲಿಟಿಷಿಯನ್ನಾಗಿ, ಅಣ್ಣನಾಗಿ, ತಮ್ಮನಾಗಿ, ಅಪ್ಪನಾಗಿ, ಸ್ಪೆಷಲಿ ಬೆಸ್ಟ್ ಫಾದರ್ ಅಂಡ್ ವೆರಿ ಗುಡ್ ಹಸ್ಬೆಂಡ್, ಫ್ಯಾಮಿಲಿ ಒರಿಯೆಂಟೆಡ್ ಪರ್ಸನ್ ಅವರು. ಸಿ.ಎಂ ಜೊತೆ ಇರಲಿ, ಡಿಸಿಎಂ ಜೊತೆ ಇರಲಿ, ಮನೆಯವರಿಂದ ಫೋನ್ ಕಾಲ್ ಹೋದರೆ ಪಿಕ್ ಮಾಡುತ್ತಾರೆ. ಬಿಜಿ ಇದೀನಿ ಎಂದು ಹೇಳಲ್ಲ. ಮನೆಯವರಿಗೆ ಅಷ್ಟು ಇಂಪಾರ್ಟೆನ್ಸ್ ಕೊಡುತ್ತಾರೆ. ಅದನ್ನು ನಾನು ಈ ಮನೆಯಲ್ಲಿ ನೋಡಿ ಅದರಲ್ಲೂ ಮಾವನವರ ನೋಡಿ ಕಲಿತದ್ದು. ಸಣ್ಣ ಪುಟ್ಟ ಬಿಜಿನೆಸ್ ಇರುವವರೇ ಮನೆ ಕಡೆಯಿಂದ ಫೋನ್ ಹೋದಾಗ ಬ್ಯುಸಿ ಇದ್ದೇವೆ ಎಂದು ಹೇಳುವವರಿದ್ದಾರೆ. ಆದರೆ ನಮ್ಮ ಮಾವ ಫ್ಯಾಮಿಲಿ ವಿಷಯದಲ್ಲಿ ಯಾವತ್ತೂ ಆ ರೀತಿ ನಡೆದುಕೊಂಡಿಲ್ಲ. ಹಣಕಾಸಿನ ವಿಷಯದಲ್ಲಿ ತುಂಬಾ ಧಾರಾಳತನವಿದೆ. ಇನ್ನು ನಮಗೆ ಜವಾಬ್ದಾರಿಗಳನ್ನ ನಿಧಾನವಾಗಿಯೇ ಕೊಟ್ಟದ್ದು, ಮೊದಲು ಕೆಲಸ ಹೇಗೆ ಮಾಡುತ್ತಾರೆ ಎಂದು ನೋಡುತ್ತಾರೆ. ನಂತರ ನಮ್ಮ ಕೆಲಸದ ಮೇಲೆ ಅವರಿಗೆ ನಂಬಿಕೆ ಬಂದಾಗ ಜವಾಬ್ದಾರಿ ಕೊಡುತ್ತಾರೆ. ನನಗೂ ಹಾಗೆ ಮಾಡಿದ್ದು.

ಇಷ್ಟು ಜನರನ್ನ ಸಂಬಾಳಿಸುವುದು ಕಷ್ಟ. ಕಾರಣ ಮೊದಲ ಫ್ಲೋರ್‌ನಲ್ಲಿ ಯಾರೇ ಬಂದು ತಟ್ಟೆ ತೆಗೆದುಕೊಂಡು ಊಟಕ್ಕೆ ಕುಳಿತುಕೊಂಡರೂ ಅವರು ಊಟ ಮುಗಿಸುವವರೆಗೂ ನೀನು ಯಾರು ಎಂದು ಕೇಳಲ್ಲ. ಊಟವಾದ ಮೇಲೆನೇ ಅವರ ಬಗ್ಗೆ ವಿಚಾರಿಸಿ ಕಳಿಸೋದು, ಅಷ್ಟು ಫ್ರೀ ಬಿಟ್ಟಿದ್ದಾರೆ ನಮ್ಮ ಮನೆಯಲ್ಲಿ. ಈ ರೀತಿ ಎಲ್ಲರ ಮನೆಯಲ್ಲೂ ಇರುವುದಿಲ್ಲ. ಅದನ್ನ ನೋಡಿದ್ದು ನಾನು ಇಲ್ಲೇ ಮೊದಲು. ಹಳ್ಳಿ ಸ್ಟೈಲ್ ಊಟ ಅವರಿಗೆ ತುಂಬಾ ಇಷ್ಟ, ಮುದ್ದೆ, ಕಾಳ್ ಸಾಂಬಾರು ಈ ತರ. ನಾನ್–ವೆಜ್ ಅವರು ಜಾಸ್ತಿ ಇಷ್ಟಪಡಲ್ಲ.

ನಾನು ಸೆಂಟ್ರಲ್ ಗೌರ್ನಮೆಂಟ್ ಕಡೆಯಿಂದ ಯೋಗ ತೆರಪಿಸ್ಟ್ ಕೂಡ, ಜಗ್ಗೇಶ್ ಸರ್ ವೈಫ್ ಪರಿಮಳ ಮೇಡಂ ಅವರು ಡಯಟೀಶಿಯನ್ ಅವರನ್ನು ಮನೆಗೆ ಕರೆಸಿಕೊಂಡು ಡ್ಯಾಡಿಗೆ ಡಯಾಬಿಟಿಸ್ ಕಂಟ್ರೋಲ್‌ಗೆ ತಂದು, ಜೊತೆಗೆ ಯೋಗಾಗೆ ಜಾಯಿನ್ ಮಾಡಿ, ಪರ್ಸನಲ್ ಟ್ರೈನರ್‌ನ ಇಟ್ಟಿದ್ದೇವೆ. ಮಾವನವರು ಕೂಡ ಚೆನ್ನಾಗಿಯೇ ಯೋಗ ಮಾಡುತ್ತಾರೆ. ಹೇಳಿಕೊಟ್ಟಿದ್ದನ್ನ ತುಂಬಾ ಚೆನ್ನಾಗಿ ಮಾಡುತ್ತಾರೆ. ಅವರು ಈ ಏಜ್‌ನಲ್ಲಿ ಆ ರೀತಿ ಆಕ್ಟಿವ್ ಆಗಿ ಲೇಜಿನೆಸ್ ಇಲ್ಲದೆ ಇರೋದು ತುಂಬಾ ಖುಷಿ. ಅವರಿಗೆ ಎನರ್ಜಿ ಡ್ರಾಪ್ ಆಗಿರುವುದನ್ನ ನಾನು ನೋಡೇ ಇಲ್ಲ. ಅವರ ಮೆಂಟಾಲಿಟಿ ಹೇಗಿದೆ ಎಂದರೆ, ನಾವಾದರೆ ಅವರ ಏಜಿಗೆ ಸಾಕಪ್ಪ ಎಲ್ಲಾ ಮುಗಿಯಿತು, ಮಕ್ಕಳ ನೋಡಿಕೊಂಡು ಆರಾಮಾಗಿ ಇರೋಣ ಅಂದು ಕೊಳ್ಳುತ್ತೇವೇನೋ. ಆದರೆ ಅವರ ಬಾಯಲ್ಲಿ ಆ ರೀತಿ ಹೇಳಿಸೋಕೂ ಅಸಾಧ್ಯ, ಅಷ್ಟು ಎನರ್ಜಿಯಿಂದ ದಿನ ಇರುತ್ತಾರೆ. ಇನ್ನೂ ಎಲ್ಲವನ್ನೂ ನಾನೇ ಮಾಡುತ್ತೇನೆ ಎಂಬ ಅವರ ಛಲವೇ ನಮಗೆ ದೊಡ್ಡ ಸ್ಫೂರ್ತಿ. ಎಲೆಕ್ಷನ್ ಟೈಮಿನಲ್ಲಿ ಒಂದೊಂದು ಬಾರಿ ಮಧ್ಯರಾತ್ರಿ ಎರಡು ಗಂಟೆಗೆ, 3 ಗಂಟೆಗೆ ಬಂದು ಮಲಗುತ್ತಾರೆ. ಆದರೂ ಸಹ ಬೆಳಿಗ್ಗೆ 7 ಗಂಟೆ ಒಳಗೆ ಎದ್ದು ಯೋಗ ಮಾಡುತ್ತಾ ಇರುತ್ತಾರೆ. ಅದನ್ನ ನೋಡಿದಾಗ ನಮಗೆ ಒಮ್ಮೊಮ್ಮೆ ನಾಚಿಕೆ ಆಗುತ್ತೆ. ಈ ಏಜಿನಲ್ಲಿ ಅಪ್ಪಾಜಿನೇ ಇಷ್ಟು ಆಕ್ಟಿವ್ ಆಗಿರುವಾಗ ನಾವು ಯಾಕೆ ರೆಸ್ಟ್ ಮಾಡಬೇಕು ಎಂದು ಇನ್ಸ್‌ಪೈರ್ ಆಗುತ್ತೇವೆ. ಅಷ್ಟು ಹಾರ್ಡ್ ವರ್ಕಿಂಗ್ ನಮ್ಮ ಅಪ್ಪಾಜಿಯವರದು.



ನನ್ನ ತಂದೆಯೇ ನನಗೆ ಶಕ್ತಿ

-ಭವ್ಯ ಗೌಡ



ಪ್ರತಿ ಹೆಣ್ಣು ಮಕ್ಕಳಿಗೂ ಅವರ ತಂದೆನೇ ಸೂಪರ್ ಹೀರೋ, ಹಾಗೆ ನನ್ನ ತಂದೆನೇ ನನಗೆ ಸೂಪರ್ ಹೀರೋ. ನನ್ನ ಪ್ರಪಂಚ, ನನ್ನ ಕನಸು, ನಮ್ಮ ತಂದೆ. ಅವರು ಎಷ್ಟೇ ಕಷ್ಟ ಅನುಭವಿಸಿದರೂ ಸಹ ನಮ್ಮ ಮೇಲೆ ಆ ಕಷ್ಟದ ನೆರಳು ಬೀಳದಂತೆ ಸಾಕಿರುವ ಹೆಗ್ಗಳಿಕೆ ಅವರಿಗೆ ಹೋಗುತ್ತದೆ. ನಮ್ಮ ತಾತನವರ ನೋಡಿನೇ ಇವರಿಗೆ ಲೀಡರ್ ಕ್ವಾಲಿಟಿ ಬಂದಿರುವುದು. ಜನರೊಟ್ಟಿಗೆ ಬೆರೆಯಬೇಕೆಂದರೆ ಯೋಗ್ಯತೆ ಮತ್ತು ಅರ್ಹತೆ ಇರಬೇಕು. ಆ ಯೋಗ್ಯತೆ ಅರ್ಹತೆ ಜನರೊಟ್ಟಿಗೆ ಇವರು ಉಳಿಸಿಕೊಂಡು ಬೆಳೆಸಿಕೊಂಡು ಜಿಲ್ಲಾ ಪಂಚಾಯಿತಿಯಲ್ಲಿ ಗೆಲ್ಲುವ ಮೂಲಕ ರಾಜಕೀಯಕ್ಕೆ ಎಂಟ್ರಿ ಆಗಿ ನಂತರ ಎಂಎಲ್‌ಎ ಆಗಿ, ಹೌಸಿಂಗ್ ಬೋರ್ಡ್ ಚೇರ್ಮನ್ ಆಗಿ, ಬಿಡಿಎ ಚೇರ್ಮನ್ ಆಗಿ, ಎಂಪಿ ಆಗಿ ಇಲ್ಲಿಯವರೆಗೂ ಜನಸೇವೆ ಮಾಡುತ್ತಾ ಇದ್ದಾರೆ.

ಹಿರಿಯರಿಗೆ, ಮನೆಗೆ ಬರುವ ಗೆಸ್ಟ್‌ಗಳಿಗೆ ಗೌರವದಿಂದ ನಮಸ್ಕರಿಸು, ಪ್ರೀತಿಯಿಂದ ಮಾತನಾಡಿಸು ಎಂದು ಹೇಳಿಕೊಟ್ಟಿದ್ದಾರೆ. ನನ್ನ ಲೈಫನ್ನ ಡಿಸಿಪ್ಲಿನ್ನಾಗಿ ರೂಢಿ ಮಾಡಿಕೊಳ್ಳುವುದಕ್ಕೆ ತಂದೆಯವರೇ ಸ್ಫೂರ್ತಿ. ನನ್ನ ಮಗಳು ಹೆಣ್ಣು ಮಗಳು ಎಂದು ನನ್ನನ್ನು ಮನೆಯಲ್ಲಿ ಕೂರಿಸಲಿಲ್ಲ. ನನಗೆ ಯಾವುದು ಇಷ್ಟ ಆಗುತ್ತೋ ಅದನ್ನ ಮಾಡು ಮಗಳೇ ಎಂದು ತುಂಬಾ ಫ್ರೀಡಂ ಕೊಟ್ಟ ಕಾರಣದಿಂದ ನಾನು 2010ರಲ್ಲಿ ಮಿಸ್ ಅರ್ಥ್ ಆದೆ. ಇಂಗ್ಲೆಂಡ್‌ನ ಪ್ರತಿಷ್ಠಿತ ಲೀಡ್ಸ್ ವಿಶ್ವವಿದ್ಯಾನಿಲಯದಲ್ಲಿ 3 ವರ್ಷಗಳ ಕಾಲ ಎಂಬಿಎ ಪದವಿ ವಿದ್ಯಾಭ್ಯಾಸ ಮಾಡಿ, ಡಾಕ್ಟರೇಟ್ ಪಡೆದುಕೊಂಡೆ.

'ನಿಮ್ಮ ಜೊತೆಗೆ ನಾನಿದ್ದೇನೆ ಎನ್ನುವ ಒಂದು ಮಾತನ್ನು ಆಗಾಗ ಹೇಳುತ್ತಾರೆ. ಆ "ನಾನಿದ್ದೇನೆ" ಎನ್ನುವ ಮಾತೇ ನಮಗೆ ಒಂದು ದೊಡ್ಡ ಶಕ್ತಿ. ಇವತ್ತು ನನ್ನನ್ನ ಸ್ಟೇಜ್ ಮೇಲೆ ನಿಲ್ಲಿಸಿದರೆ ಸುಮಾರು ಐದು ಭಾಷೆಗಳಲ್ಲಿ ಗಂಟೆಗಟ್ಟಲೆ ಸ್ಪೀಚ್ ಕೊಡಬಲ್ಲೆ, ಕಾರಣ ನನ್ನಲ್ಲಿರುವ ನಾಲೆಡ್ಜ್ ಹಾಗೂ ಎಜುಕೇಶನ್. ಒಂದು ಗಾದೆ ಮಾತಿದೆ. ಹುಲಿಯ ಹೊಟ್ಟೆಯಲ್ಲಿ ಹುಲಿನೇ ಹುಟ್ಟೋದು ಎಂದು. ಅವರ ಮಗಳಾಗಿ ನಾನು ಅದೇ ರೀತಿನೇ.

ಅನೇಕ ಕಡೆಗಳಿಗೆ ಚೀಫ್ ಗೆಸ್ಟಾಗಿ ಹೋಗ್ತಾ ಇರುತ್ತೇನೆ, ಅಲ್ಲಿ ಜನರೊಡನೆ ಬೆರೆತು ಮಾತನಾಡುವಾಗ, ತಂದೆಯವರು ಮಾಡಿದ ಸಹಾಯವನ್ನು

ಅವರು ನೆನೆದು ನಾನಾ ರೀತಿಯಲ್ಲಿ ಹೊಗಳುತ್ತಾರೆ. ಈ ಸಾಮಾಜಿಕ ಕಳಕಳಿ ಮತ್ತು ಜನರ ಸೇವೆ ನೋಡಿ ಹೆಮ್ಮೆಯಾಗುತ್ತೆ. ಎಜುಕೇಶನ್ ಫೀಲ್ಡ್‌ನಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ, ಇಷ್ಟೇ ಅಲ್ಲದೆ, ನಮ್ಮ ತಂದೆ ತುಂಬಾ ಮೃದು ಸ್ವಭಾವದವರು, ಅದನ್ನ ತುಂಬಾ ಜನ ಹೆಚ್ಚಾಗಿ ಅರ್ಥ ಮಾಡಿಕೊಂಡಿಲ್ಲ. ನಾನು ಮಗಳಾಗಿ ಆ ಸೈಡ್‌ನಿಂದ ನೋಡಿದ್ದೇನೆ. ಅವರು ಯಾರ ಮಾತನ್ನು ಕೇಳಲ್ಲ. ಅವರ ನಿರ್ಧಾರ ಏನಿರುತ್ತೋ ಅದೇ ಅವರು ಮಾಡೋದು. ಅವರ ಯೋಚನೆ, ಚಿಂತನೆ ಅದೇ ಫೈನಲ್. ಅವರಿಗೆ ಫ್ಯೂಚರ್ ಬಗ್ಗೆ ತುಂಬಾ ನಾಲೆಡ್ಜ್ ಇದೆ. ನಮ್ಮ ಅಪ್ಪ ಅಮ್ಮ ಒಂದು ನಾಣ್ಯದ ಎರಡು ಮುಖಗಳು ಇದ್ದ ಹಾಗೆ. ಏನೇ ಕಷ್ಟ ಇದ್ದರೂ ಅಪ್ಪ–ಅಮ್ಮನ ಹತ್ತಿರ ಹೇಳುತ್ತಾರೆ. ನಮಗೆ ಕಷ್ಟ ಎಂದರೆ ಏನು ಎಂದು ಗೊತ್ತಿಲ್ಲದ ಹಾಗೆ ಸಾಕಿದ್ದಾರೆ.



ಭವ್ಯಗೌಡರ ಮಗಳು ಐರಾ

ಮಾರುಕಟ್ಟೆಗೆ ಹೊಸ ಕಾರ್‌ಗಳು ಯಾವುದಾದರೂ ಬಂದಾಗ, ಅದು ಅವರಿಗೆ ಇಷ್ಟವಾದರೆ ಅದನ್ನು ಇವರು ತಗೊಳ್ಳುತ್ತಾರೆ. ಹಾಗೆ ಬಟ್ಟೆ ವಿಷಯದಲ್ಲೂ ಅವರಿಗೆ ಕ್ರೇಜ್ ಇದೆ, ಒಳ್ಳೆ ಬ್ರಾಂಡೆಡ್ ಬಟ್ಟೆಗಳನ್ನೇ ಅವರು ಹಾಕೋದು. ಅವರು ಕೊನೆವರೆಗೂ ಸಮಾಜ ಸೇವೆ, ರಾಜಕೀಯ ಬಿಡಲ್ಲ. ನಾವು ಹೇಳಿದ ತಕ್ಷಣ ಅವರು ಸುಮ್ಮನಾಗಲ್ಲ. ಅವರು ಮೆಡಿಟೇಶನ್ ಮಾಡಿಕೊಂಡು, ಯೋಗ ಮಾಡಿಕೊಂಡು ಆರೋಗ್ಯವಾಗಿರಲಿ. ಅವರು ಒಳ್ಳೆಯ ಲೀಡರ್, ಆ ಲೀಡರ್‌ಶಿಪ್‌ನ ಕೊನೆವರೆಗೂ ಅವರು ಬಿಡುವುದು ಬೇಡ, ಅವರು ಏನೇನು ಅಂದುಕೊಂಡಿದ್ದಾರೋ ಅದೆಲ್ಲಾ ಫಲಿಸಲಿ, ಅದಕ್ಕೆ ನಮ್ಮ ಫ್ಯಾಮಿಲಿ ಸಪೋರ್ಟ್ 100% ಇದ್ದೇ ಇರುತ್ತೆ.



ಮಾವನವರ ಕ್ರಿಯಾಶೀಲತೆ ನಮಗೆ ಸ್ಫೂರ್ತಿ : ರಾಜೀವ್



ನಾನು ಈ ಮನೆಯ ಆಳಿಯ ಅನ್ನೋದಕ್ಕಿಂತ ನಾನು ಸಹ ಒಬ್ಬ ಮನೆಯ ಮಗ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕಾರಣ ನಮ್ಮ ಅತ್ತೆಯವರು ಹಾಗೂ ಮಾವ ಅಷ್ಟು ಪ್ರೀತಿಯಿಂದ ನನ್ನನ್ನು ಕಂಡಿದ್ದಾರೆ. ನನಗೆ ಮದುವೆಯ ಮೊದಲೇ ಮಾವ ಪರಿಚಯವಿದ್ದರು, ಕೆಲವು ಫಂಕ್ಷನ್‌ಗಳಲ್ಲಿ ಅವರನ್ನು ಭೇಟಿ ಮಾಡಿದ್ದೆ. ನಾನು ಭವ್ಯ ಅವರನ್ನು ಭೇಟಿ ಮಾಡಿದ್ದು ನನ್ನ ಒಂದು ಸಿನಿಮಾದ ಇನ್ವಿಟೇಶನ್ ಕೊಟ್ಟು ಇವರನ್ನ ಜೀಫ್ ಗೆಸ್ಟಾಗಿ ಕರೆಯಬೇಕೆಂದು ಬಂದಾಗ, ಅಲ್ಲಿಂದ ಅವರ ಜೊತೆ ಸ್ನೇಹವಾಗಿ ಕೊನೆಗೆ ಋಣಾನುಬಂಧ ಎಂಬ ರೀತಿ ಮದುವೆ ಸಹ ಆಯ್ತು. ಮೊದಲ ಬಾರಿಗೆ ಮದುವೆ ವಿಷಯವನ್ನು ಮನೆಯಲ್ಲಿ ಬಂದು ಮಾವನವರ ಮತ್ತು ಅತ್ತೆಯವರ ಎದುರು ಮಾತನಾಡುವಾಗ ನನಗೆ ಭಯವಿತ್ತು. ಆದರೆ ಮಾವನವರಾಗಲಿ ಅತ್ತೆಯವರಾಗಲಿ ನನಗೆ ಒಂದು ಸಣ್ಣ ನೋವನ್ನು ಮಾಡಲಿಲ್ಲ, ಬಹಳ ಪ್ರೀತಿಯಿಂದಲೇ ಮಾತನಾಡಿಸಿದರು ಹಾಗೆ ಮದುವೆ ಬಗ್ಗೆ ಹೇಳೋದೇನಿಲ್ಲ ಎಲ್ಲರಿಗೂ ಅದು ಗೊತ್ತಿದೆ, ತುಂಬಾ ಅದ್ದೂರಿಯಾಗಿ ಮಾಡಿದರು.

ಮಾವನವರಿಗೆ ಲೀಡರ್ ಕ್ವಾಲಿಟಿ ತುಂಬಾ ಚೆನ್ನಾಗಿದೆ. ಅವರಿಗೆ ಜನರ ಬಗ್ಗೆ ಪ್ರೀತಿ ಕಾಳಜಿ ಜಾಸ್ತಿ. ಅಧಿಕಾರ ಇರಲಿ ಇಲ್ಲದೆ ಇರಲಿ, ಜನರ ಕಷ್ಟ ಸುಖಕ್ಕೆ ಜೊತೆಯಾಗಿದ್ದಾರೆ, ಸಹಾಯ ಮಾಡಬೇಕೆಂದಾಗ ಸಮಯ ಅವರಿಗೆ ಅಡ್ಡ ಬರಲ್ಲ, ಮಧ್ಯ ರಾತ್ರಿಯಾಗಲಿ ಅವರು ಹೋಗಿ ನಿಲ್ಲುತ್ತಾರೆ.

ದೂರದಿಂದ ಅವರನ್ನ ನೋಡುವವರಿಗೆ ಅವರು ತುಂಬಾ ಸ್ಟ್ರಿಕ್ಟ್ ರೀತಿ ಕಾಣಬಹುದು. ನಿಜ ಏನೆಂದರೆ, ಅವರಿಗೆ ಒಮ್ಮೆ ಪರಿಚಯವಾದರೆ ಅವರು ಯಾವ ರೀತಿ ಕಂಫರ್ಟ್ ಜೋನ್ ನೀಡುತ್ತಾರೆ ಎಂದರೆ ಇವರು ನಮಗೆ ಎಷ್ಟೋ ವರ್ಷದಿಂದ ಪರಿಚಯವಾಗಿದ್ದಾರೆ ಅನಿಸುತ್ತೆ, ಆ ಮಟ್ಟಿಗೆ ಇಷ್ಟ ಆಗುತ್ತಾರೆ. ಅತ್ತೆಯವರು ತುಂಬಾ ಸಾಫ್ಟ್ ನೇಚರ್. ನನ್ನನ್ನು ಮಗನ ರೀತಿಯಲ್ಲೇ ಅವರು ನೋಡಿಕೊಂಡಿದ್ದಾರೆ. ಮನೆಗೆ ಯಾರೇ ಬಂದರೂ ಅವರಿಗೆ ಊಟ ಹಾಕಿ ಕಳಿಸದೆ ಹಾಗೆ ಕಳಿಸಲ್ಲ ಅದನ್ನ ಅವರು ಪಾಲಿಸಿಕೊಂಡು ಬಂದಿದ್ದಾರೆ. ಅವರು ಸಹ ಜನರ ಕಷ್ಟಗಳಿಗೆ ನಿಲ್ಲುತ್ತಾರೆ. ಮಾವನವರಿಗೆ ಮೊದಲನೆಯದಾಗಿ ಹುಟ್ಟುಹಬ್ಬದ ಶುಭಾಶಯಗಳು. ಅವರನ್ನ ರಿಟೈರ್ಡ್ ಆಗಲು ಜನರು ಬಿಡಲ್ಲ. ಅವರು ಹೀಗೆ ಜನರಿಗೆ ಗೈಡ್ ಮಾಡುತ್ತಾ ಇರಲಿ, ನಮಗೆಲ್ಲ ಅವರ ಗೈಡೆನ್ಸ್ ತುಂಬಾ ಮುಖ್ಯ. ಅವರು ಮುಂದೆ ಏನೇನು ಡ್ರೀಮ್ಸ್ ಇಟ್ಟುಕೊಂಡಿದ್ದಾರೆ ಅದೆಲ್ಲ ಫುಲ್‌ಫಿಲ್ ಆಗಲಿ, ದೇವರು ಅವರಿಗೆ ಒಳ್ಳೆಯದು ಮಾಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ನನ್ನ ಪಾಲಿನ ದೇವರು:
ಶ್ರೀ ಶಿವರಾಮೇಗೌಡರು ಮತ್ತು ಶ್ರೀಮತಿ ಸುಧಾಮ್ಮ



ಮಾನವನ ಜೀವನದಲ್ಲಿ ಕೆಲವು ವ್ಯಕ್ತಿಗಳು ಕೇವಲ ಸಂಬಂಧಿಕರಾಗಿ ಉಳಿಯುವುದಿಲ್ಲ; ಅವರು ಬದುಕಿನ ದಾರಿದೀಪಗಳಾಗಿ, ಮಾರ್ಗದರ್ಶಕರಾಗಿ, ಆಶ್ರಯದಾತರಾಗಿ ಮತ್ತು ದೇವರ ರೂಪದಲ್ಲಿ ನಮ್ಮೊಂದಿಗೆ ಇರುತ್ತಾರೆ. ನನ್ನ ಜೀವನದಲ್ಲಿ ಅಂತಹ ಮಹನೀಯರು ನನ್ನ ಸೋದರ ಮಾವರಾದ ಶ್ರೀ ಶಿವರಾಮೇಗೌಡರು ಹಾಗೂ ನನ್ನ ಅತ್ತೆಯಾದ ಶ್ರೀಮತಿ ಸುಧಾಮ್ಮ ಅವರು.

ನನ್ನ ವೃತ್ತಿಜೀವನ ಮತ್ತು ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಶ್ರೀ ಶಿವರಾಮೇಗೌಡರವರ ಮಾರ್ಗದರ್ಶನ ಅಮೂಲ್ಯವಾಗಿದೆ. ನಾನು ವಕೀಲ ವೃತ್ತಿಯಲ್ಲಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಸ್ಫೂರ್ತಿಯನ್ನು ನೀಡಿದವರು ಅವರೇ. ಶಾಲೆಯನ್ನು ಸ್ಥಾಪಿಸುವುದರಿಂದ ಹಿಡಿದು ಅದರ ಪ್ರತಿಯೊಂದು ಹಂತದ ಅಭಿವೃದ್ಧಿಯವರೆಗೆ ಅವರು ಮಾರ್ಗದರ್ಶಕರಾಗಿ ನಿಂತಿದ್ದಾರೆ. ಇಂದು ಶ್ರೀ ಗುರು ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಉತ್ತಮ ಶಿಕ್ಷಣ ಸಂಸ್ಥೆಯಾಗಿ ಬೆಳೆದಿರುವುದರ ಹಿಂದೆ ಅವರ ದೂರದೃಷ್ಟಿ, ಅನುಭವ ಮತ್ತು ಬೆಂಬಲ ಮಹತ್ವದ ಪಾತ್ರ ವಹಿಸಿದೆ.

ಅವರ ವ್ಯಕ್ತಿತ್ವದ ಅತ್ಯಂತ ವಿಶಿಷ್ಟ ಗುಣವೆಂದರೆ ಮಾನವೀಯತೆ. ಅವರು ನಿಜವಾದ ಮಾನವತಾವಾದಿ. ಯಾರೇ ಸಂಕಷ್ಟದಲ್ಲಿದ್ದರೂ, ಯಾರೇ ಸಹಾಯ ಕೇಳಿಕೊಂಡರೂ, ಅವರು ಹಿಂದೆ ಸರಿದವರಲ್ಲ. ಸಂಬಂಧಿಕರಾಗಲಿ, ಸ್ನೇಹಿತರಾಗಲಿ ಅಥವಾ ಪರಿಚಯಸ್ಥರಾಗಲಿ?ಯಾರು ಅವರ ಮೇಲೆ ವಿಶ್ವಾಸ ಇಟ್ಟಿದ್ದಾರೋ ಅವರ ಬೆನ್ನಿಗೆ ಸದಾ ನಿಂತಿದ್ದಾರೆ. ಒಬ್ಬ ವ್ಯಕ್ತಿ ತಪ್ಪು ಮಾಡಿದ್ದಾನೆಯೇ ಅಥವಾ ಸರಿ ಇದ್ದಾನೆಯೇ ಎಂಬುದಕ್ಕಿಂತ ಮೊದಲು, ಆತ ಸಂಕಷ್ಟದಲ್ಲಿದ್ದಾನೆಯೇ ಎಂಬುದನ್ನು ನೋಡುವ ಹೃದಯ ಅವರದು.

ನನ್ನ ಪಾಲಿಗೆ ಇವರು ಕೇವಲ ಮಾವ ಮತ್ತು ಅತ್ತೆಯಲ್ಲ; ಸಾಕ್ಷಾತ್ ದೇವರ ರೂಪದಲ್ಲಿ ಬಂದ ತಂದೆ–ತಾಯಿಗಳು, ನನ್ನ ಜೀವನದ ದಾರಿದೀಪಗಳು ಮತ್ತು ನನ್ನ ಪಾಲಿನ ದೇವತೆಗಳು. ಅವರ ಜೀವನ ಚರಿತ್ರೆ ಮುಂದಿನ ಪೀಳಿಗೆಗಳಿಗೆ ಪ್ರೇರಣೆಯಾಗಲಿ ಎಂಬುದು ನನ್ನ ಹೃತ್ಪೂರ್ವಕ ಆಶಯ.

–ಕೆ. ಎಸ್. ಮಂಜೇಗೌಡ, ವಕೀಲರು
ಸಂಸ್ಥಾಪಕರು ಮತ್ತು ಅಧ್ಯಕ್ಷರು, ಶ್ರೀಗುರು ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
ಉಪಾಧ್ಯಕ್ಷರು ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಹೈಕೋರ್ಟ್ ಬಿಲ್ಡಿಂಗ್, ಬೆಂಗಳೂರು

ಚಿತ್ರ ಸಮುದಾಯ



ಚಿತ್ರ ಸಮೂಹ



1978ರಲ್ಲಿ ನಾಗಮಂಗಲ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆ.ನೂತನ ಅಧ್ಯಕ್ಷ ಹೆಚ್. ಟಿ. ಕೃಷ್ಣೇಗೌಡ ನೇತೃತ್ವದ ತಂಡದಲ್ಲಿ ನಿರ್ದೇಶಕರಾದ ಬಿ.ವಿ.ಸತ್ಯನ್ ಹಾಗೂ ಎಲ್.ಆರ್.ಶಿವರಾಮೇಗೌಡ ಉಪಸ್ಥಿತರಿದ್ದಾರೆ.

ಚಿತ್ರ ಸಮೂಹ



ಕೇಂದ್ರ ಸರ್ಕಾರದ ವಿದೇಶಾಂಗ ಸಚಿವರಾದ ಆನಂದ ಶರ್ಮ ಹಾಗೂ ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷರಾದ ನಂಜಯ್ಯಮಟ್, ಅಧ್ಯಕ್ಷರಾದ ಕೆ.ಜೆ. ಜಾರ್ಜ್, ಎಲ್.ಆರ್. ಶಿವರಾಮೇಗೌಡರು, ಹರೀಂದ್ರಶೆಟ್ಟಿಯವರು



ಯೂತ್ ಕಾಂಗ್ರೆಸ್ ಸಮಾರಂಭದಲ್ಲಿ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ್‌ಗಾಂಧಿಯವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಸಾರ್ವಜನಿಕರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಎಂಎಲ್‌ಎ ಇದ್ದಾಗ ಶಾಸಕ ಮಿತ್ರರೊಂದಿಗೆ ಎಲ್.ಆರ್. ಶಿವರಾಮೇಗೌಡರು

ಚಿತ್ರ ಸಮೂಹ



ಅಂದಿನ ಪ್ರಧಾನಮಂತ್ರಿ ಶ್ರೀ ರಾಜೀಗಾಂಧಿ ರವರನ್ನು ಕರ್ನಾಟಕ ಯುವ ಕಾಂಗ್ರೆಸ್ ವತಿಯಿಂದ ಬೆಂಗಳೂರಿನಲ್ಲಿ ನೆಡೆಯಲಿರುವ ಸಮಾರಂಭಕ್ಕಾಗಿ ಆಹ್ವಾನಿಸಿದ ಕ್ಷಣ. ರಾಜ್ಯ ಯುವ ಕಾಂಗ್ರೆಸ್ ಖಜಾಂಚಿ LR ಶಿವರಾಮೇಗೌಡ ಮತ್ತು TB ಜಯಚಂದ್ರ ಚಿತ್ರದಲ್ಲಿದ್ದಾರೆ.



ಪಕ್ಷದ ನಿಯೋಗದ ಮುಖ್ಯಸ್ಥರಾಗಿ ಶಿವರಾಮೇಗೌಡರು ಕಾಂಗ್ರೆಸ್ ಅಧಿ ನಾಯಕಿ ಶ್ರೀಮತಿ ಸೋನಿಯಾ ಗಾಂಧಿಯವರನ್ನ ಭೇಟಿಯಾದ ಸಂದರ್ಭ.



ಮಂಡ್ಯ ಲೋಕಸಭಾ ಅಭ್ಯರ್ಥಿಯಾದ ಸಂದರ್ಭದಲ್ಲಿ ಕೇಂದ್ರ ರಕ್ಷಣಾ ಸಚಿವರಾದ ರಾಜನಾಥಸಿಂಗ್ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ತೆಗೆದ ಚಿತ್ರ. ಕೇಂದ್ರ ಸಚಿವ ಧನಮಜಯಕುಮಾರ್ ಸಚಿವರಾದ ರಾಮಚಂದ್ರೇಗೌಡರು

ಚಿತ್ರ ಸಮೂಹ





ಯುಪಿಎ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ಶ್ರೀ ಡಿ.ಕೆ. ಶಿವಕುಮಾರ್ ಅವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿರವರ ಸಮ್ಮುಖದಲ್ಲಿ
ಪ್ರಮಾಣ ವಚನ ಸ್ವೀಕರಿಸುತ್ತಿರುವ ಎಲ್.ಆರ್. ಶಿವರಾಮೇಗೌಡರು



ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಎಚ್.ಡಿ. ದೇವೇಗೌಡರವರೊಂದಿಗೆ
ಸಮಾಲೋಚನೆ ಸಂದರ್ಭ



ರಾಜಕೀಯ ಗುರುಗಳಾದ ಕೆ.ಎನ್. ನಾಗೇಗೌಡರು, ಸಿ. ಬೈರೇಗೌಡರು ಹಾಗೂ ಆತ್ಮೀಯರೊಂದಿಗೆ ಶಿವರಾಮೇಗೌಡರು



ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಗ ಅನಿಲ್ ಶಾಸ್ತ್ರಿ ಶ್ರೀಮತಿ ಸೋನಿಯಾಗಾಂಧಿ, ಡಿ.ಕೆ. ಶಿವಕುಮಾರ್, ಸುದರ್ಶನ್, ಪ್ರಕಾಶ್ ಕಲಾಪಾರನ್, ಶಿವರಾಮೇಗೌಡರು



1999ರಲ್ಲಿ ದೆಹಲಿಯ ಎಐಸಿಸಿ ಆಫೀಸಿನಲ್ಲಿ ನಾನು ಹಾಗೂ ಅಂಬರೀಶ್ ಪಕ್ಷ ಸೇರ್ಪಡೆ ಸಂದರ್ಭ: ಶಿವರಾಮೇಗೌಡರು, ಅಂದಿನ ಪಾಂಡಿಚೇರಿ ಮುಖ್ಯಮಂತ್ರಿ ಸಿದ್ದರಾಜು, ಶ್ರೀಮತಿ ಸೋನಿಯಾಗಾಂಧಿ, ಅಂದಿನ ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಅಂಬರೀಶ್, ಅಂದಿನ ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್

ರಾಜಕೀಯ ಗಣ್ಯರೊಂದಿಗೆ ಎಲ್.ಆರ್. ಶಿವರಾಮೇಗೌಡರು

ಚಿತ್ರ ಸಮೂಹ



ಎಡದಿಂದ ಬಲಕ್ಕೆ-ಜಿ.ಸಿ. ಚಂದ್ರಶೇಖರ್ ರವರು, ಎಲ್.ಆರ್.ಎಸ್ ರವರು, ಸನ್ಮಾನ್ಯ ದೇವೇಗೌಡರು, ಡಿ.ಕೆ. ಸುರೇಶ್ ರವರು, ಮುದ್ದ ಹನುಮೇಗೌಡರು, ಕುಪೇಂದ್ರ ರೆಡ್ಡಿ ರವರು,



ಸನ್ಮಾನ್ಯ ಲೋಕಸಭಾ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರೊಂದಿಗೆ ಎಲ್.ಆರ್.ಎಸ್



ಎಡದಿಂದ ಬಲಕ್ಕೆ ಮಾಜಿ ಕೇಂದ್ರ ಸಚಿವರಾದ ಕೆ.ಹೆಚ್. ಮುನಿಯಪ್ಪನವರು, ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು, ಮಾಜಿ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ್ ಅವರು, ಸುಮ್ಮನ್ ಹಳ್ಳಿಮೇಗೌಡ ಎಂಜಿ.ಆರ್.ಎಸ್ ಅಧ್ಯಕ್ಷರು, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿಯವರು, ಮಾಜಿ ಉಪಮುಖ್ಯಮಂತ್ರಿಗಳಾದ ಸಿ.ಎಂ. ಎ.ಎಚ್. ಕಾಮ್‌ಚೌಧರ್ ಎಂಪಿ., ಮಲ್ಲಿಕಾರ್ಜುನ ಖರ್ಗೆ ಎಂಪಿ. ಎಐಸಿಸಿ ಅಧ್ಯಕ್ಷರು, ಡಿ.ಕೆ. ಸುರೇಶ್ ಎಂಪಿ., ಚಂದ್ರಪ್ಪ ಎಂಪಿ., ಡಿ.ವಿ. ನಾಯಕ್ ಎಂಪಿ., ಪ್ರಕಾಶ್ ಹುಕ್ಕೇರಿ ಎಂಪಿ., ಎಲ್.ಆರ್. ಶಿವರಾಮೇಗೌಡ ಎಂಪಿ.

ಚಿತ್ರ ಸಮೂಹ



ಅಂದಿನ ಪ್ರಧಾನಿಗಳಾದ ಶ್ರೀ ರಾಜೀವ್‌ಗಾಂಧಿಯವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ಅಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು, ಮಲ್ಲಿಕಾರ್ಜುನ
ಖರ್ಗೆಯವರು ಹಾಗೂ ಎಲ್.ಆರ್. ಶಿವರಾಮೇಗೌಡರು



ಅಂದಿನ ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಜನಾರ್ದನ ಪೂಜಾರಿಯವರು,
ಮಲ್ಲಾಜಮ್ಮ, ಎಲ್.ಆರ್. ಶಿವರಾಮೇಗೌಡರು



ಅಮೆರಿಕಾ ದೇಶದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಜೆ.ಎಚ್.ಪಟೇಲ್‌ರವರು
ಎಲ್.ಆರ್. ಶಿವರಾಮೇಗೌಡರು ಎಂ.ಪಿ. ನಾಣಯ್ಯ ಹಾಗೂ ಶ್ರೀನಿವಾಸ್

ಚಿತ್ರ ಸಮೂಹ

ರಾಜ್ಯಕಂಡ ಮುಖ್ಯಮಂತ್ರಿಗಳೊಂದಿಗೆ ಎಲ್.ಆರ್. ಶಿವರಾಮೇಗೌಡರು





ಅಂದಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ ಅವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಎಲ್.ಆರ್.ಎಸ್



ಅಂದಿನ ಮುಖ್ಯಮಂತ್ರಿಗಳಾದ ದಿ|| ಧರ್ಮ್‌ಸಿಂಗ್‌ಅವರೊಂದಿಗೆ ಎಲ್.ಆರ್.ಎಸ್

ಚಿತ್ರ ಸಮೂಹ



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ಚಿತ್ರನಟರಾದ ಅಂಬರೀಶ್, ರಜನೀಕಾಂತ್, ಶತ್ರುಜ್ಞ ಸಿನ್ಹಾ ಅವರೊಂದಿಗೆ ಎಲ್.ಆರ್. ಶಿವರಾಮೇಗೌಡರು
ನಮ್ಮ ಮನೆಯ ಔತಣಕೂಟದಲ್ಲಿ...

ಚಿತ್ರ ಸಮೂಹ



ಕೇಂದ್ರ ಸಚಿವರಾದ ಶ್ರೀ ಶ್ರೀನಿವಾಸ್ ಪ್ರಸಾದ್ ಅವರೊಂದಿಗೆ ಎಲ್.ಆರ್.ಎಸ್



ಕಂದಾಯ ಸಚಿವರಾದ ಆರ್.ವಿ. ದೇಶಪಾಂಡೆ ಅವರೊಂದಿಗೆ ಎಲ್.ಆರ್.ಎಸ್



ಶ್ರೀಕ್ಷೇತ್ರ ಆದಿ ಚುಂಚನಗಿರಿಯಲ್ಲಿ
ಎಐಸಿಸಿ ಜನರಲ್ ಸೆಕ್ರೆಟರಿ ಆಸ್ಕರ್ ಫರ್ನಾಂಡಿಸ್ ಅವರೊಂದಿಗೆ ಎಲ್.ಆರ್.ಎಸ್



ಸಚಿವರಾದ ಸಿ.ಪಿ. ಯೋಗೇಶ್ವರ್ ಅವರೊಂದಿಗೆ ಎಲ್.ಆರ್.ಎಸ್

ಚಿತ್ರ ಸಮೂಹ



ಅಂದಿನ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಅವರ ಸ್ವಗ್ರಾಮ ಬೂಕನ ಕೆರೆಯಲ್ಲಿ ದೇವಸ್ಥಾನ ಉದ್ಘಾಟನಾ ಸಮಾರಭಕ್ಕೆ ಭಾಗಿಯಾದ ಕ್ಷಣ ದಲ್ಲಿ ಎಲ್.ಆರ್.ಎಸ್



ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಶ್ರೀ ಡಾ.ಜಿ ಪರಮೇಶ್ವರ್ ಅವರೊಂದಿಗೆ ಎಲ್.ಆರ್.ಎಸ್



ರಾಯಲ್ ಕಾನ್‌ಕಾರ್ಡ್ ಚಾಮರಾಜಪೇಟೆ ನೂತನ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಮೈಸೂರು ಮಾಹಾರಾಜರು ಹಾಲಿ ಸಂಸದರಾದ ಶ್ರೀ ಯದುವೀರ್ ಒಡೆಯರ್ ಅವರೊಂದಿಗೆ ಎಲ್.ಆರ್.ಎಸ್



ಮಾಜಿ ಗೃಹ ಸಚಿವರಾದ ಹಾಗೂ ಅನುಗಾಲದ ಒಡನಾಡಿ ಶ್ರೀ ಆರ್. ರೋಷನ್ ಬೇಗ್ ಅವರೊಂದಿಗೆ ಎಲ್.ಆರ್.ಎಸ್

ಚಿತ್ರ ಸಮೂಹ



ಕಾವೇರಿ ನಮ್ಮ ಹಕ್ಕು, ಕಾವೇರಿ ನೀರಿನ ರಕ್ಷಣೆಗೆ ನಮ್ಮಹೋರಾಟ
ಹೋರಾಟಕ್ಕೆ ಜಯವಾಗಲಿ: ಎಲ್.ಆರ್. ಶಿವರಾಮೇಗೌಡರು



ಕಾವೇರಿ ಹೋರಾಟದಲ್ಲಿ ರೈತ ಮುಖಂಡರೊಂದಿಗೆ ಸಚಿವರಾಗಿದ್ದ
ಸಿ.ಎಸ್. ಪುಟ್ಟರಾಜುರವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಕಾವೇರಿ ಹೋರಾಟದಲ್ಲಿ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷರಾದ
ಟಿ. ಕೃಷ್ಣಪ್ಪರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಕನ್ನಡ ಹಬ್ಬದಲ್ಲಿ ಎಲ್.ಆರ್. ಶಿವರಾಮೇಗೌಡರು

ಚಿತ್ರ ಸಮೂಹ



ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರ ಸ್ಥಾನಕ್ಕೆ ನಾಮಪತ್ರ ಸಲ್ಲಿಸುವ ಕ್ಷಣ.
ಶ್ರೀ ಡಿ.ಸಿ. ತಮ್ಮಣ್ಣ, ಶ್ರೀ ಸಚಿವ ಕೆ.ಜೆ. ಜಾರ್ಜ್, ಸಿ.ಎಸ್. ಪುಟ್ಟರಾಜುರವರೊಂದಿಗೆ
ಎಲ್.ಆರ್.ಎಸ್



ಸಂಸದರಾಗಿ ಅಭೂತಪೂರ್ವ ಗೆಲುವು ಸಾಧಿಸಿ, ಮಾನ್ಯ ಜಿಲ್ಲಾಧಿಕಾರಿಗಳಿಂದ
ಪ್ರಮಾಣಪತ್ರ ಪಡೆದ ಕ್ಷಣ ಶ್ರೀ ಅನ್ನದಾನಿ, ಡಿ.ಸಿ. ತಮ್ಮಣ್ಣ, ಸಿ.ಎಸ್ ಪುಟ್ಟರಾಜು,
ಎಲ್.ಆರ್.ಎಸ್



ಕರ್ನಾಟಕ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹಲೋಟ್
ಅವರೊಂದಿಗೆ ಗಹನ ಚರ್ಚೆಯಲ್ಲಿ
ಎಲ್.ಆರ್.ಎಸ್



ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್
ಅವರೊಂದಿಗೆ ಎಲ್.ಆರ್.ಎಸ್

ಚಿತ್ರ ಸಮೂಹ



ಜಿಲ್ಲಾ ಬಿಜೆಪಿ ಸಮಾವೇಶದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಸಚಿವ ಆರ್. ಅಶೋಕ್‌ರವರುಗಳೊಂದಿಗೆ ವೇದಿಕೆ ಹಂಚಿಕೊಂಡ ಎಲ್.ಆರ್. ಶಿವರಾಮೇಗೌಡರು



ಮಂಡ್ಯ ಜಿಲ್ಲೆ ಕಾಂಗ್ರೆಸ್ ಸಮಾವೇಶದಲ್ಲಿ ಅಂದಿನ ಉಸ್ತುವಾರಿ ಸಚಿವ ಬಿ.ಕೆ. ಚಂದ್ರಶೇಖರ್ ಮತ್ತು ಸಚಿವ ಟಿ.ಬಿ. ಜಯಚಂದ್ರ ಹಾಗೂ ಸಂಸದರಾದ ಅಂಬರೀಶ್‌ರವರುಗಳೊಂದಿಗೆ ಜಿಲ್ಲಾಧ್ಯಕ್ಷರಾದ ಎಲ್.ಆರ್. ಶಿವರಾಮೇಗೌಡರು ಭಾಗವಹಿಸಿದ ಸಂದರ್ಭ



ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ಆಯೋಜಿಸಿದ್ದ ಕನ್ನಡ ಹಬ್ಬ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪಿ. ಯೋಗೀಶ್ವರ್ ಅವರಿಂದ ಸನ್ಮಾನ ಸ್ವೀಕರಿಸಿದ ಸಂದರ್ಭ



ಸಂಸದರಾಗಿದ್ದ ಡಿ.ಬಿ. ಚಂದ್ರೇಗೌಡರ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ.ವಿ. ಸದಾನಂದ ಗೌಡರೊಂದಿಗೆ ಎಲ್.ಆರ್. ಶಿವರಾಮೇಗೌಡರು

ಚಿತ್ರ ಸಮೂಹ





ರಾಯಲ್ ಕಾನ್‌ಕಾರ್ಡ್ ಬಾಣಸವಾಡಿ ಶಾಲೆಗೆ ಜಿಂಬಾಂಬ್ವೆ ಪ್ರಧಾನಿ ಮುತಾಂಬುಲರವರು ಭೇಟಿ ನೀಡಿದ ಸಂದರ್ಭ
ಪ್ರಿನ್ಸಿಪಾಲ್‌ರವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಆಸ್ಟ್ರಿಯಾ ದೇಶದ ಪ್ರವಾಸದಲ್ಲಿ ಅಲ್ಲಿನ ಆರೋಗ್ಯ ಸಚಿವರೊಂದಿಗೆ ಶ್ರೀಮತಿ
ಸುಧಾ ಮತ್ತು ಎಲ್.ಆರ್.ಶಿವರಾಮೇಗೌಡರು



25ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಆಸ್ಟ್ರೇಲಿಯಾ ದೇಶದ
ಮೆಲ್ಬೋರ್ನ್‌ನಲ್ಲಿ ಶ್ರೀಮತಿ ಸುಧಾ ಮತ್ತು ಎಲ್.ಆರ್. ಶಿವರಾಮೇಗೌಡರು

ಚಿತ್ರ ಸಮೂಹ

ವಿಶೇಷ ಗಣ್ಯರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಅಮೆರಿಕಾ ಅಧ್ಯಕ್ಷರಾದ ಬರಾಕ್ ಒಬಾಮ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು



ನಿವೃತ್ತ ನ್ಯಾಯಾಧೀಶರಾದ ಸಂತೋಷ್ ಹೆಗ್ಡೆ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು ಹಾಗೂ ಚೇತನ್‌ಗೌಡರು



ಮಹಾರಾಷ್ಟ್ರದ ಸಿಎಂ ವಿಲಾಸ್‌ರಾವ್ ದೇಶ್‌ಮುಖ್, ಡಿ.ಬಿ. ಚಂದ್ರೇಗೌಡರು
ಹಾಗೂ ಎಲ್.ಆರ್. ಶಿವರಾಮೇಗೌಡರು



ಡಾ. ಪುನೀತ್ ರಾಜ್‌ಕುಮಾರ್ ಅವರೊಂದಿಗೆ
ಎಲ್.ಆರ್. ಶಿವರಾಮೇಗೌಡರು ಹಾಗೂ ಚೇತನ್‌ಗೌಡರು

ಚಿತ್ರ ಸಮೂಹ



ಡಾ. ಶ್ರೀ ಶ್ರೀ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ, ಶ್ರೀ ಡಿ.ಕೆ. ಶಿವಕುಮಾರ್,
ಶ್ರೀ ಚೇತನ್‌ಗೌಡರವರೊಂದಿಗೆ ಎಲ್.ಆರ್. ಶಿವರಾಮೇಗೌಡರು



ಭೂಮಿಪೂಜೆ ಕಾರ್ಯಕ್ರಮದಲ್ಲಿ ಎಲ್.ಆರ್. ಶಿವರಾಮೇಗೌಡರು ಮತ್ತು ಕುಟುಂಬ



ಮ್ಯಾರಥಾನ್‌ನಲ್ಲಿ ಪ್ರೊ. ರಾಜೀವ್‌ಗೌಡರು, ಡಾ. ಸಂಜಯ್‌ಗೌಡರವರು,
ಸುಧೀಂದ್ರರವರು ಹಾಗೂ ಎಲ್.ಆರ್. ಶಿವರಾಮೇಗೌಡರು



ಸಾರ್ವಜನಿಕ ಸಭೆಯಲ್ಲಿ ಎಲ್.ಆರ್. ಶಿವರಾಮೇಗೌಡರು ಗಹನ ಭಾಷಣದಲ್ಲಿ...

ಚಿತ್ರ ಸಮೂಹ

ಸನ್ಮಾನ ಸಮಾರಂಭ



ಆತ್ಮೀಯ ಗೆಳೆಯರಾದ ಜಿ.ಸಿ. ಚಂದ್ರಶೇಖರ್, ರಾಜ್ಯಸಭಾ ಸದಸ್ಯರು ಎಲ್.ಆರ್. ಶಿವರಾಮೇಗೌಡ, ಛೇರ್ಮನ್, ರಾಯಲ್ ಕಾನ್‌ಕಾರ್ಡ್, ಪುಟ್ಟಣ್ಣ ವಿಧಾನ ಪರಿಷತ್ ಸದಸ್ಯರು ಇವರುಗಳಿಗೆ ಬೆಂಗಳೂರು ಖಾಸಗಿ ಶಾಲಾ ಒಕ್ಕೂಟ ಎಎಸ್‌ಡಿಓ, ಸಿಬಿಎಸ್‌ಸಿ ಹಾಗೂ ಐಸಿಎಸ್‌ಸಿ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಸನ್ಮಾನ ಸಮಾರಂಭ.

ಚಿತ್ರ ಸಮೂಹ





ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ಪ್ರತಿ ವರ್ಷ ನಡೆಯುವ ಚುಂಚಶ್ರೀ ಪ್ರಶಸ್ತಿ ಸಮಾರಂಭದಲ್ಲಿ ಶ್ರೀ ಶ್ರೀ ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿ,
ತರಳಬಾಳು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯರೊಂದಿಗೆ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರವರ ಜೊತೆಯಲ್ಲಿ
ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿ ನಾನು ವೇದಿಕೆ ಹಂಚಿಕೊಂಡ ಸಂದರ್ಭ.





ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದ ನಾಥ ಸ್ವಾಮೀಜಿರವರ ಸಾನಿಧ್ಯದಲ್ಲಿ ಲೋಕೋಪಯೋಗಿ
ಸಚಿವ ಸತೀಶ್ ಜಾರಕಿಹೊಳಿ ಜೊತೆ ಎಲ್.ಆರ್ ಶಿವರಾಮೇಗೌಡರು ನಾಗಮಂಗಲದಲ್ಲಿ
ಆಯೋಜಿಸಿದ ಉದ್ಯೋಗಮೇಳದ ಉದ್ಘಾಟನಾ ಸಮಾರಂಭ...

ನಮ್ಮ ಮನೆಯ ಔತಣಕೂಟದ ಸಮಾರಂಭ



ಎಲ್.ಆರ್. ಶಿವರಾಮೇಗೌಡರು, ಡಾ. ವಿಶ್ವನಾಥ್ ಕ್ಯಾನ್ಸರ್ ತಜ್ಞರು, ಅಪೋಲೋ ಆಸ್ಪತ್ರೆ, ಉಮಾ ಶಂಕರ್ ಐಎಎಸ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ.
ಗೌತಮ್ ಎಂಪಿ ಅಭ್ಯರ್ಥಿ, ಕೋಲಾರ, ಲೋಕಸಭಾ ಕ್ಷೇತ್ರ ಡಾ. ವಿಜಯೇಂದ್ರ, ಇಎನ್‌ಟಿ ತಜ್ಞರು, ಸೌತ್ ಇಂಡಿಯಾ
ಡಾ. ರವೀಂದ್ರನಾಥ್, ಭಾರತಿ ನರ್ಸಿಂಗ್ ಹೋಂ ಮಾಲೀಕರು, ಡಾ. ಸಂಜಯ್‌ಗೌಡ, ಚಿತ್ರ ನಿರ್ಮಾಪಕರು ರಾಜೀವ್‌ಗೌಡ, ಮಾಜಿ ರಾಜ್ಯಸಭಾ ಸದಸ್ಯರು
ಡಾ. ನಟರಾಜ್, ಡಾ. ನೀರಜ್ ಪಾಟೀಲ್ ಮೇಯರ್ ಯುನೈಟೆಡ್ ಕಿಂಗ್‌ಡಮ್, ಲ್ಯಾಮ್‌ಬರ್ತ್, ಲಂಡನ್
ಡಾ. ಚಂದ್ರಶೇಖರ್, ಜನರಲ್ ಮ್ಯಾನೇಜರ್ ಟೊಯೋಟಾ ಬಿಡದಿ ಹಾಗೂ ಬಾಲಕೃಷ್ಣ ಅಧ್ಯಕ್ಷರು, ಎಫ್‌ಕೆಸಿಸಿಐ, ರಾಜಗೋಪಾಲ್ ಕಾಪಿಯಾ, ಅಧ್ಯಕ್ಷರು

ಚಿತ್ರ ಸಮೂಹ

ಕಾಂಗ್ರೆಸ್‌ನ ಮಾಜಿ ಸಂಸದರ ಸಭೆ



ಕಾಂಗ್ರೆಸ್ ಮಾಜಿ ಸಂಸದರ ಸಭೆಯ ಸಂಚಾಲಕರಾದ ಶ್ರೀ ಎಲ್ ಆರ್.ಶಿವರಾಮೇಗೌಡ ಮತ್ತು ಬಿ.ಎನ್.ಚಂದ್ರಪ್ಪರವರ ನೇತೃತ್ವದ ಸಭೆಯಲ್ಲಿ ಶ್ರೀ ಡಿ.ಕೆ.ಸುರೇಶ್, ಮನ್ಸೂರ್ ಅಲಿ ಖಾನ್, ಮುದ್ದಹನುಮೇಗೌಡ, ರಕ್ಷಾ ರಾಮಯ್ಯ, ಪ್ರೊ.ರಾಜೀವ್ ಗೌಡ, ಮೈಸೂರು ಲಕ್ಷ್ಮಣ್, ಅಂಜಲಿ ನಿಂಬಾಳ್ಕರ್ ಹಾಗೂ ಗೌತಮ್‌ರವರುರುಗಳು ಭಾಗವಹಿಸಿದರು.

ನಮ್ಮ ಮನೆಯ ಔತಣಕೂಟದ ಸಮಾರಂಭ



ಎಡದಿಂದ ಬಲಕ್ಕೆ ಡಾ. ಸಂಜಯ್‌ಗೌಡ ಚಿತ್ರ ನಿರ್ಮಾಪಕರು,ಪ್ರೊ. ರಾಜೀವ್ ಗೌಡ ಮಾಜಿ ರಾಜ್ಯಸಭಾ ಸದಸ್ಯರು, ಮುದ್ದ ಹನುಮೇಗೌಡ ಮಾಜಿ ಲೋಕಸಭಾ ಸದಸ್ಯರು ಮುನಿರಾಜು, ಬೆಂಗಳೂರು ಇಂಟರ್‌ನ್ಯಾಷನಲ್ ಶಾಲೆ ಎಲ್.ಆರ್. ಶಿವರಾಮೇಗೌಡ, ಡಾ. ಭಗವಾನ್, ಉಪ ಕುಲಪತಿಗಳು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಎಲ್.ಎಸ್. ಚೇತನ್‌ಗೌಡ ಉಮಾಶಂಕರ್ ಐಎಎಸ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ
ಸುಫೀನ್ ಕಾಮತ್ ಅಡ್ವೋಕೇಟ್, ಗೌತಮ್, ಎಂಪಿ ಅಭ್ಯರ್ಥಿ, ಕೋಲಾರ, ಲೋಕಸಭಾ ಕ್ಷೇತ್ರ, ನೀರಜ್ ಪಾಟೀಲ್, ರಾಮ್‌ಪ್ರಸಾದ್ ಅಡ್ವೋಕೇಟ್ ಸುಪ್ರೀಂಕೋರ್ಟ್

ಚಿತ್ರ ಸಮೂಹ



ಸುಧಾ ಶಿವರಾಮೇಗೌಡ, ಡಾ. ಶ್ರುತಿ ಚೇತನ್‌ಗೌಡ, ಕುಸುಮ ಜಗನ್ನಾಥ್, ಡಾ. ಶಾಲಿನಿ ಶೆಟ್ಟಿ, ಖ್ಯಾತ ನೇತ್ರ ತಜ್ಞೆ, ಅಪೋಲೋ ಆಸ್ಪತ್ರೆ, ಬೆಂಗಳೂರು, ಡಾ. ಗಿರೀಶ್ ನವಸುಂದಿರವರ ಧರ್ಮಪತ್ನಿ, ಹೃದಯ ತಜ್ಞರು, ಅಪೋಲೋ ಆಸ್ಪತ್ರೆ, ಬೆಂಗಳೂರು. ಡಾ. ಭಗವಾನ್, ಉಪ ಕುಲಪತಿಗಳು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ, ನೀರಜ್ ಪಾಟೀಲ್, ಮೇಯರ್ ಯುನೈಟೆಡ್ ಕಿಂಗ್‌ಡಮ್, ಲ್ಯಾಮ್‌ಬರ್ತ್, ಲಂಡನ್ ಡಾ. ಜಗದೀಶ್ ಅಪೋಲೋ ಆಸ್ಪತ್ರೆ , ಹಾಗೂ ಡಾ. ಮಹೇಂದ್ರ, ಮಾಲೀಕರು ಮಾತೃ ನರ್ಸಿಂಗ್ ಹೋಂ ರವರುಗಳಿದ್ದಾರೆ.
ಡಾ. ಗಿರೀಶ್ ನವಸುಂದಿ ಅಪೋಲೋ ಆಸ್ಪತ್ರೆಯ ಪ್ರಸಿದ್ಧ ಹೃದಯ ತಜ್ಞರು

ಬೀಳ್ಕೊಡುಗೆ ಸಮಾರಂಭ



ಬೆಂಗಳೂರು ಇಂಟರ್‌ನ್ಯಾಷನಲ್ ಅಕಾಡೆಮಿ ಅಧ್ಯಕ್ಷರಾದ ಮುನಿರಾಜು, ಎಲ್.ಆರ್.ಶಿವರಾಮೇಗೌಡ, ಜಯರಾಮ್ ರಾಯಪುರ ಐಆರ್‌ಎಸ್ ಮುಖ್ಯಸ್ಥರು, ಫಸ್ಟ್ ಸರ್ಕಲ್ ಉದ್ಯಮಿ ಸಂಘಟನೆ, ಜಯರಾಮ್, ಮ್ಯಾನೇಜಿಂಗ್ ಡೈರೆಕ್ಟರ್, ಮ್ಯಾಕ್ಸ್ ಕಾನ್‌ಕಾರ್ಡ್ ಕಂಪನಿ

ಚಿತ್ರ ಸಮೂಹ



2019 ರಲ್ಲಿ ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ GISA ಸಂಸ್ಥೆ ವತಿಯಿಂದ ನೀಡಲಾದ ಅತ್ಯುತ್ತಮ ಶಿಕ್ಷಣ ಸಂಸ್ಥೆ ಪ್ರಶಸ್ತಿ ಪಡೆದ ರಾಯಲ್ ಕಾನ್ಕಾರ್ಡ್ ಬೆಂಗಳೂರು ಅಧ್ಯಕ್ಷರಾದ ಎಲ್. ಆರ್.ಶಿವರಾಮೇಗೌಡರಿಗೆ ಅಲ್ಲಿನ ದುಬೈ ಸರ್ಕಾರದ ಮುಖ್ಯ ಅಧಿಕಾರಿಗಳಿಂದ ಪ್ರಶಸ್ತಿ ಪ್ರಧಾನ ಮಾಡಲಾಯಿತು.



ದೆಹಲಿಯ ವರ್ಲ್ಡ್ ಸ್ಕೂಲ್ ಛೇರ್ಮನ್‌ರಾದ ಜಕಾರಿಯಾರವರು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾನ್‌ಕಾರ್ಡ್ ಸಂಸ್ಥೆಯ ಅಧ್ಯಕ್ಷರಾದ ಎಲ್.ಆರ್. ಶಿವರಾಮೇಗೌಡರನ್ನು ಆತ್ಮೀಯವಾಗಿ ಸ್ವಾಗತಿಸಿದರು.



ಖ್ಯಾತ Pogo ವಾಹಿನಿಯ ಮುಖ್ಯಸ್ಥರಾದ ರೋಬೋ ಅವರು ಆರ್‌ಸಿಐಎಸ್ ಶಾಲೆಗೆ ಭೇಟಿ ನೀಡಿದ ಸಂದರ್ಭ

ಗಣ್ಯರೊಂದಿಗೆ ಎಲ್.ಆರ್. ಶಿವರಾಮೇಗೌಡರು ಹಾಗೂ ಪುತ್ರರಾದ ಚೇತನ್ ಗೌಡರವರು

ಚಿತ್ರ ಸಮೂಹ



Mr. K.H. MUNIYAPPA - Minister of State for Railways, Government of India.
Mr. L.R. SHIVARAME GOWDA - Chairman - Royale Concorde Group of Institutions
Mr. L.S. CHETAN GOWDA - Managing Trustee - Royale Concorde Group of Institutions



Dr. M.A. SALEEM IPS - Mysore Police Commissioner
Mr. L.R. SHIVARAME GOWDA - Chairman - Royale Concorde Group of Institutions



Mr. PRAVEEN SOOD IPS - Police Commisioner, Bangalore City
Mr. L.R. SHIVARAME GOWDA - Chairman - Royale Concorde Group of Institutions
Mr. L.S. CHETAN GOWDA - Managing Trustee - Royale Concorde Group of Institutions

ಚಿತ್ರ ಸಮೂಹ



ಸರ್ಕಾರಿ ನ್ಯಾಯಬೆಲೆ ಅಂಗಡಿ ನೂತನ ಚಲನ ಚಿತ್ರದಲ್ಲಿ ಮುಖ್ಯಮಂತ್ರಿ ಪಾತ್ರಧಾರಿಯಾಗಿ ಎಲ್. ಆರ್.ಶಿವರಾಮೇಗೌಡರು, ಮಾಜಿ ಸಂಸದರು ನಟ ಕುಮಾರ್ ಬಂಗಾರಪ್ಪ, ಹಿರಿಯ ನಟ ದೊಡ್ಡಣ್ಣ, ಮುದ್ದ ಹನುಮೇಗೌಡ ಮಾಜಿ ಸಂಸದರು, ಎಲ್.ಎಸ್. ಚೇತನ್‌ಗೌಡ ಯೂತ್ ಲೀಡರ್, ಚಂದ್ರಪ್ಪ ಮಾಜಿ ಸಂಸದರು ಕೆ. ಕೃಷ್ಣಪ್ಪ ಅಧ್ಯಕ್ಷರು ರಾಜ್ಯ ಪಡಿತರ ವಿತರಕರ ಸಂಘ ಹಾಗೂ ನಟಿ ರಾಗಿಣಿ ಚಿತ್ರದಲ್ಲಿದ್ದಾರೆ.

ಕುಟುಂಬ

ತಂದೆ ಬಸಪ್ಪನವರು

ತಾಯಿ ಪಾರ್ವತಮ್ಮ ಬಸಪ್ಪ

ಶ್ರೀ ಬಿ.ಬಿ.ಪಾಟೀಲ

ಶ್ರೀಮತಿ ಸುಧಾ ಪಾಟೀಲ

ಮಗ ಡಾಗೂ ಸೊಸೆ

ಚಿ.ಸೌ. ಚೇತನ್ ಗೌಡ

ಚಿ. ಪ್ರೀತಂ ಚೇತನ್ ಗೌಡ

ಮೊಮ್ಮಗ ಅಮನ್ ಚೇತನ್ ಗೌಡ

ಮಗಳು ಡಾಗು ಅಳಿಯ

ಚಿ.ಸೌ. ಭೂಮಿ ಗೌಡ

ಮೊಮ್ಮಗಳು ಮಾಯಾ ಡಂಬಳ

ಪಟೇಲ್ ಎಲ್. ರಾಮೇಗೌಡರ ಪರಿವಾರ

ಪಟೇಲ್ ಎಲ್. ರಾಮೇಗೌಡ
ಲಕ್ಷ್ಮಮ್ಮ



ಲೇಟ್ ನಾಗಮ್ಮ
ಲೇಟ್ ಕೃಷ್ಣೇಗೌಡ



ಶ್ರೀಮತಿ ಗಗನ
ಶ್ರೀ ನರೇನ್ ಶಿವಪ್ಪ, ಐಟಿ ಉದ್ಯಮಿ
ಆರ್ಯನ್
ಆರ್ನಾ

ಲೇಟ್ ಬಸವಲಿಂಗೇಗೌಡ
ಶ್ರೀಮತಿ ಲೀಲಾವತಿ



L.B.ಗೋಪಿನಾಥ್
ಶ್ರೀಮತಿ ಶೋಭಾ
ಕರಣ್

L.B.ಜಿತೇಂದ್ರ(ಪಪ್ಪಿ)
ಶ್ರೀಮತಿ ಸಹನಾ
ದುಶ್ಯಂತ್
ಜಾಹ್ನವಿ

ಶ್ರೀಮತಿ ಮಮತಾ
ಶ್ರೀ ನವೀನ್, ಉದ್ಯಮಿಗಳು.
ನಿತಿನ್
ಶ್ರವೀನ್

ಶ್ರೀಮತಿ ಭಾಗ್ಯಮ್ಮ
ಶ್ರೀ ಶಿವಣ್ಣ, ಮಾಜಿ ಛೇರ್ಮನ್



ಶ್ರೀಮತಿ ಪುಷ್ಪ
ಡಾ. ಜಿ.ಎನ್. ಧನಪಾಲ್
ನಿವೃತ್ತ ಕುಲ ಸಚಿವರು, ಜಿಕೆವಿಕೆ
ಯಶ್‌ಪಾಲ್
ಶ್ರೀಮತಿ ಸಹನಾ
ಶ್ರೀಮತಿ ಐಶ್ವರ್ಯ
ಅಂಕೇಶ್

ಶ್ರೀಮತಿ ವಿದ್ಯಾ
ಶ್ರೀ ಪುಟ್ಟಣ್ಣ,
ಮಾಜಿ ಉಪ ಸಭಾಪತಿಗಳು,
ಶಾಸಕರು, ವಿಧಾನ ಪರಿಷತ್
ಇಂಚರ
ಶಿಶಿರ್ ಪುಟ್ಟಣ್ಣ

ಕೆ.ಎಸ್. ಮಂಜೇಗೌಡ,
ವಕೀಲರು
ಶ್ರೀಮತಿ ಮಮತಾ
ಗೌರವ್ ಆರ್ಯ ಎಂ.
ಗ್ರೀಷ್ಮ ಎಂ.

ಶ್ರೀಮತಿ ಪೂರ್ಣಿಮಾ ಕೆ.ಎಸ್
ಬಿ.ಆರ್. ಮಂಜುನಾಥ್,
ವಕೀಲರು
ಏಶ್ವಿ

ಎಲ್.ಆರ್. ಶಿವರಾಮೇಗೌಡ
ಶ್ರೀಮತಿ ಸುಧಾ ಶಿವರಾಮೇಗೌಡ



ಎಲ್.ಎಸ್. ಚೇತನ್‌ಗೌಡ
ಡಾ. ಶ್ರುತಿ ಚೇತನ್‌ಗೌಡ
ಅಹನ್ ಚೇತನ್‌ಗೌಡ
ಶ್ರೀಮತಿ ಭವ್ಯಗೌಡ
ಶ್ರೀ ರಾಜೀವ್
ಐರಾ

ಚಿತ್ರ ಸಮೂಹ



ಪೂಜ್ಯ ತಂದೆ ಲಾಳನಕೆರೆ ಪಟೇಲ್ ರಾಮೇಗೌಡರು ಮತ್ತು ಲಕ್ಷ್ಮಮ್ಮನವರು



ನಾಲ್ಕು ತಲೆಮಾರಿನ ಎಲ್.ಆರ್.ಎಸ್.ಕುಟುಂಬ – ಬಲದಿಂದ ಎಡಕ್ಕೆ ಲಾಳನಕೆರೆ ಪಟೇಲ್ ರಾಮೇಗೌಡರು, ಪುತ್ರ ಎಲ್.ಆರ್.ಶಿವರಾಮೇಗೌಡ, ಮೊಮ್ಮಗ ಎಲ್.ಎಸ್. ಚೇತನ್‌ಗೌಡ ಮರಿ ಮೊಮ್ಮಗ ಎಲ್.ಸಿ.ಅಹನ್‌ಗೌಡ



ನಾಲ್ಕು ತಲೆಮಾರು – ಬಲದಿಂದ ಎಡಕ್ಕೆ – ತುರುವೇಕೆರೆ ಮಾಜಿ ಶಾಸಕ ರಾಮಕೃಷ್ಣಯ್ಯನವರ ಧರ್ಮಪತ್ನಿ ಬಿ. ಲೀಲಾವತಿ, ಶ್ರೀಮತಿ ಸುಧಾ ಶಿವರಾಮೇಗೌಡ, ಶ್ರೀಮತಿ ಭವ್ಯಗೌಡ ಹಾಗೂ ಚಿರಂಜೀವಿ ಐರಾ



ಒಂದೇ ಬಳ್ಳಿಯ ಹೂಗಳು – ಎಲ್.ಆರ್.ಎಸ್ ಸುಖೀ ಕುಟುಂಬ



ಧರ್ಮಪತ್ನಿ ಶ್ರೀಮತಿ ಸುಧಾ ಅವರೊಂದಿಗೆ
ಎಲ್ .ಆರ್.ಶಿವರಾಮೇಗೌಡರು

ಚಿತ್ರ ಸಮೂಹ

ವಿವಾಹ ಸಂಭ್ರಮ



ಎಲ್.ಆರ್. ಶಿವರಾಮೇಗೌಡರು ಸುಧಾ ಅವರನ್ನು ವರಿಸಿದ ಸಂದರ್ಭದಲ್ಲಿ ಪೂಜ್ಯ ತಂದೆ–ತಾಯಿ ಹಾಗೂ ಸಹೋದರ ಎಲ್.ಆರ್. ಬಸವಲಿಂಗೇಗೌಡ ಮತ್ತು ಅತ್ತಿಗೆ ಲೀಲಾರವರ ಜೊತೆಯಲ್ಲಿನ ಚಿತ್ರ

ಚಿತ್ರ ಸಮೂಹ

ರಾಯಲ್ ಕಾನ್‌ಕಾರ್ಡ್ ಶಾಲೆಯಲ್ಲಿ ಗಣ್ಯರೊಂದಿಗೆ ಎಲ್.ಆರ್. ಶಿವರಾಮೇಗೌಡರು



Dignitaries Visit From RITSUMEIKAN ASIA PACIFIC UNIVERSITY, JAPAN
Mr. KONDO SENSEI - Admission Dean, Mr. DANIEL SMILEY - Admission Officer, Mr. VISHNU VANKAYALA (The Overseas Representative of India), Mr. L.R. SHIVARAME GOWDA - Chairman - Royale Concorde Group of Institutions.



Dr. A. EBENEZER. Chairman, Ebenezer International School, Bangalore
Mr. L.R. SHIVARAME GOWDA - Chairman - Royale Concorde Group of Institutions



From left to right: MR. MICKEY BONIN - A.D - UNIVERSITY OF CAMBRIDGE, (ESOL Exams) LONDON U.K.
Dr. MICHAEL MILONAVIC - CEO - University of Cambridge (ESOL Exams) London U.K.,
Mr. MANSOOR ALI KHAN - Director, Delhi Public Schools, Bengaluru
Mr. L.R. SHIVARAME GOWDA - Chairman - Royale Concorde Group of Institutions
Mr. SRINIVAS, Chairman - Gear Innovative Schools, Sarjapura Road, Bengaluru
Mr. RAMESH RAJ - Chairman, Oxford Institutions, Jayanagar, Bengaluru.



Mr. BASAVARAJ HORATTI
Honorable Minister for Primary and Secondary Education, Law, Justice, and Human Resources Parliamentary Affairs & Legislation – Government of Karnataka
Mr. L.R. SHIVARAME GOWDA - Chairman - Royale Concorde Group of Institutions



WORLD SCHOOL COUNCIL Team
Dr. ZACKERIA - Sr. Director - Operating - Fortius Universitas, United Kingdom
Mr. L.R. SHIVARAME GOWDA - Chairman - Royale Concorde Group of Institutions
Mrs. SUDHA SHIVARAME GOWDA - Managing Trustee - Royale Concorde Group of Institutions
Dr. L.S. BHAVYA GOWDA - Managing Trustee - Royale Concorde Group of Institutions
Mr. L.S. CHETAN GOWDA - Managing Trustee - Royale Concorde Group of Institutions
Dr. SHRUTHI C GOWDA - Managing Trustee - Royale Concorde Group of Institutions

ಚಿತ್ರ ಸಮೂಹ

ರಾಯಲ್ ಕಾನ್‌ಕಾರ್ಡ್ ಶಾಲೆಯ ಸಮಾರಂಭದಲ್ಲಿ ಶ್ರೀಗಳು ಹಾಗೂ ಗಣ್ಯರೊಂದಿಗೆ ಎಲ್.ಆರ್. ಶಿವರಾಮೇಗೌಡರು



Mr. D.V. SADANANDA GOWDA - Member of Parliament
Mr. D.B. CHANDRE GOWDA - Member of Parliament
Ms. POORNA CHANDRE GOWDA,w/o Mr. D.B. CHANDRE GOWDA
Mr. Sri B S YEDDYURAPPA - Chief Minister, Karnataka Govt.
Mr. Sri R. Ashok - Deputy Chief Minister, Karnataka Govt.
Mr. L.R. SHIVARAME GOWDA - Chairman - Royale Concorde Group of Institutions





Mr. BYRATHI BASAVARAJ - Member of Legislative Assembly
Mr. VIJAY BHARDWAJ, Former Indian Cricket Player
Mr. L.R. SHIVARAME GOWDA - Chairman - Royale Concorde Group of Institutions
Mrs. SUDHA SHIVARAME GOWDA - Managing Trustee - Royale Concorde Group of Institutions
Dr. L.S. BHAVYA GOWDA - Managing Trustee - Royale Concorde Group of Institutions



Mr. KIMMANE RATHNAKAR - Education Minister, Govt. of Karnataka
Mr. D. KUPENDRA REDDY - Member of Rajyasabha
Mr. M. SATHISH REDDY - Member of Legislative Assembly
Mr. D. MUNIRAJU - Chairman Bangalore International Group of Institutions
Mr. L.S.CHETAN GOWDA - Managing Trustee - Royale Concorde Group of Institutions
Mr. B. Shivanna MLA, Anekal

ಚಿತ್ರ ಸಮೂಹ

ಪ್ರಸಿದ್ಧ ಕ್ರೀಡಾಪಟುಗಳೊಂದಿಗೆ ಎಲ್.ಆರ್. ಶಿವರಾಮೇಗೌಡರು



Mr. VENKATESH PRASAD - International Indian Cricketer
Mr. L.R. SHIVARAME GOWDA - Chairman - Royale Concorde Group of Institutions
Dr. L.S BHAVYA GOWDA - Managing Trustee - Royale Concorde Group of Institutions
Mr. L.S. CHETAN GOWDA - Managing Trustee - Royale Concorde Group of Institutions
Dr. SHRUTHI C GOWDA - Managing Trustee - Royale Concorde Group of Institutions
Ms. REKHA VINOD - Principal RCIS Kalyan Nagar



Mr. VIJAY BHARADWAJ - Former Indian Cricket Player
L.R. SHIVARAME GOWDA - Chairman - Royale Concorde Group of Institutions



Mr. JEETH DEVAIAH - Physical Trainer - Indian Hockey Team
Dr. L.S BHAVYA GOWDA - Managing Trustee Royale Concorde Group of Institutions



Mr. JAVAGAL SRINATH International Indian Cricketer
Mr. L.R. SHIVARAME GOWDA - Chairman - Royale Concorde Group of Institutions

ಚಿತ್ರ ಸಮೂಹ

ಕುಟುಂಬದೊಂದಿಗೆ ವಿದೇಶಿ ಪ್ರವಾಸದಲ್ಲಿ ಎಲ್.ಆರ್. ಶಿವರಾಮೇಗೌಡರು

















ಚಿತ್ರ ಸಮೂಹ

royale concorde international schools



Royale Concorde International School

CBSE & ICSE



Royale Concorde International School



Royale Concorde International School

CBSE



Royale Concorde International School

CBSE



Royale Concorde International School

CBSE & ICSE



Royale Concorde International School

CBSE



Royale Concorde International School

CBSE & ICSE



Royale Concorde International School

CBSE & ICSE

ಚಿತ್ರ ಸಮೂಹ





ರಾಯಲ್ ಕಾನ್ ಕಾರ್ಡ್ ಶಿಕ್ಷಣ ಸಂಸ್ಥೆಯ ಸಹೋದ್ಯೋಗಿಗಳು





ಚಿತ್ರ ಸಮೂಹ

ರಾಯಲ್ ಕಾನ್ ಕಾರ್ಡ್ ಶಿಕ್ಷಣ ಸಂಸ್ಥೆಯ ಸಹೋದ್ಯೋಗಿಗಳು



Royal Concord High School Sarjapur

ಚಿತ್ರ ಸಮೂಹ









ಚಿತ್ರ ಸಮೂಹ


NCORDE INTERNATIONAL S


ALE CONCORDE INTERNATIONAL SCHO




OYALE CONCORDE INTERNATIONAL SC

ಚಿತ್ರ ಸಮೂಹ







ಆರ್‌ಸಿಐಎಸ್ ಶಿಕ್ಷಣ ಸಂಸ್ಥೆಯ ವತಿಯಿಂದ ಹೊಸದಾಗಿ ಪ್ರಾರಂಭಗೊಂಡಿರುವ ಏವಿಯೇಷನ್ ಅಕಾಡೆಮಿಯ ಗಗನಸಖಿ ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಶಿವರಾಮೇಗೌಡರು

ಚಿತ್ರ ಸಮೂಹ





ರಾಯಲ್ ಕಾನ್ ಕಾರ್ಡ್ ಶಿಕ್ಷಣ ಸಂಸ್ಥೆಯ ಸಹೋದ್ಯೋಗಿಗಳು





ಚಿತ್ರ ಸಮೂಹ

ಎಲ್.ಆರ್. ಶಿವರಾಮೇಗೌಡರ ಹಿತೈಷಿಗಳು



ಶ್ರೀ ಜಸ್ಟೀಸ್ ಚಂದ್ರಶೇಖರಯ್ಯ
ನಿವೃತ್ತ ಹೈಕೋರ್ಟ್ ಜಡ್ಜ್, ಕರ್ನಾಟಕ



ಶ್ರೀ ಜಫ್ರುಲ್ಲಾಖಾನ್
ವಾಣಿಜ್ಯೋದ್ಯಮಿ, ದುಬೈ–ಯುಎಇ



ಶ್ರೀ ಎನ್.ಕೆ. ವೆಂಕಟರಮಣ
ಚೀಫ್ ನ್ಯೂರೋಸರ್ಜನ್ ಮತ್ತು
ವೈಸ್ ಚೇರ್‌ಮನ್ ಬಿ.ಜಿ.ಎಸ್
ಗ್ಲೋಬಲ್ ಹಾಸ್ಪಿಟಲ್



ಶ್ರೀಮತಿ ಅಶ್ವಿನಿ ನಾಚಪ್ಪ
ಫಾರ್ಮರ್ ಇಂಟರ್‌ನ್ಯಾಷನಲ್ ಅಥ್ಲೆಟ್.



ಶ್ರೀ ಎನ್. ಜೈ ಪ್ರಕಾಶ್
ಜೆ.ಪಿ. ಅಸೋಸಿಯೇಟ್ಸ್.
ಲೀಗಲ್ ಅಡ್ವೈಸರ್ ಆಫ್ ಆರ್.ಸಿ.ಐ.ಎಸ್



ಶ್ರೀ ಪಂಕಜ್ ಅದ್ವಾನಿ
ಬಿಲಿಯರ್ಡ್ಸ್ ಚಾಂಪಿಯನ್



ಶ್ರೀ ವೆಂಕಟೇಶ್ ಪ್ರಸಾದ್
ಮಾಜಿ ಇಂಡಿಯನ್ ಕ್ರಿಕೇಟರ್
ಕೆ.ಎಸ್.ಸಿ.ಎ ಪ್ರೆಸಿಡೆಂಟ್



ಶ್ರೀ ಸುನಿಲ್ ಜೋಶಿ
ಮಾಜಿ ಇಂಡಿಯನ್ ಕ್ರಿಕೇಟರ್
ನ್ಯಾಷನಲ್ ಕೋಚ್

ಚಿತ್ರ ಸಮೂಹ

ಎಲ್.ಆರ್. ಶಿವರಾಮೇಗೌಡರ ಹಿತೈಷಿಗಳು



ಶ್ರೀ ಎಬೆನೆಜರ್
ಛೇರ್‌ಮನ್ ಎಬೆನೆಜರ್ ಇಂಟರ್‌ನ್ಯಾಷನಲ್
ರೆಸಿಡೆನ್ಷಿಯಲ್ ಸ್ಕೂಲ್ ಬೆಂಗಳೂರು.



ಶ್ರೀ ಕ್ಯಾಪ್ಟನ್ ಗೋಪಿನಾಥ್
ಫೌಂಡರ್, ಏರ್ ಡೆಕ್ಕನ್



ನಾಗತಿಹಳ್ಳಿ ಚಂದ್ರಶೇಖರ್
ಖ್ಯಾತ ಸಾಹಿತಿ, ಚಿತ್ರ ನಿರ್ದೇಶಕರು



ಶ್ರೀ ಮನ್ಸೂರ್ ಅಲಿ ಖಾನ್
ಡೈರೆಕ್ಟರ್ ಡಲ್ಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು.
ರಾಜ್ಯಸಭಾ ಸದಸ್ಯರು



ಶ್ರೀಮತಿ ಡಾ. ತೇಜಸ್ವಿನಿ ಅನಂತ್ ಕುಮಾರ್
ಛೇರ್‌ಮನ್, ಅದಮ್ಯ ಚೇತನ
-ಶ್ರೀಮತಿ ಗಿರಿಜಾ ಶಾಸ್ತ್ರಿ ಮೆಮೊರಿಯಲ್ ಟ್ರಸ್ಟ್



ಶ್ರೀ ಉದಯ್ ಕನಪತಿ
ವಾಣಿಜ್ಯೋದ್ಯಮಿ, ಲಂಡನ್,
ಯುನೈಟೆಡ್ ಕಿಂಗ್‌ಡಮ್



ಶ್ರೀ ವೈ.ಕೆ. ಮುದ್ದುಕೃಷ್ಣ
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ
ಮಾಜಿ ನಿರ್ದೇಶಕರು



ಶ್ರೀ ಹಳೆಕೋಟೆ ಎನ್. ವಿಶ್ವಮಿತ್ರ
ಡೈರೆಕ್ಟರ್, ವರ್ಲ್ಡ್ ಟ್ರೀಮಿಸ್ ಇಂಟರ್‌ನ್ಯಾಷನಲ್
ಸ್ಕೂಲ್, ಬೆಂಗಳೂರು.

ಚಿತ್ರ ಸಮೂಹ

ಬೆಂಗಳೂರಿನ ಪ್ರತಿಷ್ಠಿತ ಶಾಲಾ ಸಮೂಹಗಳ ಮುಖ್ಯಸ್ಥರೊಂದಿಗೆ ಮುಖ್ಯಮಂತ್ರಿಗಳ ಸಂವಾದ









SCHOOL INTERACTION FROM CHIEF MINISTER DK SHIVAKUMAR

ಡಿಕೆ ಶಿವಕುಮಾರ್ Chief Minister, ರಾಮಲಿಂಗಾರೆಡ್ಡಿ Irrigation Minister, ಜಿ.ಸಿ. ಚಂದ್ರಶೇಖರ್ MP & KPCC working President, ಎಲ್.ಆರ್. ಶಿವರಾಮೇಗೌಡ President kapjack & Ex MP,
ಪುಟ್ಟಣ್ಣ MLC, ಮನ್ಸೂರ್ ಆಲಿಖಾನ್ MP, ರಾಜೀವ್‌ಗೌಡ MP, ಡಾ. ರಂಗನಾಥ್ MLA & Chairman NPS O Form Whitefield, ಮುನಿರಾಜು BIA Chairman,
ರಮೇಶ್ ರಾಜು Chairman of Oxford University, ನಿಸಾರ್ ಅಹಮದ್ Presidency University ಶಶಿಕಿರಣ್ East-west University
ಮೋಹನ್ ಮಂಗನಾನಿ Chairmen New Horizen University ಸುಧಾಕರ ಶೆಟ್ಟಿ Chairmen jnana sarovara school ಯಕ್‌ಬಾಲ್ Chairmen little Flower School
ಚೇತನ್‌ಗೌಡ director Royal Concord international School ಬಾಲಕೃಷ್ಣ Chairmen Venkat International ಮಂಜೇಗೌಡ Chairmen SIPS ಹನುಮಂತರಾಯಪ್ಪ Chairmen SGM School



ನಿರ್ಮಲ | ನಿರ್ಭಯ | ನಿಶ್ಚಲ

ಶಿವ ಪಥ...

ಎಲ್.ಆರ್.ಶಿವರಾಮೇಗೌಡರ ಅಭಿನಂದನಾ ಗ್ರಂಥ



ಎಲ್.ಆರ್. ಶಿವರಾಮೇಗೌಡರ ಉಡುಗೆ ತೊಡುಗೆಗಳಲ್ಲಿನ ವೈವಿಧ್ಯತೆ ಮತ್ತು ಅಭಿರುಚಿ





ನಿರ್ಮಲ | ನಿರ್ಭಯ | ನಿಶ್ಚಲ

ಶಿವ ಪಥ...

ಎಲ್.ಆರ್.ಶಿವರಾಮೇಗೌಡರ ಅಭಿನಂದನಾ ಗ್ರಂಥ







ಎಲ್.ಆರ್. ಶಿವರಾಮೇಗೌಡರ ಉಡುಗೆ ತೊಡುಗೆಗಳಲ್ಲಿನ ವೈವಿಧ್ಯತೆ ಮತ್ತು ಅಭಿರುಚಿ



ಗೆರೆಗಳಲ್ಲಿ ಗೌಡರು...





ಗ್ರಾಮೀಣ ಪ್ರದೇಶದ ರೈತಾಪಿ ಕುಟುಂಬದಲ್ಲಿ ಜನಿಸಿದ ಶ್ರೀಯುತ ಶಿವರಾಮೇಗೌಡರು ಶಾಸಕರಾಗಿ, ಲೋಕಸಭಾ ಸದಸ್ಯರಾಗಿ ಗ್ರಾಮೀಣ ಜನರ ಬದುಕು ಬವಣೆಯನ್ನು ಅರಿತು ಅವರ ನೆಮ್ಮದಿಗೆ ದುಡಿದವರು.ಸ್ನೇಹಜೀವಿಯಾಗಿರುವ ಇವರು, ರಾಜಕೀಯ ಮತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಹೊಂದಿರುವಷ್ಟೇ ಶ್ರದ್ಧೆ ಹಾಗೂ ನಿಷ್ಠೆಯನ್ನು ಸಂಸ್ಕೃತಿ, ಗುರು, ದೇವತೆಗಳ ಬಗೆಗೂ ಹೊಂದಿದ್ದಾರೆ.

-ಡಾ. ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



ಎಲ್.ಆರ್.ಶಿವರಾಮೇಗೌಡರ ಕ್ರಿಯಾಶೀಲ ವ್ಯಕ್ತಿತ್ವ ಮತ್ತು ಮುತ್ಸದ್ಧಿತನ ಹಾಗೂ ಸಂಘಟನಾ ಚಾತುರ್ಯತೆ ನಾಡಿನ ಯುವಕರಿಗೆ ಮಾದರಿ.

ಶ್ರೀ ಶ್ರೀ ಶ್ರೀ ಡಾ.ನಂಜಾವಧೂತ ಮಹಾ ಸ್ವಾಮೀಜಿಯವರು.
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ.





ಶ್ರೀಯುತ ಎಲ್ .ಆರ್ .ಶಿವರಾಮೇಗೌಡರ ಜೀವನವೇ ಕುತೂಹಲ.ವಿದ್ಯಾರ್ಥಿ ದೆಸೆಯಿಂದಲೇ ಪ್ರಶ್ನಿಸುವ ಗಟ್ಟಿ ಧ್ವನಿಯಾಗಿ ಪ್ರಕಟಗೊಳ್ಳುವ ಮೂಲಕ ಜನ ಮನ ಗೆದ್ದವರಿವರು.

ಶ್ರೀ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ,ಪೀಠಾಧ್ಯಕ್ಷರು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠ, ಕೆಂಗೇರಿ



ವಿದ್ಯಾರ್ಥಿದೆಸೆಯಲ್ಲಿಯೇ ಸಮಾಜದ ಪರವಾಗಿ ಕಾಳಜಿಯನ್ನಿಟ್ಟುಕೊಂಡು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅಪ್ಪಟ ಗ್ರಾಮೀಣ ಸೊಗಡಿನ ರಾಜಕಾರಣಿ ಇವರು. ನಾನು ಹಾಗೂ ಶಿವರಾಮೇಗೌಡರು ಒಟ್ಟಿಗೆ ವಿಧಾನ ಸಭೆಯನ್ನು ಪ್ರವೇಶಿಸಿದ್ದು ಮಾತ್ರ ಕಾಕತಾಳೀಯ. ಘಟಾನುಘಟಿ ರಾಜಕೀಯ ಮುತ್ಸದ್ದಿಗಳ ಜೊತೆ ಒಡನಾಟವಿರುವ ಇವರ ಅನುಭವ ಯುವ ರಾಜಕಾರಣಿಗಳಿಗೆ ಮಾದರಿ.

-ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಜನರ ಹಾಗೂ ಕಾರ್ಯಕರ್ತರೊಂದಿಗೆ ನೇರವಾಗಿ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಸರಳ ಸ್ವಭಾವದ ಶಿವರಾಮೇಗೌಡರೊಂದಿಗೆ ನನಗೆ ಹಲವು ವರ್ಷಗಳ ಆತ್ಮೀಯ ಒಡನಾಟವಿದೆ. ಸಮಾಜದ ದುರ್ಬಲ ವರ್ಗಗಳ ಏಳಿಗೆ, ಸಮಾಜದ ಅಸಮಾನತೆಗಳನ್ನು ಸಿವಾರಿಸುವ ದಿಸೆಯಲ್ಲಿ ನಮ್ಮ ಚಿಂತನೆಗಳು ಪರಸ್ಪರ ಸಮೀಕರಿಸುವುದಲ್ಲದೆ, ಭವಿಷ್ಯದಲ್ಲೂ ಅವರ ಅಮೂಲ್ಯ ಸಲಹೆಗಳು ರಾಜ್ಯದಅಭಿವೃದ್ಧಿಗೆ ಸಹಕಾರಿಯಾಗಲಿವೆ.

-ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಲಾಳನಕೆರೆಯ ರಾಮೇಗೌಡ ಶಿವರಾಮೇಗೌಡರ ಏಳು ದಶಕಗಳ ಸುಧೀರ್ಘ ಪಯಣವನ್ನು ಒಮ್ಮೆ ಅವಲೋಕಿಸಿದರೆ ನಿಬ್ಬೆರಗು ಆವರಿಸುತ್ತದೆ.ಅವಕಾಶಗಳು ವಿಜಿಗೀಷು ಧೀಮಂತನಿಗೆ ಮಾತ್ರ ಒಲಿಯುತ್ತವೆ. ಶಿವರಾಮೇಗೌಡರ ಹೆಸರು ಅನ್ವರ್ಥಕವಾದದ್ದು. ಶಿವನ ಶಕ್ತಿ, ರಾಮನ ನಿಷ್ಠೆ. ಗೌಡರ ಯಜಮಾನಿಕೆ - ಈ ಮೂರೂ ಗುಣಗಳು ಮಿಳಿತವಾಗಿ ಮುಪ್ಪುರಿಗೊಂಡ ವ್ಯಕ್ತಿತ್ವ ಅವರದ್ದು.

-ನಾಡೋಜ, ಡಾ.ಹಂ.ಪ. ನಾಗರಾಜಯ್ಯ ಖ್ಯಾತ ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರು



₹ 500

Prekshith PUBLICATION